ಶುಕ್ರವಾರ, ಆಗಸ್ಟ್ 20, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 232 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವರಮಹಾಲಕ್ಷ್ಮೀ ಹಬ್ಬದ ಶುಭಾಶಯಗಳು

ಸಿನಿಮಾ ಪುರವಣಿ

'ಆನಂದ್' ಎಂಬ ಪ್ರೇಮಕಥೆಯ ಮೂಲಕ ಸಿನಿಪಯಣ ಆರಂಭಿಸಿದ ಶಿವಣ್ಣನ 124ನೇ ಸಿನಿಮಾ 'ನೀ ಸಿಗೋವರೆಗೂ' ಕೂಡಾ ಪ್ರೇಮಕಥೆಯೇ.

ಹೊಟ್ಟೆ ನೋವು, ಗ್ಯಾಸ್ ಟ್ರಬಲ್, ಅ್ಯಸಿಡಿಟಿಗೆ ಆಯುರ್ವೇದ ಔಷಧಿ ಅಮೃತಬಿಂದು

ಹೊಟ್ಟೆ ನೋವು, ಗ್ಯಾಸ್ ಟ್ರಬಲ್, ಆ್ಯಸಿಡಿಟಿ, ಅಜೀರ್ಣ, ಎದೆಉರಿ, ಹುಳಿತೇಗು, ಹಸಿವಿಲ್ಲದಿರುವುದು, ನಿದ್ರಾಹೀನತೆ, ಬೆನ್ನು ನೋವು, ಕೆಲಸದಲ್ಲಿ ನಿರಾಸಕ್ತಿ, ಉದರವ್ಯಾಧಿ ಮುಂತಾದ ಸಮಸ್ಯೆಗಳಿಗೆ ಕೇರಳದ ಶಂಕರ ಫಾರ್ಮಸಿಯವರಿಂದ ತಯಾರಿಸಲ್ಪಟ್ಟ 150 ವರ್ಷಗಳ ಆಯುರ್ವೇದ ಸಂಪ್ರದಾಯ ಕುಟುಂಬದ ಪರಿಣಾಮಕಾರಿ ಆಯುರ್ವೇದ ಔಷಧಿ ಅಮೃತ ಬಿಂದು ಸೇವಿಸಿ.

"ಅಮೃತ ಬಿಂದು"ವಿನಿಂದ ಗರಿಷ್ಠ ಪೈಲೋರಿಯನ್ನು ಪರಿಣಾಮಕಾರಿಯಾಗಿ ಹತೋಟಿಗೆ ತರಬಹುದೆಂದು ಸಂಶೋಧನೆಯಿಂದ ಸಾಬೀತಾಗಿದೆ. ಈ "ಅಮೃತ ಬಿಂದು"ವನ್ನು ಕೇಂದ್ರ ಸರಕಾರದ ಪ್ರಯೋಗಾಲಯದಲ್ಲಿ ಪರಿಣಾಮಕಾರಿಯಾದ ಔಷಧಿಯೆಂದು ಪರೀಕ್ಷಿಸಲಾಗಿದೆ.

ಅಮೃತಬಿಂದು

1 ತಿಂಗಳ ಔಷಧಿ ಕೇವಲ ₹ 260 ಮಾತ್ರ



ಮಧುರವಾದ ಬಾಂಧವ್ಯಕ್ಕಾಗಿ "ಬ್ರೂಮೆಕ್ಸ್ ಫೋರ್ಟೆ"

ಸುಮಧುರ ಸಂಬಂಧವನ್ನು 'ಬ್ರೂಮೆಕ್ಸ್ ಫೋರ್ಟೆ' ಸೇವಿಸಿ ಬಲಪಡಿಸಿಕೊಳ್ಳಿ. ಇದು ಸಾಂಪ್ರದಾಯಿಕ ಮಹಾರಾಜ ಪ್ರಸರಣ ತೈಲ ಇವರು ತಯಾರಿಸಿದ ನಿತ್ರಾಣ ಹೋಗಲಾಡಿಸುವ ಔಷಧ.

ನರ ಮತ್ತು ರಕ್ತನಾಳಗಳನ್ನು ಪುನಶ್ಚೇತನಗೊಳಿಸುವುದಲ್ಲದೇ, ದೇಹದ ಆಯಾಸಕ್ಕೆ ಬಲು ಉಪಯೋಗಕಾರಿಯಾಗಿದೆ. ದುರ್ಬಲ ನರಗಳಿಂದಾಗಿ ಹೊರಹೊಮ್ಮುವ ನಿತ್ರಾಣ, ಮರಗಟ್ಟುವಿಕೆ, ಶಕ್ತಿ ಕುಂದುವಿಕೆ ಹಾಗೂ ಇನ್ನಿತರ ಅನೇಕ ಕಾಯಿಲೆಗಳಿಗೆ ಪರಿಣಾಮಕಾರಿ ಚಿಕಿತ್ಸೆ ಇದರ ಸೇವನೆಯಿಂದ ಪಡೆಯಬಹುದು. ವಯಸ್ಸಿನ ಅಂತರವನ್ನು ಮರೆತು, ನರದೌರ್ಬಲ್ಯ ಹೋಗಲಾಡಿಸಿ ಬಲಯುತಗೊಳಿಸಿ ನಿಕಟ ಸಂಬಂಧವನ್ನು ನಿರಂತರ ಶಕ್ತಿಯ ತರಂಗದೊಡನೆ ಉದ್ದೀಪನಗೊಳಿಸಿ. ಎಲ್ಲಾ ವಯಸ್ಸಿನವರಿಗೆ ಇದೊಂದು ಮೃದುವಾದ ಜೆಲ್ ರೂಪದ ಎನರ್ಜಿ ಬೂಸ್ಟರ್.

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ: From the house of A & J Health Care, Bangalore
For a Healthy Society
Ph: 8762226000, 9243112373.

ರಾಜ್ಯದ 2,859 ಆರೋಗ್ಯ ಉಪ ಕೇಂದ್ರಗಳು ಮೇಲ್ದರ್ಜೆಗೆ

ಜನರಿಗೆ ಆರೋಗ್ಯ– ಕ್ಷೇಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರಿಗೆ ಆರೋಗ್ಯ ಸೇವೆಯ ಜತೆಗೆ ಕ್ಷೇಮವನ್ನೂ ಕಲ್ಪಿಸುವ ಆಶಯದಡಿ ರಾಜ್ಯದ 2,859 ಆರೋಗ್ಯ ಉಪಕೇಂದ್ರಗಳನ್ನು 'ಆರೋಗ್ಯ ಮತ್ತು ಕ್ಷೇಮ ಕೇಂದ್ರ'ಗಳನ್ನಾಗಿ ಮೇಲ್ದರ್ಜೆಗೇರಿಸಲು ಕರ್ನಾಟಕ ಸರ್ಕಾರ ನಿರ್ಧರಿಸಿದೆ.

ಗುರುವಾರ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, ಈ ಉದ್ದೇಶಕ್ಕಾಗಿ ₹478.91 ಕೋಟಿ ವ್ಯಯಿಸಲು ಅನುಮೋದನೆ ನೀಡಲಾಗಿದೆ ಎಂದರು.

'ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಆರೈಕೆ ನಿಯಮ– 2021'ಕ್ಕೂ ಸಂಪುಟ ಒಪ್ಪಿಗೆ ನೀಡಿದೆ.

ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆ ಮತ್ತು ಸೇವೆಗಳ ವಿತರಣೆ ಸಮಯದಲ್ಲಿ ಅವರ ಹಕ್ಕುಗಳ ರಕ್ಷಣೆ ಹಾಗೂ ಉತ್ತೇಜನ ನೀಡಲು ಮಾನಸಿಕ ಆರೋಗ್ಯ ಆರೈಕೆ ಕಾಯ್ದೆ 2017 ರ ಅನ್ವಯ ಕರಡು ನಿಯಮಗಳನ್ನು ರೂಪಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಇದಕ್ಕೆ ಒಪ್ಪಿಗೆ ಸಿಕ್ಕಿದ್ದು, ಸಂಪುಟ ಸಭೆ ಅದನ್ನು ಅನುಮೋದಿಸಿತು ಎಂದು ಮಾಧುಸ್ವಾಮಿ ವಿವರಿಸಿದರು.

ಸಿ.ಎಂಗೆ ಅಧಿಕಾರ: ಸಂಪುಟ ಉಪಸಮಿತಿಗಳನ್ನು ಪುನರ್ ರಚನೆ ಮಾಡುವ ಅಧಿಕಾರವನ್ನು ಮುಖ್ಯಮಂತ್ರಿಯವರಿಗೆ ನೀಡಲಾಗಿದೆ. ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಉಪಸಮಿತಿಗಳೂ ರದ್ದಾಗಿದ್ದವು. ಒಟ್ಟು 14 ಸಂಪುಟ ಉಪಸಮಿತಿಗಳನ್ನು ಪುನರ್ ರಚಿಸಲಾಗುವುದು ಎಂದು ಹೇಳಿದರು.

ಕಲಬುರ್ಗಿ ಜಿಲ್ಲೆ ಆಳಂದದಲ್ಲಿ ಮಿನಿ ವಿಧಾನಸೌಧ ಕಟ್ಟಡ ಕಾಮಗಾರಿಗೆ ₹12.48 ಕೋಟಿ ಪರಿಷ್ಕೃತ ಅಂದಾಜಿಗೆ ಒಪ್ಪಿಗೆ ನೀಡಲಾಗಿದೆ. ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಪಚ್ಚನಾಡಿ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಪಾರಂಪರಿಕ ತ್ಯಾಜ್ಯ ನಿರ್ವಹಣೆಗಾಗಿ ಸಲ್ಲಿಸಿರುವ ₹73.73 ಕೋಟಿ ವಿಸ್ತೃತ ಯೋಜನಾ ವರದಿ ತಯಾರಿಸಲು ಅನುಮೋದನೆ ನೀಡಲಾಗಿದೆ.

ಹೆಣ್ಣು ಮಕ್ಕಳಿಗೆ ನ್ಯಾಪ್‌ಕಿನ್: ಚಾಲ್ತಿಯಲ್ಲಿರುವ 'ಶುಚಿ' ಕಾರ್ಯಕ್ರಮದಡಿ 2021–22 ನೇ ಸಾಲಿಗೆ ಸರ್ಕಾರಿ ಮತ್ತು ಅನುದಾನಿತ ಶಾಲಾ–ಕಾಲೇಜುಗಳ ಹದಿ ಹರೆಯದ ಹೆಣ್ಣು ಮಕ್ಕಳಿಗೆ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳನ್ನು ಆರೋಗ್ಯ ಇಲಾಖೆಯ ಮೂಲಕ ವಿತರಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಪ್ರತಿ ಹೆಣ್ಣುಮಕ್ಕಳಿಗೆ ತಲಾ 10 ನ್ಯಾಪ್‌ಕಿನ್ ಪ್ಯಾಡ್ ನೀಡಲಿದ್ದು, ₹47 ಕೋಟಿ ವೆಚ್ಚದಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳನ್ನು ಖರೀದಿಸಲಾಗುವುದು ಎಂದು ಸಚಿವರು ತಿಳಿಸಿದರು.

ಅಮೃತ ಯೋಜನೆಗಳಿಗೆ ಒಪ್ಪಿಗೆ

75ನೇ ಸ್ವಾತಂತ್ರ್ಯ ದಿನಾಚರಣೆಯಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದ 'ಅಮೃತ ಯೋಜನೆ'ಯ ಕೆಲ ಕಾರ್ಯಕ್ರಮಗಳಿಗೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ತಕ್ಷಣದಿಂದಲೇ ಇವು ಜಾರಿಗೆ ಬರಲಿವೆ.

- 75 ನಗರಗಳಲ್ಲಿ 'ಅಮೃತ ನಿರ್ಮಲ ನಗರ ಯೋಜನೆ' ಜಾರಿಗೆ ₹75 ಕೋಟಿ ಬಿಡುಗಡೆಗೆ ಒಪ್ಪಿಗೆ. ಪ್ರತಿ ಸ್ಥಳೀಯ ಸಂಸ್ಥೆಗೆ ತಲಾ ₹1 ಕೋಟಿ.
- 750 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 'ಅಮೃತ ಆರೋಗ್ಯ ಮೂಲಸೌಕರ್ಯ ಉನ್ನತೀಕರಣ ಯೋಜನೆ'ಗಾಗಿ ₹ 150 ಕೋಟಿ.
- 'ಅಮೃತ ಅಂಗನವಾಡಿ ಕೇಂದ್ರ ಯೋಜನೆ'ಯಡಿ 750 ಅಂಗನವಾಡಿ ಕೇಂದ್ರಗಳ ಮೂಲಸೌಕರ್ಯ ಅಭಿವೃದ್ಧಿ. ಪ್ರತಿ ಅಂಗನವಾಡಿಗೆ ₹1 ಲಕ್ಷಗಳಂತೆ, ₹150 ಕೋಟಿ ಅನುದಾನ.
- 'ಅಮೃತ ಸ್ವಸಹಾಯ ಯೋಜನೆ'ಯಡಿ ಕಿರು ಉದ್ಯಮ ಸಂಸ್ಥೆಗಳಾಗಿ 7,500 ಸ್ವಸಹಾಯ ಗುಂಪುಗಳ ಅಭಿವೃದ್ಧಿ. ತಲಾ ₹ 1 ಲಕ್ಷ ಮೂಲಧನ ನೀಡಲಾಗುವುದು. ಇದಕ್ಕಾಗಿ ₹ 75 ಕೋಟಿ.

ಆನಂದ್ ಸಿಂಗ್ ಗೈರು

ಖಾತೆಯ ಬಗ್ಗೆ ಅಸಮಾಧಾನಗೊಂಡು ಇನ್ನೂ ಇಲಾಖೆ ಅಧಿಕಾರ ವಹಿಸಿಕೊಳ್ಳದಿರುವ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರು ಸಂಪುಟ ಸಭೆಗೆ ಹಾಜರಾಗಿರಲಿಲ್ಲ. ನೂತನ ಸಚಿವರಿಗೆ ಖಾತೆಗಳ ಹಂಚಿಕೆಯ ಬಳಿಕ ನಡೆದ ಮೊದಲ ಸಂಪುಟ ಸಭೆ ಇದಾಗಿತ್ತು.

ದೇವರಾಜ ಅರಸು ಪ್ರಶಸ್ತಿ ಪ್ರದಾನ ಇಂದು

ಬೆಂಗಳೂರು: ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಹೆಸರಿನಲ್ಲಿ ನೀಡುತ್ತಿರುವ ಪ್ರಶಸ್ತಿಗೆ ಆಯ್ಕೆಯಾದ ಸಾಧಕರ ಹೆಸರನ್ನು ಸರ್ಕಾರ ಗುರುವಾರ ಪ್ರಕಟಿಸಿದೆ. 12

'ತಾಲಿಬಾನ್‌ಗಿಂತ ಅಲ್–ಕೈದಾ ಅಪಾಯಕಾರಿ'

ವಾಷಿಂಗ್ಟನ್ (ಎಪಿ): 'ತಾಲಿಬಾನ್‌ಗಿಂತ ಬೇರೆ ದೇಶಗಳಲ್ಲಿ ಸಕ್ರಿಯವಾಗಿರುವ ಅಲ್–ಕೈದಾ ಉಗ್ರ ಸಂಘಟನೆಯಿಂದ ಅಮೆರಿಕಕ್ಕೆ ಹೆಚ್ಚು ಅಪಾಯವಿದೆ ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ. 10

ಆತಂಕದ ಸ್ವಾತಂತ್ರ್ಯ... ಕಾಬೂಲ್‌ನಲ್ಲಿ ಅಫ್ಗನ್ ನಾಗರಿಕರು ದೇಶದ 102ನೇ ಸ್ವಾತಂತ್ರ್ಯ ದಿನದ ಅಂಗವಾಗಿ ಅಧಿಕೃತ ಧ್ವಜವನ್ನು ಹಾರಿಸಿದರು. ತಾಲಿಬಾನಿಗಳ ಆತಂಕದ ನಡುವೆಯೂ ಮಹಿಳೆಯರು ಬೀದಿಗಿಳಿದುದು ವಿಶೇಷವಾಗಿತ್ತು – ಎಎಫ್‌ಪಿ ಚಿತ್ರ

ಸ್ವಾತಂತ್ರ್ಯ ಘೋಷಿಸಿದ ತಾಲಿಬಾನ್

ಅಮೆರಿಕ ಸೇನೆ ಹಿಮ್ಮೆಟ್ಟಿಸಿದ ದಿನವನ್ನಾಗಿ ಆಚರಣೆ • ಸಂಭ್ರಮಕ್ಕೆ ಜನರ ಪ್ರತಿರೋಧ

ಕಾಬೂಲ್ (ಎಪಿ): ಆಗಸ್ಟ್ 19ರ ಅಫ್ಗಾನಿಸ್ತಾನದ ಸ್ವಾತಂತ್ರ್ಯ ದಿನವನ್ನು, ಅಮೆರಿಕವನ್ನು ಹಿಮ್ಮೆಟ್ಟಿಸಿದ ದಿನವನ್ನಾಗಿ ತಾಲಿಬಾನ್ ಘೋಷಿಸಿದೆ. '1919ರ ಆಗಸ್ಟ್ 19ರಂದು ನಾವು ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದಿದ್ದೆವು. ಈಗ ಅಮೆರಿಕನ್ನರನ್ನು ಹಿಮ್ಮೆಟ್ಟಿಸಿ, ಅಫ್ಗಾನಿಸ್ತಾನವನ್ನು ಮತ್ತೆ ಸ್ವತಂತ್ರಗೊಳಿಸಿದ್ದೇವೆ' ಎಂದು ತಾಲಿಬಾನ್ ಘೋಷಿಸಿದೆ.

ಆದರೆ, ತಾಲಿಬಾನ್ ಹೊರಡಿಸಿದ ಈ ಘೋಷಣೆಯಷ್ಟು ದೇಶ ಪ್ರಶಸ್ತವಾಗಿಲ್ಲ. ತಾಲಿಬಾನ್ ವಿರುದ್ಧ ನಾಗರಿಕರು ಅಲ್ಲಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಆ ಪ್ರತಿಭಟನೆಗಳನ್ನು ತಾಲಿಬಾನ್ ಹತ್ತಿಕ್ಕಿದೆ. ಜತೆಗೆ ಈವರೆಗೆ ತಾಲಿಬಾನ್‌ಗೆ ವಶವಾಗದ ಉತ್ತರದ ಪ್ರಾಂತ್ಯವು, ತಾಲಿಬಾನ್ ವಿರುದ್ಧ ಸಶಸ್ತ್ರ ಹೋರಾಟ ನಡೆಸಲು ಸಿದ್ಧತೆ ನಡೆಸಿದೆ.

ಅಫ್ಗಾನಿಸ್ತಾನದಿಂದ ಅಮೆರಿಕವನ್ನು ಸಂಪೂರ್ಣವಾಗಿ ಕಿತ್ತೊಗೆದಿದ್ದೇವೆ ಎಂದು ತಾಲಿಬಾನಿಗಳು ಗುರುವಾರ ಘೋಷಿಸಿದ್ದಾರೆ. ಎಲ್ಲಾ ಸರ್ಕಾರಿ ಕಚೇರಿ ಮತ್ತು ಪ್ರಮುಖ ಸ್ಥಳಗಳಲ್ಲಿ ತಾಲಿಬಾನಿ ಧ್ವಜವನ್ನು ಹಾರಿಸಿದ್ದಾರೆ. ಆದರೆ ಕಾಬೂಲ್‌ನ ಹಲವೆಡೆ ಜನಸಾಮಾನ್ಯರು ತಾಲಿಬಾನ್‌ನ ಈ ನಡೆಯ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ. ಕೆಲವೆಡೆ ತಾಲಿಬಾನಿ ಧ್ವಜವನ್ನು ಇಳಿಸಿ, ಅಫ್ಗಾನಿಸ್ತಾನದ ತ್ರಿವರ್ಣ ಧ್ವಜವನ್ನು ಹಾರಿಸಿದ್ದಾರೆ. ಈ ಪ್ರತಿಭಟನೆಯ ವಿರುದ್ಧ ತಾಲಿಬಾನ್ ಶಸ್ತ್ರ ಬಳಸಿದೆ. ಈ ದಾಳಿಯಲ್ಲಿ ಹಲವರು ಮೃತಪಟ್ಟಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

10ನೇ ಪುಟ ನೋಡಿ

ನಗದು, ಆಹಾರ ಕೊರತೆ ತೀವ್ರ

ದೇಶದಲ್ಲಿ ಈಗ ನಗದು ಕೊರತೆ ತೀವ್ರವಾಗುತ್ತಿದೆ. ಕಾಬೂಲ್‌ನಲ್ಲಿರುವ ಬಹುತೇಕ ಎಟಿಎಂ ಘಟಕಗಳಲ್ಲಿ ನಗದು ಖಾಲಿಯಾಗಿದೆ. ಅಫ್ಗಾನಿಸ್ತಾನದ ಕೇಂದ್ರೀಯ ಬ್ಯಾಂಕ್‌ನ ಖಜಾನೆ ಅಮೆರಿಕದಲ್ಲಿ ಇದ್ದು, ಅಮೆರಿಕವು ಆ ಖಜಾನೆಯಿಂದ ಈಗ ಹಣ ಬಿಡುಗಡೆ ಮಾಡುವ ಸಾಧ್ಯತೆ ಇಲ್ಲ. ನಗದು ಕೊರತೆ ತೀವ್ರವಾಗಿರುವ ಕಾರಣ ಅಗತ್ಯ ವಸ್ತುಗಳ ಬೆಲೆಯೂ ತೀವ್ರಮಟ್ಟದಲ್ಲಿ ಏರಿಕೆಯಾಗುತ್ತಿದೆ.

ಅಫ್ಗಾನಿಸ್ತಾನದ ವಿವಿಧ ಪ್ರದೇಶಗಳು ತಾಲಿಬಾನ್ ವಶವಾಗುತ್ತಿದ್ದಂತೆಯೇ ನೂರಾರು ಮಂದಿ ಅಲ್ಲಿಂದ ತಪ್ಪಿಸಿಕೊಂಡು ಬಂದು ರಾಜಧಾನಿ ಕಾಬೂಲ್ ತಲುಪಿದ್ದರು. ಅವರು ಈಗ ತಾಲಿಬಾನಿಗಳ ವಶವಾಗಿದ್ದಾರೆ. ಬಸ್ ನಿಲ್ದಾಣ, ರಸ್ತೆ, ಉದ್ಯಾನಗಳಲ್ಲಿ ಆಶ್ರಯ ಪಡೆದಿರುವ ಈ ಜನರು ಅಗತ್ಯ ವಸ್ತುಗಳ ತೀವ್ರ ಕೊರತೆ ಎದುರಿಸುತ್ತಿದ್ದಾರೆ. ಆಹಾರ ಪದಾರ್ಥಗಳ ಸಮಸ್ಯೆ ತೀವ್ರವಾಗಿ ಕಾಡುತ್ತಿದೆ.

10ನೇ ಪುಟ ನೋಡಿ

ಕನ್ನಡಿಗನಿಗೆ 'ನಾಸಾ' ಪ್ರಶಸ್ತಿಯ ಗರಿ

ಪ್ರಜಾವಾಣಿ ವಾರ್ತೆ

ಸಿದ್ದಾಪುರ (ಉತ್ತರ ಕನ್ನಡ): ತಾಲ್ಲೂಕಿನ ಸಶಿಗುಳಿ ಗ್ರಾಮದ ದಿನೇಶ ವಸಂತ ಹೆಗಡೆ ಅವರು ನಾಸಾದ (ನ್ಯಾಷನಲ್ ಏರೊನಾಟಿಕ್ಸ್ ಅಂಡ್ ಸ್ಪೇಸ್ ಅಡ್ಮಿನಿಸ್ಟ್ರೇಷನ್) ಭೂಮಿ, ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಅನುದಾನದಲ್ಲಿ 'ಫ್ಯೂಚರ್ ಇನ್ವೆಸ್ಟಿಗೇಟರ್' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ದಿನೇಶ ಹೆಗಡೆ

ಅವರು ಸದ್ಯ, ಅಮೆರಿಕದ ಹಂಟ್ಸ್‌ವಿಲ್‌ನಲ್ಲಿರುವ ಅಲಬಾಮಾ ವಿಶ್ವವಿದ್ಯಾಲಯದಲ್ಲಿ ಎರಡನೇ ವರ್ಷದ ಡಾಕ್ಟರೇಟ್ ಅಧ್ಯಯನ ಮಾಡುತ್ತಿದ್ದಾರೆ. ಇವರ ಜೊತೆಗೆ ಕ್ಯಾಥರೀನ್ ಡೇವಿಡ್ಸನ್ ಅವರೂ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಇವರು ಪ್ರಶಸ್ತಿಯಾಗಿ ತಲಾ ₹ 1 ಕೋಟಿ 42 ಸಾವಿರ (1,35,000 ಅಮೆರಿಕನ್ ಡಾಲರ್) ವಿದ್ಯಾರ್ಥಿ ವೇತನ ಪಡೆಯಲಿದ್ದಾರೆ.

ಪ್ರಸ್ತುತ ದಿನೇಶ ಅವರು 'ಯು.ಎ.ಎಚ್ ಸೆಂಟರ್ ಫಾರ್ ಸ್ಪೇಸ್ ಪ್ಲಾಸ್ಮಾ ಮತ್ತು ಏರೋನಾಮಿಕ್ ರಿಸರ್ಚ್'ನ ಬಾಹ್ಯಾಕಾಶ ವಿಜ್ಞಾನ ವಿಭಾಗದಲ್ಲಿ ಪದವಿ ಸಂಶೋಧನಾ ಸಹಾಯಕರಾಗಿಯೂ ಕೆಲಸ ಮಾಡುತ್ತಿದ್ದಾರೆ.

'ಬಾಹ್ಯಾಕಾಶ ಹವಾಮಾನದ ಅನಿಶ್ಚಿತತೆಗಳ ಪರಿಮಾಣಾತ್ಮಕ ಅಧ್ಯಯನ' ಎಂಬುದು ಅವರ ಸಂಶೋಧನೆಯ ವಿಷಯ.

ಸಿದ್ದಾಪುರ ತಾಲ್ಲೂಕಿನ ವಾಜಗದ್ದೆ ಸರ್ಕಾರಿ ಶಾಲೆ ಹಾಗೂ ಹಾರ್ಸಿಕಟ್ಟಾದ ಅನುದಾನಿತ ಪ್ರೌಢಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದಿದ್ದರು. ಮೈಸೂರಿನ ಯುವರಾಜ ಕಾಲೇಜಿನಲ್ಲಿ ಬಿ.ಎಸ್‌ಸಿ, ಮೈಸೂರು ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

'ಕಠಿಣ ಸ್ಪರ್ಧೆಯುಳ್ಳ ಈ ಪ್ರಶಸ್ತಿಗೆ ನನ್ನ ಆಯ್ಕೆ ಬಗ್ಗೆ ತಿಳಿದಾಗ ಸಂತೋಷವಾಯಿತು' ಎಂದು ದಿನೇಶ ಹೆಗಡೆ ಪ್ರತಿಕ್ರಿಯಿಸಿದರು.

ಕಂಪ್ಯೂಟರ್ ಗೊತ್ತಿಲ್ಲದಿದ್ದರೆ ಬಡ್ತಿಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರು ಕಂಪ್ಯೂಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗದೇ ಇದ್ದರೆ ವಾರ್ಷಿಕ ವೇತನ ಬಡ್ತಿ, ಬಡ್ತಿಗೆ ಸಂಚಕಾರ ಬರಲಿದೆ.

'ನೇರ ನೇಮಕಾತಿ ಹೊಂದಿರುವ ಮತ್ತು ಸೇವಾನಿರತ ಸರ್ಕಾರಿ ನೌಕರರಿಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಕಡ್ಡಾಯಗೊಳಿಸಿರುವ ರಾಜ್ಯ ಸರ್ಕಾರ, ನಿಗದಿತ ಅಂಕಪಡೆದು ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು ಎಂದು ಇದೇ 19ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ ಸೂಚಿಸಿದೆ.

ಕರ್ನಾಟಕ ನಾಗರಿಕ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 1(3)ರಲ್ಲಿ ನಿರ್ದಿಷ್ಟಪಡಿಸಿರುವ ಹುದ್ದೆಗಳನ್ನು ಹೊರತುಪಡಿಸಿ, ಇನ್ನಿತರ ಎಲ್ಲ ಅಭ್ಯರ್ಥಿಗಳಿಗೆ ಈ ಪರೀಕ್ಷೆಯನ್ನು ಕಡ್ಡಾಯಗೊಳಿಸಲಾಗಿದೆ.

2022ರ ಮಾರ್ಚ್ 22ರೊಳಗೆ ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಇಲ್ಲವಾದರೆ ಪರಿವೀಕ್ಷಣಾ ಅವಧಿ, ಬಡ್ತಿ ಹಾಗೂ ವಾರ್ಷಿಕ ವೇತನ ಇರುವುದಿಲ್ಲ.

ಆಳ–ಅಗಲ
ತಾಲಿಬಾನ್ ನಾಯಕರು ನೇಪಥ್ಯದಿಂದ ರಂಗಕ್ಕೆ

ಎನ್‌ಇಪಿ: ಅವಸರದ ಜಾರಿ ಸರಿಯಲ್ಲ	11
ಅರಸು ಕಲ್ಲಹಳ್ಳಿ ಅರೆಬರೆ ಅಭಿವೃದ್ಧಿ!	12

ಚಿನಕುರಳಿ

ಪ್ರಕಾಶ್ ಶೆಟ್ಟಿ

ದ್ವಿತೀಯ ವಾರ್ಷಿಕ ಪರೀಕ್ಷೆ ಆರಂಭ: ಸುರಕ್ಷತಾ ಕ್ರಮ ಪರಿಶೀಲಿಸಿದ ಸಚಿವ ನಾಗೇಶ್

‘ಮೊದಲ 15 ದಿನ ಪುನಶ್ಚೇತನ ಚಟುವಟಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇದೇ 23ರಿಂದ ಪ್ರೌಢಶಾಲೆಗಳು ಪುನರಾರಂಭವಾಗಲಿದ್ದು, 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಮೊದಲ 15 ದಿನ ಪುನಶ್ಚೇತನ ಚಟುವಟಿಕೆ ನಡೆಸಲು ಸೂಚಿಸಲಾಗಿದೆ’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ನಗರದಲ್ಲಿ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆ ನಡೆಯುತ್ತಿರುವ ಕೇಂದ್ರಗಳಿಗೆ ಗುರುವಾರ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ’ಪುನಶ್ಚೇತನ ಚಟುವಟಿಕೆ ನಡೆಸಿ ಮಕ್ಕಳನ್ನು ಶಾಲಾ ವಾತಾವರಣಕ್ಕೆ ಮರಳಿ ತರುವ ಕೆಲಸವನ್ನು ಶಿಕ್ಷಕರು, ಉಪನ್ಯಾಸಕರು ಮಾಡಬೇಕು’ ಎಂದು ಅವರು ಹೇಳಿದರು.

ನಗರದಲ್ಲಿ ಸೇಂಟ್ ಆನ್ ಶಾಲೆಯ ಪರೀಕ್ಷಾ ಕೇಂದ್ರಕ್ಕೆ ಗುರುವಾರ ಭೇಟಿ ನೀಡಿದ ಸಚಿವ ಬಿ.ಸಿ. ನಾಗೇಶ್ ಪರಿಶೀಲನೆ ನಡೆಸಿದರು– ಪ್ರಜಾವಾಣಿ ಚಿತ್ರ

‘ಶಾಲೆ, ಕಾಲೇಜು ಆರಂಭವಾಗದೆ ಭೌತಿಕ ತರಗತಿಗಳಿಂದ ದೂರ ಉಳಿದಿದ್ದಾರೆ. ಅವರು ತರಗತಿಗೆ ಮರಳುತ್ತಿದ್ದಂತೆ ಪಠ್ಯ ಬೋಧನೆ ಶುರು ಮಾಡದೆ ಕೋವಿಡ್ ಸಂದರ್ಭದ ಅನುಭವಗಳು, ಈ ಅವಧಿಯಲ್ಲಿ ವಿದ್ಯಾರ್ಥಿಗಳು ಏನು ಮಾಡುತ್ತಿದ್ದರು, ಯಾವ ರೀತಿ ಕಲಿಕಾ ಕಾರ್ಯದಲ್ಲಿ ತೊಡಗಿದ್ದರು ಎಂಬಿತ್ಯಾದಿ ವಿಚಾರಗಳನ್ನು ಚರ್ಚಿಸಬೇಕು’ ಎಂದರು.

‘ಉಳಿದ ತರಗತಿಗಳ ಮಕ್ಕಳನ್ನು ಶಾಲೆಗೆ ಕಳುಹಿಸಲೂ ಪೋಷಕರು ಉತ್ಸುಕರಾಗಿದ್ದಾರೆ. ಮಕ್ಕಳೂ ಶಾಲೆಗೆ ಬರಲು ಸಿದ್ಧರಿದ್ದಾರೆ. ಈ ಸಂಬಂಧ ಸ್ವತಃ ನನಗೇ ಸಾಕಷ್ಟು ಮಕ್ಕಳು ಪೋಷಕರು ಕರೆ ಮಾಡಿ ಹೇಳುತ್ತಿದ್ದಾರೆ. 9ರಿಂದ 12ನೇ ತರಗತಿ ಆರಂಭದ ದಿನಗಳು ಯಶಸ್ವಿಯಾದರೆ ಇತರೆ ತರಗತಿಗಳ ಆರಂಭಕ್ಕೆ ನಿರ್ಧಾರ ಕೈಗೊಳ್ಳಲು ಅನುಕೂಲವಾಗುತ್ತದೆ’ ಎಂದರು.

19 ವಿದ್ಯಾರ್ಥಿಗಳು ಗೈರು: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯು ಮೊದಲ ದಿನ ಸುಸೂತ್ರವಾಗಿ ನಡೆಯಿತು. ಮೊದಲ ದಿನದ ಐಚ್ಛಿಕ ಕನ್ನಡ, ಗಣಿತ, ಮೂಲಗಣಿತ ಪರೀಕ್ಷೆ ಇತ್ತು.

ರಾಜ್ಯದಲ್ಲಿ ಐಚ್ಛಿಕ ಕನ್ನಡಕ್ಕೆ 198, ಗಣಿತಕ್ಕೆ 80 ಹಾಗೂ ಮೂಲ ಗಣಿತಕ್ಕೆ 55 ವಿದ್ಯಾರ್ಥಿಗಳು ಸೇರಿ 333 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದರು. ಇದರಲ್ಲಿ 19 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದು, 314 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. 187 ಪರೀಕ್ಷಾ ಕೇಂದ್ರಗಳ ಪೈಕಿ 58ರಲ್ಲಿ ಪರೀಕ್ಷೆ ನಡೆದಿದೆ.

‘ಇಲಾಖೆಯಿಂದ ನೀಡಲಾದ ಅಂಕಗಳನ್ನು ತಿರಸ್ಕರಿಸಿ ಪರೀಕ್ಷೆ ತೆಗೆದುಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ. ಪರೀಕ್ಷೆ ಬರೆಯುತ್ತಿರುವವರಲ್ಲಿ ಖಾಸಗಿ ಶಾಲೆಗಳ ವಿದ್ಯಾರ್ಥಿಗಳೇ ಹೆಚ್ಚಾಗಿದ್ದಾರೆ. ಖಾಸಗಿ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಿ ಉತ್ತೀರ್ಣಗೊಳಿಸಲು ಸಾಧ್ಯವಿಲ್ಲ’ ಎಂದೂ ಸಚಿವರು ಹೇಳಿದರು.

ವಸಂತನಗರದ ಸೇಂಟ್ ಆನ್ ವಿದ್ಯಾ ಸಂಸ್ಥೆ ಮತ್ತು ಕೋಟೆ ವಾಣಿವಿಲಾಸ ಬಾಲಕಿಯರ ಪದವಿಪೂರ್ವ ಕಾಲೇಜಿಗೆ ಭೇಟಿ ನೀಡಿ, ಕೋವಿಡ್ ಸುರಕ್ಷತಾ ಕ್ರಮಗಳ ಪಾಲನೆ ಮತ್ತು ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳ ಕುರಿತು ಅವರು ಪರಿಶೀಲನೆ ನಡೆಸಿದರು.

ಸಿಡಿಪಿ ತಯಾರಿಸಲು ಸೆ.30 ಗಡುವು: ಬೈರತಿ ಬಸವರಾಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಎಲ್ಲ ನಗರಾಭಿವೃದ್ಧಿ ಪ್ರಾಧಿಕಾರಗಳು ಸೆ. 30ರ ಒಳಗೆ ‘ಸಮಗ್ರ ಅಭಿವೃದ್ಧಿ ಯೋಜನೆ’ (ಸಿಡಿಪಿ) ತಯಾರಿಸಿ ಸಲ್ಲಿಸಬೇಕು’ ಎಂದು ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರಿಗೆ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್ ಗಡುವು ನೀಡಿದರು.

ನಗರಾಭಿವೃದ್ಧಿ ಪ್ರಾಧಿಕಾರಗಳ ಅಯುಕ್ತರ ಸಭೆಯನ್ನು ವಿಕಾಸ-ಸೌಧದಲ್ಲಿ ಗುರುವಾರ ನಡೆಸಿದ ಅವರು, ‘ನಿಮ್ಮ ವ್ಯಾಪ್ತಿಯ ನಗರ, ಬಡಾವಣೆಗಳು, ಕೆರೆಗಳ ಅಭಿವೃದ್ಧಿ ಸೇರಿದಂತೆ ಇತರ ಯೋಜನೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಿಡಿಪಿಯನ್ನು ನಗರಾಭಿವೃದ್ಧಿ ಇಲಾಖೆ ಮತ್ತು ನಗರ ಹಾಗೂ ಗ್ರಾಮಾಂತರ ಯೋಜನಾ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು’ ಎಂದು ಸೂಚಿಸಿದರು.

‘ಅಭಿವೃದ್ಧಿ ಯೋಜನೆ ವಿಚಾರದಲ್ಲಿ ಪ್ರಕರಣಗಳು ಇರುವ ನಗರಾಭಿವೃದ್ಧಿ ಪ್ರಾಧಿಕಾರಗಳು ನವೆಂಬರ್ ತಿಂಗಳ ಅಂತ್ಯದೊಳಗೆ ಸಲ್ಲಿಸಬೇಕು’ ಎಂದು ಅವರು ತಿಳಿಸಿದರು.

‘ಕೆಲವು ಪ್ರಾಧಿಕಾರಗಳ ಸುಪರ್ದಿಯಲ್ಲಿರುವ ಮೂಲೆ ಮತ್ತು ಮಧ್ಯಂತರ ನಿವೇಶನಗಳನ್ನು ಹರಾಜು ಪ್ರಕ್ರಿಯೆಯಲ್ಲಿ ಮಾರಾಟ ಮಾಡಬೇಕು. ಆ ಮೂಲಕ, ಪ್ರಾಧಿಕಾರಕ್ಕೆ ಆದಾಯ ಬರಲಿದೆ. ಅಲ್ಲದೆ, ಹೊಸ ಬಡಾವಣೆ ನಿರ್ಮಾಣಕ್ಕೆ ಒತ್ತು ನೀಡುವ ಮೂಲಕ ನಗರಾಭಿವೃದ್ಧಿ ಪ್ರಾಧಿಕಾರಗಳ ಸಂಪನ್ಮೂಲ ಹೆಚ್ಚಿಸಬಹುದು ಮತ್ತು ಪ್ರಾಧಿಕಾರದ ನಿರ್ವಹಣೆಗೆ ಅನುಕೂಲ ಆಗಲಿದೆ’ ಎಂದು ಸಲಹೆ ನೀಡಿದರು.

‘ಕಾನೂನು ತೊಡಕುಗಳಿದ್ದರೆ ಇಲಾಖೆಯ ಕಾರ್ಯದರ್ಶಿ ಅಥವಾ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ನಿವಾರಿಸಿಕೊಳ್ಳಬೇಕು’ ಎಂದೂ ಸೂಚಿಸಿದರು.

ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಎಂ.ಎನ್. ಅಜಯ್ ನಾಗಭೂಷಣ್, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದ ನಿರ್ದೇಶಕ ಎಲ್. ಶಶಿಕುಮಾರ್, ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

‘ವರ್ಗೀಕರಣ ಲೋಪಕ್ಕೆ ದಂಡ ವಿಧಿಸದಿರಿ’

ಆಸ್ತಿ ತೆರಿಗೆ: ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಕಾಂಗ್ರೆಸ್ ಮುಖಂಡರಿಂದ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿ ಕುರಿತ ಪರಿಷ್ಕೃತ ವಲಯ ವರ್ಗೀಕರಣಕ್ಕೆ ಅನುಗುಣವಾಗಿ ತೆರಿಗೆ ಪಾವತಿಸದೆ ಬಾಕಿ ಉಳಿಸಿಕೊಂಡವರಿಗೆ ದಂಡ ವಿಧಿಸುವುದಕ್ಕೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿದೆ.

ಬಿಬಿಎಂಪಿ ಮುಖ್ಯ ಆಯುಕ್ತರ ಗೌರವ್ ಗುಪ್ತ ಅವರನ್ನು ಗುರುವಾರ ಭೇಟಿಯಾದ ಕಾಂಗ್ರೆಸ್ ಪ್ರಮುಖರು, ‘ಬಾಕಿ ಮೊತ್ತ ಎಂಬ ನೆಪ ಹೇಳಿ ದುಬಾರಿ ದಂಡದೊಂದಿಗೆ ತೆರಿಗೆ ವಸೂಲಿ ಮಾಡುವುದನ್ನು ಕೈಬಿಡಬೇಕು’ ಎಂದು ಒತ್ತಾಯಿಸಿ ಮನವಿ ಸಲ್ಲಿಸಿದರು.

‘ಅವೈಜ್ಞಾನಿಕವಾಗಿ ತೆರಿಗೆ ವಿಧಿಸುತ್ತಿರುವುದನ್ನು ಸ್ಥಗಿತಗೊಳಿಸದೇ ಇದ್ದರೆ ಕೆಪಿಸಿಸಿ ವತಿಯಿಂದ ಬಿಬಿಎಂಪಿ ಕೇಂದ್ರ ಕಚೇರಿಯ ಮುಂದೆ ಇದೇ 24ರಂದು ಪ್ರತಿಭಟನೆ ನಡೆಸುತ್ತೇವೆ’ ಎಂದು ಎಚ್ಚರಿಕೆ ನೀಡಿದರು.

ಕಾಂಗ್ರೆಸ್ ಮುಖಂಡರಾದ ಎಂ.ರಾಮಚಂದ್ರಪ್ಪ, ಎಸ್. ಮನೋಹರ್, ವಿ.ಶಂಕರ್, ರಿಜ್ವಾನ್ ನವಾಬ್, ಎಂ.ಎ.ಸಲೀಂ, ಆನಂದ್ ಮತ್ತು ಇತರರು ಗೌರವ್ ಗುಪ್ತ ಅವರಿಗೆ ಗುರುವಾರ ಮನವಿ ಸಲ್ಲಿಸಿದರು

ಆಸ್ತಿ ತೆರಿಗೆ ಸಂಬಂಧಿಸಿದ ವಲಯಗಳನ್ನು ಬಿಬಿಎಂಪಿ 2016-17ನೇ ಸಾಲಿನಲ್ಲಿ ಪರಿಷ್ಕರಿಸಿತ್ತು. ಆಗ ಆಸ್ತಿ ಇರುವ ವಲಯ ಗುರುತಿಸುವಾಗ ಆಗಿರುವ ಲೋಪವನ್ನು ಪತ್ತೆ ಹಚ್ಚಿರುವ ಬಿಬಿಎಂಪಿ ವ್ಯತ್ಯಾಸದ ಮೊತ್ತಕ್ಕೆ ದಂಡವನ್ನು ಬಡ್ಡಿ ಸಮೇತ ಪಾವತಿಸುವಂತೆ ಮಾಲೀಕರಿಗೆ ನೋಟಿಸ್ ಜಾರಿಗೊಳಿಸುತ್ತಿದೆ.

‘ನಗರದಲ್ಲಿ 20 ಲಕ್ಷ ಆಸ್ತಿಗಳಿದ್ದು, ಅದರಲ್ಲಿ 18 ಲಕ್ಷ ಆಸ್ತಿಗಳು ತೆರಿಗೆ ವ್ಯಾಪ್ತಿಗೆ ಬರುತ್ತವೆ. ನಿಗದಿತ ಪ್ರಮಾಣದ ತೆರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿದ್ದೀರಿ ಎಂದು ಬಿಬಿಎಂಪಿ 78 ಸಾವಿರ ಆಸ್ತಿ ಮಾಲೀಕರಿಗೆ ನೋಟಿಸ್ ಜಾರಿ ಮಾಡಿದೆ. ಪಾಲಿಕೆ ಪ್ರಕಾರ ಆಸ್ತಿ ಮಾಲೀಕರಿಂದ ₹ 120 ಕೋಟಿ ತೆರಿಗೆ ಬಾಕಿ ಸಂಗ್ರಹವಾಗಬೇಕಿದೆ. ಹಳೆ ಬಾಕಿ ಮೊತ್ತಕ್ಕೆ ದುಬಾರಿ ದಂಡವನ್ನೂ ವಿಧಿಸಲಾಗುತ್ತಿದೆ. ಅಧಿಕಾರಿಗಳು ಮಾಡಿದ ತಪ್ಪಿಗೆ ಆಸ್ತಿ ಮಾಲೀಕರಿಗೆ ದಂಡ ವಿಧಿಸುವುದು ಸರಿಯಲ್ಲ’ ಎಂದು ಕಾಂಗ್ರೆಸ್ ಆಕ್ಷೇಪ ವ್ಯಕ್ತಪಡಿಸಿದೆ.

ಸಿಡಬ್ಲ್ಯುಸಿ ವಿಚಾರಣೆ: ನಿಯಮ ರೂಪಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ದತ್ತು ಸ್ವೀಕಾರ ಸಂದರ್ಭದಲ್ಲಿ ಮಕ್ಕಳ ಕಲ್ಯಾಣ ಸಮಿತಿ(ಸಿಡಬ್ಲ್ಯುಸಿ) ವಿಚಾರಣೆ ಮತ್ತು ಕೌನ್ಸೆಲಿಂಗ್ ನಡೆಸಲು ಅನುಸರಿಸುವ ಪ್ರಕ್ರಿಯೆ ಬಗ್ಗೆ ಮೂರು ತಿಂಗಳಲ್ಲಿ ನಿಯಮ ರೂಪಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಲಿವಿಂಗ್ ಟುಗೆದರ್(ಒಟ್ಟಿಗೆ ವಾಸ) ಜೋಡಿ ಒಪ್ಪಿಸಿದ 12 ದಿನದ ಮುಗುವನ್ನು ದತ್ತು ನೀಡಲು ಮೈಸೂರಿನ ಸಿಡಬ್ಲ್ಯುಸಿ ಅಂಗೀಕರಿಸಿದೆ. ಇದಕ್ಕೆ ಯಾವ ನಿಯಮಗಳನ್ನು ಅನುಸರಿಸಲಾಗಿದೆ ಎಂಬುದು ತಿಳಿಯುತ್ತಿಲ್ಲ ಎಂದು ಲೆಜ್ಟ್‌ಕಿಟ್ ಫೌಂಡೇಷನ್ ಅರ್ಜಿ ಸಲ್ಲಿಸಿದೆ.

ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ‘ಈ ರೀತಿಯ ಪ್ರಕರಣಗಳಲ್ಲಿ ವಿಚಾರಣೆ ಮತ್ತು ಕೌನ್ಸೆಲಿಂಗ್ ಹೇಗೆ ನಿರ್ವಹಿಸಬೇಕು ಎಂಬುದನ್ನು ಬಾಲ ನ್ಯಾಯ ಕಾಯ್ದೆಯಡಿ ನಿಯಮಾವಳಿ ರೂಪಿಸುವುದು ಅಗತ್ಯ’ ಎಂದು ಹೇಳಿತು. ‘ದೈಹಿಕ, ಭಾವನಾತ್ಮಕ ಮತ್ತು ಸಾಮಾಜಿಕ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಪ್ರಕರಣದಿಂದ ಪ್ರಕರಣಕ್ಕೆ ಅಂಶಗಳು ಭಿನ್ನವಾಗಿರುತ್ತವೆ. ಮಗುವನ್ನು ಪೋಷಕರು ಒಪ್ಪಿಸುವುದು ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸುವ ಗಂಭೀರ ಪ್ರಕರಣವಾಗಿದೆ. ಹೀಗಾಗಿ, ಸಿಡಬ್ಲ್ಯುಸಿ ವಿಸ್ತೃತ ತನಿಖೆ ಮಾಡಬೇಕಾಗುತ್ತದೆ’ ಎಂದು ತಿಳಿಸಿತು.

ಸುದ್ದಿ 2 ನಿಮಿಷ

ವಿದ್ಯಾರ್ಥಿನಿಗೆ ಕಿರಿಯ ಕವಯಿತ್ರಿ ಗರಿ

ಬೆಂಗಳೂರು: ನಗರದ ಬಿಷಪ್ ಕಾಟನ್ ಬಾಲಕಿಯರ ಶಾಲೆಯ 8ನೇ ತರಗತಿ ವಿದ್ಯಾರ್ಥಿನಿ ಅಮಾನಾ ಅತಿ ಕಿರಿಯ ಕವಯಿತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು, ‘ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್’ ಮತ್ತು ’ಏಷ್ಯಾ ಬುಕ್ ಆಫ್ ರೆಕಾರ್ಡ್ಸ್’ ನಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

ಅಮಾನಾ ಬರೆದಿದ್ದ 61 ಕವನಗಳ ಪುಸ್ತಕವನ್ನು 2020ರ ನವೆಂಬರ್‌ನಲ್ಲಿ ಸಪ್ನಾ ಬುಕ್‌ಹೌಸ್ ಪ್ರಕಟಿಸಿತ್ತು. ಆಗ, ಅಮಾನಾಗೆ 12 ವರ್ಷ, 5 ತಿಂಗಳು ಮತ್ತು 10 ದಿನಗಳಾಗಿತ್ತು. ಈ ಕೃತಿಯನ್ನು ಪರಿಗಣಿಸಿ, ಅತಿಕಿರಿಯ ಕವಯಿತ್ರಿ ಎಂಬ ಗರಿಮೆಯನ್ನು ಅಮಾನಾಗೆ ನೀಡಲಾಗಿದೆ.

ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಈವರೆಗೆ 275 ಕವನಗಳನ್ನು ವಿದ್ಯಾರ್ಥಿನಿ ರಚಿಸಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆಯಿಂದ

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಂಡಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 21 ಮತ್ತು 22ರಂದು ಬೆಳಿಗ್ಗೆ 10ರಿಂದ ಸಂಜೆ 5ರ ತನಕ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಸರ್ಕಾರಿ ಶಾಲೆ ಸಿ.ಎನ್. ಪಾಳ್ಯ, ಮುನಿಸ್ವಾಮಿ ಗ್ರಾನೈಟ್ ಫ್ಯಾಕ್ಟರಿ, ಮಹದೇಶ್ವರ ನಗರ ಮುಖ್ಯರಸ್ತೆ, ರಾಬಿನ್ ಚಿತ್ರಮಂದಿರ, ಪೈಪ್‌ಲೈನ್ ಪಾರ್ಕ್, ಅಶ್ವತ್ಥಕಟ್ಟೆ ನಾಲ್ಕನೇ ಅಡ್ಡ ರಸ್ತೆ, ಚಾಕಲೇಟ್ ಫ್ಯಾಕ್ಟರಿ, ರುದ್ರಪ್ಪ ಗಾರ್ಡನ್, ಮುಳಕಟ್ಟಮ್ಮ ದೇವಸ್ಥಾನ, ವಿಠಲ ನಗರ ಮತ್ತು ಸುತ್ತಮುತ್ತಲಿನ ಪ್ರದೇಶ.

22ರಂದು ಜಾಲಹಳ್ಳಿ, ಬಂಡಪ್ಪ ಗಾರ್ಡನ್, ಮುತ್ಯಾಲನಗರ, ದೊಡ್ಡಬೊಮ್ಮಸಂದ್ರ, ಬಿಇಎಲ್ ಕೈಗಾರಿಕಾ ಪ್ರದೇಶ, ಗಂಗಮ್ಮ ವೃತ್ತ, ಚಾಮುಂಡೇಶ್ವರಿ ಬಡಾವಣೆ, ರಾಮಚಂದ್ರಾಪುರ, ಶ್ರೀರಾಮ ಸದನ ಅಪಾರ್ಟ್‌ಮೆಂಟ್, ಸುಂದರ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ.

22 ರಿಂದ ಗುರುರಾಯರ 350ನೇ ಆರಾಧನಾ ಪಂಚರಾತ್ರೋತ್ಸವ

ಬೆಂಗಳೂರು: ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 350ನೇ ಆರಾಧನಾ ಪಂಚರಾತ್ರೋತ್ಸವವು ಇದೇ 22ರಿಂದ 26ರವರೆಗೆ ನಡೆಯಲಿದೆ.

ಜಯನಗರ 5ನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳ ಮಠದಲ್ಲಿ ಭಾನುವಾರ ಸಂಜೆ 6.30ಕ್ಕೆ ಮಠದ ಹಿರಿಯ ವ್ಯವಸ್ಥಾಪಕರಾದ ಆರ್.ಕೆ.ವಾದೀಂದ್ರಾಚಾರ್ಯ ಹಾಗೂ ಕೃಷ್ಣಗುಂಡಾಚಾರ್ಯ ಅವರು ಪಂಚರಾತ್ರೋತ್ಸವಕ್ಕೆ ಚಾಲನೆ ನೀಡಲಿದ್ದಾರೆ.

ಮಠಕ್ಕೆ ಬರುವ ಭಕ್ತರು ಮುಖಗವಸು ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಎಲ್ಲರೂ ಥರ್ಮಲ್ ಸ್ಕ್ಯಾನಿಂಗ್‌ಗೆ ಒಳಪಡಬೇಕು. ಜೊತೆಗೆ ಆಗಾಗ ಕೈಗಳನ್ನು ಸ್ಯಾನಿಟೈಸ್ ಮಾಡಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ಸೇವೆ ಸಲ್ಲಿಸಬಯಸುವ ಭಕ್ತರು ಮಠದ ವಾಟ್ಸ್‌ಆ್ಯಪ್ ಸಂಖ್ಯೆ 9449133929ಗೆ ಸಂಪರ್ಕಿಸಬಹುದು. ಕಾರ್ಯಕ್ರಮವು ಮಠದ ಅಧಿಕೃತ ಫೇಸ್‌ಬುಕ್ ಖಾತೆಗಳಾದ nsrsmutt Jayanagar ಹಾಗೂ harivara ನಲ್ಲಿ ನೇರ ಪ್ರಸಾರಗೊಳ್ಳಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 08022443962 ಅಥವಾ 9945429129.

ಶಿವರಾಮ ಕಾರಂತ ಬಡಾವಣೆಯಲ್ಲಿ ಕಟ್ಟಡ ಸಕ್ರಮ ವಿಷಯ

‘ಸಮಿತಿ ವರದಿ ಬಳಿಕವಷ್ಟೇ ಅಂತಿಮ ಆದೇಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವರಾಮ ಕಾರಂತ ಬಡಾವಣೆಗೆ ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿರುವ ಪ್ರದೇಶದಲ್ಲಿ 2018ರ ಆ.3ರ ನಂತರ ನಿರ್ಮಾಣವಾದ ಯಾವುದೇ ಕಟ್ಟಡವನ್ನು ಸಕ್ರಮಗೊಳಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ನೇಮಿಸಿರುವ ನ್ಯಾ.ಎ.ವಿ. ಚಂದ್ರಶೇಖರ್ ಸಮಿತಿ ಸ್ಪಷ್ಟಪಡಿಸಿದೆ.

ಈ ಬಡಾವಣೆಗಾಗಿ ಸ್ವಾಧೀನ ಪಡಿಸಿಕೊಳ್ಳಬೇಕಿದ್ದ ಒಟ್ಟು 3,546 ಎಕರೆ ಭೂಮಿಯಲ್ಲಿ 257 ಎಕರೆಯನ್ನು 2009–10ರ ಅವಧಿಯಲ್ಲಿ ರಾಜ್ಯ ಸರ್ಕಾರ ಕೈಬಿಡುವ ಮೂಲಕ ಭೂಮಾಲೀಕರಿಗೆ ಅನುಕೂಲ ಕಲ್ಪಿಸಿತ್ತು. ಈ ಕುರಿತು ಸಲ್ಲಿಕೆಯಾದ ಅರ್ಜಿ ವಿಲೇವಾರಿ ಮಾಡಿದ್ದ ಹೈಕೋರ್ಟ್ ಈ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆಯನ್ನೇ ರದ್ದುಪಡಿಸಿತ್ತು. ಬಳಿಕ ಅನೇಕರು ಬಿಡಿಎ ನಿರಾಕ್ಷೇಪಣಾ ಪತ್ರ ಪಡೆದು ಈ ಜಾಗದಲ್ಲಿ ಕಟ್ಟಡ ನಿರ್ಮಿಸಿದ್ದರು.

ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆಯನ್ನೇ ರದ್ದು ಮಾಡಿರುವ ಕುರಿತ ಮೇಲ್ಮನವಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ಈ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಹಾಗೂ ಬಿಡಿಎಗೆ 2018ರ ಆಗಸ್ಟ್ 3ರಂದು ಆದೇಶ ಮಾಡಿತ್ತು. ಈ ಆದೇಶ ಪ್ರಕಟವಾದ ಬಳಿಕ ಕೆಲವರು ತರಾತುರಿಯಲ್ಲಿ ಈ ಪ್ರದೇಶದಲ್ಲಿ ಕಟ್ಟಡ ನಿರ್ಮಿಸಿದ್ದರು. ಇದು ಗಮನಕ್ಕೆ ಬರುತ್ತಿದ್ದಂತೆಯೇ, 2020ರ ಡಿ.3ರಂದು ಮತ್ತೊಂದು ಆದೇಶ ನೀಡಿದ್ದ ಸುಪ್ರೀಂ ಕೋರ್ಟ್ ‘ನಿಯಮಾನುಸಾರ ಅನುಮತಿ ಪಡೆದು ನಿರ್ಮಾಣವಾಗಿರುವ ಮನೆಗಳಿಗೆ/ ಕಟ್ಟಡಗಳಿಗೆ ರಕ್ಷಣೆ ಒದಗಿಸಬೇಕು’ ಎಂದು ಅಭಿಪ್ರಾಯಪಟ್ಟಿತ್ತು. ಯಾವ ಕಟ್ಟಡಗಳು ಕ್ರಮಬದ್ಧವಾಗಿ ನಿರ್ಮಾಣವಾಗಿವೆ ಎಂಬುದನ್ನು ಪರಿಶೀಲಿಸಲು ನಿವೃತ್ತ ನ್ಯಾ.ಚಂದ್ರಶೇಖರ್ ನೇತೃತ್ವದಲ್ಲಿ ಸಮಿತಿಯನ್ನೂ ರಚಿಸಿತ್ತು.

'ಈ ಪ್ರಕರಣ ಸಂಬಂಧ ನ್ಯಾ. ಚಂದ್ರಶೇಖರ್ ಸಮಿತಿಯ ವರದಿಯನ್ನು ಆಧರಿಸಿಯೇ ಅಂತಿಮ ತೀರ್ಪು ಪ್ರಕಟಿಸಲಾಗುತ್ತದೆ. ಈ ಪ್ರದೇಶದಲ್ಲಿ 2018ರ ಆ. 3ರ ನಂತರ ನಿರ್ಮಾಣವಾದ ಯಾವುದೇ ಕಟ್ಟಡಗಳು ಸಕ್ರಮಗೊಳಿಸುವುದಕ್ಕೆ ಅರ್ಹವಲ್ಲ' ಎಂದು ಸ್ಪಷ್ಟಪಡಿಸಿತ್ತು.

ಎನ್‌ಕೌಂಟರ್: ಸೇನಾಧಿಕಾರಿ ಹುತಾತ್ಮ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯಲ್ಲಿ ಗುರುವಾರ ಭಯೋತ್ಪಾದಕರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಸೇನೆಯ ಕಿರಿಯ ನಿಯೋಜಿತ ಅಧಿಕಾರಿ (ಜೆಸಿಒ) ಹುತಾತ್ಮರಾಗಿದ್ದು, ಭಯೋತ್ಪಾದಕನೊಬ್ಬ ಹತನಾಗಿದ್ದಾನೆ ಎಂದು ರಕ್ಷಣಾ ವಕ್ತಾರರು ಗುರುವಾರ ತಿಳಿಸಿದ್ದಾರೆ.

ಥನಮಂಡಿ ಬೆಲ್ಟ್‌ನಲ್ಲಿ ಭಯೋತ್ಪಾದಕರು ಅಡಗಿರುವ ಮಾಹಿತಿ ಲಭಿಸಿದ ನಂತರ ಭದ್ರತಾ ಪಡೆಗಳು, ಶೋಧ ಕಾರ್ಯಾಚರಣೆ ಕೈಗೊಂಡಿದ್ದವು. ಉಗ್ರರು ಭದ್ರತಾ ಪಡೆಗಳ ಮೇಲೆ ಗುಂಡು ಹಾರಿಸಿದ ನಂತರ ಭದ್ರತಾಪಡೆಗಳು ಪ್ರತಿದಾಳಿ ನಡೆಸಿದವು. ಪ್ರತಿದಾಳಿ ವೇಳೆ ಸೇನಾಧಿಕಾರಿ ಹುತಾತ್ಮರಾಗಿದ್ದಾರೆ.



ಕನ್ನಡ ಗೆಳೆಯರ ಬಳಗದ ಸಹಯೋಗದಲ್ಲಿ ಸಪ್ನ ಬುಕ್ ಹೌಸ್ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಎಂ. ಚಿದಾನಂದಮೂರ್ತಿ ಅವರ ಸಂಸ್ಮರಣ ಸಂಪುಟ ‘ಚಿದಾನಂದ ಕಿರಣ’ ಕೃತಿಯನ್ನು ಸಾಹಿತಿ ಹಂ.ಪ. ನಾಗರಾಜಯ್ಯ ಬಿಡುಗಡೆ ಮಾಡಿದರು. ಕನ್ನಡ ಪರ ಹೋರಾಟಗಾರ ವ.ಚ. ಚನ್ನೇಗೌಡ, ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಸತೀಶಕುಮಾರ್ ಹೊಸಮನಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಕವಿ ದೊಡ್ಡರಂಗೇಗೌಡ, ಕೃತಿಯ ಸಂಪಾದಕ ಆರ್. ಶೇಷಶಾಸ್ತ್ರಿ ಹಾಗೂ ಸಪ್ನ ಬುಕ್ ಹೌಸ್ ವ್ಯವಸ್ಥಾಪಕ ಆರ್. ದೊಡ್ಡೇಗೌಡ ಇದ್ದರು.

ಸ್ವಾತಂತ್ರ್ಯೋತ್ಸವಕ್ಕೆ ಅಡ್ಡಿ: ಬಂಧನಕ್ಕೆ ಆಗ್ರಹ

ಬೆಂಗಳೂರು: ‘ಪುತ್ತೂರಿನ ಕಬಕದಲ್ಲಿ ಸ್ವಾತಂತ್ರೋತ್ಸವ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದ ಹಾಗೂ ಸ್ವಾತಂತ್ರ್ಯ ಹೋರಾಟಗಾರರಿಗೆ ಅವಮಾನ ಮಾಡಿದ ದೇಶದ್ರೋಹಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಹಿಂದೂ ಜಾಗರಣ ವೇದಿಕೆ ಆಗ್ರಹಿಸಿದೆ.

ಕನ್ನಡ ಕಡೆಗಣನೆ: ಶಿಸ್ತುಕ್ರಮ ಕೈಗೊಳ್ಳಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕಾರ್ಯನಿರ್ವಹಿಸುವ ಕೇಂದ್ರ ಸ್ವಾಮ್ಯದ ಕಚೇರಿಗಳು ಕನ್ನಡವನ್ನು ಪ್ರಧಾನವಾಗಿ ಬಳಸಬೇಕು. ಆದರೆ, ಈ ವಿಷಯದಲ್ಲಿ ಕರ್ತವ್ಯಲೋಪ ಎಸಗಿರುವ ಅಂಚೆ ಇಲಾಖೆಯ ಹಿರಿಯ ಅಧಿಕಾರಿ ಮೇಲೆ ಶಿಸ್ತುಕ್ರಮ ಕೈಗೊಳ್ಳಬೇಕು’ ಎಂದು ಕೇಂದ್ರ ಸರ್ಕಾರಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಆಗ್ರಹಿಸಿದ್ದಾರೆ.

‘ಕನ್ನಡವನ್ನು ಆಡಳಿತ, ಶಿಕ್ಷಣ, ತಂತ್ರಜ್ಞಾನ ಹಾಗೂ ಸಾರ್ವಜನಿಕವಾಗಿ ಬಳಕೆಯಲ್ಲಿರುವಂತೆ ನೋಡಿಕೊಳ್ಳಲು ಪ್ರಾಧಿಕಾರವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಭಾಷಾ ನೀತಿ ಅನ್ವಯ ಹಲವು ಉಪ ಕ್ರಮಗಳನ್ನು ಕೈಗೊಂಡಿದೆ. ಸಾವಿರಾರು ವರ್ಷಗಳಿಂದ ಬೆಳೆದುಕೊಂಡು ಬಂದಿರುವ ಕನ್ನಡಕ್ಕೆ ದ್ರಾವಿಡ ಭಾಷಾ ಬಳಗದಲ್ಲಿ ವಿಶಿಷ್ಟ ಸ್ಥಾನವಿದೆ. ನುಡಿದಂತೆ ಬರೆಯಲು ಹಾಗೂ ಬರೆದಂತೆ ನುಡಿಯಲು ಅವಕಾಶವಿರುವ ಏಕೈಕ ಭಾಷೆಯಾಗಿ ಜಗತ್ತಿನಲ್ಲಿ ಗುರುತಿಸಲ್ಪಟ್ಟಿದೆ. ಕನ್ನಡವನ್ನು ಎಲ್ಲ ಕಚೇರಿಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರಲು ಶ್ರಮಿಸಲಾಗುತ್ತಿದೆ’ ಎಂದು ಕೇಂದ್ರ ಸಚಿವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

‘ಪ್ರಾಧಿಕಾರದ ಅಧ್ಯಕ್ಷರು ರಾಜ್ಯದ ಯಾವುದೇ ಕಚೇರಿಗೆ ಭೇಟಿ ನೀಡುವ ಅಧಿಕಾರ ಹೊಂದಿದ್ದಾರೆ. ಭಾಷೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಈ ಅಧಿಕಾರ ನೀಡಲಾಗಿದೆ. ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅಂಚೆ ಇಲಾಖೆಯ ಹಿರಿಯ ಅಧಿಕಾರಿಗಳು ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಗೆ ನೀಡಲಾದ ಆಹ್ವಾನಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ’ ಎಂದು ಹೇಳಿದ್ದಾರೆ.

‘ಇಲಾಖೆಯ ಹಿರಿಯ ಅಧಿಕಾರಿ ಸ್ವಪ್ನಾ ಪ್ರಮೋದ್ ಅವರು ಪ್ರಾಧಿಕಾರವು ನೀಡಿದ ಪತ್ರಗಳಿಗೆ ಉತ್ತರ ನೀಡದೆಯೇ ನಿರ್ಲಕ್ಷ್ಯ ತೋರಿದ್ದಾರೆ. ಇ–ಮೇಲ್‌ಗೆ ಕೂಡ ಸ್ಪಂದಿಸಿಲ್ಲ. ಉದ್ದೇಶಪೂರ್ವಕವಾಗಿ ರಾಜ್ಯ ಮತ್ತು ಕೇಂದ್ರದ ಭಾಷಾ ನೀತಿಯ ಅನುಷ್ಠಾನಕ್ಕೆ ಅಡ್ಡಿಪಡಿಸಿದ್ದಾರೆ. ಅವರ ವಿರುದ್ಧ ಶಿಸ್ತು ಕ್ರಮವನ್ನು ಜಾರಿಮಾಡಬೇಕು’ ಎಂದು ಆಗ್ರಹಿಸಿದ್ದಾರೆ.



ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಆರ್.ಮಂಜುನಾಥ್ ಅವರು ಬಾಗಲಗುಂಟೆ ವಾರ್ಡ್‌ನ ಮೀನಾಕ್ಷಿ ಬಡಾವಣೆ, ಸೌಂದರ್ಯ ಬಡಾವಣೆ ಹಾಗೂ ಕಿರ್ಲೋಸ್ಕರ್ ಬಡಾವಣೆಗಳಿಗೆ ಗುರುವಾರ ಭೇಟಿ ನೀಡಿ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ಪರಿಶೀಲಿಸಿದರು. ಇದೇ ವೇಳೆ ಸ್ಥಳೀಯರೊಂದಿಗೆ ಸಮಾಲೋಚಿಸಿದ ಅವರು ನಾಗರಿಕರ ಅಹವಾಲುಗಳನ್ನು ಆಲಿಸಿದರು

ಮೆಕ್ಯಾನಿಕ್ ಕೊಲೆ; ಇಬ್ಬರ ಬಂಧನ

ಬೆಂಗಳೂರು: ವಿಜಯನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಫಾಜಿಲ್ ಪಾಷಾ (40) ಎಂಬುವರ ಕೊಲೆ ಪ್ರಕರಣ ಸಂಬಂಧ, ಅವರ ಪತ್ನಿಯ ಸ್ನೇಹಿತ ಸೇರಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

'ಪಾದರಾಯನಪುರದ ಅರ್ಬಾಜ್ ಹಾಗೂ ಆತನ ಸಹೋದರ ಬಂಧಿತರು. ಅವರಿಬ್ಬರು ಸೇರಿ ಆರ್‌ಪಿಸಿ ಬಡಾವಣೆ ಬಳಿಯ ಪೈಪ್ ಲೈನ್ ರಸ್ತೆಯಲ್ಲಿ ಆಗಸ್ಟ್ 14ರಂದು ಫಾಜಿಲ್ ಅವರನ್ನು ಕೊಲೆ ಮಾಡಿದ್ದರು' ಎಂದೂ ಪೊಲೀಸರು ಹೇಳಿದರು.

'ಫಾಜಿಲ್ ಪಾಷಾ, ಮೆಕ್ಯಾನಿಕ್ ಆಗಿದ್ದರು. ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ಪಾದರಾಯನಪುರದಲ್ಲಿ ವಾಸವಿದ್ದರು. ಅವರ ಮನೆ ಬಳಿಯೇ ಆರೋಪಿ ಅರ್ಬಾಜ್ ಕುಟುಂಬ ನೆಲೆಸಿತ್ತು. ಫಾಜಿಲ್ ಅವರ ಪತ್ನಿ ಜೊತೆ ಸ್ನೇಹ ಬೆಳೆಸಿದ್ದ ಅರ್ಬಾಜ್, ಸಲುಗೆಯನ್ನೂ ಇಟ್ಟುಕೊಂಡಿದ್ದ.ವಿಷಯ ತಿಳಿದ ಫಾಜಿಲ್ ಹಾಗೂ ಆರೋಪಿ ನಡುವೆ ಜಗಳವೂ ಆಗಿತ್ತು' ಎಂದೂ ಪೊಲೀಸರು ತಿಳಿಸಿದರು.

ಗೋಮಾಳ ಜಮೀನು ಖಾಸಗಿಯವರಿಗೆ ಪರಭಾರೆ

ಉಪ ನೋಂದಣಾಧಿಕಾರಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಹೊಂಗಸಂದ್ರ ಗ್ರಾಮದ ಸರ್ವೆ ನಂ.42ರ ಸರ್ಕಾರಿ ಮುಫತ್ 1 ಎಕರೆ ಗೋಮಾಳವನ್ನು ಖಾಸಗಿ ವ್ಯಕ್ತಿಗಳಿಗೆ ನೋಂದಣಿ ಮಾಡಿಕೊಟ್ಟಿರುವ ಬಿಟಿಎಂ ಉಪ ನೋಂದಣಾಧಿಕಾರಿ ವಿರುದ್ಧ ದೂರು ದಾಖಲಾಗಿದೆ.

ಹೊಂಗಸಂದ್ರ ಗ್ರಾಮಕ್ಕೆ ಒಳಪಡುವ ಬಂಡೇಪಾಳ್ಯ ಕೆರೆ ಪಕ್ಕದ ಸರ್ಕಾರಿ ಗೋಮಾಳ (ಎಂ.ಆರ್. ಹೆಚ್ 5/2018-19, ದಿ: 29/10/2018) ಸ್ವತ್ತನ್ನು ಚದರ ಅಡಿಗಳ ಆಧಾರದಲ್ಲಿ ನೋಂದಣಿ ಮಾಡಿಕೊಡಲಾಗಿದೆ. ನೋಂದಣಿ ಮಾಡುವಾಗ ಪಹಣಿ, ಆರ್‌ಟಿಸಿ ಸೇರಿದಂತೆ ಯಾವುದೇ ದಾಖಲಾತಿಗಳನ್ನು ಪರಿಶೀಲಿಸದೇ, ನಕಲಿ ಬಿ.ಫಾರಂ ಆಧಾರವಾಗಿಟ್ಟು ವಿಭಾಗ ಪತ್ರವನ್ನು ನೋಂದಣಿ ಮಾಡಿಕೊಡಲಾಗಿದೆ.

ಹೊಂಗಸಂದ್ರ ಗ್ರಾಮಕ್ಕೆ ಒಳಪಡುವ ಬಂಡೇಪಾಳ್ಯದ ಗೋಮಾಳ ಜಾಗ

ನೋಂದಣಾಧಿಕಾರಿ ಭಾಸ್ಕರ್ ಚೌವಾರ ಎಂಬುವವರು ಭೂಗಳ್ಳರ ಜತೆ ಶಾಮೀಲಾಗಿ ಸಾರ್ವಜನಿಕ ಸ್ವತ್ತನ್ನು ಜಿ.ವಿ.ವಿಜಯ್ ಕುಮಾರ್ ಬಿನ್ ವೆಂಕಟಸ್ವಾಮಿ, ಜಿ.ವಿ.ಶ್ರೀನಿವಾಸ್ ಕುಮಾರ್ ಬಿನ್ ವೆಂಕಟಸ್ವಾಮಿ, ಜಿ.ವಿ.ರಾಜಣ್ಣ ಬಿನ್ ವೆಂಕಟಸ್ವಾಮಿ ಇವರ ಹೆಸರಿಗೆ ವಿಭಾಗ ಪತ್ರ ನೋಂದಣಿ ಮಾಡಿಕೊಟ್ಟಿದ್ದಾರೆ. ನಕಲಿ ದಾಖಲೆಗಳನ್ನು ಸೃಷ್ಟಿ ಮಾಡುವಲ್ಲಿ ಈ ಮೂವರ ಜತೆಗೆ ಹೊಸಪಾಳ್ಯದ ವೆಂಕಟೇಶ್ ನಾಯ್ಡು ಮತ್ತು ನಾರಾಯಣಸ್ವಾಮಿ ಸಹ ಸೇರಿದ್ದಾರೆ. ಇವರ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಬಂಡೇಪಾಳ್ಯ ಠಾಣೆಯಲ್ಲಿ ದೂರು ನೀಡಿದ್ದಾರೆ.

ಬಿಬಿಎಂಪಿ ಆಸ್ತಿ ತೆರಿಗೆ ರಸೀದಿ ಎಸ್ ಎಎಸ್ ಮೂಲ ಅರ್ಜಿ ಸಂಖ್ಯೆ 800005572 ರಂತೆ ರಸೀದಿ ಸಂಖ್ಯೆ: 20212908727 ಬಳಸಿ ಇಂದ್ರಮ್ಮ ಕೋಂ ವೇಣುಗೋಪಾಲ್ ಇವರ ಹೆಸರಿಗೆ ಸದರಿ ಗೋಮಾಳ ಜಮೀನನ್ನು ನೋಂದಣಿ ಮಾಡಿಕೊಡಲಾಗಿತ್ತು. ಆದರೆ, ಇದರ ಮೂಲವನ್ನು ಪರಿಶೀಲಿಸಲಾಗಿ ಇಸ್ಮಾಯಿಲ್ ನಂ.34, ಬೇಗೂರು ವಿಟ್ಟಸಂದ್ರ ಗ್ರಾಮ ಎಂದು ಕಂಡು ಬಂದಿದ್ದು, ನಕಲಿ ಬಿ ಖಾತಾ ಮಾಡಿಕೊಟ್ಟಿರುವುದು ಸ್ಪಷ್ಟವಾಗಿದೆ. ಜಿ.ವಿ.ಇಂದ್ರಮ್ಮ ಎಂಬುವವರು ತಮ್ಮ ಮೂವರು ಸಹೋದರರಿಗೆ ವಿಭಾಗ ಪತ್ರ ಮಾಡಿಕೊಡುವಾಗ ಪ್ರಕರಣ ಬೆಳಕಿಗೆ ಬಂದಿದೆ.

ನಕಲಿ ಎಟಿಎಂ ಕಾರ್ಡ್ ನೀಡಿ ವಂಚನೆ: ದೂರು

ವಿಜಯಪುರ: ಪಟ್ಟಣದ ಚನ್ನರಾಯಪಟ್ಟಣ ಸರ್ಕಲ್‌ನಲ್ಲಿರುವ ಕೆನರಾ ಬ್ಯಾಂಕ್ ಎ.ಟಿ.ಎಂ.ನಲ್ಲಿ ಹಣ ಡ್ರಾ ಮಾಡುತ್ತಿದ್ದ ಚಿಕ್ಕಬಳ್ಳಾಪುರ ತಾಲ್ಲೂಕಿನ ತಿಮ್ಮನಹಳ್ಳಿಯ ಮುನಿವೆಂಕಟರಾಯಪ್ಪ ಎಂಬುವರ ಗಮನ ಬೇರೆಡೆಗೆ ಸೆಳೆದು ಅಪರಿಚಿತ ವ್ಯಕ್ತಿಯೊಬ್ಬ ನಕಲಿ ಎ.ಟಿ.ಎಂ. ಕಾರ್ಡ್ ನೀಡಿ ₹ 20 ಸಾವಿರ ಡ್ರಾ ಮಾಡಿಕೊಂಡು ಪರಾರಿಯಾಗಿರುವ ಘಟನೆ ಬುಧವಾರ ನಡೆದಿದೆ.

ಎ.ಟಿ.ಎಂ.ನಿಂದ ಹೊರಬಂದ ಮುನಿವೆಂಕಟರಾಯಪ್ಪ ಅವರ ಮೊಬೈಲ್‌ಗೆ ಹಣ ಡ್ರಾ ಮಾಡಿರುವ ಬಗ್ಗೆ ಸಂದೇಶ ಬಂದಿದೆ. ಗಾಬರಿಗೊಂಡ ಅವರು ಪುನಃ ಎ.ಟಿ.ಎಂ.ಗೆ ಹೋಗಿ ಬ್ಯಾಲೆನ್ಸ್ ಚೆಕ್ ಮಾಡಲು ಹೋದಾಗ ಕಾರ್ಡ್ ನಕಲಿ ಎಂದು ಗೊತ್ತಾಗಿದೆ. ಅವರು ಪೊಲೀಸ್ ಠಾಣೆಗೆ ಹೋಗಿ ದೂರು ನೀಡುವಷ್ಟರಲ್ಲಿ ವಿವಿಧ ಎ.ಟಿ.ಎಂ.ಗಳಲ್ಲಿ ಉಳಿದ ₹ 40 ಸಾವಿರಕ್ಕೂ ಹೆಚ್ಚು ಹಣ ಡ್ರಾ ಮಾಡಿರುವ ಬಗ್ಗೆ ಸಂದೇಶ ಬಂದಿದೆ. ಈ ಸಂಬಂಧ ವಿಜಯಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ವಿದ್ಯುತ್ ತಗುಲಿ ಬಾಲಕ ಸಾವು: ಪರಿಹಾರ ವಿತರಣೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು ಜಿಲ್ಲೆಯ ಶಾಲೆಯೊಂದರಲ್ಲಿ ರಾಷ್ಟ್ರಧ್ವಜ ಹಾರಿಸುವ ಸಂದರ್ಭದಲ್ಲಿ ವಿದ್ಯುತ್ ಪ್ರವಹಿಸಿ ಮೃತಪಟ್ಟ ಬಾಲಕನ ಪೋಷಕರಿಗೆ ಕೂಡಲೇ ಪರಿಹಾರ ನೀಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಈ ಸಂಬಂಧ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಘಟನೆ ಬಗ್ಗೆ ತನಿಖೆ ನಡೆಸಲು ಜಿಲ್ಲಾಧಿಕಾರಿಗೆ ಸೂಚನೆ ನೀಡಬೇಕು' ಎಂದು ತಿಳಿಸಿತು.

'ತುಮಕೂರು ಜಿಲ್ಲೆಯ ಕರಿಕೆರೆ ಗ್ರಾಮದ ಶಾಲೆಯಲ್ಲಿ ಧ್ವಜ ಹಾರಿಸುವ ತಯಾರಿ ನಡೆಸುತ್ತಿದ್ದಾಗ ಧ್ವಜ ಕಂಬಕ್ಕೆ ವಿದ್ಯುತ್ ತಗುಲಿತ್ತು. ಚಂದನ್(16) ಮೃತಪಟ್ಟಿದ್ದು, ಶಶಾಂಕ್ ಮತ್ತು ಪವನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಸರ್ಕಾರದ ಪರ ವಕೀಲರು ಮಾಹಿತಿ ನೀಡಿದರು.

'ಇಬ್ಬರು ಬಾಲಕರಿಗೆ ಸರಿಯಾದ ಚಿಕಿತ್ಸೆ ದೊರೆಯುತ್ತಿದೆಯೇ ಎಂಬುದನ್ನು ಸರ್ಕಾರ ಖಚಿತಪಡಿಸಿಕೊಳ್ಳಬೇಕು. ಚಿಕಿತ್ಸೆ ದೊರೆಯುವಂತೆ ಜಿಲ್ಲಾಧಿಕಾರಿ ನೋಡಿಕೊಳ್ಳಬೇಕು. ಚಿಕಿತ್ಸಾ ವೆಚ್ಚವನ್ನೂ ಸರ್ಕಾರವೇ ಭರಿಸಬೇಕಾಗುತ್ತದೆ' ಎಂದು ಪೀಠ ಹೇಳಿತು.

ಎರಡು ವರ್ಷಗಳ ಹಿಂದೆ ಕೊಪ್ಪಳದ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಕಂಬಕ್ಕೆ ಧ್ವಜ ಕಟ್ಟುವಾಗ ಐವರು ವಿದ್ಯಾರ್ಥಿಗಳಿಗೆ ವಿದ್ಯುತ್ ಸ್ಪರ್ಶಿಸಿತ್ತು ಎಂದು ಅಮಿಕಸ್ ಕ್ಯೂರಿ ಅವರು ಪೀಠದ ಗಮನಕ್ಕೆ ತಂದರು. ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಮಕ್ಕಳ ಸುರಕ್ಷತೆ ಖಚಿತಪಡಿಸಿಕೊಳ್ಳಲು ಸಮಿತಿ ರಚಿಸುವಂತೆ ಪೀಠ ನಿರ್ದೇಶನ ನೀಡಿತು.

ವೈದ್ಯರ ಬ್ಲ್ಯಾಕ್‌ಮೇಲ್: ಸಂಘಟನೆ ಅಧ್ಯಕ್ಷ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯರ ಕರ್ತವ್ಯಕ್ಕೆ ಅಡ್ಡಿಪಡಿಸಿ ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡಿದ್ದ ಆರೋಪದಡಿ ಪ್ರದೀಪ್ ಎಂಬಾತನನ್ನು ಬೈಯಪ್ಪನಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಪ್ರದೀಪ್, 'ಜೈ ಭಾರತ ಸೇನೆ' ಸಂಘಟನೆ ಅಧ್ಯಕ್ಷನೆಂದು ಹೇಳಿಕೊಳ್ಳುತ್ತಿದ್ದಾನೆ. ಇಂದಿರಾನಗರದ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಅನ್ಸರ್ ಅಹಮ್ಮದ್ ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಧುಗಿರಿಯ ರೋಗಿಯೊಬ್ಬರು ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆಗೆಂದು ₹ 3,500 ಪಾವತಿಸಿದ್ದ ರೋಗಿ, ಬಾಕಿ ₹ 10 ಸಾವಿರ ಪಾವತಿಸಲು ಹಿಂದೇಟು ಹಾಕಿದ್ದರು. ವೈದ್ಯರ ವಿರುದ್ಧವೇ ಹರಿಹಾಯ್ದಿದ್ದ ರೋಗಿ, ಸಂಘಟನೆ ಅಧ್ಯಕ್ಷನೆಂಬ ಕಾರಣಕ್ಕೆ ಪ್ರದೀಪ್‌ಗೆ ವಿಷಯ ತಿಳಿಸಿದ್ದರು.'

'ಆಸ್ಪತ್ರೆಗೆ ಬಂದಿದ್ದ ಪ್ರದೀಪ್, ವೈದ್ಯ ಹಾಗೂ ಆಸ್ಪತ್ರೆಯ ವಿಡಿಯೊವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದ. ರೋಗಿಗಳ ಬಳಿ ಲಂಚ ಪಡೆಯುತ್ತಿದ್ದೀರಾ? ಎಂದು ಹೇಳಿ ಬೆದರಿಸಿದ್ದ. 'ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ. ನಿಮ್ಮನ್ನು ಕೆಲಸದಿಂದ ತೆಗೆಸುತ್ತೇನೆ' ಎಂದಿದ್ದ ಆರೋಪಿ, ಆ ರೀತಿ ಮಾಡಬಾರದೆಂದರೆ ₹ 2 ಲಕ್ಷ ನೀಡುವಂತೆ ಬೇಡಿಕೆ ಇಟ್ಟಿದ್ದ. ಈ ಸಂಗತಿ ದೂರಿನಲ್ಲಿದೆ' ಎಂದೂ ಪೊಲೀಸರು ತಿಳಿಸಿದರು.

'ಬೇಸತ್ತ ವೈದ್ಯ ಅನ್ಸರ್ ಅಹಮ್ಮದ್ ಅವರು ಠಾಣೆಗೆ ದೂರು ನೀಡಿದ್ದರು. ವೈದ್ಯರ ಕರ್ತವ್ಯಕ್ಕೆ ಅಡ್ಡಿಪಡಿಸಿ ಬೆದರಿಕೆಯೊಡ್ಡಿದ್ದ ಆರೋಪದಡಿ ಆತನನ್ನು ಬಂಧಿಸಲಾಗಿದೆ' ಎಂದೂ ಅವರು ವಿವರಿಸಿದರು.

ಜಿಲೆಟಿನ್ ಕಡ್ಡಿಯಿಂದಲೇ ಸ್ಫೋಟ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಕನಕಪುರ: ಇಲ್ಲಿನ ಮರಳೇಗವಿ ಮಠದ ಸಮೀಪ ಕಾರು ಸ್ಫೋಟ ಪ್ರಕರಣ ತಿರುವು ಪಡೆದುಕೊಂಡಿದ್ದು, ವಾಹನದ ಒಳಗಿದ್ದ ಜಿಲೆಟಿನ್ ಕಡ್ಡಿಗಳಿಂದಲೇ ಸ್ಫೋಟ ಸಂಭವಿಸಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಘಟನೆಯಲ್ಲಿ ಮೃತಪಟ್ಟ ಮಹೇಶ್‌ಗೆ ಜಿಲೆಟಿನ್ ಕಡ್ಡಿಗಳನ್ನು ಮಾರಾಟ ಮಾಡಿದ್ದ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ಇದೇ 16ರಂದು ಮಧ್ಯಾಹ್ನ 3ರ ಸುಮಾರಿಗೆ ಮಠದ ಬಳಿ ಕಾರು ಸ್ಫೋಟಗೊಂಡಿತ್ತು. ಮಹೇಶ್ ಕಾರಿನಲ್ಲಿ ಜಿಲೆಟಿನ್ ಕಡ್ಡಿಗಳನ್ನು ಕೊಂಡೊಯ್ಯುತ್ತಿದ್ದರು. ಈ ವೇಳೆ ಅಕಸ್ಮಾತಾಗಿ ಸ್ಫೋಟ ಸಂಭವಿಸಿತು ಎಂಬುದು ತನಿಖೆ ವೇಳೆ ತಿಳಿದುಬಂದಿದೆ. ಎಫ್‌ಎಸ್‌ಎಲ್ ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಇನ್ನಷ್ಟೇ ವರದಿ ಬರಬೇಕಿದೆ.

ಮಹೇಶ್ ಗಣಿಗಾರಿಕೆಗೆ ಬೇಕಾದ ಸಲಕರಣೆಗಳನ್ನು ಸಾಗಿಸಲು ಮಾತ್ರ ಅನುಮತಿ ಪಡೆದಿದ್ದರು. ಅವರ ಬಳಿ ಸ್ಫೋಟಕ ಸಾಮಗ್ರಿ ಇರಲಿಲ್ಲ. ಹೀಗಾಗಿ ಕನಕಪುರದಲ್ಲಿ ಪರವಾನಗಿ ಪಡೆದವರಿಂದ ದುಪ್ಪಟ್ಟು ಹಣ ನೀಡಿ ಜಿಲೆಟಿನ್ ಕಡ್ಡಿ ಖರೀದಿಸಿ ಕ್ವಾರಿಗೆ ಕೊಂಡೊಯ್ಯುತ್ತಿದ್ದರು ಎಂದು ದೂರಲಾಗಿದೆ.

ಮಹೇಶ್‌ಗೆ ದುಪ್ಪಟ್ಟು ಬೆಲೆಗೆ ಜಿಲೆಟಿನ್ ಮಾರಾಟ ಮಾಡಿದ ಆರೋಪದ ಮೇಲೆ ಪಡುವಣಗೆರೆ ಎಸ್‌ಎಲ್‌ಎನ್ ಮ್ಯಾಗಜೀನ್ ಅಂಗಡಿಯ ಪ್ರಕಾಶ್ ರಾವ್, ಅವರ ಪುತ್ರ ಸುನಿಲ್ ರಾವ್, ಕಾರ್ಮಿಕರಾದ ಹರೀಶ್, ರಾಮಣ್ಣ ಅವರನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

EXPRESSION OF INTEREST

EMPOWERMENT THROUGH ENTREPRENEURSHIP AWAKE Assn. of Women Entrepreneurs of Karnataka

ಕರ್ನಾಟಕ ರಾಜ್ಯ ಮಹಿಳಾ ಉದ್ಯಮಿಗಳ ಸಂಸ್ಥೆ

ಬಿ–76, ಕೆಎಸ್‌ಎಸ್‌ಐಡಿಸಿ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು–560010 ಭಾರತ ಹಿತಾಸಕ್ತಿ ವ್ಯಕ್ತಪಡಿಸುವಿಕೆ ಕರ್ನಾಟಕ ರಾಜ್ಯ ಮಹಿಳಾ ಉದ್ಯಮಿಗಳ ಸಂಸ್ಥೆ (ಕರ್ನಾಟಕ ರಾಜ್ಯ ಮಹಿಳಾ ಉದ್ಯಮಿಗಳ ಸಂಸ್ಥೆ ಅವೇಕ್, https://awakeindia.org.in/) ರಾಜಾಜಿನಗರ, ಬೆಂಗಳೂರು – 560010 ಇವರು ಪ್ರಸ್ತುತ ಅಸ್ತಿತ್ವದಲ್ಲಿರುವ ಹಳೆಯ ಕಟ್ಟಡವನ್ನು ಪುನರ್ ನಿರ್ಮಿಸಲು ಮತ್ತು ಒಂದು ಹೊಸ ಇಂಕ್ಯುಬೇಶನ್ ಸೆಂಟರ್ ಹಾಗೂ ತರಬೇತಿ ಸೌಲಭ್ಯಗಳನ್ನು ನಿರ್ಮಿಸಲು ಯೋಜಿಸಿದ್ದಾರೆ. (14,000 ಚದರ ಅಡಿವುಳ್ಳ 3 ಅಂತಸ್ತಿನ ಕಟ್ಟಡ) ಸದರಿ ಕಾಮಗಾರಿಗಾಗಿ ಪ್ರತಿಷ್ಠಿತ ಆರ್ಕಿಟೆಕ್ಟ್‌ಗಳನ್ನು ಆಯ್ಕೆ ಮಾಡಿ ತೊಡಗಿಸಿಕೊಳ್ಳಲು ಅವೇಕ್ ಕರ್ನಾಟಕ ಆಡಳಿ ಮಂಡಳಿಯು ಮುಂದಾಗಿದೆ. ಸದರಿ ಸಮುಚ್ಚಯದ ಆರ್ಕಿಟೆಕ್ಟ್ ವಿನ್ಯಾಸ ರೂಪಿಸಲು ಆಸಕ್ತಿಯುಳ್ಳ ಪ್ರತಿಷ್ಠಿತ ಆರ್ಕಿಟೆಕ್ಟ್‌ಗಳು ತಮ್ಮ ವಿವರಗಳನ್ನು ಸದರಿ ವಿಳಾಸಕ್ಕೆ ಸಲ್ಲಿಸುವುದು: president@awakeindia.org.in. ಹಿತಾಸಕ್ತಿಯನ್ನು ಸ್ವೀಕರಿಸುವ ಮತ್ತು ಪರಿಗಣಿಸುವ ಕೊನೆಯ ದಿನಾಂಕ 08.09.2021 ಆಗಿರುತ್ತದೆ.
ಸಹಿ/–
ಕಾರ್ಯದರ್ಶಿ,
ಅವೇಕ್, ಕರ್ನಾಟಕ
18.08.2021

EDUCATIONAL

Admission

DIRECT FINAL/ REGULAR:Ph.D/ M.Phil/LL.B/ (3/5 Years)/ B.Tech/ Diploma/BAMS/BHMS/ NURSING/ B.Pharma/ D.Pharma/B.Sc (MLT/ Audiology/ Ophthalmology/ Orthopedics/ Renal Etc.) GOVT Recognised, Limited Seats, Join Immediately, Asha Institute,Bangalore:94 48460103

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

BUILDERS ESSENTIAL

Building Materials

NEED OLD factory shed steel items, sheets and iron rods etc. Only owners Contact: 8867255121 8050580156.

Building Contractors

CONSTRUCT_YOUR Dream_home_at Rs.1500/- per_sqft (all_inclusive.) special_Offer for SMV_Layout customers Ullal, Bangalore. Aadya Homes: 6364145566

JOB OPPORTUNITIES

Teachers/ Professors

TEACHERS WANTED 1st To 10th Std Teachers, English Medium AllSubjects SAGAR-CONVENT Kanakapura Main Road Bangalore-82 Near APS EngineerCollege, Good Salary & Vehicle Facility:-9342552428

BUSINESS

Business Offers

Distributors

REQUIRED MARKETING Agent, For Mumbai based Tool & Die Steel, Alloy & Stainless Steel Bar Manufacturer cum Distributor on Commission Basis for Bangalore/ Mysore/Hosur Area. Person with Experience of Steel Marketing shall be preferred. Please Contact: 9930796175, Email : hansgoradia@goradia.in

EDUCATION SPECIAL

DH Classifieds | PV Classifieds

We are coming out with special offer for Admission Notice, Education Success Congratulation Ads

For details contact:
Jerry: 9731810277 Vishal: 9845114560
Tanveer: 9886213331
E-mail: dhclassifieds@deccanherald.co.in

DH Classifieds

EDUCATION CORNER ಕ್ಲಾಸಿಫೈಡ್ಸ್

NARGUND INDEPENDENT PU COLLEGE
Recognised by govt of Karnataka
ADMISSIONS OPEN
CONTACT US
+91 7019425622
+91 8310522965
+91 8026720604
www.nargund.edu.in/nipuc
office@nargund.edu.in
For Science & Commerce
JOIN NOW FOR 2021-2022 INTAKE

PROFESSIONAL TRAINING FOR CET & JEE

REAL ESTATE BUYING

Sites

Multiple Locations

ANJANAPURA WANTED JP Nagar, 8th and 9th Phase, 6th Stage, Viveshwaraya Layout, Kempegowda Layout any measurement. Ph: 9845132011/ 9663554448

REAL ESTATE SELLING

Commerical

M G Road And Around

710 SQFT. furnished Office space for sale in Cunningham Road with OCP. Phone 97427 56688

Peenya

COMMERCIAL/ OFFICE space 6000 sqft, with all facilities 10 KVA power at 1st floor, VITC Bhavan, KIADB Industrial Complex, Peenya 2nd Stage, Bangalore- 560058. Is available for Rent/ Lease/ Sale at attractive price. Interested parties for immediate settlement, can call seller directly Mob. No. 7259000755/ 9845898895

Flat

Banashankari

"SALE LUXURY-FLAT on-BDA-Plot, A-Katha,ready to-occupy, PoornaPragna Layout, Uttarahalli, 3BHK,2100.Sqft, one flat-on each-floor,1.40 Crore. "Sri.Ganesh Estate" 9845286505"

BTM Layout

BTM 1ST Stage Dollar's Colony, 3BHK-1400 Sqft, Climatically responsive Apartment, Ready to Move, last unit left, 1.15 Cr. Call: 9880209405

J P Nagar

JP NAGAR 2nd Phase, 3 BHK-1931 Sft & 3 BHK Duplex Flat-3255 Sft with Courtyards, Sky Open Terraces, walk-in-closets with Roof Top Lounge & Fitness Center, Rs. 9800/Sqft Call: 9880209405

Malleshwaram

SALE/RENT: 3 BHK Flat, Ranka Nest Apartments at Srirampuram, Bangalore-560021. Contact: 09848291966/ 08019340526.

Industrial & Factory

Tumkur Road

SALE, DOBESPET, KIADB one acre land with shed 3 crane, borewell. Clear Title. 9141326819, 9972636255

Sites

Chandapura

KHB SITE for sale 40x60 south facing Surya Nagar Phase- 2, 4 kms from Chandapura Circle (NH44), 3350 per sqft. Contact: 9880822229.

Vishweshwariah Layout

VISHWESHWARAIAH LAYOUT BDA Site-Sale 6th-Block 30x40, EF 5600/-, 20x30 4th Block 43L Negotiable: 9341733480/ 8892901567

40X60 VISHWESHWARIAH Layout 1st Block 5750 And 30X40 Site Sale North Face 7000Sqft. Contact: 8310003509

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

B.E.S. INSTITUTE OF TECHNOLOGY (Polytechnic)
16th Main, 4th Block, Jayanagar, Bangalore - 560 011
Email: principal@besit.edu.in Website: www.besit.edu.in
Recognised by Govt. of Karnataka & Approved by AICTE, New Delhi
ADMISSIONS OPEN FOR 3/2 YEARS DIPLOMA
1. Civil Engg (General)
2. Computer Science Engg
3. Electronics & Communication Engg
4. Mechanical Engg (General)
Seat Reservation: 20% - SC, 5%-ST, 20%-Outside Karnataka

ELIGIBILITY	DURATION
Pass S.S.L.C (10th) exam with 35% marks	3 Years
Pass S.S.L.C (10th) + I.T.I (2 Years) Pass	2 Years
PUC (Science-2 Years) Pass	2 Years

Separate Hostel facility available for Girls
For Admission & Details Contact Principal:
Phone: 080-26651497, 9035555595, 9886355595
BES-21202

MONTFORT COLLEGE
A unit of Montfort Brothers of St. Gabriel
SAMPURNA
(AFFILIATED TO BENGALURU NORTH UNIVERSITY)
184, Old Madras Road, Indiranagar, Bengaluru-560038
(Opposite Swami Vivekananda Metro)
ADMISSIONS OPEN FOR 2021-22
New Degree Courses Offered In Compliance With New Education Policy (NEP), 2020
- B.B.A. Bachelor of Business Administation
- B.Com. Bachelor of Commerce
- B.Voc. Bachelor of Commerce - Vocational
- BA Journalism, Psychology Communicative English
- BA Journalism, Psychology Optional English
- B.Sc. Statistics, Mathematics, Computer Science
- B.Sc. Computer Science, Journalism, Psychology
- M.Sc. Psychology
- M.Sc. Counselling Psychology
- M.Sc. Clinical Psychology
- PG Diploma in Counselling Psychology

Advantages of NEP: 3-year Bachelor's Degree, 4-year Bachelor's Degree with Honours
Possibilities after Honours Degree:
1. 1-year Masters after Honours
2. Register for PhD (Based on the credits achieved in Honours)

LIMITED SEATS... HURRY UP
CONTACT FOR ADMISSION
Call: 7411624688 / 080-25283320 25284050, 25201864
Email: montfortcollege.edu.in
mail@montfortcollege.edu.in
ROUNAQH

RENTAL PROPERTIES

Accommodation Available

Villas/Bungalows

SOBHA CITY 5BHK Semi-furnished Row House Villa available for Rent at Sobha City, Tanisandra Main Road. Contact owner: +91 7337676822

PERSONAL

Change of Name

I, RACHANA DESHPANDE, Residing at Bangalore-85 have changed my daughter name from AVANI V NADIG to AVANI, vide affidavit-dated 18/8/2021 before Notary P.C.Ramaiah, Bangalore

SHWETHA SOMESH W/o 14833533N- Sep/MT-SOMESHA V. R/a KR Pete, Akkihebbal, Mandya, Karnataka, changed name from SHWETHA SOMESH to SHWETHA H.K notary KV Mani, Bangalore.

INDRANI KONAR W/o 14835790W- NK/MT- AVIJIT NANDI R/a Indira, Kamarpukur, Hooghly, Goghat, West Bangal, changed name from INDRANI KONAR to INDRANI NANDI, notary KV Mani, Bangalore.

I, SUJATHA.S.RAO residing at No.95, 10thD Main,4th Cross, Jayanagar 1st Block Bangalore-560011 have changed my name to Sujatha.T.R. vide affidavit dated 05/07/2021 in front of notary Hegde GanapathiVenktaraman, Bangalore.

I,SHREYAS SIMHA Residing at-No.201,KVR Vasanthi, Gubalala Main-Road, Bangalore-560062 have-changed my-Name-to SHREYAS SIMHA G Vide-Affidavit Dated:18-08-2021 Sworn-before Notary G.R.Rajanna, Bangalore

14837048H HAV/MT Potadar Navin Suryakant, ASC Centre & College, son name Service Record NAMAN instead of NAMAN NAVIN POTADAR, Notary KV Mani, Bangalore.

14815156M HAV/MT Suresh Kumar, ASC Centre & College, daughter name Service Record SANJU instead of SANJANA, Notary KV Mani, Bangalore.

I, MJ Padmaja and Srinivas.N have changed our son's name to DHRUV VAIBAVAGASTHYA S to DHRUV VAIBAV AGASTHYA S Affidavit 19-08-2021 Sharada

'ವಾಹನ ನಿಲುಗಡೆ' ಫಲಕವಿರುವ ಸ್ಥಳದಲ್ಲಿರುವ ವಾಹನಗಳೂ ಟೋಯಿಂಗ್

ಬೇಸತ್ತ ಜನರಿಂದ ಸಿಬ್ಬಂದಿ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಹನ ನಿಲುಗಡೆ' ಫಲಕವಿರುವ ಸ್ಥಳದಲ್ಲಿ ನಿಲ್ಲಿಸುವ ವಾಹನಗಳನ್ನೂ ಟೋಯಿಂಗ್ ಮಾಡುತ್ತಿದ್ದ ಸಂಚಾರ ಪೊಲೀಸರ ವರ್ತನೆಯಿಂದ ಬೇಸತ್ತ ಇಂದಿರಾನಗರದ ಕೆಲ ನಿವಾಸಿಗಳು, 'ಟೈಗರ್' ವಾಹನವನ್ನು ಅಡ್ಡಗಟ್ಟಿ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಘಟನೆ ಗುರುವಾರ ನಡೆಯಿತು.

ಇಂದಿರಾನಗರ ಮೆಟ್ರೊ ನಿಲ್ದಾಣಕ್ಕೆ ಹೊಂದಿಕೊಂಡಿರುವ ರಸ್ತೆಯಲ್ಲಿ ಸೇರಿದ್ದ ನಿವಾಸಿಗಳ ಗುಂಪು, ಟೈಗರ್ ವಾಹನದಲ್ಲಿದ್ದ ಎಎಸ್ಐ ಅವರನ್ನು ತರಾಟೆಗೆ ತೆಗೆದುಕೊಂಡಿತು. ವಾಹನದ ಚಾಲಕ ಹಾಗೂ ಸಿಬ್ಬಂದಿಯನ್ನು ಹಿಡಿದು ಥಳಿಸಿತು. ಹೆದರಿದ ಸಿಬ್ಬಂದಿ, ವಾಹನ ಬಿಟ್ಟು ಸ್ಥಳದಿಂದ ಓಡಿ ಹೋದರು.

ವಾಹನಗಳ ಬೇಕಾಬಿಟ್ಟಿ ಟೋಯಿಂಗ್‌ನಿಂದ ಬೇಸತ್ತ ಇಂದಿರಾನಗರದ ಕೆಲ ನಿವಾಸಿಗಳು, ಟೈಗರ್ ವಾಹನ ಸಿಬ್ಬಂದಿ ಮೇಲೆ ಗುರುವಾರ ಹಲ್ಲೆ ಮಾಡಿದರು

ಘಟನೆಯನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿರುವ ಸ್ಥಳೀಯರು, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. 'ಕೊರೊನಾ ಸಮಯದಲ್ಲಿ ಜನರನ್ನು ಸುಲಿಗೆ ಮಾಡುತ್ತಿರುವ ಸಿಬ್ಬಂದಿಗೆ ಇಂದಿರಾನಗರದ ಜನ ತಕ್ಕ ಪಾಠ ಕಲಿಸಿದ್ದಾರೆ' ಎಂದು ಹಲವರು ಪ್ರತಿಕ್ರಿಯಿಸಿದ್ದಾರೆ.

ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ ಆರೋಪದಡಿ ಕೆಲ ಸ್ಥಳೀಯರ ವಿರುದ್ಧ ಇಂದಿರಾನಗರ ಠಾಣೆಯಲ್ಲಿ ಪ್ರಕರಣ ಸಹ ದಾಖಲಾಗಿದೆ.

ಆಗಿದ್ದೇನು: 'ಹಲಸೂರು ಸಂಚಾರ ಠಾಣೆ ವ್ಯಾಪ್ತಿಗೆ ಬರುವ ರಸ್ತೆಯ ಬದಿಯಲ್ಲಿ 'ವಾಹನ ನಿಲುಗಡೆ' ಫಲಕ ಹಾಕಲಾಗಿದೆ. ಫಲಕ ನೋಡಿ ಸಾರ್ವಜನಿಕರು ವಾಹನ ನಿಲ್ಲಿಸಿ ತಮ್ಮ ಕೆಲಸಕ್ಕೆ ಹೋಗುತ್ತಿದ್ದಾರೆ. ಇದೇ ಮಾರ್ಗದಲ್ಲಿ ಹೋಗುವ ಟೋಯಿಂಗ್ ವಾಹನದ ಸಿಬ್ಬಂದಿ, ಬೇಕಾಬಿಟ್ಟಿಯಾಗಿ ವಾಹನಗಳನ್ನು ಟೋಯಿಂಗ್ ಮಾಡಿಕೊಂಡು ಹೋಗುತ್ತಿದ್ದಾರೆ' ಎಂದು ಸ್ಥಳೀಯರೊಬ್ಬರು ಹೇಳಿದರು.

'ಮಾಡದ ತಪ್ಪಿಗೆ ಸುಖಾಸುಮ್ಮನೇ ಪೊಲೀಸರು ದಂಡ ವಸೂಲಿ ಮಾಡುತ್ತಿದ್ದಾರೆ. ಸರಿಯಾದ ಜಾಗದಲ್ಲಿ ವಾಹನ ನಿಲ್ಲಿಸಿದರೂ ಟೋಯಿಂಗ್ ಮಾಡಿ ಕಿರಿಕಿರಿ ಉಂಟು ಮಾಡುತ್ತಿದ್ದಾರೆ. ಅವರ ತಪ್ಪು ಪ್ರಶ್ನಿಸಿದರೆ, ಕರ್ತವ್ಯಕ್ಕೆ ಅಡ್ಡಿಪಡಿಸಿದ ಪ್ರಕರಣ ದಾಖಲಿಸುವುದಾಗಿ ಬೆದರಿಸುತ್ತಿದ್ದಾರೆ' ಎಂದೂ ತಿಳಿಸಿದರು.

'ಗುರುವಾರವೂ ಟೋಯಿಂಗ್ ಮಾಡಲು ವಾಹನ ಸ್ಥಳಕ್ಕೆ ಬಂದಿತ್ತು. ವಾಹನ ಟೋಯಿಂಗ್ ಮಾಡುವಾಗಲೇ ಪುರಾವೆ ಸಮೇತ ಅಕ್ರಮ ಬಯಲು ಮಾಡಲಾಯಿತು. ಅಷ್ಟಕ್ಕೆ ಸಿಬ್ಬಂದಿ, ಸ್ಥಳೀಯರ ಮೇಲೆಯೇ ಹರಿಹಾಯ್ದರು. ತಾಳ್ಮೆ ಕಳೆದುಕೊಂಡ ಸ್ಥಳೀಯರು, ಸಿಬ್ಬಂದಿಯನ್ನು ಅಟ್ಟಾಡಿಸಿಕೊಂಡು ಹಲ್ಲೆ ಮಾಡಿದರು' ಎಂದೂ ವಿವರಿಸಿದರು.

ಘಟನೆ ಬಗ್ಗೆ ಪ್ರತಿಕ್ರಿಯಿಸಿದ ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು, 'ಸಿಬ್ಬಂದಿಯಿಂದ ಯಾವುದೇ ಸಮಸ್ಯೆಯಾದರೂ ದೂರು ನೀಡಬೇಕು. ಅದನ್ನು ಬಿಟ್ಟು ಹಲ್ಲೆ ಮಾಡುವುದು ಸರಿಯಲ್ಲ. ಘಟನೆ ಬಗ್ಗೆ ಪ್ರಕರಣ ದಾಖಲಾಗಿದೆ' ಎಂದರು.

DH ಪ್ರಜಾವಾಣಿ MASTERMIND

ಪ್ರಿಯ ಸ್ಪರ್ಧಾರ್ಥಿಗಳೇ,

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದೀರಾ? ರ‍್ಯಾಂಕ್, ಅತ್ಯುತ್ತಮ ಅಂಕ ಗಳಿಸಿ ಸರ್ಕಾರಿ ಉದ್ಯೋಗ ಗಿಟ್ಟಿಸುವ ಕನಸು ಕಂಡಿದ್ದೀರಾ? ಹಾಗಾದರೆ ನಿಮ್ಮ ಕನಸನ್ನು ನನಸಾಗಿಸಲು ನಿಮ್ಮ ಹೆಮ್ಮೆಯ 'ಪ್ರಜಾವಾಣಿ –ಡೆಕ್ಕನ್ ಹೆರಾಲ್ಡ್' ಇನ್ನೊಂದು ಮಹತ್ವದ ಹೆಜ್ಜೆ ಇಟ್ಟಿವೆ. ಯುಪಿಎಸ್‌ಸಿ, ಕೆಪಿಎಸ್‌ಸಿ, ಬ್ಯಾಂಕಿಂಗ್, ಇನ್ಶೂರೆನ್ಸ್, ರೈಲ್ವೆ, ಸಬ್ ಇನ್‌ಸ್ಪೆಕ್ಟರ್, ಪೊಲೀಸ್ ಕಾನ್‌ಸ್ಟೇಬಲ್.. ಹೀಗೆ ಎಲ್ಲಾ ಬಗೆಯ ಸ್ಪರ್ಧಾತ್ಮಕ ಪರೀಕ್ಷೆಗಳ ಓದಿಗೆ ನೆರವು ನೀಡುವ 'ಮಾಸ್ಟರ್‌ಮೈಂಡ್' ಇ-ಪೇಪರ್ ಹೊರತರುತ್ತಿವೆ.

ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಯಲ್ಲಿರುವ 'ಮಾಸ್ಟರ್‌ಮೈಂಡ್' ಈ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಸೂಕ್ತ ಅಧ್ಯಯನ ಸಾಮಗ್ರಿಯನ್ನು ಒಳಗೊಂಡಿದ್ದು, ಜನರಲ್ ಸ್ಟಡೀಸ್, ಸ್ಟ್ಯಾಟಿಕ್, ಕರೆಂಟ್ ಅಫೇರ್ಸ್, ರೀಸನಿಂಗ್ ಎಬಿಲಿಟಿ, ಇಂಗ್ಲಿಷ್ ಲ್ಯಾಂಗ್ವೇಜ್ ಆ್ಯಂಡ್ ವರ್ಬಲ್ ಎಬಿಲಿಟಿ, ಕ್ವಾಲಿಟೇಟಿವ್ ಆಪ್ಟಿಟ್ಯೂಡ್ ಆ್ಯಂಡ್ ಡೇಟಾ ಇಂಟರ್‌ಪ್ರಿಟೇಶನ್, ಕಂಪ್ಯೂಟರ್ ನಾಲೆಜ್... ಹೀಗೆ ಎಲ್ಲಾ ಬಗೆಯ ವಿಭಾಗಗಳ ಜೊತೆಗೆ ಮಾದರಿ ಪ್ರಶ್ನೋತ್ತರಗಳು ಮತ್ತು ಪೂರಕವಾದ ಆಡಿಯೊ ಮತ್ತು ವಿಡಿಯೊಗಳನ್ನು ನೀಡಲಿದೆ.

ಚಂದಾದಾರರಾಗಲು ಸಂಪರ್ಕಿಸಿ
ಎಕ್ಸಿಕ್ಯೂಟಿವ್ ಹೆಸರು: ಅರುಣ್ ಸ್ಟ್ಯಾನ್ಲಿ
ಮೊಬೈಲ್: 98454 42703
bit.ly/emmstudent

ನೂತನ ಕೃಷಿ ಕಾನೂನು ಸುಧಾರಣೆಗೆ ಆಗ್ರಹ

ನಾಗ್ಪುರ (ಪಿಟಿಐ): ರೈತರಿಗೆ ತಾವು ಬೆಳೆದ ಬೆಳೆಗಳ ಉತ್ಪಾದನಾ ವೆಚ್ಚ ಭರಿಸಲು ಪೂರಕವಾಗಿ 'ಲಾಭದಾಯಕ ಬೆಲೆ' ನೀಡುವಂತೆ ಒತ್ತಾಯಿಸಿ ಆರ್‌ಎಸ್‌ಎಸ್‌ನ ಅಂಗಸಂಸ್ಥೆ ಭಾರತೀಯ ಕಿಸಾನ್ ಸಂಘ (ಬಿಕೆಎಸ್) ಸೆಪ್ಟೆಂಬರ್ 8 ರಂದು ರಾಷ್ಟ್ರವ್ಯಾಪಿ ಹೋರಾಟಕ್ಕೆ ಕರೆ ನೀಡಿದೆ.

ಈ ಸಂಬಂಧ ಕೇಂದ್ರ ಸರ್ಕಾರ ಹೊಸ ಶಾಸನವನ್ನಾದರೂ ತರಬೇಕು ಅಥವಾ ಕಳೆದ ವರ್ಷ ಜಾರಿಗೆ ತಂದ ಕೃಷಿ ಮಾರುಕಟ್ಟೆ ಕಾನೂನುಗಳಲ್ಲಿ ಬದಲಾವಣೆಯನ್ನಾದರೂ ಮಾಡಬೇಕು ಎಂದು ರೈತ ಸಂಘಟನೆ ಆಗ್ರಹಿಸಿದೆ.

'ಲಾಭದಾಯಕ ಬೆಲೆ' ಪಡೆಯುವುದು ರೈತರ ಹಕ್ಕು ಎಂದು ಬಿಕೆಎಸ್‌ನ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕುಲಕರ್ಣಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಾರ್ವಜನಿಕ ಸೂಚನೆ

ನನ್ನ ಕಕ್ಷಿದಾರರು, ಇದರಡಿ ಅನುಸೂಚಿಯಲ್ಲಿ ವಿವರಿಸಿರುವ ಬೆಂಗಳೂರು ದಕ್ಷಿಣ ತಾಲ್ಲೂಕು (ಹಾಲಿ ಬೆಂಗಳೂರು ಪೂರ್ವ ತಾಲ್ಲೂಕು), ವರ್ತೂರು ಹೋಬಳಿ, ಯಮಲೂರು ಗ್ರಾಮದ ವಾರ್ಡ್ ನಂ.86 ರಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಖಾತಾ ಸಂಖ್ಯೆ 256/10/370/1 (ಹಳೆಯ ಎಚ್ ಎ ಎಸ್ ಬಿ ಖಾತಾ ಸಂಖ್ಯೆ 370/1) ರ ನಿವೇಶನ ಮತ್ತು ಅದರಲ್ಲಿ ನಿರ್ಮಿಸಲಾಗಿರುವ ಕಟ್ಟಡ ಸಹಿತವಾದ, 8000 ಚದರ ಅಡಿಗಳ ಅಳತೆಯ ಸ್ವತ್ತು ಹಾಗೂ 3753 ಚದರ ಅಡಿಗಳ ಹೆಚ್ಚುವರಿ ಜಾಗದ ಸಮೇತವಾಗಿ ಒಟ್ಟು 11,753 ಚದರ ಅಡಿಗಳ ಸ್ವತ್ತನ್ನು, ಬೆಂಗಳೂರು 560017, ಹಳೆ ವಿಮಾನ ನಿಲ್ದಾಣ ರಸ್ತೆ, ಗೋಲ್ಡನ್ ಎನ್‌ಕ್ಲೇವ್, ಬ–1, 15ನೇ ಮಹಡಿಯಲ್ಲಿ ವಾಸವಾಗಿರುವ ಶ್ರೀ ಹರ್ಷವರ್ಧನ್ ಆರ್ಯ ಮತ್ತು ಶ್ರೀ ಸುದರ್ಶನ್ ಕುಮಾರ್ ಆರ್ಯ (ಮಾಲೀಕರು) ಎಂಬುವರಿಂದ ಖರೀದಿಸಲು ಅಪೇಕ್ಷಿಸಿರುತ್ತಾರೆ.

ಮಾಲೀಕರು ಪ್ರತಿಪಾದಿಸುವುದೇನೆಂದರೆ, ಅನುಸೂಚಿ ಸ್ವತ್ತು ಹಾಲಿ ಇರುವ ಗೃಹಸಾಲವನ್ನು ಹೊರತುಪಡಿಸಿ ಉಳಿದಂತೆ ಬೇರೆ ಯಾರಿಗೂ ಅಡಮಾನ, ಆಧಾರ, ಇತ್ಯಾದಿ ಪರಭಾರೆ ಮಾಡಿರುವುದಿಲ್ಲ ಮತ್ತು ಅಂತಹ ಯಾವುದೇ ಅಸ್ತಿತ್ವದಲ್ಲಿರುವ ಮತ್ತು ಸಿಂಧುವಾದ ಅಡಮಾನಗಳ ವಸ್ತು ವಿಷಯವಾಗಿರುವುದಿಲ್ಲ, ಅಲ್ಲದೆ ಮಾಲೀಕರು ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಯಾರೊಂದಿಗೂ ಯಾವುದೇ ರೀತಿಯ ಕ್ರಯದ ಕರಾರು ಇತ್ಯಾದಿ ಮಾಡಿಕೊಂಡಿರುವುದಿಲ್ಲ ಮತ್ತು ಅಂತಹ ಯಾವುದೇ ದಸ್ತಾವೇಜು ಅಸ್ತಿತ್ವದಲ್ಲಿರುವುದಿಲ್ಲ.

ಒಂದುವೇಳೆ ಯಾವುದೇ ವ್ಯಕ್ತಿಗೆ ಅನುಸೂಚಿ ಸ್ವತ್ತಿನಲ್ಲಿ, ಅಡಮಾನ, ಆಧಾರ, ಇತ್ಯಾದಿ ಯಾವುದೇ ರೀತಿಯ ಋಣಭಾರವೂ ಒಳಗೊಂಡಂತೆ ಮತ್ತು ಅದಕ್ಕೇ ಸೀಮಿತವಲ್ಲದಂತೆ ಯಾವುದೇ ರೀತಿಯ ಹಕ್ಕು, ಸ್ವಾಮ್ಯತೆ, ಹಿತಾಸಕ್ತಿಗಳಾಗಲೀ, ಹಕ್ಕೊತ್ತಾಯ (ಕ್ಲೇಮ್) ವಾಗಲೀ ಇದ್ದಲ್ಲಿ, ಅಥವಾ ಅನುಸೂಚಿ ಸ್ವತ್ತು ಅಥವಾ ಅದರ ಯಾವುದೇ ಒಂದು ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಕ್ರಯದ ಕರಾರು ಇತ್ಯಾದಿ ವಹಿವಾಟುಗಳಲ್ಲಿ ಪಕ್ಷಗಾರರಾಗಿದ್ದಲ್ಲಿ, ಇಂದಿನಿಂದ ಏಳು (7) ದಿವಸಗಳ ಒಳಗಾಗಿ ಅಂತಹ ಹಕ್ಕೊತ್ತಾಯ /ಕ್ಲೇಮ್‌ನ್ನು ಅದಕ್ಕೆ ಸಂಬಂಧಿಸಿದ ದಾಖಲೆಗಳ ಸಾಕ್ಷ್ಯಾಧಾರದೊಂದಿಗೆ ನಮಗೆ ಸಲ್ಲಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ, ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಋಣ ಭಾರಗಳಾಗಲೀ, ಆಧಾರ, ಅಡಮಾನ, ಲೇಣಿ ಅಥವಾ ಅಸ್ತಿತ್ವದಲ್ಲಿರುವ ಕ್ರಯದ ಕರಾರು ಇತ್ಯಾದಿ ಏನೊಂದೂ ಇರುವುದಿಲ್ಲವೆಂದು ಭಾವಿಸಲಾಗುವುದು.

ಅನುಸೂಚಿ ಸ್ವತ್ತು

ಬೆಂಗಳೂರು ದಕ್ಷಿಣ ತಾಲ್ಲೂಕು (ಹಾಲಿ ಬೆಂಗಳೂರು ಪೂರ್ವ ತಾಲ್ಲೂಕು), ವರ್ತೂರು ಹೋಬಳಿ, ಯಮಲೂರು ಗ್ರಾಮದ ವಾರ್ಡ್ ನಂ.86 ರಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಖಾತಾ ಸಂಖ್ಯೆ 256/10/370/1 (ಹಳೆಯ ಎಚ್ ಎ ಎಸ್ ಬಿ ಖಾತಾ ಸಂಖ್ಯೆ 370/1) ರ ನಿವೇಶನ ಮತ್ತು ಅದರಲ್ಲಿ ನಿರ್ಮಿಸಲಾಗಿರುವ ಕಟ್ಟಡ ಸಹಿತವಾದ, 8000 ಚದರ ಅಡಿಗಳ ಅಳತೆಯ ಸ್ವತ್ತು ಹಾಗೂ 3753 ಚದರ ಅಡಿಗಳ ಹೆಚ್ಚುವರಿ ಜಾಗದ ಸಮೇತವಾಗಿ ಒಟ್ಟು 11,753 ಚದರ ಅಡಿಗಳ ಸ್ವತ್ತಿಗೆ ಚಕ್ಕುಬಂದಿ:

ಪೂರ್ವಕ್ಕೆ: ರಸ್ತೆ;
ಪಶ್ಚಿಮಕ್ಕೆ: ಫಾತಿಮಾ ಜುಶ್ರ (ಹಿಂದೆ ಅರವಿಂದ್ ಸೂರಿ) ರವರಿಗೆ ಸೇರಿದ ಬಿಬಿಎಂಪಿ ಸಂಖ್ಯೆ 258/370/3 ರ ಸ್ವತ್ತು
ಉತ್ತರಕ್ಕೆ: ಮರಿಶಾಮಪ್ಪ ಮತ್ತು ಕುಟುಂಬದವರಿಗೆ ಸೇರಿದ ಸರ್ವೆ ನಂ.37/5 ರ ಖಾಸಗಿ ಸ್ವತ್ತು
ದಕ್ಷಿಣಕ್ಕೆ: ರಸ್ತೆ.

ಬೆಂಗಳೂರು,
ದಿ: 20.08.2021

ಕಿಂಗ್ & ಪಾರ್ಟ್ರಿಡ್ಜ್
ವಕೀಲರು ನಂ.48, ಲ್ಯಾವೆಲ್ಲೆ ರಸ್ತೆ,
ಬೆಂಗಳೂರು–01 ದೂ: 080–22212341/42

ಜೈಲು ಸೇರಿದ್ದ ಆರೋಪಿ ಆಸ್ಪತ್ರೆಯಲ್ಲಿ ಸಾವು

ಬೆಂಗಳೂರು: ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದ್ದ ಆರೋಪಿ ಗಜೇಂದ್ರ ಅಲಿಯಾಸ್ ದಾಲಿ ಎಂಬಾತ ಆರೋಗ್ಯ ಸಮಸ್ಯೆಯಿಂದಾಗಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ.

'ಕೆ.ಪಿ. ಅಗ್ರಹಾರ ನಿವಾಸಿಯಾಗಿದ್ದ ಗಜೇಂದ್ರ, ಸರ ಕಳವು ಹಾಗೂ ದರೋಡೆ ಸೇರಿದಂತೆ ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಬಂಧನದ ವೇಳೆ ಪೊಲೀಸರಿಂದ ತಪ್ಪಿಸಿಕೊಳ್ಳಲು ಹೋಗಿ ಕಟ್ಟಡದಿಂದ ಜಿಗಿದು ಕಾಲು ಮುರಿದುಕೊಂಡಿದ್ದ. ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಆತನನ್ನು ನ್ಯಾಯಾಂಗ ಬಂಧನಕ್ಕೆ ವಹಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆಗಸ್ಟ್ 17ರಂದು ರಾತ್ರಿ ಕಾಲು ನೋವು ಹೆಚ್ಚಾಗಿತ್ತು. ಜೈಲಿನ ಅಧಿಕಾರಿಗಳು ಆತನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಬುಧವಾರ ಆತ ತೀರಿಕೊಂಡಿದ್ದಾನೆ' ಎಂದೂ ಮೂಲಗಳು ತಿಳಿಸಿವೆ.

'ಮರಣೋತ್ತರ ಪರೀಕ್ಷಾ ವರದಿ ಬಂದ ನಂತರ ಸಾವಿಗೆ ಏನು ಕಾರಣ ಎಂಬ ಮಾಹಿತಿ ಸಿಗಲಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಬಿಎಂಆರ್‌ಸಿಎಲ್ ವಿರುದ್ಧ ಶ್ರೀಕಂಠಪುರ ನಿವಾಸಿಗಳ ಆಕ್ರೋಶ

ಮೆಟ್ರೊ ನಿಲ್ದಾಣಕ್ಕಾಗಿ ಸ್ಥಳೀಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದ ವಿಸ್ತರಿಸಿದ ಮಾರ್ಗ ತುಮಕೂರು ರಸ್ತೆಯಲ್ಲಿ ಶ್ರೀಕಂಠಪುರ ಅಥವಾ ಅಂಚೆಪಾಳ್ಯ ಬಳಿ ಮೆಟ್ರೊ ನಿಲ್ದಾಣ ಸ್ಥಾಪಿಸಬೇಕು ಎಂದು ಒತ್ತಾಯಿಸಿ ಸ್ಥಳೀಯರು ಗುರುವಾರ ಪ್ರತಿಭಟನೆ ನಡೆಸಿದರು.

'ಶ್ರೀಕಂಠಪುರ ಅಥವಾ ಅಂಚೆಪಾಳ್ಯದಲ್ಲಿ ನಿಲ್ದಾಣ ನಿರ್ಮಾಣವಾಗಬೇಕು ಎಂದು ಒತ್ತಾಯಿಸಿದ್ದೆವು. ವಿನ್ಯಾಸದ ಸಮಸ್ಯೆಯಾಗುತ್ತದೆ ಎಂಬ ನೆಪವೊಡ್ಡಿ ನಿಗಮ ಆ ಬೇಡಿಕೆಯನ್ನು ತಿರಸ್ಕರಿಸಿ, ಉದ್ದೇಶಿತ ಚಿಕ್ಕಬಿದರಕಲ್ಲು ನಿಲ್ದಾಣಕ್ಕೆ ತೆರಳಲು ಸಂಪರ್ಕ ರಸ್ತೆ ನಿರ್ಮಿಸಿಕೊಡುವುದಾಗಿ ಹೇಳಿತ್ತು. ಈಗ ನಿಲ್ದಾಣವನ್ನೂ ನಿರ್ಮಿಸಿಲ್ಲ, ಸಂಪರ್ಕ ರಸ್ತೆಯನ್ನೂ ನಿರ್ಮಿಸಿಕೊಡುತ್ತಿಲ್ಲ' ಎಂದು ಸ್ಥಳೀಯ ನಿವಾಸಿ, ರೈಲ್ವೆ ಹೋರಾಟಗಾರ ಮುಖೇಶ್ ದೂರಿದರು.

ಶ್ರೀಕಂಠಪುರದಲ್ಲಿ ಮೆಟ್ರೊ ನಿಲ್ದಾಣ ನಿರ್ಮಿಸಬೇಕು ಎಂದು ಒತ್ತಾಯಿಸಿ ಸ್ಥಳೀಯರು ಮೆಟ್ರೊ ರೈಲು ಹಳಿಯ ಬಳಿ ಗುರುವಾರ ಪ್ರತಿಭಟನೆ ನಡೆಸಿದರು

'ಖಾಸಗಿ ಸಂಸ್ಥೆಯೊಂದು ಜಾಗ ಬಿಟ್ಟುಕೊಡಲು ಮುಂದೆ ಬರುತ್ತಿಲ್ಲ. ಹೀಗಾಗಿ ಸಂಪರ್ಕ ರಸ್ತೆ ನಿರ್ಮಿಸಲು ಸಾಧ್ಯವಾಗುತ್ತಿಲ್ಲ ಎಂದು ನಿಗಮದ ಅಧಿಕಾರಿಗಳು ಹೇಳುತ್ತಿದ್ದಾರೆ. ಸಂಪರ್ಕ ರಸ್ತೆ ಬದಲು ಈಗ ಮೆಟ್ರೊ ನಿಲ್ದಾಣವನ್ನೇ ನಿರ್ಮಾಣ ಮಾಡಲಿ. ಈ ಉದ್ದೇಶಿತ ಮಾರ್ಗದ ಸಮಗ್ರ ಯೋಜನಾ ವರದಿಯಲ್ಲಿ (ಡಿಪಿಆರ್) ಇರುವಂತೆ ಅಂಚೆಪಾಳ್ಯದಲ್ಲಿಯೇ ನಿಲ್ದಾಣ ನಿರ್ಮಿಸಬೇಕು' ಎಂದು ಸ್ಥಳೀಯರು ಒತ್ತಾಯಿಸಿದರು.

'ನಾಗಸಂದ್ರ ನಿಲ್ದಾಣದ ನಂತರ ಮಂಜುನಾಥನಗರ, ಜಿಂದಾಲ್ ಹಾಗೂ ಬಿಐಇಸಿ ಮುಂಭಾಗ ನಿಲ್ದಾಣಗಳು ನಿರ್ಮಾಣವಾಗಲಿವೆ. ನಾಗಸಂದ್ರ-ಮಂಜುನಾಥನಗರ ನಿಲ್ದಾಣಗಳ ನಡುವೆ 520 ಮೀಟರ್ ಅಂತರ ಹಾಗೂ ಮಂಜುನಾಥನಗರ-ಜಿಂದಾಲ್ ನಿಲ್ದಾಣಗಳ ನಡುವೆ 650 ಮೀಟರ್ ಅಂತರವಿದೆ. ಎರಡು ನಿಲ್ದಾಣಗಳ ನಡುವೆ ಒಂದು ಕಿ.ಮೀ. ಅಂತರವಿರಬೇಕು ಎಂಬ ನಿಯಮವಿದೆ. ಆದರೆ, ಜಿಂದಾಲ್-ಬಿಐಇಸಿ ನಡುವೆ ಸುಮಾರು 2.1 ಕಿ.ಮೀ. ಅಂತರವಿರಲಿದೆ. ಜಿಂದಾಲ್ ಕಂಪನಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದಲೇ ವಿನ್ಯಾಸ ಬದಲಿಸಲಾಗಿದೆ' ಎಂದು ದೂರಿದರು.

'ಶ್ರೀಕಂಠಪುರ ಮತ್ತು ತೋಟದಗುಡ್ಡದಹಳ್ಳಿ ಗ್ರಾಮಸ್ಥರು ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಹಾಗೂ ಬೆಂಗಳೂರು ನಗರಕ್ಕೆ ಕೆಲಸಕ್ಕಾಗಿ ನಿತ್ಯ ಓಡಾಡುತ್ತಾರೆ. ಅಂಚೆಪಾಳ್ಯದಲ್ಲಿ ಮೆಟ್ರೊ ನಿಲ್ದಾಣ ಸ್ಥಾಪನೆಯಾಗದಿದ್ದರೆ, ಈ ಗ್ರಾಮದ ಸುತ್ತಮುತ್ತಲಿನ ಸಾವಿರಾರು ಜನರು ಮೆಟ್ರೊ ನಿಲ್ದಾಣಕ್ಕೆ ಬರಲು ತೊಂದರೆ ಅನುಭವಿಸಬೇಕಾಗುತ್ತದೆ' ಎಂದರು.

'ಶ್ರೀಕಂಠಪುರದಲ್ಲಿ (ಅಂಚೆಪಾಳ್ಯ) ಮೆಟ್ರೊ ನಿಲ್ದಾಣ ನಿರ್ಮಿಸುವುದಕ್ಕೆ ಅನುಮೋದನೆ ಸಿಕ್ಕಿಲ್ಲ. ಯೋಜನೆಯಂತೆ ಬಿಐಇಸಿ ಬಳಿಯೇ ನಿಲ್ದಾಣ ನಿರ್ಮಾಣ ಮಾಡಲಾಗುವುದು. ನಿಲ್ದಾಣದ ಬದಲು ಸಂಪರ್ಕ ರಸ್ತೆ ನಿರ್ಮಾಣ ಮಾಡಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು. ಭೂಸ್ವಾಧೀನ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಕಾನೂನು ತೊಡಕುಗಳು ಎದುರಾಗಿವೆ. ಅವು ಇತ್ಯರ್ಥವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಬಿಎಂಆರ್‌ಸಿಎಲ್‌ನ ಮುಖ್ಯಸಾರ್ವಜನಿಕ ಸಂಪರ್ಕಾಧಿಕಾರಿ ಯಶವಂತ ಚೌಹಾಣ್ 'ಪ್ರಜಾವಾಣಿ'ಗೆ ತಿಳಿಸಿದರು.

HYDERABAD INSTITUTE OF TECHNOLOGY AND MANAGEMENT
ACCREDITED BY NBA (CSE, ECE) | APPROVED BY AICTE | AFFILIATED TO JNTUH
ACCREDITED WITH GRADE A+ BY NAAC www.hitam.org
HITAM find your path

Soon to be an Autonomous College, it's looking for faculty who can help to realize its vision through outcome-based pedagogy!

PRINCIPAL (CSE/ECE)
Should have - Over 15 yrs experience with 3 yrs in similar role in Autonomous college • PhD degree & a first class or equivalent in BE/BTech/BS or ME/MTech/MS or integrated MTech in relevant branch • Guided at least 2 scholars • Strengths in Paper publications(a min. 8 research papers of international repute), patent filing and project funding • Capabilities in assuming other pedagogical roles also

PROFESSOR / Assoc. PROFESSOR / Asst. PROFESSOR
• CSE • CSE (AI/ML) • EEE
• CSE (CS) • CSE (IoT) • Mechanical Engg.
• CSE (DS) • ECE • Humanities & sciences

Note: Eligibility criteria for all positions as per AICTE regulations dated 01-03-2019
Please email your CV to aspire@hitam.org
Gowdavelly village, Near Kompally, Hyderabad. 7680901066

₹ 6 ಲಕ್ಷ ಮೌಲ್ಯದ ಗಾಂಜಾ ಜಪ್ತಿ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಮಾರುತ್ತಿದ್ದ ಆರೋಪದಡಿ ನಾಸೀರ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಇಸ್ಲಾಂಪುರದ ನಾಸೀರ್, ಆಟೊ ಚಾಲಕ. ಸ್ನೇಹಿತರ ಜೊತೆ ತಂಡ ಕಟ್ಟಿಕೊಂಡು ಮಾದಕ ವಸ್ತುಗಳನ್ನು ಮಾರುತ್ತಿದ್ದ. ಆತನಿಂದ ₹ 6 ಲಕ್ಷ ಮೌಲ್ಯದ 20 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಚ್‌ಆರ್‌ಬಿಆರ್ ಲೇಔಟ್‌ನ 1ನೇ ಹಂತದ 100 ಅಡಿ ರಸ್ತೆಯಲ್ಲಿ ಮೂವರು ಆರೋಪಿಗಳು ಗಾಂಜಾ ಮಾರುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಇನ್‌ಸ್ಪೆಕ್ಟರ್ ನೇತೃತ್ವದ ತಂಡ ದಾಳಿ ಮಾಡಿತ್ತು. ಅದೇ ವೇಳೆ ಇಬ್ಬರು ಓಡಿಹೋದರು. ಆರೋಪಿ ನಾಸೀರ್ ಸಿಕ್ಕಿಬಿದ್ದ. ಆತನ ಬಳಿ ಇದ್ದ ಚೀಲಗಳಲ್ಲಿ ಗಾಂಜಾ ಇತ್ತು' ಎಂದೂ ತಿಳಿಸಿದರು.

'ಪೆಡ್ಲರ್‌ಗಳಿಂದ ಗಾಂಜಾ ಖರೀದಿಸಿ ತರುತ್ತಿದ್ದ ಆರೋಪಿಗಳಿಂದ ಕಾರ್ಮಿಕರು, ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಖಾಸಗಿ ಕಂಪನಿ ಉದ್ಯೋಗಿಗಳು ಗಾಂಜಾ ಖರೀದಿಸುತ್ತಿದ್ದರು' ಎಂದೂ ಪೊಲೀಸರು ಹೇಳಿದರು.

ನಮ್ಮ ಮೆಟ್ರೊ: ಎಡಿಬಿಯೊಂದಿಗೆ ₹3,643 ಕೋಟಿ ಸಾಲ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿ ಸಿಲ್ಕ್ ಬೋರ್ಡ್ - ಕೆ.ಆರ್. ಪುರ (2ಎ ಹಂತ) ಹಾಗೂ ಕಸ್ತೂರಿ ನಗರ- ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (2ಬಿ ಹಂತ) ಮೆಟ್ರೊ ಮಾರ್ಗ ನಿರ್ಮಾಣಕ್ಕಾಗಿ ಬೆಂಗಳೂರು ಮೆಟ್ರೊ ನಿಗಮವು ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನೊಂದಿಗೆ ₹ 3,643 ಕೋಟಿ ಸಾಲ ಒಪ್ಪಂದಕ್ಕೆ ಗುರುವಾರ ಸಹಿ ಹಾಕಿದೆ.

ಕೇಂದ್ರ ಆರ್ಥಿಕ ವ್ಯವಹಾರಗಳ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ರಜತ್ ಕುಮಾರ್ ಮಿಶ್ರಾ ಹಾಗೂ ಎಡಿಬಿಯ ಭಾರತ ಶಾಖೆಯ ನಿರ್ದೇಶಕ ಟಕೆಯೊ ಕೊನಿಶಿ ಒಪ್ಪಂದಕ್ಕೆ ಸಹಿ ಹಾಕಿದರು.

58.19 ಕಿ.ಮೀ. ಉದ್ದದ ಈ ಮಾರ್ಗಕ್ಕೆ ಒಟ್ಟು ₹ 14,788 ಕೋಟಿ ವೆಚ್ಚವಾಗಲಿದ್ದು, ಕೇಂದ್ರ ಸರ್ಕಾರವು 2021ರ ಜೂನ್‌ನಲ್ಲಿ ಈ ಯೋಜನೆಗೆ ಅನುಮೋದನೆ ನೀಡಿತ್ತು.

ಕೇಂದ್ರ ಮತ್ತು ರಾಜ್ಯ ಸರ್ಕಾರವು ಈಕ್ವಿಟಿ ಮತ್ತು ಅಧೀನ ಸಾಲದ ರೂಪದಲ್ಲಿ ₹ 3,973 ಕೋಟಿಯನ್ನು ಯೋಜನೆಗೆ ನೀಡಲಿವೆ. ಇನ್ನು, ರಾಜ್ಯ ಸರ್ಕಾರವು ₹ 2,762 ಕೋಟಿ ಭೂಸ್ವಾಧೀನ ವೆಚ್ಚವನ್ನು ಭರಿಸಲಿದೆ.

ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯೊಂದಿಗೂ (ಜೈಕಾ) ನಿಗಮವು ₹ 2,317 ಕೋಟಿ ಮೊತ್ತದ ಸಾಲದ ಒಪ್ಪಂದವನ್ನು ಮಾಡಿಕೊಂಡಿದೆ.

ಉಳಿದ ₹ 5,960 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಹಣವನ್ನು ಬಹುಪಕ್ಷೀಯ ಮತ್ತು ದ್ವಿಪಕ್ಷೀಯ ಹಣ ಹೂಡಿಕೆ ಸಂಸ್ಥೆಗಳೊಂದಿಗೆ ಸಾಲ ಒಪ್ಪಂದದ ಮೂಲಕ ವ್ಯವಸ್ಥೆ ಮಾಡಿಕೊಳ್ಳುವ ಉದ್ದೇಶವನ್ನು ಬಿಎಂಆರ್‌ಸಿಎಲ್ ಹೊಂದಿದೆ.

ರೀಚ್ 2ಎ ಮತ್ತು 2ಬಿಯಲ್ಲಿ ಒಟ್ಟು 30 ಮೆಟ್ರೊ ನಿಲ್ದಾಣಗಳು ಬರಲಿವೆ. ಈ ಸಾಲ ಒಪ್ಪಂದದೊಂದಿಗೆ ಮಾರ್ಗ ನಿರ್ಮಾಣಕ್ಕೆ ಹಣದ ಹರಿವು ಸರಾಗವಾಗಲಿದೆ. ಗಡುವಿನೊಳಗೆ ಯೋಜನೆ ಪೂರ್ಣಗೊಳಿಸಲು ಅನುಕೂಲವಾಗಲಿದೆ. ಅಲ್ಲದೆ, ಈ ಮಾರ್ಗದಲ್ಲಿ ಸಂಚಾರ ದಟ್ಟಣೆಯ ಸಮಸ್ಯೆಯೂ ತಗ್ಗಲಿದೆ ಎಂದು ನಿಗಮವು ಪ್ರಕಟಣೆಯಲ್ಲಿ ತಿಳಿಸಿದೆ.



ಹೆಬ್ಬಾಳ ಶಾಸಕ ಬೈರತಿ ಸುರೇಶ್ ಅವರು ಮಠದಹಳ್ಳಿ ಬಸ್‌ನಿಲ್ದಾಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದರು. ಇದೇ ವೇಳೆ, ಜೆ.ಸಿ.ನಗರ ವ್ಯಾಪ್ತಿಯಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ₹20 ಸಾವಿರದ ನೆರವಿನ ಚೆಕ್ ಹಸ್ತಾಂತರಿಸಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನೂ ಇದೇ ವೇಳೆ ಸನ್ಮಾನಿಸಲಾಯಿತು. ಜೊತೆಗೆ ಬಡ ಕುಟುಂಬಗಳಿಗೆ ದಿನಸಿ ಕಿಟ್ ವಿತರಿಸಲಾಯಿತು.

ನಗರದಲ್ಲಿ ಇಂದು

ಡಿ.ದೇವರಾಜ ಅರಸು ಅವರ 106ನೇ ಜನ್ಮ ದಿನಾಚರಣೆ ಹಾಗೂ ಡಿ.ದೇವರಾಜ ಅರಸು ಪ್ರಶಸ್ತಿ ಪ್ರದಾನ ಸಮಾರಂಭ: ಭಾಗವಹಿಸುವವರು– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆಯೋಜನೆ– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸ್ಥಳ–ಬ್ಯಾಂಕ್ವೆಟ್ ಹಾಲ್, ವಿಧಾನಸೌಧ–ಬೆಳಿಗ್ಗೆ 11.



ದೇವರಾಜ ಅರಸು

ಡಿ.ದೇವರಾಜ ಅರಸು ಅವರ 106ನೇ ಜಯಂತ್ಯುತ್ಸವ ಸಮಾರಂಭ: ಉದ್ಘಾಟನೆ– ಆರ್‌ಪಿಐ ಮತ್ತು ಎಸ್‌ಎಸ್‌ಡಿ ರಾಜ್ಯ ಘಟಕದ ಅಧ್ಯಕ್ಷ ಎಂ.ವೆಂಕಟಸ್ವಾಮಿ, ಮುಖ್ಯ ಭಾಷಣ–ಪ್ರಾಧ್ಯಾಪಕ ಪ್ರೊ.ಬಿ.ಕೆ.ರವಿ, ಅಧ್ಯಕ್ಷತೆ–ಆರ್.ಪಿ.ಐ. ರಾಜ್ಯ ಉಪಾಧ್ಯಕ್ಷ ಪಿ.ಪಿಳ್ಳರಾಜು ಬೋಸಪ್ಪ, ಅತಿಥಿಗಳು– ಇಂಡ್ಲವಾಡಿ ಬಸವರಾಜು, ಭವಾನಿ ಪ್ರಸಾದ್, ಜಾಲ ಕಿಟ್ಟಿ, ಬೋರೇಗೌಡ, ಎ.ಗೋಪಾಲ್, ಸುಗುಣ ಅಶ್ವತ್ಥ್, ಆಯೋಜನೆ–ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಠವಳೆ), ಸ್ಥಳ–ನಾಗಸೇನಾ ಬುದ್ಧವಿಹಾರ, ಆರ್.ಎಂ.ವಿ.ಬಡಾವಣೆ, ಸದಾಶಿವನಗರ–ಬೆಳಿಗ್ಗೆ 11.

ಅಡುಗೆ ಅನಿಲ ದರ ಏರಿಕೆ ಖಂಡಿಸಿ ಪ್ರತಿಭಟನೆ: ಆಯೋಜನೆ–ಆಮ್ ಆದ್ಮಿ ಪಕ್ಷ, ಸ್ಥಳ–ಮೌರ್ಯ ಹೋಟೆಲ್ ಬಳಿಯ ಗಾಂಧಿ ಪ್ರತಿಮೆ–ಬೆಳಿಗ್ಗೆ 11.

ರೌಡಿಗಳಿಂದ ಮುಚ್ಚಳಿಕೆ ಬರೆಸಿಕೊಂಡು ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ವಿಭಾಗ ವ್ಯಾಪ್ತಿಯ ಠಾಣೆಗಳ ರೌಡಿ ಪಟ್ಟಿಯಲ್ಲಿ ಹೆಸರಿರುವ ವ್ಯಕ್ತಿಗಳ ಮೇಲೆ ಪೊಲೀಸರು ನಿಗಾ ವಹಿಸಿದ್ದು, ಅಪರಾಧ ಕೃತ್ಯದಲ್ಲಿ ಭಾಗಿಯಾಗದಂತೆ ಮುಚ್ಚಳಿಕೆ ಬರೆಸಿಕೊಂಡು ಎಚ್ಚರಿಕೆ ನೀಡುತ್ತಿದ್ದಾರೆ.

ನಗರದಲ್ಲಿ ರೌಡಿ ಚಟುವಟಿಕೆ ಹತ್ತಿಕ್ಕಲು ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದು, ಇತ್ತೀಚೆಗೆ ಹಲವು ರೌಡಿಗಳ ಮನೆ ಮೇಲೆ ದಾಳಿ ಮಾಡಿದ್ದರು. ಆದರೆ, ಕೆಲ ರೌಡಿಗಳು ಮನೆ ಖಾಲಿ ಮಾಡಿಕೊಂಡು ಪರಾರಿಯಾಗಿದ್ದರು. ಅಂಥ ರೌಡಿಗಳನ್ನು ಗುರುತಿಸಿ ವಶಕ್ಕೆ ಪಡೆಯುತ್ತಿರುವ ಪೊಲೀಸರು, ಎಚ್ಚರಿಕೆ ಸಂದೇಶ ರವಾನಿಸುತ್ತಿದ್ದಾರೆ.

'ವಿಭಾಗ ವ್ಯಾಪ್ತಿಯಲ್ಲಿ ನಡೆದ 5 ವರ್ಷಗಳ ಅಪರಾಧ ಪ್ರಕರಣಗಳ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ. ಕೃತ್ಯದಲ್ಲಿ ಭಾಗಿಯಾಗಿದ್ದವರು ಹಾಗೂ ರೌಡಿ ಪಟ್ಟಿಯಲ್ಲಿ ಹೆಸರಿರುವವರ ಮೇಲೆ ನಿಗಾ ವಹಿಸಲಾಗಿದೆ. ಅಪರಾಧ ಕೃತ್ಯದಲ್ಲಿ ತೊಡಗಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ಹೇಳಿದರು.

ಬಾಂಡ್ ಶ್ಯೂರಿಟಿ ಪಡೆದ ಪೊಲೀಸರು; ಕುಮಾರಸ್ವಾಮಿ ಲೇಔಟ್ ಠಾಣೆಯ ರೌಡಿ ಪಟ್ಟಿಯಲ್ಲಿ ಹೆಸರಿರುವ ಅಗ್ನಿ ಶ್ರೀಧರ್, ಬಚ್ಚನ್ ಸೇರಿದಂತೆ ಹಲವರನ್ನು ಠಾಣೆಗೆ ಕರೆಸಿದ್ದ ಪೊಲೀಸರು, ಅವರಿಂದ ಬಾಂಡ್ ಶ್ಯೂರಿಟಿ ಪಡೆದಿದ್ದಾರೆ. 'ಯಾವುದೇ ಪ್ರಕರಣದಲ್ಲಿ ಭಾಗಿಯಾಗಬಾರದು' ಎಂದು ಎಚ್ಚರಿಕೆ ನೀಡಿ ಕಳುಹಿಸಿದ್ದಾರೆಂದು ಗೊತ್ತಾಗಿದೆ.

ಎರಡು ಗುಂಪಿನ ನಡುವೆ ಗಲಾಟೆ; ಬೆಂಗಳೂರಿನಲ್ಲಿ ರೌಡಿ ನಾಯಕನಾಗಬೇಕೆಂದು ಎರಡು ಗುಂಪುಗಳ ನಡುವೆ ಗಲಾಟೆ ನಡೆಯುತ್ತಿದ್ದು, ಇದರ ಮೇಲೆ ಪೊಲೀಸರು ಕಣ್ಣಿಟ್ಟಿದ್ದಾರೆ.

'ರೌಡಿಗಳಾದ ಸೈಲೆಂಟ್ ಸುನೀಲ್ ಹಾಗೂ ಸೈಕಲ್ ರವಿ ಗುಂಪಿನ ನಡುವೆ ವೈಷಮ್ಯ ಏರ್ಪಟ್ಟಿದೆ. ಇಬ್ಬರಿಗೂ ಕೆಲ ರೌಡಿಗಳು ಕುಮ್ಮಕ್ಕು ನೀಡುತ್ತಿರುವ ಮಾಹಿತಿ ಇದೆ. ಎರಡೂ ಗುಂಪುಗಳ ರೌಡಿಗಳನ್ನು ಪತ್ತೆ ಮಾಡಿ ಎಚ್ಚರಿಕೆ ನೀಡಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು – 55.

8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055.

ಬಹಿರಂಗ ಹರಾಜು ಇಸಿಹಾರ್

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ,

ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು ಕ.ರಾ.ಸ.ಪ.ಬ್ಯಾಂಕುಗಳ ಮಹಾಮಂಡಳ ನಿ., ನಂ–32, ಕೆ.ಹೆಚ್. ರಸ್ತೆ, ಬೆಂಗಳೂರು – 560027. ಇವರ ಹುಕ್ಕುಂ ಈ ಕೆಳಗೆ ನಮೂದಿಸಿರುವ ಸಿ.ಇ.ಪಿ **ಸಂಖ್ಯೆಗಳಂತೆ** ಅಧಿಕಾರ ಹೊಂದಿರುವ ಮಾರಾಟಾಧಿಕಾರಿಯಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಸೂಚಿಸಿರುವ ಸುಸ್ತಿದಾರರು **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,** 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–55 ಇವರಲ್ಲಿ ತಮ್ಮ ಸ್ಥಿರಾಸ್ತಿಯ ಮೇಲೆ ಸಾಲ ಪಡೆದು ಸುಸ್ತಿದಾರರಾಗಿ ಸಾಲದ ಬಾಬ್ತು ಡಿಕ್ರಿಯಾಗಿ ಬ್ಯಾಂಕಿಗೆ ಆಧಾರ ಮಾಡಿದ ಈ ಕೆಳಗೆ ನಮೂದಿಸಿರುವ ಸ್ವತ್ತುಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 38 ರನ್ವಯ ಬಹಿರಂಗ ಹರಾಜು ಮಾಡಲಾಗುವುದು. ಸಾರ್ವಜನಿಕರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಈ ಸ್ವತ್ತುಗಳನ್ನು ಹರಾಜಿನಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಪ್ರಧಾನ ವ್ಯವಸ್ಥಾಪಕರು, **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ನಂ.156, 2ನೇ ಅಂತಸ್ತು, 8ನೇ ಮುಖ್ಯರಸ್ತೆ, 17 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 55 ಇವರಲ್ಲಿ ಪಡೆಯಬಹುದು. ದೂರವಾಣಿ ಸಂಖ್ಯೆ: 23442648, 23449450, 23341972.**

ಸುಸಿದಾರರ ಹೆಸರು	ಸಿ.ಇ.ಪಿ. ಸಂಖ್ಯೆ	ಹರಾಜು ಮಾಡುವ ಆಸ್ತಿಗಳ ವಿವರ	ಹರಾಜು ನಡೆಯಲಿರುವ ಸ್ಥಳ, ದಿನಾಂಕ ಸಮಯ ಮತ್ತು ವಸೂಲಾಗಬೇಕಾಗಿರುವ ಮೊತ್ತ
ಶ್ರೀಮತಿ ಗಾಯತ್ರಿದೇವಿ ಕೆ.ಆರ್	ಜೆ.ಆರ್.ಡಿ/ಯುಬಿಎಫ್/1344 & 1345/2018–19	SCHEDULE'B' Property No.BBMP/BDA No.22/1 Divanarapalya, Gokula 1st Stage, 2nd Phase, Bangalore situated in BBMP Ward No.4 (Mathikere) (PID No.4-146-22/1) measuring East to West 34 Feet and North to South 22 Feet East by : Government water well West by : Property of Ravichandra B North by : Property of Munihobaiah South by : Road and SCHEDULE'B1' Property No.LA No.03, CTS No.1499, New No.22/2, Divanarapalya, Gokula 1st Stage, 2nd Phase, Bangalore situated in BBMP Ward No.4 (Mathikere) (PID No.4-146-22/2) measuring East to West 48+44/2 Feet and North to South 34+31/2 Feet East by : Property of Ravichandra B. West by : Road North by : Property of Krishnappa; South by : Road	No.22/1 Divanarapalya, Gokula 1st Stage, 2nd Phase, Bangalore and No.1499, New No.22/2, Divanarapalya, Gokula 1st Stage, 2nd Phase, Bangalore. ದಿನಾಂಕ. 23.08.2021 ಸೋಮವಾರ ಬೆಳಿಗ್ಗೆ 11–30 ಘಂಟೆಗೆ ರೂ.1,09,00,000/– (ದಿನಾಂಕ 15.06.2021 ರವರೆಗೆ ಮಾತ್ರ ಲೆಕ್ಕಚಾರ ಮಾಡಲಾಗಿದೆ.)
ಶ್ರೀ.ಕೆ.ಎಲ್.ಮೂಡಲಗಿರಿಯಪ್ಪ 	ಎ.ಆರ್.ಇ/ಯುಬಿಎಫ್/323,324, 325,326,327 & 328/2018–19	ಬಿ.ಬಿ.ಎಮ್.ಪಿ. ನಂ.16/1, ಹಳೇ ನಂ.278/ಎ, 8ನೇ 'ಸಿ' ಮೈನ್, 'ಎ' ಬ್ಲಾಕ್, ಸುಬ್ರಮಣ್ಯನಗರ, 2ನೇ ಹಂತ, ರಾಜಾಜಿನಗರ, ಬೆಂಗಳೂರು – 55. (ಪಿ.ಐ.ಡಿ.ನಂ. 99–12–15/1) ಇಲ್ಲಿರುವ ಪೂರ್ವ ಪಶ್ಚಿಮ $\frac{42+40}{2}$ ಅಡಿಗಳು & ಉತ್ತರ ದಕ್ಷಿಣ 25 ಅಡಿಗಳ ನಿವೇಶನದಲ್ಲಿರುವ ಮನೆಗೆ ಚಕ್ಕುಬಂದಿ ಪೂರ್ವಕ್ಕೆ – ರಸ್ತೆ; ಪಶ್ಚಿಮಕ್ಕೆ– ಸ್ವತ್ತಿನ ಸಂಖ್ಯೆ. 280; ಉತ್ತರಕ್ಕೆ–ಸ್ವತ್ತಿನ ಸಂಖ್ಯೆ. 278/ಡಿ & 278/ಬಿ ದಕ್ಷಿಣಕ್ಕೆ – ಸ್ವತ್ತಿನ ಸಂಖ್ಯೆ. 278/ಎ	ಬಿ.ಬಿ.ಎಮ್.ಪಿ. ನಂ.16/1, ಹಳೇ ನಂ.278/ಎ, 8 ನೇ 'ಸಿ' ಮೈನ್, 'ಎ' ಬ್ಲಾಕ್, ಮಿಲ್ಕ್ ಕಾಲೋನಿ, 2ನೇ ಹಂತ, ರಾಜಾಜಿನಗರ, ಬೆಂಗಳೂರು–55. ದಿನಾಂಕ. 30.08.2021 ಸೋಮವಾರ ಬೆಳಿಗ್ಗೆ 11–30 ಘಂಟೆಗೆ ರೂ.80,00,000/– (ದಿನಾಂಕ 15.06.2021 ರವರೆಗೆ ಮಾತ್ರ ಲೆಕ್ಕಚಾರ ಮಾಡಲಾಗಿದೆ.)

ಹರಾಜಿನ ಷರತ್ತುಗಳು ಮತ್ತು ನಿಯಮಗಳು

1. ಹರಾಜಿನ ಮುನ್ನ ಸಾಲ ಮರುಪಾವತಿಯಾದಲ್ಲಿ ಸದರೀಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ.
2. ಕಟ್ಟಡ ಯಾವ ರೀತಿಯಲ್ಲಿದೆಯೋ ಅದೇ ರೀತಿಯಲ್ಲಿ ಹರಾಜು ಮಾಡಲಾಗುವುದು.
3. ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚೆ ರೂ.200000/– ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.
4. ಹರಾಜಿನಲ್ಲಿ ಬಿಡ್ ನಿಂತ ತಕ್ಷಣವೇ ಹರಾಜು ಮೊಬಲಗಿನ ಶೇ.15 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಿ ರಸೀತಿಯನ್ನು ಪಡೆಯುವುದು. ಉಳಿದ ಹಣವನ್ನು ನೋಂದಣಿ ವೆಚ್ಚ ಸಹಿತ 45 ದಿನಗೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್‌ದಾರರು ಪಾವತಿ ಮಾಡಿರುವ ಹಣವನ್ನು ಕಾನೂನು ರೀತ್ಯ ಮುಟ್ಟುಗೋಲು ಹಾಕಿಕೊಂಡು ಬದಲಿ ಹರಾಜು ಮಾಡಲಾಗುವುದು.
5. ಬಿಡ್ ಮೊಬಲಗು ಆಸ್ತಿಯ ಬೆಲೆಗಿಂತ ಕಡಿಮೆಯಾದಲ್ಲಿ ಆಸ್ತಿಯನ್ನು ಅಂತಹ ಬಿಡ್ ದಾರರಿಗೆ ಬಿಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆ.ಸಿ.ಎಸ್.ನಿಯಮಗಳ ಪ್ರಕಾರ ಮಾರಾಟಾಧಿಕಾರಿಯವರು ಹೊಂದಿರುತ್ತಾರೆ.
6. ಹರಾಜಿನಲ್ಲಿ ಯೋಗ್ಯ ಬೆಲೆ ಬಾರದಿದ್ದಲ್ಲಿ ಹರಾಜಿಗಿಟ್ಟಿರುವ ಸ್ಥಿರಾಸ್ತಿಯನ್ನು ಖರೀದಿಸುವ ಮತ್ತು ಆಸ್ತಿ ವರ್ಗಾವಣೆ ಮಾಡಿಕೊಳ್ಳುವ ಹಕ್ಕನ್ನು ಬ್ಯಾಂಕು ಹೊಂದಿರುತ್ತದೆ.
7. ಹರಾಜಿಗಿಟ್ಟಿರುವ ಸ್ಥಿರಾಸ್ತಿಯ ವಿವರಣೆ ಮತ್ತು ಅಂದಾಜು ವಿಸ್ತೀರ್ಣದ ವಿಷಯದಲ್ಲಿ ಯಾವುದಾದರೂ ತಪ್ಪುಗಳಿದ್ದರೆ ಸರ್ಕಾರದವರು ಜವಾಬ್ದಾರರಾಗುವುದಿಲ್ಲ.
8. ಸ್ಥಿರಾಸ್ತಿ ಹರಾಜಿನ ಮಾರಾಟ ಸ್ಥಿರೀಕರಣವು ಹರಾಜಿನ ಷರತ್ತಿಗಳಿಗೊಳಪಟ್ಟಿರುತ್ತದೆ. ಬಿಡ್‌ದಾರರು ಷರತ್ತುಗಳನ್ನು ಪಾಲಿಸದಿದ್ದಲ್ಲಿ ಮಾರಾಟ ಸ್ಥಿರೀಕರಣಕ್ಕೆ ಸರ್ಕಾರದವರು ಜವಾಬ್ದಾರರಾಗುವುದಿಲ್ಲ.
9. ಮೂಲ ಸಾಲಗಾರರಾಗಲೀ, ಜಾಮೀನುದಾರರಾಗಲೀ ಅಥವಾ ಅವರ ಹಿತೈಷಿಗಳಾಗಲೀ ಬಹಿರಂಗ ಹರಾಜಿನಲ್ಲಿ ಆಸ್ತಿ ಮಾರಾಟ ಮಾಡಿದ 30 ದಿನಗೊಳಗಾಗಿ ಸಾಲದ ಪೂರ್ಣ ಬಾಕಿ ಮತ್ತು ಹರಾಜಿನಲ್ಲಿ ಆಸ್ತಿ ಖರೀದಿಸಿದ ಬಿಡ್‌ದಾರರು ಬ್ಯಾಂಕಿಗೆ ಠೇವಣಿ ಮಾಡಿದ ಹಣದ ಮೇಲೆ ಶೇ 5 ರಷ್ಟು ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿದಲ್ಲಿ ಹರಾಜಿನಲ್ಲಿ ಆಸ್ತಿ ಖರೀದಿಸಿದವರು ಅವರು ಪಾವತಿಸಿದ ಠೇವಣಿಯ ಮೇಲೆ ಶೇ 5 ರಷ್ಟು ಹಣ ಪಡೆಯಲು ಮಾತ್ರ ಹಕ್ಕುಳ್ಳವಾಗಿರುತ್ತಾರೆ ಹಾಗೂ ಹರಾಜಿನಲ್ಲಿ ಕೂಗಿದ ಆಸ್ತಿಗೆ ಹಕ್ಕು ಇರುವುದಿಲ್ಲ.

ದಿನಾಂಕ: 02.07.2021
ಬೆಂಗಳೂರು.

ಮಾರಾಟಾಧಿಕಾರಿ
ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಮಲ್ಲೇಶ್ವರಂ, ಬೆಂಗಳೂರು – 55.

ಸಿಡಿಮದ್ದು ಪ್ರಕರಣ: ಮೂವರು ಕಾನ್‌ಸ್ಟೆಬಲ್ ಅಮಾನತು

ಪ್ರಜಾವಾಣಿ ವಾರ್ತೆ

ಯಾದಗಿರಿ: ಕೇಂದ್ರ ಸಚಿವ ಭಗವಂತ ಖೂಬಾ ಅವರ ಜನಾಶೀರ್ವಾದ ಯಾತ್ರೆ ವೇಳೆ ಕೆಲವರು ಬಂದೂಕಿನಿಂದ ಸಿಡಿಮದ್ದು ಹಾರಿಸಿದ್ದನ್ನು ತಡೆಯದೇ ಕರ್ತವ್ಯ ಲೋಪ ಎಸಗಿದ ಆರೋಪದಡಿ ಮೂವರು ಕಾನ್‌ಸ್ಟೆಬಲ್‌ಗಳನ್ನು ಎಸ್‌ಪಿ ಸಿ.ಬಿ.ವೇದಮೂರ್ತಿ ಅಮಾನತುಗೊಳಿಸಿದ್ದಾರೆ.

ಯಾದಗಿರಿ ಗ್ರಾಮೀಣ ಪೊಲೀಸ್ ಠಾಣೆಯ ವೀರೇಶ, ಸಂತೋಷ ಮತ್ತು ಮೆಹಬೂಬ್ ಅಮಾನತುಗೊಂಡವರು.

‘ಬುಧವಾರ ಜನಾಶೀರ್ವಾದ ಯಾತ್ರೆ ವೇಳೆ ಹೆಚ್ಚು ಜನ ಸೇರದಂತೆ ಬಂದೊಬಸ್ತ್‌ಗೆ ಪೊಲೀಸರನ್ನು ನಿಯೋಜಿಸಲಾಗಿತ್ತು. ಸ್ಥಳದಲ್ಲಿದ್ದ ಸಿಬ್ಬಂದಿ ಸಿಡಿಮದ್ದು ಹಾರಿಸುವುದನ್ನು ತಡೆದಿಲ್ಲ. ಬಂದೂಕುಗಳನ್ನು ವಶಪಡಿಸಿಕೊಂಡಿಲ್ಲ. ಹೀಗಾಗಿ ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗಿದೆ. ಬೈಕ್ ರ್‍ಯಾಲಿಗೆ ಅನುಮತಿ ನೀಡಿರಲಿಲ್ಲ. ಕಾರ್ಯಕ್ರಮದ ಆಯೋಜಕರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು’ ಎಂದು ಎಸ್‌ಪಿ ತಿಳಿಸಿದ್ದಾರೆ.

7 ಜನರ ವಿರುದ್ಧ ಪ್ರಕರಣ ದಾಖಲು: ಜನಾಶೀರ್ವಾದ ಯಾತ್ರೆಯಲ್ಲಿ ಕೋವಿಡ್ ನಿಯಮ ಉಲ್ಲಂಘನೆ ಸಂಬಂಧ ಯರಗೋಳ ಗ್ರಾಮದ ಏಳು ಜನರ ವಿರುದ್ಧ ಯಾದಗಿರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾರಿಗೆ ಸಂಸ್ಥೆ ನೌಕರರ ವರ್ಗಾವಣೆ: ಪಟ್ಟಿ ಪ್ರಕಟ

ಬೆಂಗಳೂರು: ಅಂತರ ನಿಗಮ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿರುವ ನಾಲ್ಕು ಸಾರಿಗೆ ಸಂಸ್ಥೆಗಳ ನೌಕರರ ಸಂಭವನೀಯ ವರ್ಗಾವಣೆ ಪಟ್ಟಿಯನ್ನು ಕೆಎಸ್‌ಆರ್‌ಟಿಸಿ ವೆಬ್‌ಸೈಟ್‌ನಲ್ಲಿ (ksrtc.karnataka.gov.in) ಪ್ರಕಟಿಸಿದೆ.

ವರ್ಗಾವಣೆ ಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ ನೇರವಾಗಿ ತಮ್ಮ ವಿಭಾಗದ ಆಡಳಿತಾಧಿಕಾರಿಗಳಿಗೆ ಆ.21ರ ಸಂಜೆ 5.30ರೊಳಗೆ ಸಲ್ಲಿಸಬೇಕು. ನಂತರ ಬಂದ ಆಕ್ಷೇಪಣೆಗಳನ್ನು ಸ್ವೀಕರಿಸುವುದಿಲ್ಲ. ಕೇಂದ್ರ ಕಚೇರಿಗೆ ಸಲ್ಲಿಸಲೂ ಅವಕಾಶ ಇಲ್ಲ ಎಂದು ವರ್ಗಾವಣೆ ಸಮಿತಿ ಅಧ್ಯಕ್ಷರೂ ಆಗಿರುವ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು
ಅಫ್ಗಾನಿಸ್ತಾನದಿಂದ ಅಮೆರಿಕ ಸೇನೆ ವಾಪಸ್ ನಿರ್ಧಾರ ಸರಿಯೇ?
ಜನಾಭಿಪ್ರಾಯ:
ಹೌದು 45%
ಇಲ್ಲ 55%

ಸೆ.13– 24ರವರೆಗೆ ವಿಧಾನಮಂಡಲ ಅಧಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಪ್ಟೆಂಬರ್ 13 ರಿಂದ 24 ರವರೆಗೆ ಬೆಂಗಳೂರಿನಲ್ಲೇ ವಿಧಾನಮಂಡಲ ಚಳಿಗಾಲದ ಅಧಿವೇಶನ ನಡೆಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಸಂಪುಟಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆದ ಬಳಿಕ ನಡೆಯುತ್ತಿರುವ ಮೊದಲ ಅಧಿವೇಶನ ಇದಾಗಿದೆ.

ಚಳಿಗಾಲದ ಅಧಿವೇಶವನ್ನು ಸಾಮಾನ್ಯವಾಗಿ ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಸಲಾಗುತ್ತಿತ್ತು. ಎಚ್‌.ಡಿ.ಕುಮಾರಸ್ವಾಮಿ ನೇತೃತ್ವದ ಮೈತ್ರಿ ಸರ್ಕಾರ ಮತ್ತು ಯಡಿಯೂರಪ್ಪ ನೇತೃತ್ವದ ಸರ್ಕಾರದ ಅವಧಿಯಲ್ಲಿ ಅಲ್ಲಿ ಅಧಿವೇಶನ ನಡೆದಿರಲಿಲ್ಲ. ಈ ಬಾರಿ ಅಲ್ಲಿ ನಡೆಸಲೇಬೇಕು ಎಂಬ ಬೇಡಿಕೆ ಮಂಡನೆಯಾಗಿತ್ತು. ಬೆಂಗಳೂರಿನಲ್ಲೇ ನಡೆಸಲು ಸರ್ಕಾರ ನಿರ್ಧರಿಸಿದೆ.

ವಕ್ಫ್ ಆಸ್ತಿ 8,480 ಎಕರೆ ಒತ್ತುವರಿ: ಶಶಿಕಲಾ ಜೊಲ್ಲೆ

ಬೆಂಗಳೂರು: ‘ರಾಜ್ಯದಲ್ಲಿ ವಕ್ಫ್ ಆಸ್ತಿ 8,480 ಎಕರೆ ಒತ್ತುವರಿಯಾಗಿರುವ ಮಾಹಿತಿ ಇದೆ. ಈ ಬಗ್ಗೆ ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಯುತ್ತಿದೆ. ಆದಷ್ಟು ಶೀಘ್ರ ಈ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಮುಜರಾಯಿ, ವಕ್ಫ್ ಮತ್ತು ಹಜ್ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಶಶಿಕಲಾ ಜೊಲ್ಲೆ

ಗುರುವಾರ ಇಲಾಖೆಯ ಅಧಿಕಾರಿಗಳ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದ 149 ತಾಲ್ಲೂಕುಗಳ ವಕ್ಫ್ ಆಸ್ತಿಯ ಕುರಿತು ರಾಜ್ಯಪತ್ರ ಹೊರಡಿಸಲಾಗಿದೆ. ಒಟ್ಟು 1,05,885 ಎಕರೆ ವಕ್ಫ್ ಆಸ್ತಿ ಗುರುತಿಸಲಾಗಿದೆ. ಈ ಪೈಕಿ, 32,192 ಎಕರೆ ನೋಂದಣಿಯಾಗಿದೆ’ ಎಂದರು.

‘ವಕ್ಫ್ ಮಂಡಳಿಗೆ ಈ ಬಾರಿ ₹ 1.74 ಕೋಟಿ ಅನುದಾನ ನೀಡಲಾಗಿದ್ದು, ಮಂಡಳಿಯಲ್ಲಿ ₹ 105 ಕೋಟಿ ಲಭ್ಯವಿದೆ. ಬಡ ಮುಸ್ಲಿಂರಿಗೆ ಶೇ 5 ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ. ಮುಸ್ಲಿಂ ಮಹಿಳೆಯರಿಗೆ ಹೃದಯ ಹಾಗೂ ಕ್ಯಾನ್ಸರ್ ರೋಗ ಚಿಕಿತ್ಸೆಗೆ ₹ 1 ಲಕ್ಷ ಸಹಾಯಧನ ನೀಡಲಾಗುತ್ತಿದೆ’ ಎಂದು ತಿಳಿಸಿದರು.

‘ಕೋವಿಡ್ ಕಾರಣ 2019-2021ರಲ್ಲಿ ಹಜ್ ಯಾತ್ರಿಕರು ಹಜ್ ಪ್ರವಾಸ ಕೈಗೊಂಡಿಲ್ಲ. ಹೀಗಾಗಿ, ಹಜ್ ಭವನವನ್ನು ಕೋವಿಡ್ ಆರೈಕೆ ಕೇಂದ್ರವಾಗಿ ಪರಿವರ್ತಿಸಿ ಎಲ್ಲ ಸಮುದಾಯದವರಿಗೆ ಚಿಕಿತ್ಸೆ ನೀಡಲಾಗುತ್ತಿದೆ’ ಎಂದು ವಿವರಿಸಿದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿ ಜೊಲ್ಲೆ, ‘ವಕ್ಫ್ ಆಸ್ತಿ ಕಬಳಿಕೆ ಕುರಿತು ಅನ್ವರ್ ಮಾಣಿಪ್ಪಾಡಿ ನೀಡಿರುವ ವರದಿಯನ್ನು ನೋಡಿಲ್ಲ. ಈ ಬಗ್ಗೆ ಮಾಹಿತಿ ಪಡೆದು ತೀರ್ಮಾನಿಸಲಾಗುವುದು’ ಎಂದರು.

ಒಬಿಸಿಯಲ್ಲಿ ಮೀಸಲಾತಿ ಹೆಚ್ಚಳಕ್ಕೆ ಬೇಡಿಕೆ

ಹಾವೇರಿ: ‘ಒಬಿಸಿಗೆ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಬೇಕು ಎಂಬ ಬೇಡಿಕೆಗಳು ಕೇಳಿ ಬರುತ್ತಿವೆ. ಮೀಸಲಾತಿ ಬಗ್ಗೆ ಕೇಂದ್ರದಲ್ಲಿ ತಜ್ಞರ ಸಮಿತಿ ರಚಿಸಲಾಗಿದೆ’ ಎಂದು ಕೇಂದ್ರ ಸಾಮಾಜಿಕ ನ್ಯಾಯ ಸಬಲೀಕರಣ ಇಲಾಖೆಯ ರಾಜ್ಯ ಖಾತೆ ಸಚಿವ ಎ. ನಾರಾಯಣಸ್ವಾಮಿ ತಿಳಿಸಿದರು.

ನಾರಾಯಣಸ್ವಾಮಿ

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ದೇಶದಲ್ಲಿ ಸಮಗ್ರ ಮೀಸಲಾತಿ ಜಾರಿಗೆ ತರುವುದು ಅವಶ್ಯವಿದೆ ಎಂದು ಹೇಳಿದರು.

ಸಿ.ಎಂ ಜತೆ ಮಾತುಕತೆ: ‘ಸದಾಶಿವ ಆಯೋಗದ ವರದಿಯ ಶಿಫಾರಸುಗಳ ಜಾರಿ ಕುರಿತು ಬಗ್ಗೆ ಸಮುದಾಯ ಮತ್ತು ಸಚಿವರು, ಮುಖ್ಯಮಂತ್ರಿ ಜತೆ ಮಾತನಾಡುತ್ತೇನೆ. ಎಲ್ಲರಿಗೂ ನ್ಯಾಯ ಕಲ್ಪಿಸುವಂತಹ ನಿರ್ಣಯ ಕೈಗೊಳ್ಳಲಾಗುವುದು’ ಎಂದು ಸಚಿವರು ತಿಳಿಸಿದರು.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
ಪಬ್ಲಿಕ್ ಹೆಲ್ತ್ ಇನ್‌ಸ್ಟಿಟ್ಯೂಟ್, ಶೇಷಾದ್ರಿ ರೋಡ್, Opp. S.J.P College, ಕೆ.ಆರ್.ಸರ್ಕಲ್, ಬೆಂಗಳೂರು–560001. ಮಿಂಚ್ ಅಂಚೆ: ad.kdlws@gmail.com, md.ksmscl@gmail.com
No: HFW/KSMSCL/EQPT/Covid-19/VTM SWABS/63/2021-22 Date:19/08/2021
ಟೆಂಡರ್ ಪ್ರಕಟಣೆ
ಉಲ್ಲೇಖ: 1) ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/EQPT/Covid-19/VTM SWABS/63/2021-22 Date:19/08/2021. ಕೆ.ಎಸ್.ಎಂ.ಎಸ್.ಸಿ.ಎಲ್. ವೆಬ್‌ಸೈಟ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಕೆ.ಟಿ.ಪಿ.ಪಿ ನಿಯಮಾನುಸಾರ ಈ ಕೆಳಕಂಡ ಟೆಂಡರನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ. 1) ಕೋವಿಡ್–19 ಗೆ ಅವಶ್ಯವಿರುವ VTM Swabs Kits for (Nasal and Throat) ಗಳಿಗೆ IFQ ಕರೆಯುವ ಬಗ್ಗೆ. ಕೆ..ಎಸ್.ಎಂ.ಸಿ.ಎಲ್. ವೆಬ್‌ಸೈಟ್ ಇಲಾಖೆಯಲ್ಲಿ ನೋಂದಾಯಿಸಿರುವ ಟೆಂಡರ್‌ದಾರರು ವೆಬ್‌ಸೈಟ್ ವ್ಯವಸ್ಥೆ ಮೂಲಕ ಭಾಗವಹಿಸಬಹುದು. ತಾಂತ್ರಿಕ ವಿವರಣೆ, ಷರತ್ತು, ನಿಬಂಧನೆಗಳು, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು https://www.ksmscl.kar.nic.in ಟೆಂಡರ್ ವ್ಯವಸ್ಥೆಯಡಿಯಲ್ಲಿ ದಿನಾಂಕ: 19/08/2021 ರಿಂದ ಟೆಂಡರ್‌ನ ದಸ್ತಾವೇಜುಗಳನ್ನು KSMSCL ಮುಖಾಂತರ ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಂ.ಎಸ್.ಸಿ.ಎಲ್., ಬೆಂಗಳೂರು.
ವಾಪಾಸಂಇ/ಜಿ.ನ./ಜಿಎ/1234/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಬೆಂಗಳೂರು ದಕ್ಷಿಣ ವಿಭಾಗ, ಅಮೃತ್‌ನಗರ, ಕೋಣನಕುಂಟೆ ಮುಖ್ಯರಸ್ತೆ, ಸೌದಾಮಿನಿ ಬಡಾವಣೆ, ಬೆಂಗಳೂರು-560 062.
ಸಂಖ್ಯೆ: ಬೃಬೆಂಮಪಾ/ಕಾಪಾಅ/ಬೆದವಿ/ಟೆಂಡರ್/06/2021-22 ದಿನಾಂಕ: 19-08-2021
ಟೆಂಡರ್‌ಗಳ ಆಹ್ವಾನ
(ದ್ವಿ ಲಕೋಟೆ ಪದ್ಧತಿ) (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು (ಬೆಂಗಳೂರು ದಕ್ಷಿಣ ವಿಭಾಗ), ಬೃಬೆಂಮಪಾ ಇವರು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಗುತ್ತಿಗೆದಾರರು ತಾವು ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಬಿಡಬ್ಲ್ಯೂಎಸ್‌ಎಸ್‌ಬಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಇತರೆ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತರಾಗಿರಬೇಕು.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ (ಲಕ್ಷ ರೂ. ಗಳಲ್ಲಿ)
1)	ವಾರ್ಡ್ ನಂ.184ರ ಉತ್ತರಹಳ್ಳಿ, ತುರಹಳ್ಳಿ, ವಡ್ಡರಪಾಳ್ಯ ಮತ್ತು ಗುಬ್ಬಲಾಲ ಇಲ್ಲಿ ಕಾವೇರಿ ನೀರಿನ ಪೈಪ್ ಮತ್ತು ಯುಜಿಡಿ ಪೈಪ್ ಲೈನ್ ಹಾಕಲು ಬಿಡಬ್ಲ್ಯೂಎಸ್‌ಎಸ್‌ಬಿ ಮಾಡಿದ ರಸ್ತೆ ಕಡಿತದ ಮರುಸ್ಥಾಪನೆ.	3060.00
2)	ವಾರ್ಡ್ ನಂ.184ರ ಅರೇಹಳ್ಳಿ ಮತ್ತು ಸುಬ್ರಮಣ್ಯಪುರ ಇಲ್ಲಿ ಕಾವೇರಿ ನೀರಿನ ಪೈಪ್ ಮತ್ತು ಯುಜಿಡಿ ಪೈಪ್ ಲೈನ್ ಹಾಕಲು ಬಿಡಬ್ಲ್ಯೂಎಸ್‌ಎಸ್‌ಬಿ ಮಾಡಿದ ರಸ್ತೆ ಕಡಿತದ ಮರುಸ್ಥಾಪನೆ.	1080.00
3)	ವಾರ್ಡ್ ನಂ.197ರ ವಸಂತಪುರ ಮತ್ತು ದೊಡ್ಡಕಲ್ಲಸಂದ್ರ ಇಲ್ಲಿ ಕಾವೇರಿ ನೀರಿನ ಪೈಪ್ ಮತ್ತು ಯುಜಿಡಿ ಪೈಪ್ ಲೈನ್ ಹಾಕಲು ಬಿಡಬ್ಲ್ಯೂಎಸ್‌ಎಸ್‌ಬಿ ಮಾಡಿದ ರಸ್ತೆ ಕಡಿತದ ಮರುಸ್ಥಾಪನೆ.	1440.00
4)	ವಾರ್ಡ್ ನಂ.196ರ ಅಂಜನಾಪುರ ಮತ್ತು ಕೆಂಬತಹಳ್ಳಿ ಇಲ್ಲಿ ಕಾವೇರಿ ನೀರಿನ ಪೈಪ್ ಮತ್ತು ಯುಜಿಡಿ ಪೈಪ್ ಲೈನ್ ಹಾಕಲು ಬಿಡಬ್ಲ್ಯೂಎಸ್‌ಎಸ್‌ಬಿ ಮಾಡಿದ ರಸ್ತೆ ಕಡಿತದ ಮರುಸ್ಥಾಪನೆ.	1440.00
5)	ವಾರ್ಡ್ ನಂ.196ರ ಗೊಲ್ಲಹಳ್ಳಿ ಮತ್ತು ತಿಪ್ಪಸಂದ್ರ ಇಲ್ಲಿ ಕಾವೇರಿ ನೀರಿನ ಪೈಪ್ ಮತ್ತು ಯುಜಿಡಿ ಪೈಪ್ ಲೈನ್ ಹಾಕಲು ಬಿಡಬ್ಲ್ಯೂಎಸ್‌ಎಸ್‌ಬಿ ಮಾಡಿದ ರಸ್ತೆ ಕಡಿತದ ಮರುಸ್ಥಾಪನೆ.	1080.00
6)	ವಾರ್ಡ್ ನಂ.194ರ ಗೊಟ್ಟಿಗೆರೆ ಮತ್ತು ಪಿಳ್ಳಗಾನಹಳ್ಳಿ ಇಲ್ಲಿ ಕಾವೇರಿ ನೀರಿನ ಪೈಪ್ ಮತ್ತು ಯುಜಿಡಿ ಪೈಪ್ ಲೈನ್ ಹಾಕಲು ಬಿಡಬ್ಲ್ಯೂಎಸ್‌ಎಸ್‌ಬಿ ಮಾಡಿದ ರಸ್ತೆ ಕಡಿತದ ಮರುಸ್ಥಾಪನೆ.	1440.00
7)	ವಾರ್ಡ್ ನಂ.191ರ ನಾಗನಾಥಪುರ ಮತ್ತು ಕುಲ್ಲು ಇಲ್ಲಿ ಕಾವೇರಿ ನೀರಿನ ಪೈಪ್ ಮತ್ತು ಯುಜಿಡಿ ಪೈಪ್ ಲೈನ್ ಹಾಕಲು ಬಿಡಬ್ಲ್ಯೂಎಸ್‌ಎಸ್‌ಬಿ ಮಾಡಿದ ರಸ್ತೆ ಕಡಿತದ ಮರುಸ್ಥಾಪನೆ.	1440.00
8)	ವಾರ್ಡ್ ನಂ.192ರ ಕಮ್ಮನಹಳ್ಳಿ ಮತ್ತು ಬೇಗೂರು ಇಲ್ಲಿ ಕಾವೇರಿ ನೀರಿನ ಪೈಪ್ ಮತ್ತು ಯುಜಿಡಿ ಪೈಪ್ ಲೈನ್ ಹಾಕಲು ಬಿಡಬ್ಲ್ಯೂಎಸ್‌ಎಸ್‌ಬಿ ಮಾಡಿದ ರಸ್ತೆ ಕಡಿತದ ಮರುಸ್ಥಾಪನೆ.	1530.00
9)	ವಾರ್ಡ್ ನಂ.192ರ ಯಲೇನಹಳ್ಳಿ, ಚಂದ್ರಶೇಖರಪುರ, ಬಸಾಪುರ, ಚಿಕ್ಕತೋಗೂರು, ಬೆರೆಟೆನ ಅಗ್ರಹಾರ, ದೊಡ್ಡ ತೋಗೂರು ಮತ್ತು ಬಸವನಪುರ ಇಲ್ಲಿ ಕಾವೇರಿ ನೀರಿನ ಪೈಪ್ ಮತ್ತು ಯುಜಿಡಿ ಪೈಪ್ ಲೈನ್ ಹಾಕಲು ಬಿಡಬ್ಲ್ಯೂಎಸ್‌ಎಸ್‌ಬಿ ಮಾಡಿದ ರಸ್ತೆ ಕಡಿತದ ಮರುಸ್ಥಾಪನೆ.	3060.00
10)	ವಾರ್ಡ್ ನಂ.192ರ ಕಾಲೇನ ಅಗ್ರಹಾರ, ವಾರ್ಡ್ ನಂ.196ರ ಆಲಹಳ್ಳಿ ಮತ್ತು ವಾರ್ಡ್ ನಂ.191ರ ಪರಪ್ಪನ ಅಗ್ರಹಾರ ಇಲ್ಲಿ ಕಾವೇರಿ ನೀರಿನ ಪೈಪ್ ಮತ್ತು ಯುಜಿಡಿ ಪೈಪ್ ಲೈನ್ ಹಾಕಲು ಬಿಡಬ್ಲ್ಯೂಎಸ್‌ಎಸ್‌ಬಿ ಮಾಡಿದ ರಸ್ತೆ ಕಡಿತದ ಮರುಸ್ಥಾಪನೆ.	1530.00

ವಿಶೇಷ ಸೂಚನೆ: ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ 675 ವೆಚ್ಚ 12/2020, ಬೆಂಗಳೂರು, ದಿನಾಂಕ: 22-12-2020 ಹಾಗೂ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಛೇರಿರವರ ಆದೇಶ ಸಂಖ್ಯೆ: ಆಯುಕ್ತರು/ಪಿಆರ್/ಇ-9251/2020-21, ದಿನಾಂಕ: 30-01-2021 ರಂತೆ ಇ.ಎಂ.ಡಿ ಗೆ ವಿನಾಯಿತಿ ನೀಡಲಾಗಿದೆ (ಇ.ಎಂ.ಡಿ ಘೋಷಣಾ ಪತ್ರವನ್ನು ಸಲ್ಲಿಸಿದಲ್ಲಿ).
ಟೆಂಡರ್‌ನ ಕಾರ್ಯಸೂಚಿ: 1) ಭರ್ತಿಯಾದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 20-09-2021ರ ಸಂಜೆ 4:00 ಗಂಟೆಯವರೆಗೆ. 2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 21-09-2021ರ ಸಂಜೆ 4:30 ಗಂಟೆಗೆ. 3) ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಬಿಡ್ ಅನುಮೋದನೆಯ ನಂತರ ತೆರೆಯಲಾಗುವುದು. 4) ಪೂರ್ವ ಬಿಡ್ ಮೀಟಿಂಗ್ ದಿನಾಂಕ: 31-08-2021ರ ಬೆಳಗ್ಗೆ 11:00 ರಿಂದ 12.30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಭೇಟಿನೀಡಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ದಕ್ಷಿಣ ವಿಭಾಗ, ಬೃಬೆಂಮಪಾ.
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಹೊನ್ನಾವರ ವಿಭಾಗ, ಹೊನ್ನಾವರ
No: B1/DTS/Sept-2021/MSTC/CR-01/2021-22 Date: 10.08.2021
ಹೊನ್ನಾವರ ವಿಭಾಗ, ಹೊನ್ನಾವರದ ಇಡಗುಂಜಿ ಮತ್ತು ಕಟ್ಗಲ್ ಡಿಪೋದಲ್ಲಿರುವ ಟಿಂಬರ್ ಮತ್ತು ಫಯರ್‌ವುಡ್‌ಗಳ ಇ-ಟೆಂಡರ್‌ನ ವಿವರವಾದ ಪ್ರಕಟಣೆ
ಸಾರ್ವಜನಿಕರಿಗೆ ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ, ಈ ಕೆಳಗಿನಂತೆ ವಿವರಿಸಲಾಗಿರುವ ಮರದ ಜಾತಿ ಹಾಗೂ ಪ್ರಮಾಣದ ಟಿಂಬರ್, ಫಯರ್‌ವುಡ್, ಬಿಲ್ಲೆಟ್‌ಗಳು ಮತ್ತು ಪೋಲ್‌ಗಳನ್ನು ಹೊನ್ನಾವರ ವಿಭಾಗ, ಹೊನ್ನಾವರದ ಕಟ್ಗಲ್ ಮತ್ತು ಇಡಗುಂಜಿ ಸರ್ಕಾರಿ ಟಿಂಬರ್ ಡಿಪೋದಲ್ಲಿ ದಿನಾಂಕ: 13.09.2021 ರಂದು ಬೆಳಿಗ್ಗೆ 9.00 ಗಂಟೆಯಿಂದ ಅಪರಾಹ್ನ 1.00 ಗಂಟೆಯವರೆಗೆ ಷರತ್ತುಗಳಿಗೊಳಪಟ್ಟು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅಥವಾ ಅವರಿಂದ ಅಧಿಕಾರ ಪಡೆದ ಇತರ ಅಧಿಕಾರಿಗಳಿಂದ ಇ–ಟೆಂಡರ್ ಮುಖೇನ ಮಾರಾಟ ಮಾಡಲಾಗುತ್ತದೆ.
ಯಾವುದೇ ಸ್ಪಷ್ಟೀಕರಣಕ್ಕಾಗಿ, ನೀವು ಸಂಪರ್ಕಿಸಹುದು:
The Range Forest Officer, Honnavar - Ph: 08387-220640
The Range Forest Officer, Timber Depot Katgal- Ph: 08386-264100
OR
Deputy Conservator of Forests, Honnavar Division
Ph: 08387-220235
ಸಹಿ/– (ಗಣಪತಿ.ಕೆ ಐಎಫ್‌ಎಸ್) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹೊನ್ನಾವರ ವಿಭಾಗ, ಹೊನ್ನಾವರ
DIPR/KWR/MCA/364/21-22 Dt.19.8.2021

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
“ಜ್ಞಾನ ಸಂಗಮ”, ಬೆಳಗಾವಿ–590018. ಕರ್ನಾಟಕ ರಾಜ್ಯ
ದೂರವಾಣಿ: (0831) 2405467, ಫ್ಯಾಕ್ಸ್: (0831) 2405467
Ref. No.: VTU/BGM/SAP/CW4/T-560/2020-21/2149 Date: 19.08.2021
ಟೆಂಡರ್ ಪ್ರಕಟಣೆ
ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಗಳಿಗೆ (ದ್ವಿ ಲಕೋಟೆ ಪದ್ಧತಿಯಲ್ಲಿ) ಇ–ಟೆಂಡರ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು/ ಪೂರೈಕೆದಾರರಿಂದ ಅಹ್ವಾನಿಸಲಾಗಿದೆ. ಕೆಲಸದ ಹೆಸರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಮುದ್ದೇನಹಳ್ಳಿ ರಿಸಚ್‌9 ಇಕ್ಯೂಟಮೇಂಟ್ ವಿಜಿಎಸಟಿ–ಕೆ–ಫಿಸ್ಸ(ಎಲ್–2)ಅನುದಾನದಲ್ಲಿ ಪೂರೈಸುವುದು ಮತ್ತು ಅನುಸ್ಥಾಪನ ಗೊಳಿಸುವುದು. ಟೆಂಡರಿಗಿಟ್ಟ ಮೊತ್ತ: ರೂ. 18,00,000/–. ಮುಂಗಡ ಠೇವಣಿ–. ರೂ. 45,000/–. ಟೆಂಡರ್ ಸಲ್ಲಿಸಲು ಕೂನೆಯ ದಿನಾಂಕ: 02.09.2021 ರಂದು 2:30 ರವರೆಗೆ ಕುಲಸಚಿವರ ಕಛೇರಿ, ವಿ.ತಾ.ವಿ. ಬೆಳಗಾವಿ. ಟೆಂಡರ್ ತೆರೆಯುವ ದಿನಾಂಕ: 04.09.2021 ರಂದು 4:00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ಮತ್ತು www.vtu.ac.in ನೋಡಬಹುದು.
ಸಹಿ/–
ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ
DIPR/BGM/644/Manipal/2020-21

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕೊಪ್ಪಳ. ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಗ್ರಾ.ಕು.ನೀ.&ನೈ. ವಿಭಾಗ, ಹಳೆಯ ಜಿಲ್ಲಾ ಪಂಚಾಯತ್ ಕಟ್ಟಡ, 1ನೇ ಮಹಡಿ, ಹೊಸಪೇಟೆ ರಸ್ತೆ, ಕೊಪ್ಪಳ –583 231.
☎ : 08539–220721 E-mail : eerwsskpl@gmail.com
ಸಂ: ಕಾ.ನಿ.ಇಂ/ಗ್ರಾ.ಕು.ನೀ.&ನೈ./ವಿಕೊ/2021–22/976 ದಿನಾಂಕ:17.08.2021
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಮೂಲಕ)
ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ Standred Bid Document ಸೇವೆಗಳಿಗೆ ನಿಬಂಧನೆಗೊಳಪಟ್ಟಂತೆ ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈ. ವಿಭಾಗ ಕೊಪ್ಪಳ ಇವರು ಜಿಲ್ಲೆಯಡಿ ಬರುವ 4 ತಾಲೂಕಗಳಲ್ಲಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ JJM/ISA ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಣಿ ಮಾಡಿದ ಅರ್ಹ ಸಂಸ್ಥೆಯವರಿಂದ (ಎನ್.ಜಿ.ಓ.) ಸ್ಪರ್ಧಾತ್ಮಕ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮೂಲಕ ನಿಗದಿತ ದಿನಾಂಕದೊಳಗೆ ಪಡೆಯಬಹುದು. ಆಕಸ್ಮಿಕವಾಗಿ ಈ ಕೆಳಗೆ ಪ್ರಕಟಿಸಿದ ದಿನಾಂಕ ರಜಾದಿನ ಎಂದು ಘೋಷಿಸಿದಲ್ಲಿ ನಂತರದ ಕಛೇರಿ ಕೆಲಸದ ದಿನವನ್ನು ಪರಿಗಣಿಸಲಾಗುವುದು.
ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ ಅರ್ಜಿ ಸಲ್ಲಿಸಲು ನಮೂನೆಗಳನ್ನು ಆನ್‌ಲೈನ್ ಮೂಲಕ ಪಡೆಯಲು ಹಾಗೂ ಆನ್‌ಲೈನ್ ಮೂಲಕ ಭರ್ತಿ ಮಾಡಿದ ನಮೂನೆ ಹಾಗೂ ಇ.ಎಂ.ಡಿ. ಠೇವಣಿಯನ್ನು ಸಲ್ಲಿಸುವ ಕೊನೆಯ ದಿನಾಂಕ: 19.08.2021 ರಿಂದ 26.08.2021 ಸಂಜೆ 5:30 ಗಂಟೆ ವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 28.08.2021 ಮುಂಜಾನೆ 11.00 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 02.09.2020 ಮುಂಜಾನೆ 11.00 ಗಂಟೆಗೆ.
ಕೆಲಸದ ಹೆಸರು: Selection & Empanalment of Implementation Support Agences for Providing Service on Prepration of VAP & Implementation of IEC & HRD Activities Under JJM in rural areas under Rural Drinking Water & Sanitation Dept. in Koppal Dist. ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 58.53. ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ): 1,17,000/-. ಕಾಲಾವಧಿ: 6 Months. ಅರ್ಹ ದರ್ಜೆ ಗುತ್ತಿಗೆದಾರರು: NGOs/VOs/SHGs
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು. ವೆಬ್‌ಸೈಟ್ http://eproc.karnataka.gov.in ಹಾಗೂ ದೂರವಾಣಿ ಸಂ: 08539–220721 ರಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/219/ಎಂಸಿಎ/2021–22

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, “ಜಲಭವನ” ವಿಭಾಗ, 3ನೇ ಮಹಡಿ, 1ನೇ ಘಟ್ಟ, 1ನೇ ಹಂತ, ಬಿಟಿಎಂ ಬಡಾವಣೆ, ಬನ್ನೇರುಘಟ್ಟರಸ್ತೆ, ಬೆಂಗಳೂರು – 560029
ವೆಬ್‌ಸೈಟ್: www.kuwsdb.org ಇ–ಮೇಲ್: kwbeebng@gmail.com
ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
No: KWB/EE/BNG/TA/AE-2/JLB-SS/995/2021-22 Date: 18-08-2021
ಮತ್ತು ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ಸಂಖ್ಯೆ: 3027
ಕಾಮಗಾರಿಯ ವಿವರ: 2021–22ನೇ ಜಲಭವನ ಕಛೇರಿಯ ವಾರ್ಷಿಕ ನಿರ್ವಹಣೆಯಡಿ ಕನನೀಸ ಮತ್ತು ಒಚ ಮಂಡಳಿಯ ಜಲಭವನ ಕೇಂದ್ರ ಕಛೇರಿಯಲ್ಲಿ ಸೆಕ್ಯೂರಿಟಿ ಸೇವೆಯ ಗುತ್ತಿಗೆ ಕಾಮಗಾರಿ.
ಟೆಂಡರ್‌ಗಿಟ್ಟ ಮೊತ್ತ: ರೂ. 31,33,274/– (ಜಿ.ಎಸ್.ಟಿ ಹೊರತುಪಡಿಸಿ)
ಭದ್ರತಾ ಠೇವಣಿ: ಇಲ್ಲ, ಗುತ್ತಿಗೆ ಕಾಲಾವಧಿ: 12 ತಿಂಗಳು
1) ಟೆಂಡರ್ ಪ್ರಾರಂಭ ದಿನಾಂಕ ಮತ್ತು ಸಮಯ: 21–08–2021 ಬೆಳಿಗ್ಗೆ 11.00 ಗಂಟೆಯ ನಂತರ. 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 04–09–2021ರ ಸಂಜೆ 5.30 ಗಂಟೆಯವರೆಗೆ. 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 06–09–2021ರ ಬೆಳಿಗ್ಗೆ 11.00 ಗಂಟೆಯ ನಂತರ.
ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಕಾರ್ಯಪಾಲಕ ಅಭಿಯಂತರವರ ಕಛೇರಿ ದೂರವಾಣಿ ಸಂಖ್ಯೆ: 080–41106536 ರಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ eproc.karnataka.gov.in ನಿಂದ ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರು
ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು
ವಾಸಾಸಂಇ/ಜಿ.ನ/ಅಡ್ವರ್ಟೋರ್/1224/2021–22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ
ಸಂ.: ಕಾನಿಅ/ಗ್ರಾಕುನೀನೈವಿ/ಬೀದರ/ತಾಶಾ–04/2021–22/ 452 ದಿನಾಂಕ:18.08.2021
ಅಲ್ಪಾವಧಿ ಟೆಂಡರ್ ಪ್ರಕಟಣೆ ಏಕಲಕೋಟಿ/ದ್ವಿಲಕೋಟೆ ಪದ್ಧತಿ (ಇ–ಪ್ರೊಕ್ಯೂರ್ಮೆಂಟ್ ಮೂಲಕ)
ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ ರವರು ಬೀದರ ಇವರ KW-4 (Standard Bid Document) ನಿಬಂಧನೆಗಳೊಪಟ್ಟಂತೆ. 2020–21ನೇ ಸಾಲಿನ JJM ಯೋಜನೆಯಡಿಯಲ್ಲಿನ ಕನಿಷ್ಠ ರೂ .102.55 ಲಕ್ಷ ಮೊತ್ತದ 1 ಕಾಮಗಾರಿಗೆ ಅರ್ಹ ನೊಂದಾಯಿತ 2ನೇ ದರ್ಜೆ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು / ನೊಂದಾಯಿತ ಸಂಸ್ಥೆಗಳು ಹಾಗೂ ಸಾಮಾನ್ಯ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳಿಗೆ ಐಟಂವಾರು ಇ–ಟೆಂಡರ್ ಆಹ್ವಾನಿಸಲಾಗಿದೆ.
ಸದರಿ ಕಾಮಗಾರಿಗಳ ಹೆಚ್ಚಿನ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕೆಳಗೆ ಸಹಿ ಮಾಡಿರುವ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ಸೈಟ್ http://eproc.karnataka.gov.in ಸಂಪರ್ಕಿಸಬಹುದಾಗಿದೆ.
1) ಟೆಂಡರ್ ದಸ್ತಾವೇಜುಗಳನ್ನು ವೆಬ್ ಸೈಟಿನಿಂದ ಡೌನಲೋಡ ಮಾಡಿಕೊಳ್ಳಲ್ಲು ಪ್ರಾರಂಭವಾಗುವ ದಿನಾಂಕ : 18.08.2021 ರಿಂದ 04.09.2021 ವರೆಗೆ, 2) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 04.09.2021 ರಂದು 17:00 ಗಂಟೆಯವರೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 06.09.2021 ರಂದು 11.00 ಗಂಟೆಯ ನಂತರ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ & ನೈ ವಿಭಾಗ–ಬೀದರ
ವಾ.ಸಾ.ಸಂ.ಇ/ಬೀದರ/142/ಎಂಸಿ&ಎ/2021–22

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ಕಾರ್ಯನಿರ್ವಾಹಕ ಇಂಜನೀಯರವರ ಕಚೇರಿ, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ
ಸಂ.ಲೋಇ/ಕಾಇಂ/ಬವಿ/ಟಿಎಸ್1 /2021–22/2165 ದಿನಾಂಕ 13–08–2021
ಸಮಾಲೋಚಕರನೇಮಕಾತಿ – ಆಸಕ್ತಿ ವ್ಯಕ್ತಪಡಿಸುವಿಕೆ
(Empanelment of Consultants- Expression of Interest)
ಮುಂದೂಡಿಕೆ ಪ್ರಕಟಣೆ
ವಿಷಯ: ಸಮಾಲೋಚಕರ ನೇಮಕಾತಿ ಹಾಗೂ ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ ಆಹ್ವಾನಿಸಲಾಗಿದ್ದ ಟೆಂಡರುಗಳನ್ನು ಮುಂದೂಡುವ ಬಗ್ಗೆ.
ಉಲ್ಲೇಖ: ಈ ಕಛೇರಿ ಪ್ರಕಟಣೆ ಸಂಖ್ಯೆ 3385 ದಿನಾಂಕ 07–12–2021.
ಕರ್ನಾಟಕ ಲೋಕೋಪಯೋಗಿ ಇಲಾಖಾಯಲ್ಲಿ ಸಮಾಲೋಚಕರ ಸೇವೆಗಾಗಿ ಆಸಕ್ತಿಯುಳ್ಳ ಸಮಾಲೋಚಕ ರಿಂದ ಇಲಾಖಾಯಲ್ಲಿ ಕೈಗೊಳ್ಳಲಾಗುವ ವಿವಿಧ ಚಟುವಟಿಕೆಗಳಿಗೆ (ವಿಶ್ವ ಬ್ಯಾಂಕ್‌ಯೋಜನೆ, ABD ಹಾಗೂ ಇತರೆ ಬಾಹ್ಯ ಸಹಾಯಧನ ಯೋಜನೆಗಳನ್ನು ಹೊರತು ಪಡಿಸಿ) ಈ ಹಿಂದೆ ಮೇಲಿನ ಉಲ್ಲೇಖದಲ್ಲಿನ ಟೆಂಡರ್ ಪ್ರಕಟಣೆಯಲ್ಲಿ Project Monitoring Consultancy Services, Third PartyInspectionof Quailty Control, Preparation of Detailed Project Reports, StructuralDesigns, Proof Checkingof Structural Designs, Road Safety Audit, Post Implementation Study, EnvironmentImpact Study ಹಾಗೂ ಇನ್ನಿತರ ಸೇವೆಗಳನ್ನು ನೀಡುವುದಕ್ಕಾಗಿ ಸಮಾಲೋಚಕರನ್ನು ನೇಮಿಸುವುದಕ್ಕಾಗಿ ಆಹ್ವಾನಿಸಲಾಗಿದ್ದ ಅರ್ಜಿಗಳನ್ನು ಕೆಳಗೆ ತಿಳಿಯಪಡಿಸಿದಂತೆ ಮುಂದೂಡಲಾಗಿದೆ. ಇದಕ್ಕಾಗಿ ಈ ಹಿಂದೆ ಅರ್ಜಿಗಳನ್ನು ಸಲ್ಲಿಸಿರುವ ಸಮಾಲೋಚಕರು ಮತ್ತೊಮ್ಮೆ ಸಲ್ಲಿಸುವ ಅಗತ್ಯತೆ ಇರುವುದಿಲ್ಲ. ಈ ಹಿಂದೆ ಸಲ್ಲಿಸಿರುವ ದಾಖಲಾತಿಗಳನ್ನು ಸಮಾಲೋಚರ ನೇಮಕಾತಿಗೆ ಪರಿಗಣಿಸಲಾಗುವುದು. ಒಂದು ವೇಳೆ ಸಮಾಲೋಚಕರು ಈ ಹಿಂದೆ ಅರ್ಜಿ ಸಲ್ಲಿಸಿದ ದಿನಾಂಕ ದಿಂದ ಇಲ್ಲಿಯವರೆಗೆ ಹೆಚ್ಚಿನ ಅನುಭವ ಹೊಂದಿದ್ದಲ್ಲಿ ಅಂತಹ ಅರ್ಜಿದಾರರು ಮತ್ತೊಮ್ಮೆ ಹೊಸದಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.
ಮುಂದೂಡಿಕೆ ಪ್ರಕಟಣಗೆ ಅನುಗುಣವಾಗಿ ಆಸಕ್ತಿಯುಳ್ಳ ಸಮಾಲೋಚಕರು, ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖಾ ವಿಭಾಗ, ಕೋಟೆ, ಬಳ್ಳಾರಿರವರ ಕಛೇರಿಇ_ಮೇಲ್ eepwdblyconsemp@gmail.com ಗೆ ಅವಶ್ಯಕ ದಾಖಲೆಗಳೊಂದಿಗೆ ದಿನಾಂಕ 19–08–2021 ರಿಂದ 15–09–2021 ಸಂಜೆ 4.30 ರವರೆಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಈ ಅವಧಿಯಲ್ಲಿ ಮೇಲ್ಕಾಣಿಸಿದ ಇ–ಮೇಲ್‌ಗೆ ಸಲ್ಲಿಸಲಾಗುವ ಅರ್ಜಿಗಳನ್ನು ಹಾಗೂ ವಿವರಗಳನ್ನು ಮಾತ್ರ ಪರಿಗಣಿಸಲಾಗುವುದು.
ಸಹಿ/– ಕಾರ್ಯನಿರ್ವಾಹಕಇಂಜಿನೀಯರು,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560 029
ಫೋನ್: 25536567/26096832/910 ಫ್ಯಾಕ್ಸ್: 080–25536105 Email: purchase@kmf.coop
ಸಂ. ಕಹಾಮ/ಖರೀದಿ/ಇ–ಪ್ರೊಕ್./ಟೆಂಡರ್–308/2021 ದಿನಾಂಕ: 18.08.2021
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಹಾಲು ಮಹಾ ಮಂಡಳಿ ಬೆಂಗಳೂರು ಈ ಕೆಳಗೆ ತಿಳಿಸಿದ ಸಾಮಗ್ರಿಯ ಸರಬರಾಜಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ

ಕ್ರಮ ಸಂಖ್ಯೆ	ಸಾಮಗ್ರಿಗಳ ವಿವರ	ಅಂದಾಜು ಕ್ರೇಟ್	ವಾಹನಗಳ ಸಂಖ್ಯೆ	ಇ.ಎಂ.ಡಿ (ರೂ.)
1	02 ವರ್ಷಗಳ ಅವಧಿಗೆ ಮದರ್ ಡೇರಿಯಿಂದ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಿಗೆ (ಕೇರಳ, ಆಂಧ್ರಪ್ರದೇಶ, ತಮಿಳುನಾಡು, ಗೋವಾ ಹಾಗೂ ಇತರೆ ರಾಜ್ಯಗಳು) ಐಸ್ ಕ್ರೀಂ ಸಾಗಾಣಿಕೆ ಮತ್ತು ವಿತರಣಾ ಸೇವೆಯನ್ನು ಒದಗಿಸುವುದು.	Non season 220-240 Crates of ice Cream	02 Vehicle in season & 01 in unseason	1,24,000/-
2	02 ವರ್ಷಗಳ ಅವಧಿಗೆ ಮದರ್ ಡೇರಿಯಿಂದ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಿಗೆ (ಕೇರಳ, ಆಂಧ್ರಪ್ರದೇಶ, ತಮಿಳುನಾಡು, ಗೋವಾ ಹಾಗೂ ಇತರೆ ರಾಜ್ಯಗಳು) ಐಸ್ ಕ್ರೀಂ ಸಾಗಾಣಿಕೆ ಮತ್ತು ವಿತರಣಾ ಸೇವೆಯನ್ನು ಒದಗಿಸುವುದು.	In season 260-290 Crates of Ice Cream	02 Vehicle in season & 01 in unseason	1,24,000/-

ಟೆಂಡರ್ ದಾಖಲಾತಿಯನ್ನು E-Proc ವೆಬ್‌ಸೈಟ್. ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, ಹಾಗೂ Helpline No: 080-23010900 / 23010901.

ಟೆಂಡರ್ ಶುರುವಾಗುವ ದಿನಾಂಕ	19.08.2021
ಪೂರ್ವಬಾವಿ ಸಭೆ	24.08.2021 ರಂದು 11.00 ಘಂಟೆಗೆ
ಟೆಂಡರ್ ಅಪ್ ಲೋಡಿಂಗ್ ಮಾಡಲು ಕಡೆಯ ದಿನಾಂಕ	30.08.2021 ರಂದು 5.00 ಘಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	01.09.2021 ರಂದು 11.00 ಘಂಟೆಗೆ
ವಾಣಿಜ್ಯಕ ಬಿಡ್ ತೆರೆಯುವ ದಿನಾಂಕ	ನಂತರ ತಿಳಿಸಲಾಗುವುದು

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.
ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಪರವಾಗಿ
ಸಹಿ/–
ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ, ಬೆಂಗಳೂರು–560 001.
ಸಂಖ್ಯೆ : ಸಿಆಸುಇ 19 ಸೇಆನ್ಯಾ 2021 ದಿನಾಂಕ: 18.08.2021
ಪ್ರಕಟಣೆ
ವಿಷಯ: ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಆಡಳಿತ ಸದಸ್ಯರ ನೇಮಕಾತಿ ಬಗ್ಗೆ.
1) ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಬೆಳಗಾವಿ ಮತ್ತು ಕಲಬುರಗಿ ಪೀಠಗಳಲ್ಲಿ ಖಾಲಿ ಇರುವ ಎರಡು ಆಡಳಿತ ಸದಸ್ಯರ ಹುದ್ದೆಗಳನ್ನು, ಪ್ರತಿ ಪೀಠಕ್ಕೆ ತಲಾ ಒಂದು ಹುದ್ದೆಯಂತೆ ಭರ್ತಿ ಮಾಡಲು ಕ್ರಮ ಆರಂಭಿಸಿದೆ. 2) ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಆಡಳಿತ ಸದಸ್ಯರಾಗಿ ನೇಮಕಗೊಳ್ಳಲು ಅರ್ಹತೆಯನ್ನು THE ADMINISTRATIVE TRIBUNALS ACT, 1985ರ ಸೆಕ್ಷನ್ 6(2)(a) ರಲ್ಲಿ ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ: 6 (2) A person shall not be qualified for appointment, - “(a) as an Administrative Member, unless he has held for at least two years the post of Secretary to the Government of India or any other post under the Central or State Government and carrying the scale of pay which is not less than that of a Secretary to the Government of India for at least two years or held a post of Additional Secretary to the Government of India for at least five years or any other post under the Central or State Government carrying the scale of pay which is not less than that of Additional Secretary to the Government of India at least for a period of five years; Provided that the officers belonging to All-India services who were or are on Central deputation to a lower post shall be deemed to have held the post of Secretary or Additional Secretary, as the case may be, from the date such officers were granted proforma promotion or actual promotion whichever is earlier to the level of Secretary or Additional Secretary, as the case may be and the period spent on Central deputation after such date shall count for qualifying service for the purposes of this clause;”. 3) ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಆಡಳಿತ ಸದಸ್ಯ ಹುದ್ದೆಯ ಸೇವಾವಧಿ ಕುರಿತಂತೆ Section 8 of The Administrative Tribunals Act, 1985ರಲ್ಲಿ ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ. “(2) - A Member shall hold office as such for a term of five years from the date on which he enters upon his office extendable by one more term of five years: Provided that no Member shall hold office as such after he has attained the age of sixty five years. (3)– ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಿಗೆ ಅನ್ವಯಿಸುವ ಸೇವಾ ನಿಯಮಗಳು ನ್ಯಾಯಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೂ ಅನ್ವಯವಾಗುವುವು.” 4) ಆಡಳಿತ ಸದಸ್ಯರ ವೇತನ, ಭತ್ಯೆಗಳು ಹಾಗೂ ಇತರೆ ಸೇವಾ ಷರತ್ತುಗಳು The Administrative Tribunals Act, 1985ರಂತೆ ನಿಯಂತ್ರಿಸಲ್ಪಡುತ್ತವೆ. 5. ನೇಮಕಗೊಂಡವರು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಬೆಳಗಾವಿ ಮತ್ತು ಕಲಬುರಗಿ ಪೀಠಗಳಲ್ಲಿ ಆಡಳಿತ ಸದಸ್ಯರಾಗಿ ಸ್ಥಳನಿಯುಕ್ತಿಗೊಳ್ಳುವರು. 6. ಮೇಲೆ ತಿಳಿಸಿರುವ ಷರತ್ತುಗಳನ್ನು ಪೂರೈಸುವ ಮತ್ತು ಆಡಳಿತ ಸದಸ್ಯ ಹುದ್ದೆಯ ಆಯ್ಕೆಗಾಗಿ ಪರಿಗಣಿಸಲ್ಪಡಲು ಇಚ್ಛೆಯುಳ್ಳ ವ್ಯಕ್ತಿಗಳು ವೈಯಕ್ತಿಕ ವಿವರಗಳೊಂದಿಗೆ (Career Profile) (ದ್ವಿಪ್ರತಿಗಳಲ್ಲಿ) ಈ ಜಾಹೀರಾತು ಪ್ರಕಟಗೊಂಡ 45 ದಿನಗಳ ಒಳಗಾಗಿ ತಮ್ಮ ಇಚ್ಛೆಯನ್ನು ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು–560001 ಇವರಿಗೆ ಸಲ್ಲಿಸುವಂತೆ ಸೂಚಿಸಿದೆ. ಅಂತಿಮಗೊಳಿಸಲಾದ (Shortlisted) ಅರ್ಜಿದಾರರು ಆಯ್ಕೆ ಸಮಿತಿ ಮುಂದೆ ತಮ್ಮ ಸ್ವಂತ ವೆಚ್ಚದಲ್ಲಿ ಸಂವಾದಕ್ಕೆ (Interaction) ಹಾಜರಾಗಬೇಕಿರುತ್ತದೆ.
ವೈಯಕ್ತಿಕ ವಿವರ
1. ಹೆಸರು :
2. ಜನ್ಮ ದಿನಾಂಕ :
3. ವಿದ್ಯಾರ್ಹತೆ :
4. ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಛೇರಿ, ಮನೆ ವಿಳಾಸ, ದೂರವಾಣಿ ಸಂಖ್ಯೆ ಮತ್ತು ಇ–ಮೇಲ್ ವಿಳಾಸ :
5. ಸರ್ಕಾರಿ ಸೇವೆಗೆ ಸೇರಿದ ವಿವರ :

ಕ್ರಮ ಸಂಖ್ಯೆ	ಹುದ್ದೆಯ ವಿವರ	ಅವಧಿ	
		ಇಂದ	ವರೆಗೆ
1	2	3	4

DIPR/DDU/1237/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸುಸ್ಥಿತಿ ಕಟ್ಟಡ ಕೆಡವಿ ‘ಅಭಿವೃದ್ಧಿ ಭವನ’ ನಿರ್ಮಾಣ

ಕೋವಿಡ್ ಕಾಲದಲ್ಲಿ ಬಿಡಿಎಗೆ ದಿಢೀರ್ ಕಟ್ಟಡದ ಚಿಂತೆ! • ₹ 250 ಕೋಟಿ ವೆಚ್ಚದಲ್ಲಿ ಬಹುಮಹಡಿ ಕಟ್ಟಡ ಸಂಕೀರ್ಣ

ಪ್ರವೀಣ್ ಕುಮಾರ್ ಪಿ.ವಿ.

ಸುಸ್ಥಿತಿಯಲ್ಲಿರುವ ಬಿಡಿಎ ಕಟ್ಟಡ

ಪ್ರಜಾವಾಣಿ ವಿಶೇಷ

ಬೆಂಗಳೂರು: ಒಂದೆಡೆ, ಕೋವಿಡ್ ಸಂದರ್ಭದಲ್ಲಿ ಸರ್ಕಾರ ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಈ ಸಂದಿಗ್ಧ ಕಾಲದಲ್ಲಿ ದಿಢೀರ್ ಆಗಿ ಹೊಸ ಕಟ್ಟಡದ ಚಿಂತೆ ಎದುರಾಗಿದೆ. ಅದಕ್ಕಾಗಿ ಕೇಂದ್ರ ಕಚೇರಿ ಆವರಣದಲ್ಲಿರುವ ಕಟ್ಟಡಗಳನ್ನು ಕೆಡವಿ ಹೊಸ ಕಟ್ಟಡ ಸಂಕೀರ್ಣ ನಿರ್ಮಿಸಲು ಮುಂದಾಗಿದೆ. ಅಚ್ಚರಿ ಎಂದರೆ, ಇನ್ನೂ 17 ವರ್ಷವೂ ತುಂಬಿರದ ಸುಸ್ಥಿತಿಯಲ್ಲಿರುವ ಕಟ್ಟಡವನ್ನು ಕೆಡವಿ ಬಿಡಿಎ ನಿರ್ಮಿಸುತ್ತಿರುವುದು ‘ಅಭಿವೃದ್ಧಿ ಭವನ’ವನ್ನು.

ಬಿಡಿಎ ಸೇವೆ ಬಯಸಿ ಬರುವ ಜನರಿಗೆ ಒಂದೇ ಕಡೆ ಎಲ್ಲ ಸೇವೆಗಳು ಸಿಗಬೇಕು ಎಂಬ ಕಾರಣಕ್ಕೆ ಕೇಂದ್ರ ಕಚೇರಿಯ ಹಳೆಯ ಕಟ್ಟಡಗಳ ಸಂಕೀರ್ಣಕ್ಕೆ ತಾಗಿಕೊಂಡು ಮೂರು ಮಹಡಿಗಳ (ನೆಲ ಮಹಡಿ ಸೇರಿ ನಾಲ್ಕು ಮಹಡಿಗಳ) ಕಟ್ಟಡ ಸಂಕೀರ್ಣವನ್ನು ಪ್ರಾಧಿಕಾರವು 2004ರಲ್ಲಿ ನಿರ್ಮಿಸಿತ್ತು. ಆಗಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಆ ಕಟ್ಟಡವನ್ನು ಉದ್ಘಾಟಿಸಿದ್ದರು. ಇನ್ನೂ ಗಟ್ಟಿಮುಟ್ಟಾಗಿರುವ ಈ ಕಟ್ಟಡವೂ ‘ಅಭಿವೃದ್ಧಿ ಭವನ’ಕ್ಕಾಗಿ ನೆಲಸಮವಾಗಲಿದೆ!

ಕೇಂದ್ರ ಕಚೇರಿ ಆವರಣದಲ್ಲಿ ಬಿಡಿಎ ಒಟ್ಟು 2 ಎಕರೆ 29 ಗುಂಟೆ ಜಮೀನನ್ನು ಹೊಂದಿದೆ. ಇಷ್ಟೂ ಜಾಗವನ್ನು ಬಳಸಿಕೊಂಡು ಇಲ್ಲಿ ಸುಮಾರು ₹ 250 ಕೋಟಿ ವೆಚ್ಚದಲ್ಲಿ ಬಹುಮಹಡಿ ಕಟ್ಟಡ ಸಂಕೀರ್ಣವನ್ನು ನಿರ್ಮಿಸುವುದು ಬಿಡಿಎ ಯೋಜನೆ.

‘ಬಿಡಿಎ ಕಚೇರಿಗಳಿಗೆ ಸುಮಾರು 2.25 ಲಕ್ಷ ಚದರ ಅಡಿಗಳಷ್ಟು ಜಾಗದ ಅಗತ್ಯವಿದೆ. ನಾವು 4.25 ಲಕ್ಷ ಚದರ ಅಡಿಗಳಷ್ಟು ವಿಸ್ತೀರ್ಣದ ಕಟ್ಟಡ ನಿರ್ಮಿಸಲಿದ್ದೇವೆ. ಹೆಚ್ಚುವರಿ ಜಾಗವನ್ನು ಸರ್ಕಾರಿ ಹಾಗೂ ಸರ್ಕಾರದ ಅಧೀನದ ಸಂಸ್ಥೆಗಳ ಕಚೇರಿಗಳಿಗೆ ಬಾಡಿಗೆಗೆ ನೀಡುವ ಉದ್ದೇಶವಿದೆ. ಇದರಿಂದ ಬಿಡಿಎಗೆ ವರಮಾನವೂ ಬರಲಿದೆ’ ಎಂದು ಪ್ರಾಧಿಕಾರದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಹೊಸ ಕಟ್ಟಡ ಸಂಕೀರ್ಣದ ವಿನ್ಯಾಸ ಒದಗಿಸುವಂತೆ ಆಸಕ್ತ ವಾಸ್ತುಶಿಲ್ಪಿಗಳಿಂದ ಪ್ರಸ್ತಾವನೆಗಳನ್ನು (ಎಕ್ಸ್‌ಪ್ರೆಷನ್ ಆಫ್ ಇಂಟರೆಸ್ಟ್) ಬಿಡಿಎ ಸೋಮವಾರ ಆಹ್ವಾನಿಸಿದೆ. ಪ್ರಸ್ತಾವನೆಗಳ ಸಲ್ಲಿಕೆಗೆ ಪೂರ್ವಭಾವಿಯಾಗಿ ಆಸಕ್ತ ವಾಸ್ತುಶಿಲ್ಪಿಗಳ ಜೊತೆ ಸಭೆ ಗುರುವಾರವಿತ್ತು. ಪ್ರಸ್ತಾವನೆಗಳನ್ನು ಸಲ್ಲಿಸಲು ಕೇವಲ ಒಂದು ವಾರ ಕಾಲಾವಕಾಶ ನೀಡಲಾಗಿದೆ. ಇದೇ 23ರಂದೇ ಪ್ರಸ್ತಾವನೆಗಳನ್ನು ಬಿಡಿಎ ತೆರೆಯಲಿದೆ. ಇದೇ 25ರಂದು ತಮ್ಮ ಪ್ರಸ್ತಾವನೆಗಳ ಬಗ್ಗೆ ವಿವರಿಸಲು ಆಸಕ್ತ ಸಂಸ್ಥೆಗಳಿಗೆ ಅವಕಾಶ ಕಲ್ಪಿಸಲಾಗಿದೆ.

‘ಬಿಡಿಎರ ದಾಖಲೆಪತ್ರಗಳನ್ನು ದಾಸ್ತಾನು ಇಡಲು ಕೊಠಡಿಗಳ ಕೊರತೆ ಇದೆ. ಕೆಲವೆಡೆ ಕಾರಿಡಾರ್‌ಗಳಲ್ಲೇ ಕಪಾಟುಗಳನ್ನು ಇಟ್ಟು ಅವುಗಳಲ್ಲಿ ದಾಖಲೆ ಪತ್ರಗಳನ್ನು ಸಂಗ್ರಹಿಸಬೇಕಾದ ಪರಿಸ್ಥಿತಿ ಇದೆ. ಹಾಗಾಗಿ ಹೊಸ ಕಟ್ಟಡ ನಿರ್ಮಿಸುವ ಯೋಜನೆ ಸಿದ್ಧಪಡಿಸಲಾಗಿದೆ’ ಎಂದು ಬಿಡಿಎ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

’ಸುಮಾರು 10 ಮಹಡಿಗಳ ಹೊಸ ಕಟ್ಟಡ ನಿರ್ಮಿಸುವ ಯೋಜನೆ ನಮ್ಮದು. ಈ ಪ್ರಸ್ತಾಪವಿನ್ನೂ ಪ್ರಾರಂಭಿಕ ಹಂತದಲ್ಲಿದೆ. ವಾಸ್ತುಶಿಲ್ಪಿಗಳಿಂದ ಪ್ರಸ್ತಾವನೆಗಳು ಸಲ್ಲಿಕೆ ಆದ ಬಳಿಕವೇ ಈ ಯೋಜನೆಗೆ ಅಂತಿಮ ರೂಪ ನೀಡಲಾಗುತ್ತದೆ. ಯಾರು ಅತ್ಯುತ್ತಮ ವಿನ್ಯಾಸವನ್ನು ಒದಗಿಸುತ್ತಾರೋ ಅದರ ಪ್ರಕಾರ ಕಟ್ಟಡ ನಿರ್ಮಿಸಲಾಗುತ್ತದೆ. ಇದಕ್ಕೆ ಸರ್ಕಾರದಿಂದ ಅನುದಾನ ಕೇಳುತ್ತಿಲ್ಲ. ಬಿಡಿಎ ಸ್ವಂತ ಸಂಪನ್ಮೂಲದಲ್ಲೇ ಇದನ್ನು ನಿರ್ಮಿಸಲಿದೆ. ಈ ಕಟ್ಟಡದಿಂದ ಬರುವ ಬಾಡಿಗೆ ಆದಾಯದಿಂದ ಇದರ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು 10 ವರ್ಷದಲ್ಲಿ ಹಿಂಪಡೆಯಬಹುದು’ ಎಂದು ಅವರು ವಿವರಿಸಿದರು.

‘ಬಿಡಿಎ ಕೇಂದ್ರ ಕಚೇರಿ ಇರುವ ಪ್ರದೇಶದಲ್ಲಿ 2.25 ಎಫ್‌ಎಆರ್ ಬಳಸಿ ಬಹುಮಹಡಿ ಕಟ್ಟಡ ನಿರ್ಮಿಸಬಹುದು. ಅದಲ್ಲದೇ ಟಿಡಿಆರ್ ಬಳಸಿ 3.60 ಪ್ರೀಮಿಯಂ ಎಫ್‌ಎಆರ್ ಬಳಕೆಗೂ ಅವಕಾಶವಿದೆ. ಇಲ್ಲಿ 1.18 ಲಕ್ಷ ಚದರ ಅಡಿ ಜಾಗ ಲಭ್ಯ ಇದ್ದು, ಎಫ್‌ಎಆರ್ ಬಳಸಿಕೊಂಡು 4.27 ಲಕ್ಷ ಚದರ ಅಡಿ ವಿಸ್ತೀರ್ಣದ ಕಟ್ಟಡ ನಿರ್ಮಿಸಲು ಅವಕಾಶ ಇದೆ’ ಎಂದರು.

‘ಹೊಸ ಕಟ್ಟಡದಲ್ಲಿ ನೆಲದಡಿಯ ಎರಡು ಮಹಡಿಗಳನ್ನು ನಿರ್ಮಿಸಲಾಗುತ್ತದೆ. ಅಲ್ಲಿ ಬಹುಹಂತದ ವಾಹನ ನಿಲುಗಡೆ ವ್ಯವಸ್ಥೆ ಕಲ್ಪಿಸಲಿದ್ದೇವೆ. ಸುಮಾರು 800 ಕಾರುಗಳನ್ನು ನಿಲ್ಲಿಸಲು ಅಲ್ಲಿ ಸ್ಥಳಾವಕಾಶ ಲಭ್ಯವಾಗಲಿದೆ’ ಎಂದರು.

₹ 1704 ಕೋಟಿ ಮೇಲೆ ಕಣ್ಣು!

ಬಿಡಿಎ ಇತ್ತೀಚೆಗೆ ವಿವಿಧ ಬಡಾವಣೆಗಳಲ್ಲಿನ ನಿವೇಶನಗಳ ಹರಾಜು ಪ್ರಕ್ರಿಯೆಯನ್ನು ಏಳು ಹಂತಗಳಲ್ಲಿ ನಡೆಸಿದೆ. ಇದರಿಂದ ಬಿಡಿಎ ಬೊಕ್ಕಸಕ್ಕೆ ₹ 1,704 ಕೋಟಿ ವರಮಾನ ಬರಲಿದೆ. ಈ ಹಣದ ಮೇಲೆ ಕಣ್ಣಿಟ್ಟು ಈ ಭಾರಿ ಯೋಜನೆ ಕೈಗೆತ್ತಿಕೊಳ್ಳಲಾಗಿದೆ ಎಂಬ ಅನುಮಾನ ವ್ಯಕ್ತವಾಗಿದೆ.

ಸುಸ್ಥಿತಿಯಲ್ಲಿರುವ ಕಟ್ಟಡ ಕೆಡಹುವುದೇಕೆ?

‘ಭಾರಿ ಯೋಜನೆಗಳ ಹೆಸರಿನಲ್ಲಿ ಭಾರಿ ಅಕ್ರಮಗಳು ನಡೆಯುತ್ತವೆ. ಇದು ಕೂಡ ಅಂತಹದ್ದೇ ಯೋಜನೆ. ಕಡತ ದಾಸ್ತಾನು ಇಡಲು ಜಾಗ ಇಲ್ಲದಿದ್ದರೆ ಅದಕ್ಕೆ ಮಾತ್ರ ಹೊಸ ಕಟ್ಟಡ ನಿರ್ಮಿಸಬಹುದು. ಅದಕ್ಕಾಗಿ ಸುಸ್ಥಿತಿಯಲ್ಲಿರುವ ಕಟ್ಟಡವನ್ನು ಕೆಡಹುವ ಅಗತ್ಯವಿದೆಯೇ’ ಎಂದು ಬಿಡಿಎ ನಿವೃತ್ತ ಅಧಿಕಾರಿಯೊಬ್ಬರು ಪ್ರಶ್ನಿಸಿದರು.

‘ಇನ್ನೂ ಅನುಮೋದನೆ ಆಗಿಲ್ಲ’

’ಬಿಡಿಎಯ ಅಭಿವೃದ್ಧಿ ಭವನ ನಿರ್ಮಿಸುವ ಪ್ರಸ್ತಾವಕ್ಕೆ ಇನ್ನೂ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಸಿಕ್ಕಿಲ್ಲ. ಆದರೆ, ಕಚೇರಿಗಳಿಗೆ ಹಾಗೂ ದಾಖಲೆ ಪತ್ರಗಳನ್ನು ಇಡಲು ಸ್ಥಳದ ಕೊರತೆ ಇರುವುದು ನಿಜ. ಇಲ್ಲಿ ವಾಹನ ನಿಲುಗಡೆ ಸಮಸ್ಯೆಯೂ ಇದೆ. ಹೊಸ ಕಟ್ಟಡ ನಿರ್ಮಾಣದಿಂದ ಈ ಸಮಸ್ಯೆಗಳಿಗೆಲ್ಲ ಪರಿಹಾರ ಸಿಗಲಿದೆ’ ಎಂದು ಬಿಡಿಎ ಆಯುಕ್ತ ಎಂ.ಬಿ.ರಾಜೇಶ್ ಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.

ಸುದ್ದಿ 2 ನಿಮಿಷ

ರಸ್ತೆ ತೆರಿಗೆ ಪಾವತಿಗೆ 1 ತಿಂಗಳ ಕಾಲಾವಕಾಶ: ಬಿ.ಶ್ರೀರಾಮುಲು

ಬೆಂಗಳೂರು: ಸ್ಟೇಜ್ ಕ್ಯಾರೇಜ್ ಮತ್ತು ಕಾಂಟ್ರಾಕ್ಟ್ ಕ್ಯಾರೇಜ್ ವಾಹನಗಳಿಗೆ ರಸ್ತೆ ತೆರಿಗೆ ಪಾವತಿಸಲು ಒಂದು ತಿಂಗಳ ಕಾಲಾವಕಾಶ ನೀಡಿದ್ದು, ಇದೇ 15ಕ್ಕೆ ಪಾವತಿಸಬೇಕಿದ್ದ ತೆರಿಗೆ ಪಾವತಿ ಅವಧಿಯನ್ನು ಸೆಪ್ಟೆಂಬರ್ 15 ರವರೆಗೆ ವಿಸ್ತರಿಸಲಾಗಿದೆ ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ತಿಳಿಸಿದ್ದಾರೆ.

ಈ ಕುರಿತು ಗುರುವಾರ ಟ್ವೀಟ್ ಮಾಡಿರುವ ಅವರು, ಸೆ.15 ರಂದು ಪಾವತಿಸಬೇಕಿದ್ದ ರಸ್ತೆ ತೆರಿಗೆಯನ್ನು ಅಕ್ಟೋಬರ್ 15 ರವರೆಗೆ ದಂಡ ರಹಿತವಾಗಿ ಪಾವತಿಸಲು ಅವಕಾಶ ನೀಡಲಾಗಿದೆ. ಇದರಿಂದ ಸುಮಾರು 40 ಸಾವಿರ ಬಸ್ ಮಾಲೀಕರಿಗೆ ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ.

ಇತ್ತೀಚೆಗೆ ಬಸ್ ಮಾಲೀಕರು ಈ ಸಂಬಂಧ ಮನವಿ ಮಾಡಿದ್ದರು. ಇದೊಂದು ವಿಶೇಷ ಪ್ರಕರಣ ಎಂದು ಪರಿಗಣಿಸಿ ಸಾರಿಗೆ ಉದ್ದಿಮೆಯ ಹಿತದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಶ್ರೀರಾಮುಲು ತಿಳಿಸಿದ್ದಾರೆ.

ಅಂಧ ಬರಹಗಾರರಿಗೆ ಪ್ರಶಸ್ತಿ

ಬೆಂಗಳೂರು: ಅಂಧ ಬರಹಗಾರರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಪ್ರಶಸ್ತಿ ಕೊಡಿಸಲು ಸಮಾಜ ಸೇವಕ ಡಾ. ಎಚ್. ವಿಶ್ವನಾಥ್ ಅವರು ದತ್ತಿ ನಿಧಿ ಸ್ಥಾಪಿಸಿದ್ದಾರೆ ಎಂದು ಕರ್ನಾಟಕ ಅಂಧ ವಿಮೋಚನಾ ವೇದಿಕೆ ತಿಳಿಸಿದೆ.

ಪ್ರತಿ ವರ್ಷ ಈ ದತ್ತಿ ನಿಧಿಯಡಿ ₹10 ಸಾವಿರ ಮೊತ್ತದೊಂದಿಗೆ ಪ್ರಶಸ್ತಿ ನೀಡಲು ನಿರ್ಧರಿಸಿರುವುದು ಅಂಧರ ಪಾಲಿಗೆ ಬೆಳಕು ನೀಡಿದಂತೆ ಆಗಿದೆ ಎಂದು ವೇದಿಕೆ ಅಧ್ಯಕ್ಷ ಲಕ್ಷ್ಮಿನಾರಾಯಣ ನಾಗವಾರ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಭಾವಿಗಳ ನಡುವೆ ಪ್ರತಿಭಾವಂತರಿಗೆ ಪ್ರಶಸ್ತಿಗಳು ಸಿಗದಂತಾಗಿರುವ ಸಂದರ್ಭದಲ್ಲಿ ಅಂಧ ಬರಹಗಾರರಿಗಾಗಿ ಪ್ರತ್ಯೇಕ ಪ್ರಶಸ್ತಿ ಕೊಡಿಸಲು ಮುಂದಾಗಿರುವ ಎಚ್. ವಿಶ್ವನಾಥ್ ಅವರ ಕಾರ್ಯ ಶ್ಲಾಘನೀಯ ಎಂದರು.

ಕೋವಿಡ್: 48 ಗಂಟೆಗಳಲ್ಲಿ 3.55 ಲಕ್ಷ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ದಿನವೊಂದಕ್ಕೆ ನಡೆಸಲಾಗುತ್ತಿದ್ದ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಳ ಮಾಡಲಾಗಿದ್ದು, ಎರಡು ದಿನಗಳಲ್ಲಿ 3.55 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ.

1,432 ಮಂದಿ ಕೊರೊನಾ ಸೋಂಕಿತರಾಗಿರುವುದು ಗುರುವಾರ ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.34 ಲಕ್ಷ ದಾಟಿದೆ. ಒಂದು ದಿನದಲ್ಲಿ 1.76 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.80ರಷ್ಟು ವರದಿಯಾಗಿದೆ. 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 13 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಯಾದಗಿರಿ ಹಾಗೂ ಬಾಗಲಕೋಟೆಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 326, ಮೈಸೂರಿನಲ್ಲಿ 103 ಹಾಗೂ ಕೊಡಗಿನಲ್ಲಿ 72 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 318 ಹಾಗೂ ಉಡುಪಿಯಲ್ಲಿ 162 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 27 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 14 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ 7, ಮೈಸೂರಿನಲ್ಲಿ 3, ಬೆಂಗಳೂರು, ಹಾವೇರಿ, ಕೊಡಗು, ಮಂಡ್ಯ ಹಾಗೂ ಉಡುಪಿಯಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ತುಮಕೂರು ಸೇರಿದಂತೆ ಏಳು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಮರಣ ಪ್ರಮಾಣ ದರವು ಶೇ 1.88 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,088ಕ್ಕೆ ಏರಿದೆ. ಸೋಂಕಿತರಲ್ಲಿ 1,538 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 28.76 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 21,133ಕ್ಕೆ ಇಳಿಕೆಯಾಗಿದೆ.





ಕಪ್ಪು ಶಿಲೀಂಧ್ರ: ತಿಂಗಳಲ್ಲಿ 128 ಸಾವು

ಬೆಂಗಳೂರು: ತಡವಾಗಿ ರೋಗ ಪತ್ತೆ ಸೇರಿದಂತೆ ವಿವಿಧ ಕಾರಣಗಳಿಂದಾಗಿ ಕಪ್ಪು ಶಿಲೀಂಧ್ರ ಸೋಂಕಿನಿಂದ ಒಂದು ತಿಂಗಳಲ್ಲಿ 128 ಮಂದಿ ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 441ಕ್ಕೆ ಏರಿದೆ.

ರಾಜ್ಯದಲ್ಲಿ ಜು.19ರ ವೇಳೆಗೆ ಸೋಂಕಿನಿಂದ ಮೃತಪಟ್ಟವರ ಸಂಖ್ಯೆ 313ಕ್ಕೆ ತಲುಪಿತ್ತು. ಒಂದು ತಿಂಗಳಲ್ಲಿ ಸೋಂಕು ದೃಢ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿದೆ. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಮೃತಪಡುವವರ ಸಂಖ್ಯೆ ಏರಿದೆ.

ಕಳೆದ ಒಂದು ತಿಂಗಳಲ್ಲಿ 253 ಮಂದಿಗೆ ಈ ಸೋಂಕು ದೃಢಪಟ್ಟಿದ್ದು, ಸೋಂಕಿತರ ಸಂಖ್ಯೆ 3,841ಕ್ಕೆ ಏರಿದೆ. ವರದಿಯಾದ ಒಟ್ಟು ಪ್ರಕರಣಗಳಲ್ಲಿ ಶೇ 30ಕ್ಕೂ ಅಧಿಕ ಪ್ರಕರಣಗಳು ಬೆಂಗಳೂರಿನಲ್ಲಿಯೇ ದೃಢಪಟ್ಟಿವೆ. ಈವರೆಗೆ 1,212 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಅವರಲ್ಲಿ 149 ಮಂದಿ ಸಾವಿಗೀಡಾಗಿದ್ದಾರೆ.

ಧಾರವಾಡದಲ್ಲಿ 342, ವಿಜಯಪುರ 228, ಕಲಬುರ್ಗಿಯಲ್ಲಿ 213, ಬಳ್ಳಾರಿಯಲ್ಲಿ 169, ಚಿತ್ರದುರ್ಗದಲ್ಲಿ 165, ಬೆಳಗಾವಿಯಲ್ಲಿ 159, ರಾಯಚೂರಿನಲ್ಲಿ 141, ಮೈಸೂರಿನಲ್ಲಿ 132, ಬಾಗಲಕೋಟೆಯಲ್ಲಿ 131, ದಾವಣಗೆರೆಯಲ್ಲಿ 123, ಕೋಲಾರದಲ್ಲಿ 114, ಹಾಗೂ ದಕ್ಷಿಣ ಕನ್ನಡದಲ್ಲಿ 103 ದೃಢ ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100ರ ಗಡಿಯೊಳಗೆ ಇದೆ.

13 ಜಿಲ್ಲೆಗಳಲ್ಲಿ ಮರಣ ಪ್ರಕರಣಗಳ ಸಂಖ್ಯೆ ಎರಡಂಕಿಯಲ್ಲಿದೆ. ಧಾರವಾಡದಲ್ಲಿ 40, ಬಳ್ಳಾರಿಯಲ್ಲಿ 28, ದಕ್ಷಿಣ ಕನ್ನಡದಲ್ಲಿ 25, ಕಲಬುರ್ಗಿಯಲ್ಲಿ 24, ದಾವಣಗೆರೆ ಹಾಗೂ ಮೈಸೂರಿನಲ್ಲಿ ತಲಾ 20, ಶಿವಮೊಗ್ಗದಲ್ಲಿ 15, ಬಾಗಲಕೋಟೆಯಲ್ಲಿ 13, ರಾಯಚೂರಿನಲ್ಲಿ 12, ಕೋಲಾರ, ಹಾಸನ ಹಾಗೂ ಚಿಕ್ಕಬಳ್ಳಾಪುರದಲ್ಲಿ ತಲಾ 11 ಹಾಗೂ ಗದಗದಲ್ಲಿ 10 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆಯಿದೆ.

‘ಸೋಂಕಿತರಲ್ಲಿ ಕೆಲವರು ತಡವಾಗಿ ಆಸ್ಪತ್ರೆಗೆ ತೆರಳುತ್ತಿರುವುದರಿಂದ ಜೀವಕ್ಕೆ ಅಪಾಯವಾಗುತ್ತಿದೆ. ಕೋವಿಡ್ ಪ್ರಕರಣಗಳು ನಿಯಂತ್ರಣಕ್ಕೆ ಬಂದಲ್ಲಿ ಈ ಪ್ರಕರಣಗಳು ಕಡಿಮೆ ಆಗಲಿವೆ’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಚಿಕ್ಕನೆಕ್ಕುಂದಿ ಗ್ರಾಮದ ಬಳಿ ಅಭಿವೃದ್ಧಿಪಡಿಸಿದ್ದ ನಿವೇಶನದಲ್ಲಿ ರಸ್ತೆ ನಾಶಪಡಿಸಿದ ಜಿಲ್ಲಾಡಳಿತ

ಅಕ್ರಮ ಬಡಾವಣೆ ತೆರವು

ಬೆಂಗಳೂರು: ವರ್ತೂರು ಬಳಿಯ ಚಿಕ್ಕನೆಕ್ಕುಂದಿ ಗ್ರಾಮ ವ್ಯಾಪ್ತಿಯಲ್ಲಿ ಅಕ್ರಮವಾಗಿ ಅಭಿವೃದ್ಧಿಪಡಿಸಿದ್ದ ವಸತಿ ಬಡಾವಣೆಯನ್ನು ಜಿಲ್ಲಾಡಳಿತ ತೆರವುಗೊಳಿಸಿದೆ.

ಜಿಲ್ಲಾಧಿಕಾರಿ ಜೆ.ಮಂಜುನಾಥ್ ಮಾರ್ಗದರ್ಶನದಂತೆ ಆನೇಕಲ್ ತಹಶೀಲ್ದಾರ್ ಪಿ.ದಿನೇಶ್ ಮತ್ತು ಉಪತಹಶೀಲ್ದಾರ ಮಹೇಶ್ ಕಾರ್ಯಾಚರಣೆ ನಡೆಸಿ ಬಡಾವಣೆಯರಸ್ತೆ, ಚರಂಡಿ, ಸೇತುವೆ ನಾಶಪಡಿಸಿದರು.

ಚಿಕ್ಕನೆಕ್ಕುಂದಿ ಗ್ರಾಮದ ಸರ್ವೆ ನಂಬರ್ 25 ಮತ್ತು 26ರಲ್ಲಿ ಇದ್ದ ಕೃಷಿ ಭೂಮಿಯನ್ನು ವಸತಿ ಉದ್ದೇಶಕ್ಕೆ ಬಳಸಲು ಭೂ ಪರಿವರ್ತನೆ ಮಾಡಿಸಿರಲಿಲ್ಲ. ಬಡಾವಣೆ ಅಭಿವೃದ್ಧಿಪಡಿಸಲು ಜಿಲ್ಲಾಡಳಿತದ ಅನುಮತಿ ಕೂಡಾ ಪಡೆದಿರಲಿಲ್ಲ. ಹಸಿರು ವಲಯ ಎಂಬ ಕಾರಣಕ್ಕೆ ಅನುಮತಿ ಕೋರಿದ್ದ ಅರ್ಜಿಯನ್ನು ಜಿಲ್ಲಾಡಳಿತ ತಿರಸ್ಕರಿಸಿತ್ತು.

ಆದರೂ, ಈ ಜಾಗದಲ್ಲಿ 120 ನಿವೇಶನ ಅಭಿವೃದ್ಧಿಪಡಿಸಿ ಮಾರಾಟ ಮಾಡಲಾಗಿದೆ. ನಿವೇಶನ ಖರೀದಿಸಿದವರು ಕಂದಾಯ ಇಲಾಖೆ ಅಥವಾ ಪೊಲೀಸ್ ಠಾಣೆಗೆ ದೂರು ನೀಡಿದರೆ ನ್ಯಾಯ ಒದಗಿಸಲು ಪ್ರಯತ್ನಿಸಲಾಗುವುದು ಎಂದು ತಹಶೀಲ್ದಾರ್ ಪಿ. ದಿನೇಶ್ ಹೇಳಿದರು.

ನಿವೇಶನ ಖರೀದಿ ಮಾಡಲು ಮುಂದಾಗಿದ್ದ ಖಾಸಗಿ ಕಂಪನಿಯ ಉದ್ಯೋಗಿಯೊಬ್ಬರು ಜಿಲ್ಲಾಧಿಕಾರಿ ಅವರನ್ನು ಸಂಪರ್ಕಿಸಿ ದಾಖಲೆ ಹಾಜರುಪಡಿಸಿದ್ದರು. ಅನುಮತಿ ಪಡೆಯದೆ ನಿವೇಶನ ಅಭಿವೃದ್ಧಿಪಡಿಸಿ ಮಾರಾಟ ಮಾಡಲಾಗುತ್ತಿದೆ ಎಂಬುದು ಇದರಿಂದ ಬೆಳಕಿಗೆ ಬಂದಿದೆ ಎಂದು ಅಧಿಕಾರಿಗಳು ವಿವರಿಸಿದರು.

ರಾಮಯ್ಯ ಶಿಕ್ಷಣ ಸಂಸ್ಥೆ:‘ಸ್ಟಾರ್ ಸ್ಟಾರ್ಟ್‌ಅಪ್ಸ್’ ಪ್ರಶಸ್ತಿ ಪ್ರದಾನ

ನವೋದ್ಯಮಗಳಿಗೆ ₹50 ಲಕ್ಷ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಯ್ಯ ಸಮೂಹ ಶಿಕ್ಷಣ ಸಂಸ್ಥೆಯು ನವೋದ್ಯಮಿಗಳನ್ನು ಪ್ರೋತ್ಸಾಹಿಸಲು ವಿಕಸನ ಕೇಂದ್ರ (ಎವಲ್ಯೂಟ್) ಆರಂಭಿಸಿದ್ದು, 24 ನವೋದ್ಯಮಗಳಿಗೆ ತಲಾ ₹50 ಲಕ್ಷದವರೆಗೆ ನೆರವು ನೀಡಲಿದೆ. ಅಲ್ಲದೆ, ಇದೇ 23ರಂದು ಈ ನವೋದ್ಯಮಗಳಿಗೆ ‘ಸ್ಟಾರ್ ಸ್ಟಾರ್ಟ್‌ಅಪ್’ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಿದೆ.

‘ಭವಿಷ್ಯದ ನವೋದ್ಯಮಿಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಉದ್ದೇಶದಿಂದ ವಿಕಸನ ಕೇಂದ್ರ ರಚಿಸಲಾಗಿದೆ. ಆಯ್ಕೆಯಾದ ನವೋದ್ಯಮದ ಸಮಗ್ರ ರೀತಿಯ ಅಭಿವೃದ್ಧಿಗೆ ₹50 ಲಕ್ಷದವರೆಗೆ ಧನಸಹಾಯ ಹಾಗೂ ಇತರೆ ತಾಂತ್ರಿಕ ಮಾರ್ಗದರ್ಶನ ಮತ್ತು ಸಲಹೆ ನೀಡಲಾಗುವುದು’ ಎಂದು ರಾಮಯ್ಯ ಸಮೂಹ ಸಂಸ್ಥೆಯ ಉಪಾಧ್ಯಕ್ಷ ಎಂ.ಆರ್. ಸೀತಾರಾಂ ಗುರುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಸೀತಾರಾಮ್

‘ಉದ್ಯಮ ಚಿಂತನೆ ಹೊಂದಿರುವ ಭವಿಷ್ಯದ ನವೋದ್ಯಮಿಗಳಿಂದ ಮೇ–ಜೂನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿತ್ತು. ದೇಶದಾದ್ಯಂತ 160ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದವು. ಈ ಎಲ್ಲ ಅರ್ಜಿಗಳನ್ನು ಉನ್ನತ ಮಟ್ಟದ ಉದ್ಯಮಿಗಳನ್ನೊಳಗೊಂಡ ತೀರ್ಪುಗಾರರ ತಂಡ ಪರಿಶೀಲಿಸಿತ್ತು. ಅಂತಿಮವಾಗಿ 24 ನವೋದ್ಯಮಿಗಳನ್ನು ಆಯ್ಕೆ ಮಾಡಲಾಗಿದೆ’ ಎಂದರು.

‘ದೇಶದ 24 ನವೋದ್ಯಮಿಗಳ ಪೈಕಿ, 16 ಉದ್ಯಮಿಗಳು ರಾಜ್ಯದವರೇ ಇದ್ದಾರೆ. ಎಂ.ಎಸ್. ರಾಮಯ್ಯ ಕಾಲೇಜಿನ ನಾಲ್ವರು ವಿದ್ಯಾರ್ಥಿಗಳೂ ಇದರಲ್ಲಿದ್ದಾರೆ’ ಎಂದು ಹೇಳಿದರು.

ವಿಕಸನ ಕೇಂದ್ರದ ಸಲಹೆಗಾರ ಸಮರ್ಥ ನಾಗಭೂಷಣಂ, ‘ಮಾರ್ಚ್‌ನಿಂದ ವಿಕಸನ ಕೇಂದ್ರ ಕಾರ್ಯಾರಂಭ ಮಾಡಿತು. ನವೋದ್ಯಮ ಆರಂಭಿಸುವವರಿಗೆ ಎಲ್ಲ ರೀತಿಯ ಸಲಹೆ ಮತ್ತು ಮಾರ್ಗದರ್ಶನದ ಜತೆಗೆ ಆರ್ಥಿಕ ಸಹಾಯವನ್ನು ನೀಡುವ ಉದ್ದೇಶವನ್ನು ಕೇಂದ್ರ ಹೊಂದಿದೆ. ಈ ನಿಟ್ಟಿನಲ್ಲಿ, ಆಯ್ದ 24 ನವೋದ್ಯಮಗಳಿಗೆ ಪ್ರಶಸ್ತಿಯನ್ನು ನೀಡಲಾಗಿದೆ. ಈ ಕಂಪನಿಗಳ ಅಭಿವೃದ್ಧಿಗೆ ಎಲ್ಲ ಸಹಕಾರ ನೀಡಲಾಗುವುದು. ಈ ಪ್ರಕ್ರಿಯೆ ಪ್ರತಿ ವರ್ಷವೂ ನಡೆಯಲಿದೆ’ ಎಂದರು.

ಕೇಂದ್ರದ ಮುಖ್ಯಕಾರ್ಯನಿರ್ವಹಣಾಧಿಕಾರಿ ಮುರಳೀಕೃಷ್ಣನ್ ಗೋಪಾಲಕೃಷ್ಣನ್ ಇದ್ದರು.

ಈ ಪ್ರಶಸ್ತಿ ಪ್ರದಾನ ಸಮಾರಂಭವು ಸೋಮವಾರ ಬೆಳಿಗ್ಗೆ 11.30ಕ್ಕೆ ರಾಮಯ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಲಿದೆ.

ಉಪಕರಣ ಹಸ್ತಾಂತರ

ರೌಂಡ್ ಟೇಬಲ್ ಇಂಡಿಯಾ ಮತ್ತು ಲೇಡಿ ಸರ್ಕಲ್ ಇಂಡಿಯಾ ಸಹಯೋಗದಲ್ಲಿ ಅದಮಾಸ್ ಬಿಲ್ಡರ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ₹ 15 ಲಕ್ಷ ಮೌಲ್ಯದ ವೈದ್ಯಕೀಯ ಉಪಕರಣಗಳನ್ನು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರಿಗೆ ಹಸ್ತಾಂತರಿಸಿತು. ಕಂಪನಿಯ ಪ್ರತಿನಿಧಿಗಳು ಇದ್ದರು.

‘ಕೋವಿಡ್: ಮೃತರ ಸಂಖ್ಯೆ ಮರೆಮಾಚುತ್ತಿರುವ ಸರ್ಕಾರ’

ಬೆಂಗಳೂರು: ‘ರಾಜ್ಯ ಸರ್ಕಾರವು ಕೋವಿಡ್ ಮೊದಲ ಹಾಗೂ ಎರಡನೇ ಅಲೆಯ ವೇಳೆ ಸೋಂಕಿತರಿಗೆ ಹಾಸಿಗೆ ಮತ್ತು ಆಮ್ಲಜನಕ ವ್ಯವಸ್ಥೆ ಕಲ್ಪಿಸಲು ನಿರ್ಲಕ್ಷಿಸಿತು. ಇದರಿಂದ ಅನೇಕರು ಪ್ರಾಣ ಕಳೆದುಕೊಂಡರು. ಹಾಗೆ ಸತ್ತವರ ನಿಖರ ಸಂಖ್ಯೆಯನ್ನು ಸರ್ಕಾರ ಮರೆಮಾಚುತ್ತಿದೆ’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ.ಸದಂ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು ‘ಆರೋಗ್ಯ ಇಲಾಖೆಯ ಕೋವಿಡ್ ಬುಲೆಟಿನ್ ಪ್ರಕಾರ ಆಗಸ್ಟ್ 2ರವರೆಗೆ ರಾಜ್ಯದಲ್ಲಿ 36 ಸಾವಿರ ಜನ ಮೃತಪಟ್ಟಿದ್ದಾರೆ. ಇಲಾಖೆಯು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಸಲ್ಲಿಸಿರುವ ವರದಿಯಲ್ಲಿ ಕೇವಲ 14,371 ಮಂದಿ ಸಾವಿಗೀಡಾಗಿರುವುದಾಗಿ ತಿಳಿಸಲಾಗಿದೆ. ಇಲಾಖೆ ನೀಡಿರುವ ವ್ಯತಿರಿಕ್ತ ಅಂಕಿ ಅಂಶಗಳನ್ನು ಗಮನಿಸಿದರೆ ರಾಜ್ಯ ಸರ್ಕಾರ ಸುಳ್ಳು ಹೇಳುತ್ತಿರುವುದು ಸ್ಪಷ್ಟವಾಗುತ್ತದೆ.’ ಎಂದರು.

‘ಕೋವಿಡ್‌ನಿಂದಾಗಿ ಜನ ಬೀದಿಗಳಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದಾಗ ನೆರವಿಗೆ ಬಾರದ ಬಿಜೆಪಿ ನಾಯಕರು ಈಗ ಜನಾಶೀರ್ವಾದ ಯಾತ್ರೆಯ ನೆಪದಲ್ಲಿ ಸುಳ್ಳುಗಳನ್ನೇ ಪ್ರಚಾರ ಮಾಡುತ್ತಿದ್ದಾರೆ. ಅದರ ಬದಲು ಹೆಣಾಶೀರ್ವಾದದ ಹೆಸರಿನಲ್ಲಿ ಸ್ಮಶಾನಕ್ಕೆ ಹೋಗಿ, ಕೋವಿಡ್ ಮೃತರ ಎಷ್ಟು ಶವಗಳು ಅಲ್ಲಿಗೆ ಬಂದಿವೆ ಎಂದು ವಿಚಾರಿಸಲಿ’ ಎಂದು ಹೇಳಿದರು.

ಆಮ್ ಆದ್ಮಿ ಪಕ್ಷದ ಕಚೇರಿ ಕಾರ್ಯದರ್ಶಿ ವೀಣಾ ಸೆರಾವ್ ಇದ್ದರು.

‘ಕರ್ನಾಟಕ ಸರ್ಕಾರದ ಕನ್ನಡ ಕಾಯಕ’ ಕೃತಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲೋಕಾರ್ಪಣೆ ಮಾಡಿದರು. ದೊಡ್ಡರಂಗೇಗೌಡ,, ಕೋಟ ಶ್ರೀನಿವಾಸ ಪೂಜಾರಿ, ರಾ.ನಂ.ಚಂದ್ರಶೇಖರ್, ಟಿ.ಎಸ್‌.ನಾಗಾಭರಣ ಇದ್ದರು.

ಅನ್ಯ ಭಾಷಿಕರಿಗೆ ಕನ್ನಡ ಕಲಿಸಿ: ಸಿ.ಎಂ ಸಲಹೆ

ಬೆಂಗಳೂರು: ‘ಅನ್ಯ ಭಾಷಿಕರಿಗೆ ಕನ್ನಡ ಭಾಷೆ ಕಲಿಸಲು ಕಾರ್ಯಕ್ರಮ ರೂಪಿಸಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ‘ಕರ್ನಾಟಕ ಸರ್ಕಾರದ ಕನ್ನಡ ಕಾಯಕ’ ಕೃತಿಯನ್ನು ಗೃಹ ಕಚೇರಿ ‘ಕೃಷ್ಣಾ’ದಲ್ಲಿ ಗುರುವಾರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ‘ಕನ್ನಡಿಗರು ಇತರ ರಾಜ್ಯಗಳಿಗೆ ಹೋದಾಗ ಅಲ್ಲಿನ ಭಾಷೆ ಕಲಿಯುತ್ತಾರೆ. ಅದೇ ರೀತಿ, ಬೆಂಗಳೂರಿನಲ್ಲಿರುವ ಕನ್ನಡೇತರರೂ ಕನ್ನಡ ಕಲಿಯುವಂತೆ ಆಗಬೇಕು’ ಎಂದರು.

‘1983ರಲ್ಲಿ ಕನ್ನಡ ಕಾವಲು ಸಮಿತಿ ಎಂಬ ಹೆಸರಿನಲ್ಲಿ ಆರಂಭವಾದ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದೆ. ಕನ್ನಡ ಭಾಷೆ ಕುರಿತಂತೆ ಇತರ ಸಂಸ್ಥೆಗಳ ಸಹಯೋಗದಿಂದ ವಿವಿಧ ಕಾರ್ಯಕ್ರಮಗಳನ್ನು ಪ್ರಾಧಿಕಾರ ರೂಪಿಸಬೇಕು’ ಎಂದು ಮುಖ್ಯಮಂತ್ರಿ ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಕುರಿತು ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಮಾಹಿತಿ ನೀಡಿದರು. ಸಾಹಿತಿಗಳಾದ ದೊಡ್ಡರಂಗೇಗೌಡ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಇದ್ದರು.

ಇದೇ 21ರಂದು ಚಿತ್ರಕಲಾ ಪರಿಷತ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಿಗದಿ

ಶ್ರೇಯಸ್‌ಗೆ ‘ಹನುಮಂತರಾವ್ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೂತ್ ಫೋಟೊಗ್ರಾಫಿಕ್ ಸೊಸೈಟಿ (ವೈಪಿಎಸ್) ನೀಡುವ ‘ಇ. ಹನುಮಂತರಾವ್ ಪ್ರಶಸ್ತಿ’ಗೆ ಶ್ರೇಯಸ್ ರಾವ್ ಪಾತ್ರರಾಗಿದ್ದಾರೆ.

ಹಿಮಾದ್ರಿ ಭುವನ್ (ಡಾ. ಜಿ.ಥಾಮಸ್ ಪ್ರಶಸ್ತಿ), ಪ್ರಸೆನ್‌ಜಿತ್ ದಾಸ್ (ಚಕ್ರವರ್ತಿ ರಾಜಗೋಪಾಲ್), ವಿನ್ಯಾಸ ಉಬರಡ್ಕ (ಪಿ.ಎನ್.ಎ.ಪೆರುಮಾಳ್), ದ್ವಿಪರ್ಣಕುಮಾರ್ ದತ್ತ (ಎಂ.ವೈ.ಘೋರ್ಪಡೆ), ಡಾ.ಅಜಿತ್ ಹುಯಿಲಗೋಳ (ಬಿ.ಎನ್.ಎಸ್. ದೇವ್), ಜಯೇಂದ್ರ ಬಿ.ಕಾಮ್ದಾರ್ (ಓ.ಸಿ.ಎಡ್ವರ್ಡ್), ಮುಖೇಶ್ ಶ್ರೀವಾತ್ಸವ (ಡಾ.ಡಿ.ವಿ.ರಾವ್) ಹಾಗೂ ಅರ್ಪಣ್ ಕಲಿತ (ಎಸ್.ಜಿ.ನೇಗಿಹಾಳ್) ಅವರು ಸ್ವರ್ಣ ಮಹೋತ್ಸವ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ವೈಪಿಎಸ್, ಪ್ರತಿವರ್ಷದಂತೆ ಈ ಬಾರಿಯೂ ಅಖಿಲ ಭಾರತ ಮಟ್ಟದ ಸಲಾನ್ ಛಾಯಾಚಿತ್ರ ಸ್ಪರ್ಧೆ ಏರ್ಪಡಿಸಿತ್ತು. ಫೆಡರೇಷನ್ ಆಫ್ ಇಂಡಿಯನ್ ಫೋಟೊಗ್ರಫಿ (ಎಫ್ಐಪಿ) ಸಹಯೋಗದೊಂದಿಗೆ ಡಿಜಿಟಲ್ ವೇದಿಕೆಯಲ್ಲಿ ಒಟ್ಟು ನಾಲ್ಕು (ವರ್ಣ, ಕಪ್ಪು ಬಿಳುಪು, ಪ್ರಕೃತಿ–ವನ್ಯಜೀವಿ ಹಾಗೂ ಪ್ರವಾಸಿ) ವಿಭಾಗಗಳಲ್ಲಿ ಸ್ಪರ್ಧೆ ಆಯೋಜಿಸಿತ್ತು. ಇದರಲ್ಲಿ ದಾಖಲೆಯ 1,107 ಛಾಯಾಗ್ರಹಕರು ಪಾಲ್ಗೊಂಡಿದ್ದರು.

ದ್ವಿಪರ್ಣಕುಮಾರ್ ದತ್ತ ಸೆರೆಹಿಡಿದಿರುವ ಚಿತ್ರ

ಕಪ್ಪು ಬಿಳುಪು ವಿಭಾಗದಲ್ಲಿ ಹೌರಾದ ದೇವರ್ಗ್ ಮುಖರ್ಜಿ ಮತ್ತು ಕೋಲ್ಕತ್ತದ ಲಿಪಿ ದಾಸ್ ಅವರು ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನಗಳನ್ನು ಪಡೆದಿದ್ದಾರೆ. ವರ್ಣ ವಿಭಾಗದಲ್ಲಿ ಗುವಾಹಟಿಯ ಹಿಮಾದ್ರಿ ಭುವನ್ ವಿಜೇತರಾದರೆ, ಕೋಲ್ಕತ್ತದ ಸೋಮನಾಥ ಪಾಲ್ ಅವರು ರನ್ನರ್ ಅಪ್ ಆಗಿದ್ದಾರೆ.

ಪ್ರಕೃತಿ ಹಾಗೂ ವನ್ಯಜೀವಿ ವಿಭಾಗದ ಪ್ರಶಸ್ತಿ ಪಶ್ಚಿಮ ಬಂಗಾಳದ ಪದ್ಮನವಸಂತ್ರ ಹಸ್ನಾಬಾದ್ ಅವರ ಪಾಲಾಗಿದೆ. ಮುಂಬೈನ ರಾವಲನಾಥ್ ಜೋಶಿ ಎರಡನೇ ಬಹುಮಾನ ಗಳಿಸಿದ್ದಾರೆ.

ಪ್ರವಾಸಿ ವಿಭಾಗದಲ್ಲಿ ಬೆಂಗಳೂರಿನ ಧೀರಜ್ ರಾಜ್‌ಪಾಲ್ ಮತ್ತು ದೇವರಾಜ್ ಚಕ್ರವರ್ತಿ ಅವರು ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಪಡೆದಿದ್ದಾರೆ. ಅತ್ಯುತ್ತಮ ಪ್ರದರ್ಶಕ ಪ್ರಶಸ್ತಿಯು ಹಿಮಾದ್ರಿ ಭುವನ್ ಪಾಲಾಗಿದೆ. ಫೋಟೊಗ್ರಫಿ ಕ್ಲಬ್ ಆಫ್ ಅಸ್ಸಾಂ, ಅತ್ಯುತ್ತಮ ಛಾಯಾಚಿತ್ರ ಕೂಟ ಬಹುಮಾನಕ್ಕೆ ಪಾತ್ರವಾಗಿ.

ಬೆಂಗಳೂರಿನ ಯುಕ್ತಿ ಪದ್ಮಾಕರ್ (ಕಪ್ಪು ಬಿಳುಪು), ವಿ.ಶಾರಿಕಾ (ಪ್ರಕೃತಿ) ಹಾಗೂ ಮೂಡುಬಿದಿರೆಯ ಪರಮ್ ಜೈನ್ (ವರ್ಣ, ಪ್ರವಾಸಿ) ಯುವ ಪ್ರತಿಭಾ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಇದೇ 21ರಂದು ಚಿತ್ರಕಲಾ ಪರಿಷತ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಿಗದಿಯಾಗಿದೆ. ಅದೇ ದಿನ ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ ಸಿಗಲಿದೆ.

21ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ವೈದ್ಯಕೀಯ ಘಟಕವು ಬಸವನಗುಡಿ ವಿಧಾನಸಭಾ ಕ್ಷೇತ್ರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಂಡಿದೆ.

‘ಇದೇ 21ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 2 ಗಂಟೆವರೆಗೂ ನಡೆಯುವ ಈ ಶಿಬಿರದಲ್ಲಿ ಬನ್ನೇರುಘಟ್ಟ ರಸ್ತೆಯಲ್ಲಿರುವ ಅಪೋಲೊ ಆಸ್ಪತ್ರೆ ಹಾಗೂ ಜೆ.ಪಿ ನಗರದ ಶೇಖರ್ ನೇತ್ರಾಲಯದ ಹಿರಿಯ ವೈದ್ಯರು ಭಾಗವಹಿಸಲಿದ್ದಾರೆ’ ಎಂದು ವೈದ್ಯಕೀಯ ಘಟಕದ ಪ್ರಧಾನ ಕಾರ್ಯದರ್ಶಿ ಡಾ.ಶಂಕರ ದ್ವಾರಕನಾಥ್ ಬೆಳ್ಳೂರ್ ತಿಳಿಸಿದ್ದಾರೆ.

ಬನಶಂಕರಿ 1ನೇ ಹಂತದಲ್ಲಿರುವ ಬ್ಯಾಂಕ್ ಕಾಲೊನಿ ಬಸ್‌ನಿಲ್ದಾಣದ ಹಿಂಭಾಗದಲ್ಲಿರುವ ಕೆಪಿಸಿಸಿ ಬೆಂಗಳೂರು ದಕ್ಷಿಣ ವಿಭಾಗದ ವೈದ್ಯಕೀಯ ಘಟಕದ ಕಚೇರಿ ಆವರಣದಲ್ಲಿ ಶಿಬಿರ ನಡೆಯಲಿದೆ.

ಹೆಸರು ನೋಂದಾಯಿಸಲು 96068 09309ಗೆ ಕರೆ ಮಾಡಬಹುದು.

‘ಇಂಟರ್‌ನೆಟ್ ಸೇವೆ ಬಲಪಡಿಸಲು ಆದ್ಯತೆ’

ಪ್ರಜಾವಾಣಿ ವಾರ್ತೆ

ರಾಜೀವ್ ಚಂದ್ರಶೇಖರ್

ಬೆಂಗಳೂರು: ‘ಭಾರತ ಮತ್ತು ವಿದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ತಂತ್ರಜ್ಞಾನ ವಲಯದ ಬಹುತೇಕ ಕಂಪನಿಗಳು ‘ವರ್ಕ್ ಫ್ರಮ್ ಹೋಂ’ನತ್ತ ಒಲವು ತೋರುತ್ತಿವೆ. ಹೀಗಾಗಿ ಕರ್ನಾಟಕದ ಎರಡನೇ ಹಂತದ 2 ನಗರಗಳಲ್ಲಿ ಇಂಟರ್‌ನೆಟ್ ಸೇವೆ ಬಲಪಡಿಸಲು ಹೆಚ್ಚಿನ ಒತ್ತು ನೀಡಲಾಗುತ್ತದೆ’ ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ, ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ ಖಾತೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಇಲ್ಲಿ ಮಾತನಾಡಿದ ಅವರು ‘ಮುಂದಿನ ದಿನಗಳಲ್ಲಿ ಎರಡನೇ ಹಂತದ 2 ನಗರಗಳಲ್ಲಿ ವರ್ಚುವಲ್ ಐಟಿ ಪಾರ್ಕ್‌ಗಳನ್ನು ಸ್ಥಾಪಿಸಿದರೆ ಹೆಚ್ಚು ಅನುಕೂಲ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಇದನ್ನು ಗಮನದಲ್ಲಿಟ್ಟುಕೊಂಡು ಎಲ್ಲ ನಗರಗಳಲ್ಲಿ ಇಂಟರ್‌ನೆಟ್ ಸಂಪರ್ಕ ಬಲಪಡಿಸುವುದು ಹಾಗೂ ಇಂಟರ್‌ನೆಟ್ ಸ್ಟೋರೇಜ್ (ಕ್ಲೌಡ್ ಸ್ಟೋರೇಜ್) ಸಾಮರ್ಥ್ಯ ಹೆಚ್ಚಿಸುವುದಕ್ಕೆ ಒತ್ತು ನೀಡಲಾಗುತ್ತದೆ’ ಎಂದರು.

‘ದೇಶದ ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸಿ, ಆ ಮೂಲಕ 6 ಲಕ್ಷಕ್ಕೂ ಅಧಿಕ ಹಳ್ಳಿಗಳಿಗೆ ವೈಫೈ ಸೇವೆ ಒದಗಿಸಬೇಕೆಂಬ ಕನಸಿನೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಕೋವಿಡ್ ಪೂರ್ವದಲ್ಲೇ ‘ಭಾರತ್‌ನೆಟ್’ಗೆ ಚಾಲನೆ ನೀಡಿದ್ದರು. ಇದು ದೂರದೃಷ್ಟಿಯ ಯೋಜನೆ. ಕೋವಿಡ್ ನಂತರದ ಕಾಲದಲ್ಲಿ ಇಂಟರ್‌ನೆಟ್ ಸೌಕರ್ಯ ತೀರಾ ಅಗತ್ಯ. ಹೀಗಾಗಿಯೇ ನಮ್ಮ ಸಚಿವಾಲಯವು ಪ್ರತಿ ಜಿಲ್ಲೆಯ ಒಂದು ಹಳ್ಳಿಯಂತೆ ಒಟ್ಟು 5 ಸಾವಿರ ಹಳ್ಳಿಗಳಿಗೆ ಇಂಟರ್‌ನೆಟ್ ಸೌಕರ್ಯ ಒದಗಿಸಲು ಮುಂದಾಗಿದೆ’ ಎಂದು ತಿಳಿಸಿದರು.

‘ಕಳೆದ ಐದು ವರ್ಷಗಳಲ್ಲಿ ಕೌಶಲ ಭಾರತ ಮಿಷನ್ ಅಡಿಯಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ 800ಕ್ಕೂ ಅಧಿಕ ಪ್ರಧಾನಮಂತ್ರಿ ಕೌಶಲ ಕೇಂದ್ರಗಳನ್ನು ಆರಂಭಿಸಲಾಗಿದೆ. 20 ಸಾವಿರಕ್ಕೂ ಹೆಚ್ಚು ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. 14 ಸಾವಿರ ಐಟಿಐ, ಸುಮಾರು 2 ಸಾವಿರ ಜನಶಿಕ್ಷಣ ಸಂಸ್ಥಾನಗಳನ್ನು ಸ್ಥಾಪಿಸಿ 2 ಕೋಟಿಗೂ ಅಧಿಕ ಜನರಿಗೆ ಕೌಶಲ ತರಬೇತಿ ನೀಡಲಾಗಿದೆ’ ಎಂದು ಹೇಳಿದರು.

‘ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲೂ ಕೌಶಲ ತರಬೇತಿಗೆ ಒತ್ತು ನೀಡಲಾಗಿದೆ. ಆರ್ಥಿಕ ತೊಂದರೆ ಹಾಗೂ ಇನ್ನಿತರ ಕಾರಣಗಳಿಂದಾಗಿ ಉನ್ನತ ವ್ಯಾಸಂಗ ಮಾಡಲು ಆಗದಿರುವವರು ಕೌಶಲ ತರಬೇತಿ ಪಡೆದು ಬದುಕು ರೂಪಿಸಿಕೊಳ್ಳಲು ಅವಕಾಶ ವಿದೆ. ಡಿಜಿಟಲ್ ಅವಕಾಶಗಳು ಕೆಲವೇ ನಗರಗಳಿಗೆ ಸೀಮಿತವಾಗಬಾರದು. ಅದು ಆರ್ಥಿಕತೆಗೆ ಮಾರಕ’ ಎಂದರು.

ಸಚಿವ ಆರ್.ಅಶೋಕ, ಸಂಸದ ಪಿ.ಸಿ.ಮೋಹನ್ ಇದ್ದರು.

ಪ್ರಶಸ್ತಿ ಪ್ರದಾನ..

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿನಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ‘ಕನ್ನಡ ಚಳವಳಿ ವೀರಸೇನಾನಿ ಮ. ರಾಮಮೂರ್ತಿ ದತ್ತಿ ಪ್ರಶಸ್ತಿ’ಯನ್ನು ಕನ್ನಡಪರ ಹೋರಾಟಗಾರ ಚಂದ್ರಕಾಂತ ಬೆಲ್ಲದ ಅವರಿಗೆ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಪ್ರದಾನ ಮಾಡಿದರು. ಗೌರವ ಕಾರ್ಯದರ್ಶಿ ಕೆ. ರಾಜಕುಮಾರ್ ಇದ್ದರು. ಈ ಪ್ರಶಸ್ತಿ ₹ 25 ಸಾವಿರ ನಗದು ಒಳಗೊಂಡಿದೆ.

‘28 ಸಾವಿರ ಕೆರೆ ಅಭಿವೃದ್ಧಿ’



ಕೆ.ಎಸ್.ಈಶ್ವರಪ್ಪ

ಬೆಂಗಳೂರು: ‘ಗ್ರಾಮೀಣ ಭಾಗದ 28 ಸಾವಿರ ಕೆರೆಗಳನ್ನು ಆಯಾ ಗ್ರಾಮ ಪಂಚಾಯಿತಿ ವತಿಯಿಂದಲೇ ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವ ಕೆ.ಎಸ್.ಈಶ್ವರಪ್ಪ ತಿಳಿಸಿದ್ದಾರೆ.

ಇಲಾಖೆಯ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯನ್ನು ಗುರುವಾರ ನಡೆಸಿದ ಬಳಿಕ ‘ಪ್ರಜಾವಾಣಿ’ ಜತೆ ಮಾತನಾಡಿದ ಅವರು ಈ ವಿಷಯ ತಿಳಿಸಿದರು.

ಹಿಂದೆ ಜಿಲ್ಲಾ ಪಂಚಾಯಿತಿಗಳಿಗೆ ಕೆರೆಗಳ ಅಭಿವೃದ್ಧಿ ಕಾರ್ಯ ವಹಿಸಲಾಗಿತ್ತು. ಈಗ ಗ್ರಾಮ ಪಂಚಾಯಿತಿ ಮೂಲಕ ಅಭಿವೃದ್ಧಿ ಪಡಿಸಲಿದ್ದು, ಕೆರೆಗಳನ್ನು ವಹಿಸಲಾಗುವುದು.ಅಭಿವೃದ್ಧಿಕಾರ್ಯಕ್ಕೆ ಗುರಿ ನಿಗದಿ ಮಾಡಲಾಗಿದೆ ಎಂದೂ ಹೇಳಿದರು.

ಇದಲ್ಲದೇ ಕೆರೆ–ಕಲ್ಯಾಣಿಗಳ ಅಭಿವೃದ್ಧಿ, ಬದು ನಿರ್ಮಾಣ ಕಾರ್ಯಗಳನ್ನೂ ಕೈಗೆತ್ತಿಕೊಳ್ಳಲಾಗಿದೆ. 5 ಎಕರೆ ಒಳಗಿನ ಖಾಸಗಿ ಜಮೀನಿನಲ್ಲಿ ಕೆರೆಗಳ ಅಭಿವೃದ್ಧಿಯಿಂದ ತೋಟಗಾರಿಕೆ ಬೆಳೆ ಕೃಷಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಮನೆ– ಮನೆಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸುವ ಯೋಜನೆಯ (ಮನೆ ಮನೆಗೆ ಗಂಗೆ) ಕೆಲಸ ಭರದಿಂದ ಸಾಗುತ್ತಿದೆ. ಇದರ ಪ್ರಗತಿಯ ಪರಿಶೀಲನೆ ಬಗ್ಗೆ ಆಗಸ್ಟ್ 30– 31 ರಂದು ಬೆಳಗಾವಿಯಲ್ಲಿ ಎಂಜಿನಿಯರ್‌ಗಳು, ಗುತ್ತಿಗೆದಾರರು ಮತ್ತು ಅಧಿಕಾರಿಗಳ ಸಭೆ ಕರೆಯಲಾಗಿದೆ.

ಸರ್ಕಾರ ನೀಡಿರುವ ಗುರಿಯನ್ನು ಎಷ್ಟರ ಮಟ್ಟಿಗೆ ತಲುಪಲಾಗಿದೆ ಎಂಬ ಬಗ್ಗೆ ಆ ಸಭೆಯಲ್ಲಿ ಚರ್ಚಿಸುವುದರ ಜತೆಗೆ, ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗುವುದು ಎಂದು ಹೇಳಿದರು.

ಮಹಿಳೆ ಆತ್ಮಹತ್ಯೆ

ಕನಕಪುರ: ತಾಲ್ಲೂಕಿನ ಹುಲಿಬೆಲೆ ಗ್ರಾಮದ ಸಮೀಪದ ಬೊಮ್ಮಣ್ಣನಗುಡ್ಡ ಪಕ್ಕದಲ್ಲಿ ಮಹಿಳೆಯೊಬ್ಬರು ಮೈಮೇಲೆ ಸೀಮೆಎಣ್ಣೆ ಸುರಿದು ಬೆಂಕಿಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬೆಂಗಳೂರಿನ ಹೆಸರಘಟ್ಟದ ಕರಿಬಸವಯ್ಯನ ಪತ್ನಿ ಸಂಗೀತ ಎಂ. (28) ಮೃತರು. ಗುರುವಾರ ಮಧ್ಯಾಹ್ನ ತಮ್ಮ ಹೊಸ ಸ್ಕೂಟಿಯಲ್ಲಿ ಕುಳಿತುಕೊಂಡು ಹುಲಿಬೆಲೆ ಸಮೀಪದ ಬೊಮ್ಮಣ್ಣನಗುಡ್ಡೆ ಬಳಿ ಮೊಬೈಲ್ ಫೋನ್‌ನಲ್ಲಿ ಮಾತನಾಡುತ್ತಿದ್ದದ್ದನ್ನು ಸ್ಥಳೀಯರು ನೋಡಿದ್ದಾರೆ.

ಮಧ್ಯಾಹ್ನ ಸುಮಾರು 2.30ರ ಸಮಯದಲ್ಲಿ ಕಿರುಚಿಕೊಳ್ಳುತ್ತಿರುವ ಶಬ್ದ ಕೇಳಿ ಬಂದಾಗ, ಸ್ಥಳೀಯರು ಹೋಗಿ ನೋಡಿದಾಗ ಬೆಂಕಿಯ ಜ್ವಾಲೆಯಲ್ಲಿ ಮಹಿಳೆ ಸುಡುತ್ತಿದ್ದರು. ಗ್ರಾಮಸ್ಥರು ಬೆಂಕಿಯನ್ನು ನಂದಿಸಿದರು.

ತೀವ್ರವಾಗಿ ಗಾಯಗೊಂಡು ಪ್ರಜ್ಞೆ ತಪ್ಪಿದ್ದ ಸಂಗೀತ ಅವರನ್ನು ಕನಕಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಯಿತು. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ವರ್ಗಾಯಿಸುತ್ತಿದ್ದಾಗ ಮಾರ್ಗ ಮಧ್ಯೆ ಅವರು ಮೃತರಾದರು ಎಂದು ಪೊಲೀಸರು ತಿಳಿಸಿದ್ದಾರೆ.

ಸರ್ಕಲ್ ಇನ್‌ಸ್ಪೆಕ್ಟರ್ ಟಿ.ಟಿ. ಕೃಷ್ಣ ಮತ್ತು ಗ್ರೇಡ್-2 ತಹಶೀಲ್ದಾರ್ ಶಿವಕುಮಾರ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮಹಿಳೆಯು ತಂದಿದ್ದ ಸ್ಕೂಟಿಪೆಪ್ ಅನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅವರ ಬಳಿಯಿದ್ದ ಮೊಬೈಲ್‌ನಿಂದ ಕುಟುಂಬದವರಿಗೆ ಮಾಹಿತಿ ನೀಡಿದ್ದು, ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಈ ಹೊಸ ಉತ್ಪನ್ನ ಶೇ 10ರ ರಿಯಾಯಿತಿ ದರದಲ್ಲಿ ಮಾರಾಟ: ಕೆಎಂಎಫ್

ಸಕ್ಕರೆ ರಹಿತ ಉತ್ಪನ್ನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧುಮೇಹ ಮತ್ತು ಆಹಾರ ಕಾಳಜಿ ಉಳ್ಳವರ ಅನುಕೂಲಕ್ಕಾಗಿ ಹೊಸದಾಗಿ ಸಕ್ಕರೆ ರಹಿತ ಉತ್ಪನ್ನಗಳನ್ನು ಕೆಎಂಎಫ್ ಬಿಡುಗಡೆ ಮಾಡಿದೆ.

ಸಕ್ಕರೆ ರಹಿತ ಪೇಡ, ಸಕ್ಕರೆ ರಹಿತ ಕೇಸರಿ ಪೇಡ, ಸಕ್ಕರೆ ರಹಿತ ಬೇಸನ್ ಲಾಡು, ಸಕ್ಕರೆ ರಹಿತ ಕೊಕೊನಟ್ ಬರ್ಫಿ, ಸಕ್ಕರೆ ರಹಿತ ಚಾಕೋಲೇಟ್ ಬರ್ಫಿಯನ್ನು ಬಿಡುಗಡೆ ಮಾಡಲಾಯಿತು.

ಈ ಹೊಸ ಉತ್ಪನ್ನಗಳನ್ನು ಶೇ 10ರ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು ಎಂದು ಕೆಎಂಎಫ್ ತಿಳಿಸಿದೆ.

ನೈಸರ್ಗಿಕ ಹಾಗೂ ಆಯುರ್ವೇದಿಕ್ ಗುಣವುಳ್ಳ ನಂದಿನಿ ಐಸ್‌ಕ್ರೀಮ್‌ಗಳು ಮಾರುಕಟ್ಟೆಯಲ್ಲಿ ಲಭ್ಯ ಇವೆ. ಸ್ಟ್ರಾಬೆರಿ, ಸೀಬೆ, ಏಲಕ್ಕಿ, ಅನಾನಸ್ ಮತ್ತು ಮಾವು ಸ್ವಾದದ 5 ವಿವಿಧ ಶ್ರೀಖಂಡ್‌ಗಳು ಲಭ್ಯ ಇವೆ.

ಶ್ರೀಖಂಡ್ ಅನ್ನು ನೇರವಾಗಿ ಅಥವಾ ಚಪಾತಿ, ಪೂರಿ ರೀತಿಯ ಉಪಾಹಾರಗಳ ಜೊತೆಯೂ ಸವಿಯಬಹುದು ಎಂದು ಉತ್ಪನ್ನಗಳನ್ನು ಬಿಡುಗಡೆ ಮಾಡಿದ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ವಿವರಿಸಿದರು.

ಇದೇ ವೇಳೆ ನಂದಿನಿ ಸಿಹಿ ಉತ್ಸವಕ್ಕೂ ಚಾಲನೆ ನೀಡಿದ ಅವರು, ‘ಉತ್ಸವದಿಂದ ಉತ್ಪನ್ನಗಳ ಮಾರಾಟ ಪ್ರಮಾಣ ಶೇ 16ರಷ್ಟು ಅಧಿಕವಾಗುತ್ತಿದೆ. ಉತ್ಸವದಲ್ಲಿ ಎಲ್ಲ ಉತ್ಪನ್ನಗಳ ಮಾರಾಟ ದರದಲ್ಲಿ ಶೇ 10ರಷ್ಟು ರಿಯಾಯಿತಿ ನೀಡಲಾಗುತ್ತಿದೆ’ ಎಂದು ಹೇಳಿದರು.

ಹೊಸ ಉತ್ಪನ್ನಗಳನ್ನು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ಬಿಡುಗಡೆ ಮಾಡಿದರು. ಮಾರುಕಟ್ಟೆ ವಿಭಾಗದ ಹೆಚ್ಚುವರಿ ನಿರ್ದೇಶಕ ರಘುನಂದನ್, ನಿರ್ದೇಶಕ(ಮಾರುಕಟ್ಟೆ) ಮೃತ್ಯುಂಜಯ ಕುಲಕರ್ಣಿ, ನಿರ್ದೇಶಕ(ಆಡಳಿತ) ಒಬೆದುಲ್ಲಾ ಖಾನ್, ನಿರ್ದೇಶಕ(ಗುಣ ನಿಯಂತ್ರಣ) ಮುನಿರೆಡ್ಡಿ, ಹಣಕಾಸು ವಿಭಾಗದ ರಮೇಶ್ ಕುಣ್ಣೂರು ಇದ್ದರು

ಹೆಚ್ಚುತ್ತಲೇ ಇದೆ ಹಾಲಿನ ಸಂಗ್ರಹ

ಕೋವಿಡ್ ಬಳಿಕ ಕೆಎಂಎಫ್ ಪ್ರತಿದಿನ ಸಂಗ್ರಹಿಸುತ್ತಿರುವ ಹಾಲಿನ ಪ್ರಮಾಣ ಹೆಚ್ಚುತ್ತಲೇ ಇದ್ದು, ಕೆಲವೊಮ್ಮೆ 90 ಲಕ್ಷ ಲೀಟರ್ ದಾಟಿದ ದಿನವನ್ನೂ ಒಕ್ಕೂಟ ನೋಡಿದೆ ಎಂದು ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ಹೇಳಿದರು.

ಸರಾಸರಿ ಹಾಲಿನ ಸಂಗ್ರಹ ಪ್ರಮಾಣ 87 ಲಕ್ಷ ಲೀಟರ್ ಇದೆ. ಜೂನ್‌ನಲ್ಲಿ ಒಂದು ದಿನ 90.62 ಲಕ್ಷ ಲೀಟರ್‌ಗೂ ಏರಿಕೆಯಾಗಿತ್ತು. ನಗರದಿಂದ ಹಳ್ಳಿಗಳತ್ತ ಮುಖ ಮಾಡಿದ ಜನರು ಹಸುಗಳ ಸಾಕಾಣಿಕೆ ಆರಂಭಿಸಿದ್ದಾರೆ. ಗಡಿ ಜಿಲ್ಲೆಗಳಲ್ಲಿ ಖಾಸಗಿ ಹಾಲು ಮಾರಾಟಗಾರರು ಹಾಲು ಸಂಗ್ರಹ ಕಡಿಮೆ ಮಾಡಿದ್ದಾರೆ. ಇವೆಲ್ಲಾ ಕಾರಣಗಳಿಂದ ಕೆಎಂಎಫ್‌ಗೆ ಬರುವ ಹಾಲಿನ ಪ್ರಮಾಣ ಹೆಚ್ಚಾಗಿರಬಹುದು ಎಂದರು.

ಸಾಲ ಮರುಪಾವತಿಗೆ ಮೊಬೈಲ್ ಆ್ಯಪ್

ಆರ್ಯವೈಶ್ಯ ಅಭಿವೃದ್ಧಿ ನಿಗಮದ ಈ ವ್ಯವಸ್ಥೆಗೆ ಸಿಎಂ ಬೊಮ್ಮಾಯಿ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲ ಮರುಪಾವತಿಯಲ್ಲಿ ಶೇ 90ರಷ್ಟು ಸಾಧನೆ ಮಾಡಿರುವ ರಾಜ್ಯ ಆರ್ಯವೈಶ್ಯ ಅಭಿವೃದ್ಧಿ ನಿಗಮವನ್ನು ಹಣಕಾಸು ನಿಗಮ ಆಗಿ ಪರಿವರ್ತಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದರು.

ನಿಗಮದ ಸಾಲ ಮರುಪಾವತಿಯನ್ನು ಸುಗಮಗೊಳಿಸಲು ಅಭಿವೃದ್ಧಿಪಡಿಸಿದ ಮೊಬೈಲ್ ಆ್ಯಪ್‌ಗೆ ಗುರುವಾರ ಚಾಲನೆ ನೀಡಿ ಮಾತನಾಡಿದ ಮುಖ್ಯಮಂತ್ರಿ, ‘ಹಣಕಾಸು ನಿಗಮ ಆಗಿ ಪರಿವರ್ತಿಸಿದರೆ ಹೆಚ್ಚಿನ ಸಂಪನ್ಮೂಲ ಕ್ರೋಡೀಕರಿಸಲು ಸಾಧ್ಯವಾಗಲಿದೆ. ಜೊತೆಗೆ, ಹೆಚ್ಚಿನ ಸಂಖ್ಯೆಯಲ್ಲಿ ಬಡ ಫಲಾನುಭವಿಗಳಿಗೆ ನೆರವು ನೀಡಲು ಅನುಕೂಲ ಆಗಲಿದೆ’ ಎಂದು ಅಭಿಪ್ರಾಯಪಟ್ಟರು.

ಆರ್ಯವೈಶ್ಯ ಅಭಿವೃದ್ಧಿ ನಿಗಮದ ಸಾಲ ಮರುಪಾವತಿಗೆ ಅಭಿವೃದ್ಧಿಪಡಿಸಿದ ಮೊಬೈಲ್ ಆ್ಯಪ್‌ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. ಸಚಿವ ಕೋಟ ಶ್ರೀನಿವಾಸ ಪೂಜಾರಿ, ನಿಗಮದ ಅಧ್ಯಕ್ಷ ಡಿ.ಎಸ್. ಅರುಣ್ ಇದ್ದರು

ಪ್ರಾಸ್ತಾವಿಕವಾಗಿ ಮಾತನಾಡಿದ ನಿಗಮದ ಅಧ್ಯಕ್ಷ ಡಿ.ಎಸ್. ಅರುಣ್, ‘ನಿಗಮದ ಫಲಾನುಭವಿಗಳು ಸಾಲ ಮರುಪಾವತಿಗಾಗಿ ದೂರದ ಊರುಗಳಿಂದ ಜಿಲ್ಲಾ ಕೇಂದ್ರಕ್ಕೆ ಬರುತ್ತಿದ್ದಾರೆ. ಅದರ ಬದಲು, ಡಿಜಿಟಲ್ ಪಾವತಿ ವ್ಯವಸ್ಥೆಯ ಮೂಲಕ ಸಾಲ ಮರುಪಾವತಿಗೆ ಅವಕಾಶ ಕಲ್ಪಿಸಲು ಈ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ’ ಎಂದರು.

ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ನಿಗಮದ ವ್ಯವಸ್ಥಾಪಕ ನಿರ್ದೇಶಕಿ ದೀಪಶ್ರೀ ಇದ್ದರು.

‘ಎಸ್‌.ಪಿ.ಗೆ ಮಾಹಿತಿ ನೀಡಿ 8 ವಾರ ಇರಬಹುದು’

ರೆಡ್ಡಿ ಬಳ್ಳಾರಿ ಭೇಟಿಗೆ ‘ಸುಪ್ರೀಂ’ ಸಮ್ಮತಿ

ಪ್ರಜಾವಾಣಿ ವಾರ್ತೆ

ಜನಾರ್ದನ ರೆಡ್ಡಿ

ನವದೆಹಲಿ: ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಭಾಗಿಯಾಗಿರುವ ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಅವರ ಬಳ್ಳಾರಿ ಭೇಟಿಗೆ ಸುಪ್ರೀಂ ಕೋರ್ಟ್ ಗುರುವಾರ ಅನುಮತಿ ನೀಡಿದೆ.

ಷರತ್ತು ಸಡಿಲಿಸಲು ಕೋರಿ ರೆಡ್ಡಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿನೀತ್ ಶರಣ್ ನೇತೃತ್ವದ ಪೀಠ, ಜಾಮೀನು ಮಂಜೂರು ಮಾಡುವಾಗ ಬಳ್ಳಾರಿ ಹಾಗೂ ಆಂಧ್ರದ ಅನಂತಪುರ ಮತ್ತು ಕಡಪ ಜಿಲ್ಲೆಗಳ ಭೇಟಿಯನ್ನು ನಿರ್ಬಂಧಿಸಿ ವಿಧಿಸಲಾಗಿದ್ದ ಷರತ್ತನ್ನು ಮಾರ್ಪಡಿಸುವುದಾಗಿ ಹೇಳಿದ್ದು, 8 ವಾರಗಳ ಕಾಲ ಹುಟ್ಟೂರಲ್ಲಿ ಇರಲು ಅವಕಾಶ ನೀಡಿದೆ.

ಈ ಮೂರೂ ಜಿಲ್ಲೆಗಳಿಗೆ ಭೇಟಿ ನೀಡುವ ಸಂದರ್ಭ ಆಯಾ ಪೊಲೀಸ್ ವರಿಷ್ಠಾಧಿಕಾರಿ (ಎಸ್.ಪಿ)ಗೆ ಅಗತ್ಯವಾಗಿ ಮಾಹಿತಿ ನೀಡುವಂತೆಯೂ ಪೀಠ ಸೂಚಿಸಿದೆ.

ಬಳ್ಳಾರಿ ಭೇಟಿಯ ಷರತ್ತನ್ನು ಸಡಿಲಗೊಳಿಸದಂತೆ ಸಿಬಿಐ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಮಾಧವಿ ದಿವಾನ್, ಆರೋಪಿಯ ಬಳ್ಳಾರಿ ಭೇಟಿಗೆ ಅನುಮತಿ ನೀಡಿದರೆ, ಜಿಲ್ಲೆಯಲ್ಲಿನ 47 ಜನ ಸಾಕ್ಷಿದಾರರು ಭಯಭೀತರಾಗಲಿದ್ದಾರೆ ಎಂದರು.

ರೆಡ್ಡಿ ಅವರು ಬೇರೆಯವರ ಗಣಿ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಸಿದ್ದಾರೆ. ಲಭ್ಯ ಸಾಕ್ಷಿಗಳನ್ನು ಅವರು ಬೆದರಿಸಿದರೆ ಪ್ರಕರಣದ ಚಿತ್ರಣವೇ ಬದಲಾಗುವ ಸಾಧ್ಯತೆ ಇದೆ. ಅಲ್ಲದೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷ್ಯ ನುಡಿಯದಂತೆ ರೆಡ್ಡಿ ಬೆದರಿಕೆ ಹಾಕಿದ್ದಾರೆಂದು ಈಗಾಗಲೇ ವ್ಯಕ್ತಿಯೊಬ್ಬರು ಪತ್ರ ಬರೆದು ದೂರಿದ್ದಾರೆ ಎಂದು ಅವರು ಪೀಠಕ್ಕೆ ತಿಳಿಸಿದರು.

ಬಂಧನದಲ್ಲಿದ್ದ ಸಂದರ್ಭ ಜಾಮೀನಿಗಾಗಿ ನ್ಯಾಯಾಧೀಶರಿಗೆ ಲಂಚ ನೀಡಿರುವ ಪ್ರಕರಣದಲ್ಲೂ ರೆಡ್ಡಿ ಆರೋಪಿಯಾಗಿದ್ದಾರೆ ಎಂದೂ ಅವರು ಹೇಳಿದರು.

ಸಿಬಿಐನ ಈ ವಾದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ರೆಡ್ಡಿ ಪರ ವಕೀಲ ಮುಕುಲ್ ರೋಹಟ್ಗಿ, ಆರೋಪಿಯು ಇದುವರೆಗೆ ಜಾಮೀನಿನ ಷರತ್ತನ್ನು ಉಲ್ಲಂಘಿಸಿಲ್ಲ. ಅಲ್ಲದೆ, 10 ವರ್ಷ ಕಳೆದಿದ್ದರೂ ಪ್ರಕರಣದ ವಿಚಾರಣೆ ಆರಂಭವಾಗಿಲ್ಲ ಎಂದರು.

ಅಕ್ರಮ ಗಣಿಗಾರಿಕೆ ಆರೋಪದಲ್ಲಿ 2011ರ ಸೆಪ್ಟೆಂಬರ್ 5ರಂದು ಸಿಬಿಐನಿಂದ ಬಂಧನಕ್ಕೆ ಒಳಗಾಗಿದ್ದ ಜನಾರ್ದನ ರೆಡ್ಡಿ ಅವರಿಗೆ ಬಳ್ಳಾರಿ ಜಿಲ್ಲೆಯ ಪ್ರವೇಶ ನಿರ್ಬಂಧಿಸಿ ನ್ಯಾಯಪೀಠವು 2015ರ ಜನವರಿ 20ರಂದು ಜಾಮೀನು ಮಂಜೂರು ಮಾಡಿತ್ತು.

ಪುತ್ರಿಯ ಮದುವೆ ಹಾಗೂ ಇತರ ಸಂದರ್ಭ ರೆಡ್ಡಿ ಅವರ ಬಳ್ಳಾರಿ ಭೇಟಿಗೆ ನ್ಯಾಯಪೀಠವು ಈ ಹಿಂದೆ ಅನುಮತಿ ನೀಡಿತ್ತು.

ಯುವ ಗಾಯಕ ನಿಹಾಲ್ ತಾವ್ರೊಗೆ ಮೂಡುಬಿದಿರೆಯಲ್ಲಿ ಸನ್ಮಾನ

‘ಸಾಧನೆಗೆ ಹುಟ್ಟೂರಿನ ಜನರ ಪ್ರೀತಿಯೇ ಪ್ರೇರಣೆ’

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ: ‘ನಾವು ಕಲಿಯುವ ಶಾಲೆಗಳಲ್ಲೆ ನಮ್ಮ ಪ್ರತಿಭೆಗಳಿಗೆ ವೇದಿಕೆ ಸಿಗುತ್ತದೆ. ಅದನ್ನು ಬಳಸಿಕೊಳ್ಳಬೇಕು. ನಾನು ಪ್ರಾಥಮಿಕ ತರಗತಿಯಲ್ಲಿ ಓದುತ್ತಿರುವಾಗಲೇ ನನಗೆ ಸಂಗೀತದ ಆಸಕ್ತಿ ಹುಟ್ಟಿತ್ತು. ಅಲ್ಲಿಂದ ಆರಂಭವಾದ ನನ್ನ ಸಂಗೀತ ಪಯಣಕ್ಕೆ ಹುಟ್ಟೂರ ಜನರಿಂದ ಸಿಕ್ಕಿದ ನಿರಂತರ ಪ್ರೋತ್ಸಾಹದಿಂದ ಇಂಡಿಯನ್ ಐಡಲ್ ಸೀಸನ್ 12ರ ಟಾಪ್ 5 ಗಾಯಕನಾಗಿ ಮೂಡಿಬರಲು ಸಾಧ್ಯವಾಯಿತು’ ಎಂದು ಯುವ ಗಾಯಕ ನಿಹಾಲ್ ತಾವ್ರೊ ಹೇಳಿದರು.

ಸ್ಕೌಟ್ಸ್ ಗೈಡ್ಸ್ ಕನ್ನಡ ಭವನದಲ್ಲಿ ಗುರುವಾರ ಸಾರ್ವಜನಿಕ ಸನ್ಮಾನ ಸ್ವೀಕರಿಸಿ ಮಾತನಾಡಿದರು. ‘ಸ್ಪರ್ಧೆ ನಡೆಯುತ್ತಿರುವಾ ನನಗೆ ಇಷ್ಟೊಂದು ಜನ ಬೆಂಬಲ ನೀಡಿದ್ದಾರೆ ಎಂದು ಕೇಳಿದಾಗ ಆಶ್ಚರ್ಯವಾಯಿತು. ಇಂಡಿಯನ್ ಐಡಲ್‌ನಲ್ಲಿ ನಾನು ಫೈನಲ್ ಪ್ರವೇಶಿಸಿ ಇಷ್ಟು ದೊಡ್ಡ ಸಾಧನೆ ಮಾಡಿದ್ದರೆ ನನ್ನ ಹುಟ್ಟೂರಿನ ಜನರ ಪ್ರೀತಿಯೇ ಪ್ರೇರಣೆ. ಮುಂದಿನ ದಿನಗಳಲ್ಲಿ ಈ ಸ್ಪರ್ಧೆಗೆ ಕರ್ನಾಟಕದಿಂದ ಇನ್ನಷ್ಟು ಗಾಯಕರು ಸೇರ್ಪಡೆಯಾಗಬೇಕೆಂಬುದು ನನ್ನ ಆಸೆ’ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ, ‘ನಿಹಾಲ್ ತಾವ್ರೊ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿ. ಈತನ ಪ್ರತಿಭೆಯನ್ನು ನೋಡುವಾಗ ರಾಷ್ಟ್ರದ ಪ್ರಸಿದ್ಧ ಗಾಯಕ ಅರಿಜೀತ್ ಸಿಂಗ್‌ನ ತದ್ರೂಪಿಯಂತೆ ಭಾಸವಾಗುತ್ತಿದೆ. ಸಂಗೀತ ಪ್ರೇಮಿಗಳೆಲ್ಲ ಕೊಂಡಾಡುವ ರೀತಿಯಲ್ಲಿ ಪ್ರದರ್ಶನ ನೀಡಿದ್ದಾರೆ. ಮೂಡುಬಿದಿರೆಯ ಹೆಸರನ್ನು ರಾಷ್ಟ್ರದ ಎತ್ತರಕ್ಕೇರಿಸಿದ್ದಾರೆ’ ಎಂದು ಮೋಹನ ಆಳ್ವ ಹೇಳಿದರು.

ಮೂಡುಬಿದಿರೆಯ 51 ಸಂಘ ಸಂಸ್ಥೆಗಳು ನಿಹಾಲ್ ಅವರನ್ನು ಸನ್ಮಾನಿಸಿದವು. ಮಾಜಿ ಸಚಿವ ಅಭಯಚಂದ್ರ ಜೈನ್, ಮೂಡುಬಿದಿರೆ ಚರ್ಚ್ ಧರ್ಮಗುರು ಪೌಲ್ ಸಿಕ್ವೇರಾ, ಅಲಂಗಾರು ಚರ್ಚ್ ಧರ್ಮಗುರು ವಾಲ್ಟರ್ ಡಿಸೋಜ, ಕ್ರೈಸ್ತ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಜೋಯ್ಲಸ್ ಡಿಸೋಜ, ಪುರಸಭಾಧ್ಯಕ್ಷ ಪ್ರಸಾದ್ ಕುಮಾರ್, ಪ್ರಮುಖರಾದ ನಾರಾಯಣ ಪಿ.ಎಂ., ಶ್ರೀಪತಿ ಭಟ್, ವಲೇರಿಯನ್ ಸಿಕ್ವೇರಾ, ಅಬುಲ್ ಅಲಾ, ಸಚಿನ್ ಫರ್ನಾಂಡಿಸ್, ಚೌಟರ ಅರಮನೆಯ ಕುಲದೀಪ್ ಎಂ., ನಿಹಾಲ್ ತಾವ್ರೊ ಅವರ ತಂದೆ ಹೆರಾಲ್ಡ್ ತಾವ್ರೊ, ತಾಯಿ ಪ್ರೆಸಿಲ್ಲಾ ಉಪಸ್ಥಿತರಿದ್ದರು. ಗಣೇಶ್ ಕಾಮತ್ ನಿರೂಪಿಸಿದರು.

ಹಾಡಿ ರಂಜಿಸಿದ ತಾವ್ರೊ: ಸಭಿಕರ ಕೋರಿಕೆ ಮೇರೆಗೆ ‘ತೂ ಮೇರಾ ದಿಲ್, ತೂ ಮೇರಿ ಜಾನ್’ ಹಿಂದಿ ಹಾಡು, ‘ಒಂದು ಮಳೆ ಬಿಲ್ಲು ಒಂದು ಮಳೆ ಮೋಡ’ ಕನ್ನಡ ಹಾಡು ಹಾಗೂ ‘ಮೋಕೆದ ಸಿಂಗಾರಿ’ ಎಂಬ ಪ್ರಸಿದ್ಧ ತುಳು ಹಾಡನ್ನು ಹಾಡಿ ಸಭಿಕರನ್ನು ರಂಜಿಸಿದರು.

ಇಂಡಿಯನ್ ಐಡಲ್ ರಿಯಾಲಿಟಿ ಶೋನಲ್ಲಿ ಟಾಪ್ 5ನೇ ಸ್ಥಾನ ಪಡೆದ ನಿಹಾಲ್ ತಾವ್ರೊಗೆ ಗುರುವಾರ ಮೂಡುಬಿದಿರೆಯಲ್ಲಿ ಸಾರ್ವಜನಿಕ ಸನ್ಮಾನ ನಡೆಯಿತು

‘ಫೈನಲ್‌ನಲ್ಲಿದ್ದ ಗಾಯಕರನ್ನು ಕರೆತರುವೆ’

‘ಇಂಡಿಯನ್ ಐಡಲ್ ಸೀಸನ್ 12ರಲ್ಲಿ ಫೈನಲ್ ಪ್ರವೇಶಿಸಿದ ಆರು ಮಂದಿ ಗಾಯಕರ ತಂಡದ ಕಾರ್ಯಕ್ರಮವನ್ನು ಮೂಡುಬಿದಿರೆಯಲ್ಲಿ ಅದ್ದೂರಿಯಾಗಿ ನಡೆಸಬೇಕೆಂದು ಬಯಸಿದ್ದೇನೆ. ಇದಕ್ಕೆ ನಿಮ್ಮ ಸಹಕಾರ ಬೇಕು’ ಎಂದು ನಿಹಾಲ್ ತಾವ್ರೊ ಹೇಳಿದರು.

‘ಇಂಡಿಯನ್ ಐಡಲ್‌ನ ಫೈನಲ್‌ನಲ್ಲಿ ಪ್ರದರ್ಶನ ನೀಡಿದ್ದ ಎಲ್ಲಾ ಆರು ಮಂದಿ ಗಾಯಕರ ಪ್ರದರ್ಶನಕ್ಕೆ ಮೂಡುಬಿದಿರೆಯಲ್ಲಿ ನಾನು ವೇದಿಕೆ ಕಲ್ಪಿಸಲಿದ್ದೇನೆ. ಅವರೆಲ್ಲರನ್ನು ಕರೆತರುವ ಜವಾಬ್ದಾರಿ ನಿಹಾಲ್ ವಹಿಸಿಕೊಳ್ಳಬೇಕು’ ಎಂದು ಮೋಹನ ಆಳ್ವ ಹೇಳಿದರು.

ಸಚಿವ ಸುನಿಲ್‌ಕುಮಾರ್ ಹೇಳಿಕೆ

‘ಹೊಸ ದೃಷ್ಟಿಕೋನದಿಂದ ಕಾರ್ಯಕ್ರಮ ರೂಪಿಸಿ ಜಾರಿಗೆ ತರುವ ಮೂಲಕ ಸಂಸ್ಕೃತಿ ಕಟ್ಟುವ ಕೆಲಸದಲ್ಲಿ ತೊಡಗಲು ನೆರವು ನೀಡಲಾಗುವುದು’

ಇಲಾಖೆ–ಅಕಾಡೆಮಿ ನಡುವೆ ಸಮನ್ವಯ

ಬೆಂಗಳೂರು: ‘ಇಲಾಖೆಯ ವ್ಯಾಪ್ತಿಯಲ್ಲಿರುವ ಪ್ರಾಧಿಕಾರಗಳು, ಅಕಾಡೆಮಿಗಳು ಮತ್ತು ರಂಗಾಯಣಗಳು ಹಾಗೂ ಇಲಾಖೆಯ ನಡುವೆ ಸಮನ್ವಯ ಸಾಧಿಸಲು ರಾಜ್ಯದ ನಾಲ್ಕೂ ಉಪವಿಭಾಗಗಳಿಗೆ ಜಂಟಿ ನಿರ್ದೇಶಕರನ್ನು ನೇಮಿಸಲಾಗುವುದು’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್ ಕುಮಾರ್ ತಿಳಿಸಿದರು.

ಪ್ರಾಧಿಕಾರಗಳು ಮತ್ತು ಅಕಾಡೆಮಿಗಳ ಅಧ್ಯಕ್ಷರು ಹಾಗೂ ರಂಗಾಯಣ ನಿರ್ದೇಶಕರ ಜೊತೆ ವಿಕಾಸಸೌಧದಲ್ಲಿ ಗುರುವಾರ ಸಭೆ ನಡೆಸಿದ ಅವರು, ‘ಆ ಮೂಲಕ, ಅಧಿಕಾರ ವಿಕೇಂದ್ರೀಕರಣಗೊಳಿಸಿ, ಆಡಳಿತ ಸುಧಾರಣೆಗೆ ಕ್ರಮ ತೆಗೆದುಕೊಳ್ಳಲಾಗುವುದು’ ಎಂದರು.

‘ಇಲಾಖೆಯ ವ್ಯಾಪ್ತಿಯಲ್ಲಿರುವ ಎಲ್ಲ ಪ್ರಾಧಿಕಾರಗಳು ಮತ್ತು ಅಕಾಡೆಮಿಗಳ ಬಲವರ್ಧನೆಗೆ ಎಲ್ಲ ಕ್ರಮ ಕೈಗೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ’ ಎಂದು ಭರವಸೆ ನೀಡಿದರು.

‘ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆಗಾಗಿ ಶಿಕ್ಷಣ ಇಲಾಖೆ ಮತ್ತು ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಜೊತೆಗೂಡಿ ದೊಡ್ಡ ಮಟ್ಟದಲ್ಲಿ ಕಾರ್ಯಕ್ರಮ ರೂಪಿಸಿ, ಅಭಿಯಾನ ಹಮ್ಮಿಕೊಳ್ಳುವ ಚಿಂತನೆಯಿದೆ. ಅದಕ್ಕೆ ಪೂರಕವಾಗಿ ಎಲ್ಲ ಅಕಾಡೆಮಿ ಮತ್ತು ಪ್ರಾಧಿಕಾರಗಳು ಕಾರ್ಯಕ್ರಮ ರೂಪಿಸಬೇಕು. ಅಲ್ಲದೆ, ಮುಂದಿನ 100 ದಿನಗಳಿಗೆ ಕಾರ್ಯಯೋಜನೆ ಸಿದ್ಧಪಡಿಸಬೇಕು’ ಎಂದೂ ಸೂಚಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ನಂದೀಶ್ ಹಂಚೆ ಸೇರಿದಂತೆ ಎಲ್ಲ ಪ್ರಾಧಿಕಾರಗಳ ಮತ್ತು ಅಕಾಡೆಮಿಗಳ ಅಧ್ಯಕ್ಷರು, ಇಲಾಖೆಯ ಕಾರ್ಯದರ್ಶಿ ರವಿಶಂಕರ್, ನಿರ್ದೇಶಕ ಎಸ್. ರಂಗಪ್ಪ ಇದ್ದರು.

ಆ.25ಕ್ಕೆ ಪ್ರತಿಭಟನಾ ಧರಣಿ

ಬೆಂಗಳೂರು: ‘ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯಡಿ (ಟಿಎಸ್‌ಪಿ) ಬಿಬಿಎಂಪಿ ಈವರೆಗೆ ಫಲಾನುಭವಿಗಳಿಗೆ ನಿವೇಶನ ಹಂಚಿಲ್ಲ. ಇದನ್ನು ಖಂಡಿಸಿ ಇದೇ 25ರಂದು ಬೆಳಿಗ್ಗೆ 10 ಗಂಟೆಗೆ ಮೌರ್ಯ ವೃತ್ತದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ’ ಎಂದು ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ರಾಜ್ಯ ಸಂಚಾಲಕ ಮಾರಸಂದ್ರ ಮುನಿಯಪ್ಪ ತಿಳಿಸಿದರು.

‘2013ನೇ ಸಾಲಿನಲ್ಲಿ ಎಸ್‌ಸಿಪಿ–ಟಿಎಸ್‌ಪಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ 1,100 ಫಲಾನುಭವಿಗಳು ನಿವೇಶನಕ್ಕೆ ಆಯ್ಕೆಯಾಗಿದ್ದರು. ಸಮುದಾಯಗಳ ಮೇಲೆ ಪ್ರಭಾವಿಗಳ ನಿರ್ಲಕ್ಷ್ಯದಿಂದ ಇಷ್ಟು ವರ್ಷ ಕಳೆದರೂ ಫಲಾನುಭವಿಗಳಿಗೆ ನಿವೇಶನ ಹಂಚಿಕೆಯಾಗಿಲ್ಲ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

‘ಸಮುದಾಯಗಳನ್ನು ತುಳಿಯುವ ಯತ್ನ ನಿರಂತರ ನಡೆಯುತ್ತಿದೆ. ನಿವೇಶನ ಹಂಚಿಕೆಗೆ ಅಡ್ಡಿಪಡಿಸುವ ಮೂಲಕ ವಸತಿ ಸಚಿವ ವಿ.ಸೋಮಣ್ಣ ಹಾಗೂ ಶಾಸಕ ಎಸ್.ಆರ್.ವಿಶ್ವನಾಥ್ ಅವರು ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳ ವಿರೋಧಿ ನಡೆ ಪ್ರದರ್ಶಿಸಿದ್ದಾರೆ. ಮುಂದಿನ ಹಂತದಲ್ಲಿ ಇವರ ನಿವಾಸಗಳ ಎದುರೂ ಧರಣಿ ನಡೆಸಲಾಗುವುದು’ ಎಂದರು.

ಬಹುಜನ ವಿಮೋಚನಾ ಚಳವಳಿ ಸಂಚಾಲಕ ಎಸ್. ಗಂಗಾಧರ್,‘ಪ್ರಸ್ತುತ ಈ ಮೂಲ ಯೋಜನೆಯನ್ನೇ ಬದಲಿಸುವ ಹುನ್ನಾರ ನಡೆದಿದೆ. ಎಸ್‌ಸಿ, ಎಸ್‌ಟಿ ಸಮುದಾಯಗಳ ಅಭಿವೃದ್ಧಿಗಾಗಿ ರೂಪಿಸಲಾಗಿರುವ ಯೋಜನೆಗಳು ಅನುಷ್ಠಾನಗೊಳ್ಳುತ್ತಿಲ್ಲ. ನಿವೇಶನಕ್ಕಾಗಿ ಫಲಾನುಭವಿಗಳು ಪರದಾಡಬೇಕಾಗಿದೆ’ ಎಂದರು.

‘ಫಲಾನುಭವಿಗಳಿಗೆ ಕೂಡಲೇ ನಿವೇಶನ ಹಂಚಿಕೆ ಮಾಡಿ,ಹಕ್ಕು ಪತ್ರಗಳನ್ನು ವಿತರಿಸಬೇಕು. ನಿಗದಿತ ಪ್ರದೇಶದಲ್ಲಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಬೇಕು. ಈ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟಿಸಲಾಗುವುದು’ ಎಂದರು.

‘ಅಧಿವೇಶನದಲ್ಲಿ ಗೂಂಡಾ ಸಂಸ್ಕೃತಿ ಪ್ರದರ್ಶಿಸಿದ ಕಾಂಗ್ರೆಸ್’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಧರಣಿ ಮಾಡಲು ಎಲ್ಲರಿಗೂ ಸ್ವಾತಂತ್ರ್ಯ ಇದೆ. ಆದರೆ ಎಲ್ಲ ನಿಯಮ ಮೀರಿ ಕಾಂಗ್ರೆಸ್ ಗೂಂಡಾ ಸಂಸ್ಕೃತಿಯನ್ನು ಪ್ರದರ್ಶಿಸುತ್ತಿದೆ. ಸದನದ ಸಂಪ್ರದಾಯವನ್ನು ಆ ಪಕ್ಷದವರು ಮುರಿದಿದ್ದಾರೆ. ಅವರ ಗೂಂಡಾ ಸಂಸ್ಕೃತಿಯನ್ನು ಅಧಿವೇಶನದಲ್ಲಿ ನಡೆಯಲು ಬಿಟ್ಟರೆ ಪ್ರಜಾಪ್ರಭುತ್ವದ ಸ್ಥಿತಿ ಏನಾಗಬಹುದು’ ಎಂದು ಕೇಂದ್ರ ಸಮಾಜ ಕಲ್ಯಾಣ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ಪ್ರಶ್ನಿಸಿದರು.

ಗುರುವಾರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಅಧಿಕಾರಿಗಳ ಕೈಯಿಂದ ಪುಸ್ತಕಗಳನ್ನು ಕಿತ್ತುಕೊಂಡು ಹರಿದು ಹಾಕುತ್ತಾರೆ. ಸ್ಪೀಕರ್ ಅವರ ಮೇಲೆ ಬಿಸಾಡುತ್ತಾರೆ. ಇದ್ಯಾವ ಸಂಸ್ಕೃತಿ? ಈ ಗೂಂಡಾ ಸಂಸ್ಕೃತಿಯ ಬಗ್ಗೆ ಜನರಿಗೆ ತಿಳಿಸಲು ನಾವು ಹೊರಟಿದ್ದೇವೆ’ ಎಂದು ಹೇಳಿದರು.

‘ಪ್ರಜಾಪ್ರಭುತ್ವ ದೇಶಗಳಿಗೆ ತಾಲಿಬಾನ್ ಅಪಾಯಕಾರಿ. ವಿಶ್ವದ ಪ್ರಜಾಪ್ರಭುತ್ವ ದೇಶಗಳು ಚಿಂತನೆ ಮಾಡಬೇಕು. ಇದು ಸೂಕ್ಷ್ಮವಾಗಿರಬೇಕಾದ ಸಂದರ್ಭ’ ಎಂದು ತಿಳಿಸಿದರು.

ಸಮಾಜದಿಂದ ಪಡೆದ ನೆರವು ಮರಳಿ ಸಮಾಜಕ್ಕೆ

ಪ್ರಜಾವಾಣಿ ವಾರ್ತೆ

ಉಡುಪಿ: ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿದ್ದ ಹೆತ್ತ ಕಂದಮ್ಮನನ್ನು ಉಳಿಸಿಕೊಳ್ಳಲು ಸಾಧ್ಯವಾಗದ ದಂಪತಿ, ಸಮಾಜದಿಂದ ಪಡೆದ ಆರ್ಥಿಕ ನೆರವನ್ನು ಮರಳಿ ಸಮಾಜಕ್ಕೆ ನೀಡಿ ಮಾದರಿಯಾಗಿದೆ.

ಮಾರ್ಪಳ್ಳಿಯ ಸಂದೀಪ್ ಹಾಗೂ ರಂಜಿತಾ ದಂಪತಿಯ 6 ತಿಂಗಳ ಮಗು ಸ್ಪೈನಲ್ ಮಸ್ಕುಲರ್ ಅಟ್ರೋಫಿ ಎಂಬ ವಿರಳಾತಿ ವಿರಳ ಕಾಯಿಲೆಯಿಂದ ಬಳಲುತ್ತಿತ್ತು. ಮಗುವಿನ ಚಿಕಿತ್ಸೆಗೆ ₹ 16 ಕೋಟಿ ವೆಚ್ಚವಾಗುತ್ತದೆ ಎಂದು ವೈದ್ಯರು ತಿಳಿಸಿದ್ದರು. ವೃತ್ತಿಯಲ್ಲಿ ರಿಕ್ಷಾ ಚಾಲಕರಾಗಿರುವ ಸಂದೀಪ್ ಹಣ ಹೊಂದಿಸಲಾಗದೆ ಸಮಾಜದಿಂದ ನೆರವು ಕೋರಿದ್ದರು.

₹ 38 ಲಕ್ಷ ಸಂಗ್ರಹವಾಗುವಷ್ಟರಲ್ಲಿ ಮಗು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿತು. ಮಗುವಿನ ಅಗಲಿಕೆಯ ನೋವಿನ ಮಧ್ಯೆಯೂ ಸಮಾಜದಿಂದ ಪಡೆದ ನೆರವನ್ನು ಸಮಾಜಕ್ಕೆ ಮರಳಿಸುವ ನಿರ್ಧಾರ ಮಾಡಿರುವ ದಂಪತಿ ಮಲ್ಪೆಯ ಸಮಾಜ ಸೇವಕ ಈಶ್ವರ್ ಅವರಿಗೆ ₹ 7 ಲಕ್ಷ ವೆಚ್ಚದಲ್ಲಿ ಆಂಬುಲೆನ್ಸ್ ನೀಡಿದ್ದಾರೆ. ಜತೆಗೆ 18 ಬಡ ರೋಗಿಗಳ ₹ 13 ಲಕ್ಷ ಚಿಕಿತ್ಸಾ ವೆಚ್ಚ ಭರಿಸಿದೆ. ಉಳಿದ ಹಣವನ್ನು ಮತ್ತಷ್ಟು ರೋಗಿಗಳ ಚಿಕಿತ್ಸೆಗೆ ವ್ಯಯ ಮಾಡುವುದಾಗಿ ಸಂದೀಪ್ ತಿಳಿಸಿದ್ದಾರೆ.

ಈಚೆಗೆ ಮಲ್ಪೆಯ ಫಿಶರಿಸ್ ಸಭಾಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಗು ಮಿಥಾಂಶ್ ಎಸ್.ದೇವಾಡಿಗ ಸ್ಮರಣಾರ್ಥ ಆಂಬುಲೆನ್ಸ್ ಹಸ್ತಾಂತರ ಹಾಗೂ ಬಡ ರೋಗಿಗಳ ಚಿಕಿತ್ಸಾ ವೆಚ್ಚಕ್ಕೆ ಆರ್ಥಿಕ ನೆರವು ನೀಡುವ ಕಾರ್ಯಕ್ರಮ ನಡೆಯಿತು. ಸಂದೀಪ್ ಹಾಗೂ ರಂಜಿತಾ ದಂಪತಿಯ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಕೇಂದ್ರ ಕೃಷಿ, ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ

ರಾಜ್ಯದಲ್ಲಿ ಆಹಾರ ಪದಾರ್ಥಗಳ ರಫ್ತಿಗೆ ಕ್ಲಸ್ಟರ್

ಪ್ರಜಾವಾಣಿ ವಾರ್ತೆ

ಉಡುಪಿ: ಜನಸಂಖ್ಯೆಗೆ ಹೋಲಿಸಿದರೆ ದೇಶದಲ್ಲಿ ಆಹಾರ ಉತ್ಪಾದನೆಯ ಪ್ರಮಾಣ ಹೆಚ್ಚಾಗಿದ್ದು, ದನ್ನು ರಫ್ತು ಮಾಡಲು ಕ್ಲಸ್ಟರ್‌ಗಳನ್ನು ರಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಕೇಂದ್ರ ಕೃಷಿ ಹಾಗೂ ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ರಾಜ್ಯದಲ್ಲಿ ಆಹಾರ ಪದಾರ್ಥಗಳನ್ನು ರಫ್ತು ಮಾಡುವ ಕ್ಲಸ್ಟರ್‌ಗಳ ಸಂಖ್ಯೆ ಕಡಿಮೆ ಇದ್ದು, ಆದ್ಯತೆ ಮೇರೆಗೆ ಕ್ಲಸ್ಟರ್‌ಗಳನ್ನು ಹೆಚ್ಚಿಸಲು ರಾಜ್ಯದ ಕೃಷಿ ಸಚಿವರ ಬಳಿ ಚರ್ಚಿಸಲಾಗಿದೆ. ಮಂಡ್ಯದಲ್ಲಿ ಕಬ್ಬು, ಚಾಮರಾಜನಗರದಲ್ಲಿ ಅರಿಶಿನ ಹಾಗೂ ಇತರ ಜಿಲ್ಲೆಗಳಲ್ಲಿ ಹಣ್ಣು ಹಾಗೂ ಸಿರಿಧಾನ್ಯಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತಿದ್ದು, ಬೇಡಿಕೆ ಇರುವ ಕಡೆಗೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ರಫ್ತು ಮಾಡಲು ಕ್ಲಸ್ಟರ್‌ಗಳು ನೆರವಾಗಲಿವೆ ಎಂದರು.

2023 ವಿಶ್ವ ಸಿರಿಧಾನ್ಯಗಳ ವರ್ಷ ಎಂದು ವಿಶ್ವಸಂಸ್ಥೆ ಘೋಷಿಸಿದೆ. ದೇಶದಲ್ಲಿ ಸಿರಿಧಾನ್ಯ ಬೆಳೆಯಲು ರೈತರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಮಣಿಪುರ, ನಾಗಾಲೆಂಡ್, ಸಿಕ್ಕಿಂ, ಮೇಘಾಲಯ, ತ್ರಿಪುರಾಗಳಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ಆಹಾರ ಪದಾರ್ಥಗಳು ವಿವಿಧ ದೇಶಗಳಿಗೆ ರಫ್ತಾಗುತ್ತಿದ್ದು, ರಾಜ್ಯದಲ್ಲೂ ಸಾವಯವ ಕೃಷಿಗೆ ಒತ್ತು ನೀಡುವ ಮೂಲಕ ರೈತರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲಾಗುವುದು ಎಂದರು.

ಇದಕ್ಕೂ ಮುನ್ನ ಕಡೇಕಾರಿನಲ್ಲಿ ಸಚಿವೆ ಶೋಭಾ ಕರಂದ್ಲಾಜೆ ಭತ್ತದ ಗದ್ದೆಯಲ್ಲಿ ಕಳೆ ತೆಗೆದರು. ಬಳಿಕ ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳ ಜತೆ ಉಡುಪಿಯ ಪುರಭವನದಲ್ಲಿ ಭೋಜನ ಮಾಡಿದರು.

ಉಡುಪಿಯ ಕಡೇಕಾರಿನಲ್ಲಿ ಗುರುವಾರ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಭತ್ತದ ಗದ್ದೆಯಲ್ಲಿ ಕಳೆ ತೆಗೆದರು.

ಸಿನಿಮಾ ಪುರವಣಿ

ಶಿವರಾಜ್‌ಕುಮಾರ್

ಮೆಹ್ರೀನ್ ಫಿರ್ಜಾದ

‘ನಿರೀಕ್ಷೆಯಿಲ್ಲದ ಸಿನಿಪಯಣ ಚೆನ್ನ

1986ರಲ್ಲಿ ಸಿನಿಮಾ ರಂಗಕ್ಕೆ ಕಾಲಿಟ್ಟ ಶಿವರಾಜ್‌ಕುಮಾರ್ 125ನೇ ಚಿತ್ರದ ಹೊಸ್ತಿಲಿನಲ್ಲಿದ್ದಾರೆ. 35 ವರ್ಷಗಳ ಈ ಸಿನಿಪಯಣವನ್ನು ‘ಆನಂದ್’ ಎಂಬ ಪ್ರೇಮಕಥೆಯ ಮೂಲಕ ಆರಂಭಿಸಿದ ಶಿವಣ್ಣನ 124ನೇ ಸಿನಿಮಾ ‘ನೀ ಸಿಗೋವರೆಗೂ’ ಕೂಡಾ ಪ್ರೇಮಕಥೆಯೇ ಆಗಿದೆ. 125ನೇ ಸಿನಿಮಾ ‘ವೇದ’ಕ್ಕೆ ಸಿದ್ಧತೆ ಆರಂಭಗೊಂಡಿದ್ದು ಈ ಕುರಿತು ಸಿನಿಮಾ ಪುರವಣಿ ಜೊತೆ ಮಾತಿಗಿಳಿದ ಅವರು ಹೀಗೆಂದರು...

ಪ್ರಜಾವಾಣಿ ನೋಡಿಯೊ — ಸಂದರ್ಶನದ ವಿಡಿಯೊ ನೋಡಲು ಇಲ್ಲಿ ಸ್ಕ್ಯಾನ್ ಮಾಡಿ

ಅಭಿಲಾಷ್ ಪಿ.ಎಸ್.

35 ವರ್ಷದ ಸಿನಿಪಯಣದಲ್ಲಿ 124ನೇ ಸಿನಿಮಾ. ಇಷ್ಟೆಲ್ಲ ಸಾಧಿಸುತ್ತೇನೆ ಎಂದುಕೊಂಡಿದ್ರಾ?

‘ಆನಂದ್’ ಚಿತ್ರ ಕಾಲೇಜು, ಭಾವನಾತ್ಮಕ ಪ್ರೇಮಕಥೆಯ ಕೌಟುಂಬಿಕ ಚಿತ್ರವಾಗಿತ್ತು. ಆ ಚಿತ್ರದಲ್ಲಿ ‘ನಾನು ತಮ್ಮ ಮಗ’ ಎಂದು ಅಪ್ಪನಿಂದ ಕರೆಸಿಕೊಳ್ಳುವ ಪ್ರಯತ್ನದಲ್ಲಿ ನಾಯಕನಿರುತ್ತಾನೆ. ‘ಆನಂದ್’ನಲ್ಲಿ ಯಾವ ಎಮೋಷನಲ್ ಡ್ರಾಮಾ ಇತ್ತೋ ಅದಕ್ಕಿಂತ ವಿಭಿನ್ನವಾದ ಪ್ರೇಮಕಥೆ ‘ನೀ ಸಿಗೋವರೆಗೂ’ ಚಿತ್ರದಲ್ಲಿ ಇರಲಿದೆ. 35 ವರ್ಷಗಳಲ್ಲಿ ಸಿನಿ ಪಯಣದಲ್ಲಿ ಇಷ್ಟೆಲ್ಲ ಸಾಧಿಸುತ್ತೇನೆ ಎಂದು ಅಂದುಕೊಳ್ಳಲು ಸಾಧ್ಯವೇ ಇಲ್ಲ. ಜೀವನದಲ್ಲಿ ನಿರೀಕ್ಷೆಗಿಂತ ಆಗುವುದನ್ನು ಒಪ್ಪಿಕೊಳ್ಳುತ್ತಾ ಹೋಗಬೇಕು. ಹೀಗಿದ್ದಾಗ ಜೀವನ ಚೆನ್ನಾಗಿರುತ್ತದೆ. ಇದನ್ನು ಸಾಧನೆ ಎನ್ನಲು ಸಾಧ್ಯವೇ ಇಲ್ಲ. ಇಷ್ಟು ಸಾಧಿಸುತ್ತೇನೆ ಎಂದು ನನಗೇ ಗೊತ್ತಿರಲಿಲ್ಲ. 35 ವರ್ಷದಲ್ಲಿ ನನ್ನ ತಂದೆ, ತಾಯಿ, ಕುಟುಂಬ, ಚಿ.ಉದಯ್‌ಶಂಕರ್, ವರದಣ್ಣ, ಚಿತ್ರರಂಗದ ನಿರ್ದೇಶಕರ ಬೆಂಬಲ, ಅಭಿಮಾನಿಗಳ ಪ್ರೀತಿ ಇವೆಲ್ಲವೂ ಈ ಸಾಧನೆಯ ಭಾಗವಾಗಿದೆ. ಈ ಬೆಂಬಲ ಇಲ್ಲದೆ ನಾನು ಏನನ್ನೂ ಸಾಧಿಸಲು ಆಗುತ್ತಿರಲಿಲ್ಲ.

- **‘ನೀ ಸಿಗೋವರೆಗೂ’ ಚಿತ್ರದ ಬಗ್ಗೆ?**

ನಿರ್ದೇಶಕ ರಾಮು ಧುಲಿಪುಡಿ ಅವರು ಈ ಚಿತ್ರದ ಕಥೆ ಹೇಳುವಾಗ ‘ಪ್ರೇಮಕಥೆ’ ಹೊಂದಿರುವ ಚಿತ್ರವೆಂದು ನನಗೂ ಖುಷಿ ಆಯಿತು. ಏಕೆಂದರೆ, ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ‘ಮಫ್ತಿ’, ‘ಟಗರು’, ‘ದಿ ವಿಲನ್’ ರೀತಿಯ ಕೇವಲ ಆ್ಯಕ್ಷನ್, ರೌಡಿಸಂ ಕಥೆಯ ಚಿತ್ರಗಳನ್ನು ಮಾಡಿದ್ದೆ. ಈ ವಯಸ್ಸಿನಲ್ಲೂ ಪ್ರೇಮಕಥೆಯ ಚಿತ್ರಗಳಲ್ಲಿ ಹೇಗೆ ಕಾಣಿಸಬೇಕು ಎನ್ನುವ ಗೊಂದಲ ನನ್ನಲ್ಲಿತ್ತು. ಇದಕ್ಕೆ ರಾಮು ಅವರು ತಮ್ಮ ಸ್ಕ್ರೀನ್‌ಪ್ಲೇನಲ್ಲಿ ಬದಲಾವಣೆ ತಂದರು. ಈ ಕೋವಿಡ್ ಸಂದರ್ಭದಲ್ಲೂ ನಿರ್ಮಾಪಕರು ಚಿತ್ರ ನಿರ್ಮಾಣಕ್ಕೆ ಮುಂದೆ ಬಂದಾಗ ಇತರರಿಗೆ ಇದು ಪ್ರೋತ್ಸಾಹವಾಗುತ್ತದೆ. ಚಿತ್ರದ ವಿಷಯ ಬಹಳ ಸರಳವಾಗಿದ್ದರೂ, ಇದು ಎಲ್ಲರಿಗೂ ಕನೆಕ್ಟ್ ಆಗುತ್ತದೆ. ಯಾವುದೇ ವಸ್ತು ಅಥವಾ ಮನುಷ್ಯನೇ ಆಗಿರಬಹುದು ಸಿಗೋವರೆಗೂ ಏನು? ಸಿಕ್ಕಿದ ಮೇಲೆ ಏನು? ಸಿಗದೇ ಹೋದರೆ ಏನು? ಎಂಬುವುದು ಈ ಚಿತ್ರದ ಸಿಂಪಲ್ ಲೈನ್. ಈ ಚಿತ್ರವು ‘ರಥಸಪ್ತಮಿ’ ರೀತಿ ಆಗಬಹುದು ಎನ್ನುವ ನಿರೀಕ್ಷೆಯಲ್ಲಿ ನಾನಿದ್ದೇನೆ. ಕಥೆಯ ಒಳಗಡೆ ಭಾವನೆಗಳ ಯುದ್ಧವಿದೆ. ಇದರಲ್ಲಿ ಎರಡು ಶೇಡ್‌ಗಳಲ್ಲಿ ನಾನು ಕಾಣಿಸಿಕೊಳ್ಳಲಿದ್ದೇನೆ. ಸೇನಾ ಅಧಿಕಾರಿಯ ಪಾತ್ರದಲ್ಲೂ ನಾನು ಈ ಚಿತ್ರದಲ್ಲಿ ಕಾಣಿಸಿಕೊಳ್ಳಲಿದ್ದೇನೆ. ಈ ಚಿತ್ರಕ್ಕೆ ನಾನೇ ಶೀರ್ಷಿಕೆಯ ಸಲಹೆ ನೀಡಿದ್ದೆ. ಇದು ಎಲ್ಲ ಪಾತ್ರಕ್ಕೂ ಅನ್ವಯಿಸಲಿದೆ. ‘ಭಜರಂಗಿ-2’ ಚಿತ್ರದಲ್ಲಿ ಬರುವ ಹಾಡಿನಲ್ಲಿ ಈ ಸಾಲಿದೆ.

- **ಯಾವಾಗಿನಿಂದ, ಎಲ್ಲೆಲ್ಲಿ ಚಿತ್ರೀಕರಣ?**

ಆ.19ರಿಂದ ಈ ಚಿತ್ರದ ಚಿತ್ರೀಕರಣ ಆರಂಭವಾಗಲಿದ್ದು, ಬೆಂಗಳೂರು, ಚಿಕ್ಕಮಗಳೂರು, ಕಾಶ್ಮೀರ, ವಾರಣಾಸಿಯಲ್ಲಿ ಚಿತ್ರೀಕರಣ ನಡೆಯಲಿದೆ. ಆಗಸ್ಟ್, ಅಕ್ಟೋಬರ್ ಹಾಗೂ ಡಿಸೆಂಬರ್‌ನಲ್ಲಿ ಮೂರು ಶೆಡ್ಯೂಲ್‌ನಲ್ಲಿ ಚಿತ್ರೀಕರಣ ನಡೆಯಲಿದೆ. ಜನವರಿಯಲ್ಲಿ ಚಿತ್ರೀಕರಣ ಪೂರ್ಣಗೊಂಡು, 2022ರ ಏಪ್ರಿಲ್ ವೇಳೆಗೆ ಚಿತ್ರವು ತೆರೆಗೆ ಬರುವ ಸಾಧ್ಯತೆ ಇದೆ. ತೆಲುಗು ಹಾಗೂ ಕನ್ನಡದಲ್ಲಿ ಈ ಚಿತ್ರ ತೆರೆ ಕಾಣಲಿದೆ. ‘ಟಗರು’ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಿದ್ದ ಚರಣ್ ರಾಜ್ ಈ ಚಿತ್ರಕ್ಕೂ ಸಂಗೀತ ನಿರ್ದೇಶಕರು. ‘ಟಗರು’ ಚಿತ್ರದಲ್ಲಿ ಆ್ಯಕ್ಷನ್ ಹಾಗೂ ಲವ್ ಎಂಬ ಎರಡೂ ಫ್ಲೇವರ್‌ನ ಹಾಡುಗಳಿದ್ದವು. ‘ನೀ ಸಿಗೋವರೆಗೂ’ ಸಂಪೂರ್ಣ ಪ್ರೇಮಕಥೆ ಆಗಿರುವುದರಿಂದ ಇದಕ್ಕೆ ಮತ್ತಷ್ಟು ಅದ್ಭುತವಾಗಿ ಸಂಗೀತ ನೀಡಲಿದ್ದಾರೆ ಎನ್ನುವ ಭರವಸೆ ನನಗೆ ಇದೆ.

- **59 ವರ್ಷವಾಯ್ತು.ಮಫ್ತಿ ತರಹದ ಪಾತ್ರಗಳಲ್ಲೇ ಮುಂದುವರಿಯಬೇಕು ಎನ್ನುವ ಯೋಚನೆ ಇದೆಯೇ?**

ನನಗೆ ಹಾಗೆ ಅನಿಸುವುದಿಲ್ಲ. ಸಿನಿಮಾ ಎನ್ನುವುದೇ ಒಂದು ಹಸಿವು. ಈ ಹಸಿವನ್ನು ಎಂದಿಗೂ ಬಿಟ್ಟುಕೊಡಬಾರದು. ಎಲ್ಲ ರೀತಿಯ ಪಾತ್ರಗಳನ್ನು ಮಾಡಬೇಕು ಎನ್ನುವ ಆಸೆ ನನ್ನದು. ಇದರಲ್ಲಿ ತಪ್ಪೇನಿಲ್ಲ. ಎಲ್ಲರಿಗೂ ಅವರದೇ ಆದ ಸ್ಟೈಲ್ ಇದೆ. ನನಗೆ ಎಲ್ಲ ರೀತಿಯ ಪಾತ್ರಗಳನ್ನೂ ಜೀವಿಸಬೇಕು, ಎಲ್ಲ ವರ್ಗದ ಪ್ರೇಕ್ಷಕರನ್ನೂ ತಲುಪಬೇಕು ಎನ್ನುವ ಆಸೆ ನನ್ನದು. ಲಾಂಗ್ ಹಿಡಿದರೆ ಕೆಲವೊಮ್ಮೆ ಮಕ್ಕಳಿಗೂ ಇಷ್ಟ ಆಗುತ್ತದೆ, ವಯಸ್ಸಾದವರಿಗೂ ಇಷ್ಟ ಆಗುತ್ತದೆ. ಚಿತ್ರದ ವಿಷಯ ಹಿಡಿಸಿದಾಗ ಅದು ಲಾಂಗ್ ಆಗಿರಲಿ ಅಥವಾ ಗುಲಾಬಿಯೇ ಆಗಿರಲಿ ಜನರಿಗೆ ಇಷ್ಟವಾಗುತ್ತದೆ.

- **‘ಬೈರಾಗಿ’ಯಲ್ಲಿ ಶಿವಣ್ಣ–ಡಾಲಿ ಕಾಂಬಿನೇಷನ್ ಹೇಗಿದೆ?**

ಡಾಲಿ ಧನಂಜಯ್ ಉತ್ತಮ ಸ್ನೇಹಿತ. ಅವರ ಜೊತೆಗಿನ ಸಿನಿಮಾ ಪಯಣ ಚೆನ್ನಾಗಿದೆ. ಕಾಂಬಿನೇಷನ್ ಎನ್ನುವುದಕ್ಕಿಂತ ಧನಂಜಯ್ ಒಳ್ಳೆಯ ಕಲಾವಿದ. ಅವರಲ್ಲಿ ಒಂದು ಕಿಡಿ ಇದೆ. ‘ಟಗರು’ವಿನಲ್ಲಿ ನೋಡಿದ ಧನಂಜಯ್ ಅವರನ್ನು ‘ಬೈರಾಗಿ’ಯಲ್ಲಿ ನೋಡಲು ಸಾಧ್ಯವಿಲ್ಲ. ಇಲ್ಲಿ ನಮ್ಮ ಕಾಂಬಿನೇಷನ್ ವಿಭಿನ್ನ. ಇಲ್ಲಿ ನಮ್ಮ ಪಾತ್ರಗಳೇ ಪ್ರಶ್ನೆಗಳಾಗಲಿವೆ. ಇವರೇನಾ ‘ಟಗರು’ ಚಿತ್ರದ ಡಾಲಿ–ಶಿವ? ಎನ್ನುವುದು ಪ್ರೇಕ್ಷಕರನ್ನು ಕಾಡಲಿದೆ. ಸದ್ಯಕ್ಕೆ ಈ ಚಿತ್ರದ ಪೋಸ್ಟರ್‌ನಲ್ಲಿ ನಾನು ಹುಲಿವೇಷ ಹಾಕಿ ಲುಕ್ ನೀಡಿದ್ದೇನೆ. ಆ ಲುಕ್ ಕೇವಲ ಪಬ್ಲಿಸಿಟಿ ಗಿಮಿಕ್. ಆದರೆ, ಚಿತ್ರದಲ್ಲಿ ನಮ್ಮನ್ನು ನೋಡಿದಾಗ ಪ್ರೇಕ್ಷಕರಿಗೆ ಖಂಡಿತವಾಗಿಯೂ ಆಶ್ಚರ್ಯವಾಗಲಿದೆ. ಬೈರಾಗಿಯಲ್ಲಿ ನನ್ನ ಪಾತ್ರಕ್ಕೆ ‘ಕರುಣೆ’ಯಿದೆ, ‘ಒರಟುತನ’ವಿದೆ, ‘ತಾಳ್ಮೆ’ಯಿದೆ. 123ನೇ ಚಿತ್ರವಾದ ‘ಬೈರಾಗಿ’ಯ ಚಿತ್ರೀಕರಣ ಇನ್ನೊಂದು 10 ದಿನ ಬಾಕಿ ಇದೆ.

- **125ನೇ ಚಿತ್ರದ ಬಗ್ಗೆ?**

125ನೇ ಚಿತ್ರ ಎ.ಹರ್ಷ ನಿರ್ದೇಶನದ ‘ವೇದ’ ನವೆಂಬರ್‌ನಿಂದ ಚಿತ್ರೀಕರಣ ಆರಂಭವಾಗಲಿದೆ. ಈ ಚಿತ್ರದ ಬಗ್ಗೆ ಇಷ್ಟು ಬೇಗ ಹೇಳುವುದು ಸೂಕ್ತವಾಗುವುದಿಲ್ಲ. ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಈ ಚಿತ್ರ ನಿರ್ಮಾಣಗೊಳ್ಳಲಿದೆ.

- *** ಶಿವಣ್ಣನಿಗೆ ಸುದೀಪ್ ನಿರ್ದೇಶನ ಮಾಡುತ್ತಾರಾ?**

‘ನೀ ಸಿಗೋವರೆಗೂ’ ಚಿತ್ರದ ಮುಹೂರ್ತದ ಸಂದರ್ಭದಲ್ಲೇ ಸುದೀಪ್ ಈ ಕುರಿತು ನನ್ನ ಜೊತೆ ಮಾತನಾಡಿದರು. ಅವರ ಕಾನ್ಸೆಪ್ಟ್ ನನಗೆ ಇಷ್ಟವಾಯಿತು. ನೀವು ಚಿತ್ರ ಮಾಡುವುದಿದ್ದರೆ ಸ್ಕ್ರೀನ್‌ಪ್ಲೇ ಮಾಡಿಕೊಡುತ್ತೇನೆ ಎಂದು ಸುದೀಪ್ ಹೇಳಿದ್ದಾರೆ. ಹಲವು ವರ್ಷಗಳಿಂದಲೇ ನಾವಿಬ್ಬರೂ ಜೊತೆಯಾಗಿ ಸಿನಿಮಾ ಮಾಡಬೇಕು ಎಂದಿತ್ತು. ಆದರೆ ಅದು ಆಗಲಿಲ್ಲ. ನೀವು ಇದನ್ನು ನಿರ್ದೇಶನ ಮಾಡುವುದಿದ್ದರೆ ನಾನೇ ನಟಿಸುತ್ತೇನೆ ಎಂದಿದ್ದೇನೆ.

ಭಾರತಿ ವಿಷ್ಣುವರ್ಧನ್ ಮತ್ತು ಅಳಿಯ ಅನಿರುದ್ಧ

ಭಾರತಿ ಕಥನದ ‘ಬಾಳೇ ಬಂಗಾರ’

ಶರತ್ ಹೆಗ್ಡೆ

ಭಾರತಿ ವಿಷ್ಣುವರ್ಧನ್ ಅಂದರೆ ಒಬ್ಬರು ಖ್ಯಾತ ನಟಿ, ನಟ ದಿವಂಗತ ವಿಷ್ಣುವರ್ಧನ್ ಅವರ ಪತ್ನಿ ಅಷ್ಟೇನಾ?

ಅಲ್ಲ. ಇದುವರೆಗೆ ತಿಳಿದಿಲ್ಲದ ಭಾರತಿ ಅವರ ಬದುಕು, ಭಾವ, ವ್ಯಕ್ತಿತ್ವ, ಸಾಧನೆ ಎಲ್ಲವನ್ನೂ ಅನಾವರಣ ಮಾಡಲು ಬಂದಿದೆ ‘ಬಾಳೇ ಬಂಗಾರ’. ಆ. 24ರಂದು ಈ ಸಾಕ್ಷ್ಯಚಿತ್ರದ ಪ್ರೀಮಿಯರ್ ಷೋ ನಡೆಯಲಿದೆ.

ಭಾರತಿ ವಿಷ್ಣುವರ್ಧನ್ ಅವರ ಕುರಿತ ಸಾಕ್ಷ್ಯಚಿತ್ರವನ್ನು ನಿರ್ಮಿಸಿ ಬಿಡುಗಡೆಗೆ ಮುಂದಾಗಿದ್ದಾರೆ ಅವರ ಅಳಿಯ ‘ಜೊತೆ ಜೊತೆಯಲಿ’ ಧಾರಾವಾಹಿ ಖ್ಯಾತಿಯ ಅನಿರುದ್ಧ ಜಟ್ಕರ್.

‘ಬಾಳೇ ಬಂಗಾರದಲ್ಲಿ ಏನಿದೆ?

ಸಾಕ್ಷ್ಯಚಿತ್ರ ಹುಟ್ಟಿದ ಬಗೆಯನ್ನು ಅನಿರುದ್ಧ ವಿವರಿಸಿದ್ದು ಹೀಗೆ.

‘ಅಮ್ಮನನ್ನು (ಭಾರತಿ ವಿಷ್ಣುವರ್ಧನ್) ಒಮ್ಮೆ ಒಬ್ಬರು ಅಭಿಮಾನಿ ಮಹಿಳೆಯು ತಮ್ಮ ಮಗಳಿಗೆ ಪರಿಚಯಿಸುವಾಗ ಇವರು ವಿಷ್ಣುವರ್ಧನ್ ಅವರ ಪತ್ನಿ ಎಂದು ಹೇಳಿದರು. ನನಗ್ಯಾಕೋ ಅದು ಅಪೂರ್ಣ ಅನಿಸಿತು. ಏಕೆಂದರೆ ಅಪ್ಪ ಇವರನ್ನು ಮದುವೆಯಾದಾಗ ಭಾರತಿ ಅವರಾಗಲೇ ಬಹುದೊಡ್ಡ ತಾರೆ ಆಗಿದ್ದರು. ಹೀಗಾಗಿ ಅವರ ಬದುಕನ್ನು ಸಮಗ್ರವಾಗಿ ಕಟ್ಟಿಕೊಡಬೇಕು ಅನಿಸಿತು. ಇವತ್ತಿನ ಪೀಳಿಗೆಗೆ ಅವರು ಪರಿಚಯ ಆಗಬೇಕು. ಹೊಸ ಕಲಾವಿದರಿಗೆ ಅವರು ಸ್ಫೂರ್ತಿ ಆಗಬೇಕು. ಇದೊಂದು ದಾಖಲೆಯಾಗಿ ಉಳಿಯಬೇಕು ಎಂಬ ಉದ್ದೇಶದಿಂದ ಈ ಸಾಕ್ಷ್ಯಚಿತ್ರ ನಿರ್ಮಿಸಲು ಮುಂದಾದೆ’ ಎಂದು ಹೇಳಿದರು.

> ಭಾರತಿ ವಿಷ್ಣುವರ್ಧನ್ ಅವರು ಇಂದಿನ ಹಾಗೂ ಮುಂದಿನ ಪೀಳಿಗೆಗೆ ಪರಿಪೂರ್ಣವಾಗಿ ಪರಿಚಯಿಸುವ ಉದ್ದೇಶದಿಂದ ‘ಬಾಳೇ ಬಂಗಾರ’ ಸಾಕ್ಷ್ಯಚಿತ್ರ ನಿರ್ಮಿಸಿದ್ದಾರೆ ಅನಿರುದ್ಧ ಜಟ್ಕರ್. ಕನ್ನಡದ ಮೇರು ನಟಿಯೊಬ್ಬರ ಶಾಶ್ವತ ದಾಖಲೆಯಾಗಿ ಇದು ಉಳಿಯಲಿದೆ ಎಂಬುದು ಅವರ ಆಶಯ.

‘ಭಾರತಿ ಅವರು ಸೂಪರ್ ಸ್ಟಾರ್ ಆಗಲು ಏನೆಲ್ಲಾ ಕಷ್ಟಪಟ್ಟರು. ಅಪ್ಪ ಸಂಕಷ್ಟದಲ್ಲಿ ಸಿಲುಕಿದಾಗ ಅಮ್ಮ ಹೇಗೆ ಬೆನ್ನೆಲುಬಾಗಿ ನಿಂತು ನಿಭಾಯಿಸಿದರು. ಅಪ್ಪನ ಕಷ್ಟದಲ್ಲಿ ಹೇಗೆ ಹೆಗಲುಕೊಟ್ಟರು ಎಂಬುದು ಮಾತ್ರವಲ್ಲ, ಅಪ್ಪ ಭೌತಿಕವಾಗಿ ನಮ್ಮನ್ನು ಅಗಲಿದ ಮೇಲೆ ಅವರ ಬದುಕು ಹೇಗಿದೆ ಎಂಬುದನ್ನು ಸಾಕ್ಷ್ಯಚಿತ್ರದಲ್ಲಿ ಹೇಳಿದ್ದೇನೆ’ ಎಂದರು ಅನಿರುದ್ಧ.

ಭಾರತಿ ಅವರ ಬಾಲ್ಯದಿಂದ ಇಂದಿನವರೆಗಿನ ಎಲ್ಲ ಹಂತಗಳ ಚಿತ್ರಣ ಈ ಸಾಕ್ಷ್ಯಚಿತ್ರದಲ್ಲಿದೆ. 2 ಗಂಟೆ 21 ನಿಮಿಷ ಅವಧಿಯ ಸಾಕ್ಷ್ಯಚಿತ್ರ ಇದು. ಕೀರ್ತಿ ಕ್ರಿಯೇಷನ್ಸ್ ಬ್ಯಾನರ್ ಅಡಿ ಈ ಸಾಕ್ಷ್ಯಚಿತ್ರ ನಿರ್ಮಾಣವಾಗಿದೆ. ಒಟಿಟಿ ವೇದಿಕೆಗಳಲ್ಲಿ ಬಿಡುಗಡೆ ಆಗಲಿದೆ.

ಅನಿರುದ್ಧ ಈ ಸಾಕ್ಷ್ಯಚಿತ್ರದ ಪರಿಕಲ್ಪನೆ, ಸ್ಕ್ರಿಪ್ಟ್‌ನಿಂದ ಹಿಡಿದು ನಿರೂಪಣೆಯವರೆಗೆ ಎಲ್ಲ ಕೆಲಸಗಳನ್ನು ನಿರ್ವಹಿಸಿದ್ದಾರೆ. ಈ ಚಿತ್ರಕ್ಕಾಗಿ ಅನಿರುದ್ಧ ಅವರು ಭಾರತಿ ಅಭಿನಯದ 110 ಚಿತ್ರಗಳನ್ನು ವೀಕ್ಷಿಸಿ ಅಧ್ಯಯನ ಮಾಡಿ ದೃಶ್ಯಗಳನ್ನು ಆಯ್ದುಕೊಂಡಿದ್ದಾರೆ. ಅಪರೂಪದ ಫೋಟೊಗಳು, ದಕ್ಷಿಣ ಭಾರತದ ಖ್ಯಾತ ನಟರ ಹೇಳಿಕೆಗಳು, ಭಾರತಿ ಅವರ ಸಂದರ್ಶನ, ಪದ್ಮಶ್ರೀ ಪುರಸ್ಕಾರದ ವಿಡಿಯೊ ಎಲ್ಲವೂ ಚಿತ್ರದಲ್ಲಿ ಇವೆ.

‘ಈ ಸಾಕ್ಷ್ಯಚಿತ್ರ ನಿರ್ಮಿಸಲು ಮೂರು ವರ್ಷ ಅವಧಿ ಹಿಡಿದಿದೆ. ಎಲ್ಲ ಅಂಶಗಳನ್ನೂ ಪರಿಗಣಿಸಲಾಗಿದೆ. ಈ ನಡುವೆ ವಿಷ್ಣುವರ್ಧನ್, ಭಾರತಿ ಹಾಗೂ ಮೊಮ್ಮಕ್ಕಳನ್ನೂ ಸೇರಿಸಿಕೊಂಡು ಕನ್ನಡದಲ್ಲೇ ‘ಸಾಹಸ ಸಿಂಹ’ ಎಂಬ ಕಾಮಿಕ್ ಸರಣಿಯನ್ನೂ ಮಾಡಿದೆವು. ‘ಹೃದಯಗೀತೆ’ ಎಂಬ ಕಾರ್ಯಕ್ರಮ ಮಾಡಿ ಅದರಿಂದ ನಿಧಿ ಸಂಗ್ರಹಿಸಿ ಹೃದಯ ಸಮಸ್ಯೆ ಉಳ್ಳವರಿಗೆ ನೀಡಿದೆವು. ವಿಭಾ ಚಾರಿಟಬಲ್ ಟ್ರಸ್ಟ್‌ನಿಂದ ನಡೆಸುತ್ತಿರುವ ಸೇವಾ ಕಾರ್ಯಗಳಲ್ಲಿ ಭಾರತಿ ಅವರು ತೊಡಗಿದ್ದಾರೆ. ಜೊತೆಗೆ ವಿಷ್ಣು ಸ್ಮಾರಕ ನಿರ್ಮಾಣವೂ ಭರದಿಂದ ಸಾಗಿದೆ’ ಎಂದರು ಅನಿರುದ್ಧ.

‘ಅಂಗೈಲಿ ಅಕ್ಷರ’ ಚಿತ್ರದ ದೃಶ್ಯ

‘ಅಂಗೈಲಿ ಅಕ್ಷರ’ ಹೇಳೋದೇನು?

ಕ್ಯಾಬ್ ಚಾಲಕ ಸಿದ್ದರಾಜು ಕಾಳೇನಹಳ್ಳಿ ಅವರೀಗ ಚಿತ್ರ ನಿರ್ದೇಶಕರಾಗಿದ್ದಾರೆ. ವಿಶೇಷ ಎಂದರೆ ಈ ಚಿತ್ರಕ್ಕೆ ಸಿದ್ದರಾಜು ಅವರ ಕಾರಿನಲ್ಲಿ ಪ್ರಯಾಣಿಸಿದ್ದ ಜ್ಞಾನೇಶ್ ಎಂಬುವರು ನಿರ್ಮಾಪಕ. ಸಿದ್ದರಾಜು ಅವರ ಕನಸಿಗೆ ಅವರು ಕೈಜೋಡಿಸಿದ್ದಾರೆ. ಕೆ.ಎಚ್.ಎಸ್. ಲಾಂಛನದ ಅಡಿ ‘ಅಂಗೈಲಿ ಅಕ್ಷರ’ ಚಿತ್ರ ನಿರ್ಮಾಣವಾಗಿದೆ.

ಸಿದ್ದರಾಜು ಕಾಳೇನಹಳ್ಳಿ ಅವರು ಕಥೆ ಚಿತ್ರಕಥೆ ಹಾಗೂ ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ.

ಬಾಲ್ಯದಲ್ಲೇ ತಂದೆತಾಯಿ ಕಳೆದುಕೊಂಡ ಮಕ್ಕಳು ವಿದ್ಯಾಭ್ಯಾಸ ಹಾಗೂ ತಮ್ಮ ಜೀವನ ಹೇಗೆ ರೂಪಿಸಿಕೊಳ್ಳಬೇಕು ಎನ್ನುವುದೇ ಈ ಚಿತ್ರದ ಕಥಾವಸ್ತು ಎನ್ನುತ್ತಾರೆ ಸಿದ್ದರಾಜು. ಹುಲಿಯೂರುದುರ್ಗ, ಮಾಗಡಿ ತಾವರೆಕೆರೆ, ಬೆಂಗಳೂರು ನಗರ ಸುತ್ತಮುತ್ತ ಚಿತ್ರೀಕರಣ ನಡೆದಿದೆ. ಚಿತ್ರ ಶೀಘ್ರದಲ್ಲೇ ತೆರೆಗೆ ಬರಲಿದೆ.

ನಾಗೇಶ್ ಉಜ್ಜನಿ ಸಹ ನಿರ್ದೇಶನ ಹಾಗೂ ವೀ.ಶ್ರೀ. ಮಲ್ಲಿಕಾರ್ಜುನ್ ಎಂ.ಎನ್., ಸೋಮಣ್ಣ ಅವರ ಸಹಾಯಕ ನಿರ್ದೇಶನವಿದೆ.

ಅಮ್ಮ ಮಗನ ನಡುವಿನ ಬಾಂಧವ್ಯ, ಶಿಕ್ಷಣದ ಮಹತ್ವದ ಅರಿವು ಮೂಡಿಸುವ ಕುರಿತಾದ ಈ ಚಿತ್ರದಲ್ಲಿ ಕೌಟುಂಬಿಕ, ಸ್ನೇಹ, ಹಾಸ್ಯ ಸಹಿತ ಎಲ್ಲಾ ಮನರಂಜನಾತ್ಮಕ ಅಂಶಗಳು ಇವೆ ಎನ್ನುತ್ತಾರೆ ಸಿದ್ದರಾಜು.

ಕಲರ್ಸ್‌ನಲ್ಲಿ ಶೀಘ್ರ ‘ಮತ್ತೆ ಮನ್ವಂತರ’



ಟಿ.ಎನ್. ಸೀತಾರಾಂ

ಖ್ಯಾತ ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ್ ಅವರು ‘ಕಲರ್ಸ್ ಚಾನಲ್‘ಗಾಗಿ ನಿರ್ದೇಶಿಸುತ್ತಿರುವ ಹೊಸ ಧಾರಾವಾಹಿ ‘ಮತ್ತೆ ಮನ್ವಂತರ‘ಕ್ಕೆ ಇತ್ತೀಚೆಗಷ್ಟೇ ಮುಹೂರ್ತ ನಡೆದಿದೆ.

‘ಮಾಯಾಮೃಗ‘, ‘ಮನ್ವಂತರ‘, ‘ಮುಕ್ತ‘, ಮಹಾಪರ್ವ, ‘ಮುಕ್ತ ಮುಕ್ತ ಮುಕ್ತ, ‘ಮಗಳು ಜಾನಕಿ‘ಯಂತಹ ಜನಪ್ರಿಯ ಕಿರುತೆರೆ ಧಾರಾವಾಹಿಗಳನ್ನು ನಿರ್ಮಿಸಿರುವ ಭೂಮಿಕಾ ಸಂಸ್ಥೆ, ‘ಮತ್ತೆ ಮನ್ವಂತರ‘ ಧಾರಾವಾಹಿಯನ್ನೂ ನಿರ್ಮಾಣ ಮಾಡುತ್ತಿದ್ದು, ‘ಕಲರ್ಸ್ ಚಾನಲ್‘ನಲ್ಲಿ ಶೀಘ್ರದಲ್ಲೇ ಪ್ರಸಾರ ಆರಂಭವಾಗಲಿದೆ.

ವರ್ಷಗಳ ಹಿಂದೆ ಪ್ರಸಾರವಾದ ‘ಮನ್ವಂತರ‘ ಧಾರವಾಹಿಯ ಮುಂದುವರಿದ ಭಾಗದಂತಿರುವ ಈ ಧಾರಾವಾಹಿಯ ಮುಖ್ಯ ಭೂಮಿಕೆಯಲ್ಲಿ ಮಾಳವಿಕ ಅವಿನಾಶ್, ನಿರಂಜನ್ ದೇಶಪಾಂಡೆ, ಅಜಿತ್ ಹಂದೆ, ಮೇಧಾ ವಿದ್ಯಾಭೂಷಣ್ (ಹೊಸ ಪರಿಚಯ), ಮೇಘಾ ನಾಡಿಗೇರ್, ಸುಂದರ್, ಚಂದನ್ ಶಂಕರ್, ಪ್ರಶಾಂತ್ ಶೆಟ್ಟಿ (ಹೊಸ ಪರಿಚಯ) ಮತ್ತಿತರರು ನಟಿಸಿದ್ದಾರೆ.

ಕವಿ ಎಚ್.ಎಸ್.ವೆಂಕಟೇಶ್ ಮೂರ್ತಿ ಅವರು ಧಾರಾವಾಹಿಯ ಶೀರ್ಷಿಕೆ ಗೀತೆ ರಚಿಸಿದ್ದಾರೆ. ಸಂಗೀತ ಸಂಯೋಜಕ ಪ್ರವೀಣ್ ಡಿ ರಾವ್ ಶೀರ್ಷಿಕೆಗೆ ಗೀತೆಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಗಾಯಕ ವಿಜಯಪ್ರಕಾಶ್ ಶೀರ್ಷಿಕೆ ಗೀತೆ ಹಾಡಿದ್ದಾರೆ.

‘ಕಲರ್ಸ್ ಚಾನೆಲ್‘ನ ಮುಖ್ಯಸ್ಥ ಪರಮೇಶ್ವರ್ ಗುಂಡ್ಕಲ್ ಹಾಗೂ ನಿರ್ದೇಶಕ ಟಿ.ಎನ್. ಸೀತಾರಾಂ ಅವರು ಧಾರಾವಾಹಿಗೆ ಮುಖ್ಯ ಕಥೆ ರಚಿಸಿದ್ದಾರೆ. ಟಿ.ಎನ್. ಸೀತಾರಾಂ, ಅಶ್ವಿನಿ ಅನೀಶ್ ಹಾಗು ಸೌಮ್ಯ ಸಾಲೀಮಠ್ ಅವರು ಸಂಭಾಷಣೆ ಬರೆಯುತ್ತಿದ್ದಾರೆ.

ಅಂಜನ್ ಟ್ರೈಲರ್ ಬಿಡುಗಡೆ



ಅಂಜನ್

‘ಅಂಜನ್’ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಚಿತ್ರದ ಕಥೆಯು ಪ್ರಾರಂಭದಲ್ಲಿ ಹಳ್ಳಿ, ನಂತರ ನಗರಕ್ಕೆ ಕರೆದುಕೊಂಡು ಹೋಗುತ್ತದೆ. ಅಂಗವಿಕಲ, ಅಣ್ಣ ತಂಗಿ ಬಾಂಧವ್ಯ ಮತ್ತು ರೌಡಿಗಳಾದವರ ಮನಃಸ್ಥಿತಿ, ಮನೆಸ್ಥಿತಿ ಹೇಗಿರುತ್ತದೆ? ಮನೆಯಲ್ಲಿ ತಂಗಿಯ ಮದುವೆ ಬಂದಾಗ, ಇಂತಹ ಪರಿಸ್ಥಿತಿಯಲ್ಲಿ ಅಣ್ಣನಾದವನು ಏನು ಮಾಡುತ್ತಾನೆ ಎಂಬ ವಿಷಯಗಳು ತೆರೆದುಕೊಳ್ಳಲಿವೆ. ತಂಗಿಯಾಗಿ ಮಡಿಕೇರಿ ಮುತ್ತಮ್ಮ, ತಾಯಿ ಪಾತ್ರದಲ್ಲಿ ಮಂಜುಳಮ್ಮ ನಟಿಸಿದ್ದಾರೆ.

ಅಂಜನ್ ಅವರು ಈ ಚಿತ್ರದ ನಾಯಕ. ಆರ್.ಸಾಗರ್ ಅವರ ರಚನೆ, ಚಿತ್ರಕಥೆ, ಸಂಭಾಷಣೆ, ನಿರ್ದೇಶನ ಇದೆ. ಬೆಂಗಳೂರು, ಶಿವಮೊಗ್ಗ, ಶಂಕರಘಟ್ಟ, ಹೊನ್ನಾವರ ಕಡೆಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಸರ್ಕಾರವು ಚಿತ್ರಮಂದಿರಗಳಲ್ಲಿ ಶೇಕಡ ನೂರರಷ್ಟು ಆಸನ ಭರ್ತಿಗೆ ಅನುಮತಿ ನೀಡಿದಾಗ, ಚಿತ್ರವನ್ನು ಬಿಡುಗಡೆ ಮಾಡಲಾಗುವುದು ಎನ್ನುತ್ತಾರೆ ಸಾಗರ್.

ಪ್ರದೀಪ್ ಸೋನ್ಸ್ ಅವರು ಈ ಚಿತ್ರದ ನಿರ್ಮಾಪಕ ಮತ್ತು ಖಳನಟ.

ಧ್ರುವ ಸರ್ಜಾ ಮುಂದಿನ ಸಿನಿಮಾ ‘ಮಾರ್ಟಿನ್’

‘ಪೊಗರು’ ಸಿನಿಮಾ ಬಳಿಕ ನಟ ಧ್ರುವ ಸರ್ಜಾ ಅವರ ಅವರ ಮುಂದಿನ ಚಿತ್ರ ಘೋಷಣೆಯಾಗಿದೆ. ‘ಅದ್ದೂರಿ’ ಜೋಡಿ ಇದೀಗ ಮತ್ತೆ ಕೈಜೋಡಿಸಿದೆ. ಎ.ಪಿ. ಅರ್ಜುನ್ ನಿರ್ದೇಶನದಲ್ಲಿ ‘ಮಾರ್ಟಿನ್’ ಚಿತ್ರ ಸೆಟ್ಟೇರಿದೆ. ಫಸ್ಟ್ ಲುಕ್ ಬಿಡುಗಡೆ ಆಗಿದೆ.

ಸಿನಿ ಸಂಕ್ಷಿಪ್ತ

ಮಾರ್ಟಿನ್ ಚಿತ್ರದ ಫಸ್ಟ್‌ಲುಕ್

‘ಪೊಗರು’ ಸಿನಿಮಾ ಬಳಿಕ ನಟ ಧ್ರುವ ಸರ್ಜಾ ಮತ್ತೆ ನಂದಕಿಶೋರ್ ಕಾಂಬಿನೇಷನ್‌ನಲ್ಲಿ ‘ದುಬಾರಿ’ ಚಿತ್ರದಲ್ಲಿ ನಟಿಸಲಿದ್ದಾರೆ ಎನ್ನುವ ಸುದ್ದಿ ಗಾಂಧಿನಗರದಲ್ಲಿ ಹರಿದಾಡಿತ್ತು. ಆದರೆ ಕಾರಣಾಂತರಗಳಿಂದ ಈ ಚಿತ್ರ ಸೆಟ್ಟೇರಲಿಲ್ಲ. ಇದೀಗ ಧ್ರುವ ಸರ್ಜಾ ಅವರ ಮುಂದಿನ ಸಿನಿಮಾ ಘೋಷಣೆಯಾಗಿದ್ದು, ‘ಅದ್ದೂರಿ’ ಜೋಡಿ ಇದೀಗ ಮತ್ತೆ ಕೈಜೋಡಿಸಿದೆ.

ನಿರ್ದೇಶಕ ಎ.ಪಿ.ಅರ್ಜುನ್ ನಿರ್ದೇಶನದ ‘ಮಾರ್ಟಿನ್’ನಲ್ಲಿ ಧ್ರುವ ಸರ್ಜಾ ವಿಭಿನ್ನವಾಗಿ ರಗಡ್‌ಲುಕ್‌ನಲ್ಲಿ ಕಾಣಿಸಿಕೊಂಡಿದ್ದು, ಸ್ವಾತಂತ್ರ್ಯ ದಿನದಂದು ಚಿತ್ರದ ಫಸ್ಟ್‌ಲುಕ್, ಟೀಸರ್ ಹಾಗೂ ಮೋಷನ್ ಪೋಸ್ಟರ್ ಬಿಡುಗಡೆಯಾಗಿದೆ. ಈ ಪಾತ್ರಕ್ಕಾಗಿ ತಮ್ಮ ಮಾತಿನ ಶೈಲಿಯನ್ನು ಧ್ರುವ ಬದಲಾಯಿಸಿಕೊಂಡಿದ್ದಾರೆ. ಅರ್ಜುನ್ ನಿರ್ದೇಶನದ ‘ಅದ್ದೂರಿ’ ಮುಖಾಂತರ ಧ್ರುವ 2012ರಲ್ಲಿ ಚಂದನವನಕ್ಕೆ ಪ್ರವೇಶಿಸಿದ್ದರು.

ಟೀಸರ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅರ್ಜುನ್, ‘ನನ್ನ ಎರಡನೇ ಸಿನಿಮಾ ‘ಅದ್ದೂರಿ’. ಧ್ರುವ ಸರ್ಜಾ ಅವರಿಗೆ ಅದು ಮೊದಲನೇ ಸಿನಿಮಾ. ಆಗ ನಾವಿಬ್ಬರೂ ಚಿತ್ರರಂಗಕ್ಕೆ ಹೊಸಬರೇ. ‘ಅದ್ದೂರಿ’ ನಂತರ ಮತ್ತೆ ಜೊತೆಯಾಗಿ ಸಿನಿಮಾ ಮಾಡಬೇಕು ಎಂದುಕೊಂಡಿದ್ದೆವು. ಆದರೆ ಕಾರಣಾಂತರಗಳಿಂದ ಈ ಯೋಜನೆ ಮುಂದಕ್ಕೆ ಹೋಗುತ್ತಿತ್ತು. ಪ್ರತಿಯೊಂದು ಸಿನಿಮಾಗಳೂ ಜವಾಬ್ದಾರಿ ಹೆಚ್ಚಿಸುತ್ತದೆ. ಪ್ಯಾನ್ ಇಂಡಿಯಾ ಸಿನಿಮಾ ಆಗಿರುವ ‘ಮಾರ್ಟಿನ್’ ಐದು ಭಾಷೆಗಳಲ್ಲಿ ತೆರೆ ಕಾಣಲಿದ್ದು, ಚಿತ್ರತಂಡದ ಮೇಲೆ ಜವಾಬ್ದಾರಿ ಹೆಚ್ಚಿದೆ’ ಎಂದು ಹೇಳಿದರು.

ಧ್ರುವ ಸರ್ಜಾ

ಧ್ರುವ ಸರ್ಜಾ ಮಾತನಾಡಿ, ‘ಒಂದು ಸಿನಿಮಾ ಹಿಟ್ ಆಗಲು ಹೀರೊ ಕಾರಣವಲ್ಲ. ಇಡೀ ಚಿತ್ರತಂಡ ಚೆನ್ನಾಗಿರಬೇಕು. ಅದಕ್ಕೆ ಉತ್ತಮ ಉದಾಹರಣೆ ‘ಅದ್ದೂರಿ’. 9 ವರ್ಷ ಆದ ಮೇಲೆ ಅದೇ ತಂಡದ ಜೊತೆ ಕಾರ್ಯನಿರ್ವಹಿಸುತ್ತಿದ್ದೇನೆ. ನನಗೆ ಜವಾಬ್ದಾರಿ ಜಾಸ್ತಿ ಆಗಿದೆ ಎನ್ನುವ ಭಯ ಇದೆ. ‘ಮಾರ್ಟಿನ್’ ಎಂದಾಕ್ಷಣ ಹೀರೊ ಹೆಸರು ‘ಮಾರ್ಟಿನ್’ ಎಂದಲ್ಲ. ಮಾರ್ಟಿನ್ ಅನ್ನೋದು ಯಾರು ಎನ್ನುವುದೇ ಸಿನಿಮಾ. ಚಿತ್ರದ ಪ್ರತಿಯೊಂದು ಡೈಲಾಗ್‌ನಲ್ಲಿ ತೂಕವಿದೆ. ಚಿತ್ರಕ್ಕಾಗಿ ನನ್ನನ್ನು ನಾನು ಬದಲಾಯಿಸಿಕೊಂಡಿದ್ದೇನೆ’ ಎಂದರು.

ಕಿರುತೆರೆಯಲ್ಲಿ ಈಗ ಯುವ ಅಂಬೇಡ್ಕರ್

ಕಿರು ತೆರೆ

‘ಮಹಾನಾಯಕ ಅಂಬೇಡ್ಕರ್’ ಧಾರಾವಾಹಿಯ ಪೋಸ್ಟರ್

ಈಗ ‘ಮಹಾನಾಯಕ ಅಂಬೇಡ್ಕರ್’ ಯುವಕರಾಗಿದ್ದಾರೆ. ಆಗಸ್ಟ್ 20ರಿಂದ ಝೀ ಕನ್ನಡ ವಾಹಿನಿಯಲ್ಲಿ ಸಂಜೆ 6ಕ್ಕೆ ಪ್ರಸಾರವಾಗಲಿರುವ ‘ಮಹಾನಾಯಕ ಅಂಬೇಡ್ಕರ್’ ಧಾರಾವಾಹಿಯಲ್ಲಿ ಬಾಲಕ ಭೀಮ ಈಗ ಯುವ ಅಂಬೇಡ್ಕರ್ ಆಗಿ ಕಾಣಿಸಲಿದ್ದಾರೆ. ಅಂಬೇಡ್ಕರ್ ಅವರ ಜೀವನದ ಮತ್ತೊಂದು ಮಜಲನ್ನು ತೋರಿಸಲು ಪ್ರಯತ್ನ ಸಾಗಿದೆ ಎಂದು ವಾಹಿನಿ ಹೇಳಿದೆ.

ಜೀ ಕನ್ನಡದ ಬ್ಯುಸಿನೆಸ್ ಹೆಡ್ ರಾಘವೇಂದ್ರ ಹುಣಸೂರು ಮಾತನಾಡಿ, ‘ದೇಶ ಸ್ವಾತಂತ್ರ್ಯ ಪಡೆದ 75ನೇ ವರ್ಷದ ಸಂದರ್ಭದಲ್ಲಿ ಯುವ ಅಂಬೇಡ್ಕರ್ ಅವರ ಜೀವನಗಾಥೆ ಹೇಳಲು ‘ಮಹಾನಾಯಕ ಅಂಬೇಡ್ಕರ್’ ಧಾರಾವಾಹಿ ಮುಂದಾಗಿದೆ. ಮಹಾನಾಯಕನ ಬಾಲ್ಯದ ಜೀವನ, ಅವರ ಹೋರಾಟದ ಬದುಕಿನ ಕಥೆಗೆ ನೀಡಿದಂತಹ ಬೆಂಬಲವನ್ನು ಯುವ ಅಂಬೇಡ್ಕರ್ ಕಥೆಗೂ ನೀಡಿ ಆದರಿಸುತ್ತಾರೆ ಎಂಬ ಭರವಸೆ ನಮ್ಮದು. ಇದೀಗ ‘ಮಹಾನಾಯಕ ಅಂಬೇಡ್ಕರ್’ ರವರ ಜೀವನದ ವಿನೂತನ ವಿವರಗಳು ಮೂಡಿಬರಲಿವೆ’ ಎಂದು ಹೇಳಿದರು.

ಈ ಧಾರಾವಾಹಿ ಮೊದಲು ಶನಿವಾರ ಮತ್ತು ಭಾನುವಾರ ಮಾತ್ರ ಪ್ರಸಾರವಾಗುತ್ತಿತ್ತು. ವೀಕ್ಷಕರ ಒತ್ತಾಯಕ್ಕೆ ಮಣಿದ ಜೀ ಕನ್ನಡ ಈ ಧಾರಾವಾಹಿಯನ್ನು ಸೋಮವಾರದಿಂದ ಶುಕ್ರವಾರದವರೆಗೆ ಸಂಜೆ 6 ಗಂಟೆಗೆ ಪ್ರಸಾರ ಮಾಡುತ್ತಿದೆ. ಧಾರಾವಾಹಿಯ ಶೀರ್ಷಿಕೆ ಗೀತೆಯೇ ಸಾಕಷ್ಟು ಜನಪ್ರಿಯವಾಗಿದೆ ಎಂದು ವಾಹಿನಿ ಹೇಳಿದೆ.

ಸುಭಾಷಿತ

ಭೂತಕಾಲವನ್ನು ಮೃತ ಸಂಗತಿ ಎಂಬಂತೆ ನೋಡಬೇಕು. ಇಲ್ಲವಾದರೆ ಅದು ನಮ್ಮನ್ನು ಕೊಂದು ಹಾಕುತ್ತದೆ.

-ವಿ.ಎಸ್.ನೈಪಾಲ್

ರಾಜಕೀಯ ಪಕ್ಷಗಳ ರ‍್ಯಾಲಿಗಳಿಗೆ ನಿಯಮ ಅನ್ವಯಿಸುವುದಿಲ್ಲವೇ?

ಕೋವಿಡ್ ನಿಯಂತ್ರಣಕ್ಕಾಗಿ ರೂಪಿಸಿದ ನಿಯಮಗಳನ್ನು ಉಲ್ಲಂಘಿಸಿ ರಾಜಕೀಯ ಪಕ್ಷಗಳು ಸಭೆ-ಸಮಾರಂಭಗಳನ್ನು ನಡೆಸುತ್ತಿರುವುದು ಕೊರೊನಾ ಮೂರನೇ ಅಲೆಗೆ ನೀಡುತ್ತಿರುವ ಆಹ್ವಾನದಂತಿದೆ. ಕೊರೊನಾ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸುವ ದಿಸೆಯಲ್ಲಿ ಜನಸಾಮಾನ್ಯರಿಗೆ ಮೇಲ್ಪಂಕ್ತಿ ಹಾಕಿಕೊಡಬೇಕಾಗಿದ್ದ ರಾಜಕಾರಣಿಗಳು ತಾವೇ ಕಾನೂನು ಉಲ್ಲಂಘಿಸುವ ಮೂಲಕ ಬೇಜವಾಬ್ದಾರಿ ನಡೆ ಪ್ರದರ್ಶಿಸುತ್ತಿದ್ದಾರೆ. ಬಿಜೆಪಿ ಹಮ್ಮಿಕೊಂಡಿರುವ ಜನಾಶೀರ್ವಾದ ಯಾತ್ರೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನ ಸೇರುವ ಮೂಲಕ ಕೋವಿಡ್ ನಿಯಮಾವಳಿ ಸ್ಪಷ್ಟವಾಗಿ ಉಲ್ಲಂಘನೆಯಾಗಿದೆ. ಕಲಬುರ್ಗಿ ಮತ್ತು ರಾಯಚೂರಿನಲ್ಲಿ ಕೇಂದ್ರ ಸಚಿವ ಭಗವಂತ ಖೂಬಾ ಅವರು ರಾತ್ರಿ ಕರ್ಫ್ಯೂ ಉಲ್ಲಂಘಿಸಿ ಸಭೆ-ಮೆರವಣಿಗೆಯಲ್ಲಿ ಭಾಗವಹಿಸಿದ್ದಾರೆ. ಯಾದಗಿರಿ ಜಿಲ್ಲೆಯ ಯರಗೋಳದಲ್ಲಿ ಕೆಲವರು ಬಂದೂಕುಗಳಿಂದ ಸಿಡಿಮದ್ದು ಹಾರಿಸಿ ಸಚಿವರನ್ನು ಸ್ವಾಗತಿಸಿರುವ ಅತಿರೇಕದ ಘಟನೆಯೂ ನಡೆದಿದೆ. ನಾಡಬಂದೂಕುಗಳಿಂದ ಸಿಡಿಮದ್ದು ಹಾರಿಸಿ ಅಭಿನಂದಿಸಿರುವುದನ್ನು ಸಚಿವರು ಸಮರ್ಥಿಸಿಕೊಂಡಿರುವುದನ್ನು ಅಸೂಕ್ಷ್ಮ ನಡವಳಿಕೆ ಎಂದೇ ಹೇಳಬೇಕಾಗಿದೆ. ಅನುಮತಿ ಪಡೆಯದೆ ಜನಾಶೀರ್ವಾದ ಯಾತ್ರೆ ಹಾಗೂ ಬೈಕ್ ರ‍್ಯಾಲಿ ನಡೆಸಿರುವುದಲ್ಲದೆ, ಕೋವಿಡ್ ನಿಯಮಾವಳಿಗಳನ್ನು ಉಲ್ಲಂಘಿಸಿರುವುದು ಗಂಭೀರ ಲೋಪ. ಬಂದೂಕಿನಿಂದ ಸಿಡಿಮದ್ದು ಹಾರಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಏಳು ಜನರ ಮೇಲೆ ಪೊಲೀಸರು ದೂರು ದಾಖಲಿಸಿದ್ದಾರೆ; ಮೂವರು ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಲಾಗಿದೆ. ಆದರೆ, ಕಾರ್ಯಕ್ರಮವನ್ನು ಆಯೋಜಿಸಿದ ಸಂಘಟಕರ ಮೇಲಾಗಲೀ ಕರ್ಫ್ಯೂ ಉಲ್ಲಂಘಿಸಿ ಮೆರವಣಿಗೆಯಲ್ಲಿ ಭಾಗವಹಿಸಿದ ಸಚಿವರ ಮೇಲಾಗಲೀ ಯಾವುದೇ ಪ್ರಕರಣ ದಾಖಲಾಗಿಲ್ಲ. ಜನಸಾಮಾನ್ಯರ ಪಾಲಿಗೆ ಕಠಿಣವಾಗುವ ಕಾನೂನು, ಅಧಿಕಾರದಲ್ಲಿ ಇರುವವರ ತಂಟೆಗೆ ಹೋಗುವುದಿಲ್ಲ ಎನ್ನುವ ಸಮಾಜದಲ್ಲಿನ ನಂಬಿಕೆಯನ್ನು ಈ ಪ್ರಕರಣ ಪುಷ್ಟೀಕರಿಸುವಂತಿದೆ. ಆಡಳಿತಾರೂಢ ಬಿಜೆಪಿ ಮಾತ್ರವಲ್ಲ, ಕೋವಿಡ್ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಜನರನ್ನು ಗುಂಪುಗೂಡಿಸುವಲ್ಲಿ ವಿರೋಧ ಪಕ್ಷಗಳೂ ಹಿಂದೆಬಿದ್ದಿಲ್ಲ. ರಾಯಚೂರಿನಲ್ಲಿ ನಡೆದ ಕಾಂಗ್ರೆಸ್‌ನ ವಿಭಾಗ ಮಟ್ಟದ ಸಂಘಟನಾ ಸಭೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನ ಸೇರಿದ್ದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಸಂಸದ ಡಿ.ಕೆ. ಸುರೇಶ್ ನೇತೃತ್ವದಲ್ಲಿ ಕನಕಪುರದಲ್ಲಿ ನಡೆದ ಕೊರೊನಾ ವಾರಿಯರ್‌ಗಳನ್ನು ಸನ್ಮಾನಿಸುವ ಕಾರ್ಯಕ್ರಮದಲ್ಲಿ ಕೋವಿಡ್ ಮಾರ್ಗಸೂಚಿ ಉಲ್ಲಂಘನೆಯಾಗಿದೆ ಎಂದು ಸಾಮಾಜಿಕ ಕಾರ್ಯಕರ್ತರೊಬ್ಬರು ದೂರು ಸಲ್ಲಿಸಿದ್ದಾರೆ.

ಕೊರೊನಾ ನಿಯಮಾವಳಿ ಉಲ್ಲಂಘಿಸುವವರು ಎಷ್ಟೇ ಪ್ರಭಾವಿಗಳಾದರೂ ಅವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು

ಹಬ್ಬಗಳ ಋತು ಆರಂಭವಾಗಿರುವ ಹಿನ್ನೆಲೆಯಲ್ಲಿ ಮಾರುಕಟ್ಟೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸಹಜವಾಗಿಯೇ ಜನಸಂದಣಿ ಕಾಣಿಸಿಕೊಳ್ಳುತ್ತಿದೆ. ಜನಸಂದಣಿಯ ಸ್ಥಳಗಳಲ್ಲಿ ಕೋವಿಡ್ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ತರಲು ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ಕೊರೊನಾ ವೈರಸ್ ನಿಯಂತ್ರಣಕ್ಕಾಗಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯ. ಆದರೆ, ಹಬ್ಬ, ಜಾತ್ರೆ, ಜಾಥಾಗಳಿಗೆ ನಿರ್ಬಂಧ ವಿಧಿಸಿ, ರಾಜಕೀಯ ಕಾರ್ಯಕ್ರಮಗಳಿಗೆ ಅವಕಾಶ ನೀಡುತ್ತಿರುವುದಕ್ಕೆ ಯಾವ ಸಮರ್ಥನೆಯೂ ಇಲ್ಲ. ಶಾಲೆಗಳನ್ನು ಪೂರ್ಣ ಪ್ರಮಾಣದಲ್ಲಿ ತೆರೆಯಲು ಸರ್ಕಾರ ಹಿಂದೆಮುಂದೆ ನೋಡುತ್ತಿದೆ. ಪ್ರವಾಸಕ್ಕೆ ಹೋಗುವವರಿಗೆ ಕಠಿಣ ನಿಯಮಗಳನ್ನು ವಿಧಿಸಿದೆ. ಆದರೆ, ರಾಜಕೀಯ ಸಭೆ- ಸಮಾರಂಭಗಳನ್ನು ನಡೆಸುವುದಕ್ಕೆ ಮಾತ್ರ ಮೌನವಾಗಿ ಅವಕಾಶ ಕಲ್ಪಿಸಿದೆ. ಈ ದ್ವಂದ್ವವನ್ನು ಗಮನಿಸಿದರೆ, ರಾಜಕೀಯ ಕಾರ್ಯಕ್ರಮಗಳಲ್ಲಿ ಕೊರೊನಾ ವೈರಾಣು ತಟಸ್ಥವಾಗಿರುತ್ತದೆಂದು ಸರ್ಕಾರ ಭಾವಿಸಿರಬೇಕು ಎನ್ನುವ ಅನುಮಾನ ಉಂಟಾಗುತ್ತದೆ. ಕೊರೊನಾ ಎರಡನೇ ಅಲೆಯ ಆರಂಭಕ್ಕೆ ಮೊದಲೂ ರಾಜಕೀಯ ಪಕ್ಷಗಳು ಎಗ್ಗಿಲ್ಲದೆ ಸಭೆ- ಸಮಾರಂಭಗಳನ್ನು ನಡೆಸಿದ್ದವು. ಚುನಾವಣಾ ರ‍್ಯಾಲಿಗಳಲ್ಲಿ ಸಾವಿರಾರು ಜನರನ್ನು ಸೇರಿಸಿ ಶಕ್ತಿಪ್ರದರ್ಶನ ನಡೆಸಿದ್ದವು. ಕೊರೊನಾ ವೈರಾಣುವಿನ ಸಾಮರ್ಥ್ಯ ಪರೀಕ್ಷಿಸುವಂತೆ ಕುಂಭಮೇಳವನ್ನು ನಡೆಸಲಾಯಿತು. ಇವೆಲ್ಲದರ ಪರಿಣಾಮ ಎನ್ನುವಂತೆ ದೇಶದಾದ್ಯಂತ ಕಾಣಿಸಿಕೊಂಡ ಕೊರೊನಾ ಎರಡನೇ ಅಲೆಯು ಜನಸಾಮಾನ್ಯರನ್ನು ಇನ್ನಿಲ್ಲದಂತೆ ಕಾಡಿ, ಅಪಾರ ಸಾವುನೋವಿಗೆ ಕಾರಣವಾಯಿತು. ಆ ಸಂಕಟದಿಂದ ಹೊರಬರುವುದು ಇನ್ನೂ ಸಾಧ್ಯವಾಗಿಲ್ಲ. ಆಗಲೇ ರಾಜಕಾರಣಿಗಳ ಹುಚ್ಚಾಟ ಮತ್ತೆ ಶುರುವಾಗಿದೆ.

ದಕ್ಷಿಣ ಕನ್ನಡ, ಉಡುಪಿ, ಹಾಸನ, ಮೈಸೂರು, ಕೊಡಗು, ಚಿಕ್ಕಮಗಳೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕೋವಿಡ್ ದೃಢ ಪ್ರಮಾಣ ಅಧಿಕವಾಗಿದೆ. ಈ ಬೆಳವಣಿಗೆಯನ್ನು ನೋಡಿದರೆ, ಕೊರೊನಾದ ಮೂರನೇ ಅಲೆ ಯಾವಾಗ ಬೇಕಾದರೂ ಕಾಣಿಸಿಕೊಳ್ಳಬಹುದೆಂದು ತಜ್ಞರು ಎಚ್ಚರಿಸುತ್ತಲೇ ಇದ್ದಾರೆ. ಆದರೆ, ಈ ಎಚ್ಚರಿಕೆಗಳಿಗೆ ಕಿವುಡಾದಂತೆ ರಾಜಕೀಯ ಪಕ್ಷಗಳು ಸಭೆ-ಸಮಾರಂಭಗಳನ್ನು ನಡೆಸುವ ಮೂಲಕ ಜನರ ಜೀವದೊಂದಿಗೆ ಆಟವಾಡುತ್ತಿವೆ. ಎರಡನೇ ಅಲೆಯಿಂದ ಸರ್ಕಾರವಾಗಲೀ ಜನಪ್ರತಿನಿಧಿಗಳಾಗಲೀ ಯಾವುದೇ ಪಾಠ ಕಲಿತಂತಿಲ್ಲ. ಕೋವಿಡ್ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸುವುದು ಜನಸಾಮಾನ್ಯರಿಗೆ ಮಾತ್ರ ಸಂಬಂಧಿಸಿದ್ದೆಂದು ರಾಜಕೀಯ ಪಕ್ಷಗಳು ಭಾವಿಸಿದಂತಿವೆ. ಕೊರೊನಾ ಸೋಂಕು ಹರಡುವ ಆತಂಕದ ಸನ್ನಿವೇಶದಲ್ಲೂ ರಾಜಕೀಯ ಸಭೆಗಳಿಗೆ ಜನಸಾಮಾನ್ಯರನ್ನು ಸೇರಿಸುವ ಧುರೀಣರು, ಜನಸಾಮಾನ್ಯರಿಗೆ ಸೋಂಕು ತಗುಲಿದಾಗ ನೆರವಿಗೆ ಬಾರದೆ ಮನೆ ಸೇರಿಕೊಳ್ಳುತ್ತಾರೆ. ಇನ್ನಾದರೂ ರಾಜಕೀಯ ಪಕ್ಷಗಳು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ತಮ್ಮ ಪಕ್ಷದ ಪ್ರತಿನಿಧಿಗಳ ಕಿವಿಹಿಂಡುವ ಕೆಲಸವನ್ನು ಹಿರಿಯ ನಾಯಕರು ಮಾಡಬೇಕು. ಬೇಜವಾಬ್ದಾರಿ ರಾಜಕಾರಣಿಗಳ ಬಗ್ಗೆ ಜನರೂ ಎಚ್ಚರದಿಂದ ಇರಬೇಕು ಹಾಗೂ ಕೋವಿಡ್ ಮಾರ್ಗಸೂಚಿಯನ್ನು ಸ್ವಯಂಪ್ರೇರಣೆಯಿಂದ ಅನುಸರಿಸಬೇಕು. ಕೊರೊನಾ ನಿಯಮಾವಳಿಯನ್ನು ಉಲ್ಲಂಘಿಸುವವರು ಎಷ್ಟೇ ಪ್ರಭಾವಿಗಳಾದರೂ ಅವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಎರಡು ಬಗೆಯ ನ್ಯಾಯಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶವಿಲ್ಲ.

ದಿನದ ಟ್ವೀಟ್

ಕಾಲ ಹಿಂದಕ್ಕೆ ಚಲಿಸದಿರಲಿ

ನಿಮಗೆ ಗೊತ್ತೇ, ಅಫ್ಗನ್ ಮಹಿಳೆಯರು 1920ರ ಸುಮಾರಿಗೆ ಮತದಾನದ ಹಕ್ಕು ಪಡೆದರು ಎಂಬುದು? ಅಮೆರಿಕದಲ್ಲೂ ಹೆಚ್ಚುಕಡಿಮೆ ಇದೇ ಸಮಯದಲ್ಲಿ ಇಂತಹ ಹಕ್ಕಿಗೆ ಅವಕಾಶ ನೀಡಲಾಯಿತು. 1990ರ ಕಾಲಘಟ್ಟದಲ್ಲಿ ವಿಶ್ವವಿದ್ಯಾಲಯ ಪದವೀಧರರಲ್ಲಿ ಶೇ 50ರಷ್ಟು ಮತ್ತು ಕಾಬೂಲ್‌ನಲ್ಲಿನ ವೈದ್ಯರಲ್ಲಿ ಶೇ 40ರಷ್ಟು ಮಂದಿ ಮಹಿಳೆಯರೇ ಇದ್ದರೆಂಬುದು ತಿಳಿದಿದೆಯೇ? 1977ರಲ್ಲಿ ಶಾಸನಸಭೆಯಲ್ಲಿನ ಜನಪ್ರತಿನಿಧಿಗಳಲ್ಲಿ ಶೇ 15ರಷ್ಟು ಮಂದಿ ಮಹಿಳೆಯರೇ ಇದ್ದರೆಂಬುದು ಗೊತ್ತಿದೆಯೇ? ಗಡಿಯಾರದ ಮುಳ್ಳನ್ನು ಅಪ್ರದಕ್ಷಿಣಾಕಾರವಾಗಿ ತಿರುಗಿಸಲು ತಾಲಿಬಾನ್‌ಗೆ ಜಗತ್ತು ಅವಕಾಶ ನೀಡಬಾರದು. #TalibanReturn

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಕೆಲವರು ತಾಲಿಬಾನ್ ಅನ್ನು ಬೆಂಬಲಿಸುತ್ತಿದ್ದಾರೆ. ಅಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ ಎಂಥಾ ಕ್ರೌರ್ಯ ಎಸಗಲಾಗಿದೆ? ಆದರೆ, ಕೆಲವರು ನಾಚಿಕೆಯಿಲ್ಲದೆ ತಾಲಿಬಾನ್‌ಗೆ ಬೆಂಬಲ ನೀಡುತ್ತಿದ್ದಾರೆ. ಈ ಎಲ್ಲಾ ಮುಖಗಳು ಬಯಲಾಗಬೇಕು.

ಯೋಗಿ ಆದಿತ್ಯನಾಥ, ಮುಖ್ಯಮಂತ್ರಿ, ಉತ್ತರ ಪ್ರದೇಶ

25 ವರ್ಷಗಳ ಹಿಂದೆ

ಮಂಗಳವಾರ, 20-8-1996

• **ಬಿಜೆಪಿ ಇಬ್ಭಾಗ: ಗುಜರಾತ್ ಜನತಾ ಪಾರ್ಟಿ ಉದಯ**

ಅಹಮದಾಬಾದ್, ಆ. 19 (ಯುಎನ್‌ಐ)– ಗುಜರಾತ್‌ನ ಆಡಳಿತಾರೂಢ ಬಿಜೆಪಿ ಪಕ್ಷದ ಭಿನ್ನಮತೀಯ ಶಾಸಕಾಂಗ ಪಕ್ಷದ ನಾಯಕ ದಿಲೀಪ್ ಪಾರೇಖ್ ಅವರು 'ಗುಜರಾತ್ ಜನತಾ ಪಾರ್ಟಿ' ಎಂಬ ಹೊಸ ಪಕ್ಷದ ಘೋಷಣೆ ಮಾಡುವುದರೊಂದಿಗೆ, ಬಿಜೆಪಿ ಇಂದು ವಿಧ್ಯುಕ್ತವಾಗಿ ಎರಡು ಹೋಳಾಯಿತು. ಈ ಮಧ್ಯೆ ಶಂಕರಸಿಂಗ್ ವಘೇಲಾ ಅವರ ಭಿನ್ನಮತೀಯರ 'ಮಹಾ ಸಮ್ಮೇಳನ' ನಾಳೆ ಇಲ್ಲಿ ನಡೆಯಲಿದ್ದು, ತಮಗೆ 90 ಶಾಸಕರ ಬೆಂಬಲವಿದೆ ಎಂದು ಅವರು ಪ್ರಕಟಿಸಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 20-8-1971

• **ಅಗೆತ-ಅನುದಿನದ ಅನಾಹುತ**

ಬೆಂಗಳೂರು, ಆ. 19– ಬೆಂಗಳೂರು ನಗರದ ವಾಹನಗಳಿಗೆ, ಅದರಲ್ಲಿ ಓಡಾಡುವ ಜನರಿಗೆ ಇದೊಂದು ನಿತ್ಯ ಗ್ರಹಚಾರ.

ಉತ್ತಮ ರಸ್ತೆಗಳನ್ನು ನಿರ್ಮಿಸಿದ ನಂತರ ನಿರ್ದಾಕ್ಷಿಣ್ಯವಾಗಿ ಅಗೆಯುವುದು ನಿಂತಿಲ್ಲವೆಂಬುದು ಬೇರೆ ಮಾತು. ಅಗೆದ ಮೇಲೆ, ಅದನ್ನು ತುಂಬಿ ಮತ್ತೆ ಸಂಚಾರಾರ್ಹವಾಗಿ ಮಾಡುವ ಕೆಲಸದಲ್ಲಿ ಕಂಡುಬಂದಿರುವ ನಿರ್ಲಕ್ಷ್ಯ ಪರಮಾವಧಿಯನ್ನು ತಲುಪಿದೆ. ನಗರದ ನಾನಾ ಕಡೆಗಳಲ್ಲಿ ಅಗೆಯುವುದು, ಅಗೆತಗಳನ್ನು ಹಾಗೇ ಬಿಟ್ಟು ಬಿಡುವುದು ಅಥವಾ ಭದ್ರವಾಗಿ ಭರ್ತಿ ಮಾಡದಿರುವುದು ಸರ್ವೇ ಸಾಮಾನ್ಯವಾದ ದೃಶ್ಯ. ನಾಗರಿಕರು ಹಾಗೂ ಪತ್ರಿಕೆಗಳು ನಗರದಲ್ಲಿ ರೋದನ ಮಾಡುತ್ತ ಬಂದಿದ್ದರೂ, ಅದು ಅರಣ್ಯ ರೋದನವಾಗಿದೆ.

ಅನ್ಯ ದೇಶಗಳನ್ನು ಅವಲಂಬಿಸುತ್ತಲೇ ಬಂದ ಕಥೆಯೊಂದೇ ಅಲ್ಲ ಅಫ್ಗಾನಿಸ್ತಾನದ್ದು

ಇತಿಹಾಸವು ವರ್ತಮಾನವನ್ನು ಹೇಳುತ್ತಿದೆ!

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಅಫ್ಗಾನಿಸ್ತಾನದಲ್ಲಿ ಆಗುತ್ತಿರುವ ವಿದ್ಯಮಾನಗಳನ್ನು ಗಮನಿಸಿದಾಗ, ಅಂತರರಾಷ್ಟ್ರೀಯ ಸಮುದಾಯ ನಡೆಸಿದ ಪ್ರಯತ್ನದ ವಾಸ್ತವಗಳು, ಪರಿಣಾಮಗಳು ಕಣ್ಣಿಗೆ ರಾಚುತ್ತವೆ. ಜನರ ಹಕ್ಕುಗಳನ್ನು 'ರಕ್ಷಿಸಲು' ಅಂತರರಾಷ್ಟ್ರೀಯ ಸಮುದಾಯ ಮಧ್ಯಪ್ರವೇಶಿಸಿದ್ದು, ನಂತರ 'ಮುಖ ಉಳಿಸಿಕೊಳ್ಳಲು', ಸ್ವಹಿತಾಸಕ್ತಿಗಳ ನೆಪ ಹೇಳಿ ಅಲ್ಲಿಂದ ಹಿಂದಕ್ಕೆ ನಡೆದಿದ್ದು ಈಗ ಎಲ್ಲರಿಗೂ ಗೊತ್ತಾಗಿದೆ. ಆದರೆ, ಮಿಲಿಟರಿ ಸಾಹಸವೊಂದರ ನಂತರ ಅಲ್ಲಿನ ಸಾಮಾನ್ಯ ಜನರಿಗೆ ಏನಾಗುತ್ತದೆ ಎಂಬುದೇ ಒಂದು ದುರಂತ ಕಥೆ. ನಾಶದ ಬಗ್ಗೆ ಪುಸ್ತಕಗಳಲ್ಲಿ ಹೇಳುವುದು ನಿಜ ಜೀವನದಲ್ಲಿಯೂ ಆಗುತ್ತದೆಯಲ್ಲ? ಅಂಥದ್ದಕ್ಕೆ ಅಫ್ಗಾನಿಸ್ತಾನದ ಕಥೆಯು ಅತ್ಯುತ್ತಮ ಉದಾಹರಣೆ.

ಸರಿಸುಮಾರು ಐದು ದಶಕಗಳ ಹಿಂದೆ (1973ರಿಂದ 1977ರವರೆಗೆ) ನನಗೆ ಕಾಬೂಲ್‌ನಲ್ಲಿ ವಾಸಿಸುವ, ಅಲ್ಲಿ ಶಿಕ್ಷಣ ಪಡೆಯುವ ಅವಕಾಶ ಸಿಕ್ಕಿತ್ತು. ನನ್ನ ತಂದೆ ಅಲ್ಲಿ ವಿಶ್ವಸಂಸ್ಥೆಯ ಕೆಲಸವೊಂದರಲ್ಲಿ ಇದ್ದರು. ಆ ನಾಲ್ಕು ವರ್ಷಗಳಲ್ಲಿ ದೇಶದ ಉದ್ದಗಲವನ್ನು ಸುತ್ತುವ ಅವಕಾಶ ನನಗೆ ಒಮ್ಮೆ ದೊರೆತಿತ್ತು. ನಾವು ಅಲ್ಲಿಗೆ 1973ರಲ್ಲಿ ಹೋದ ಕೆಲವು ಕಾಲದಲ್ಲೇ, ಅಲ್ಲಿನ ರಾಜ ಝಹೀರ್ ಶಾನ ಆಡಳಿತವು ಮೊಹಮ್ಮದ್ ದಾವೂದ್ ನಡೆಸಿದ ರಕ್ತರಹಿತ ಕ್ರಾಂತಿಯಿಂದಾಗಿ ಕೊನೆಗೊಂಡಿತು. 70ರ ದಶಕದ ಮಧ್ಯಭಾಗದಲ್ಲಿ ಅಫ್ಗಾನಿಸ್ತಾನವು ಸಾಂಸ್ಕೃತಿಕವಾಗಿ ಇರಾನ್ ಮಾದರಿಯನ್ನು (ಇರಾನ್‌ನ ಶಾ ಕಾಲದ ಸಂಸ್ಕೃತಿ) ಅನುಸರಿಸುತ್ತಿತ್ತು. ಪುರುಷರು, ಮಹಿಳೆಯರು ಪಾಶ್ಚಿಮಾತ್ಯ ಫ್ಯಾಷನ್ ಉಡುಗೆ ತೊಡುವುದು ಸಾಮಾನ್ಯವಾಗಿತ್ತು. ಆಧುನಿಕತೆಯ ತಂಗಾಳಿಯೊಂದು ಅಲ್ಲಿನ ಸಮಾಜದಲ್ಲಿ ಬೀಸುತ್ತಿರುವಂತೆ ಕಾಣುತ್ತಿತ್ತು.

ಎಪ್ಪತ್ತರ ದಶಕದಲ್ಲಿ ಶೀತಲ ಸಮರವು ಉತ್ತುಂಗದಲ್ಲಿತ್ತು. ಅಮೆರಿಕ ಮತ್ತು ಅಂದಿನ ಸೋವಿಯತ್ ಒಕ್ಕೂಟದ ನಡುವಿನ ಸಂಘರ್ಷವು ತೀವ್ರವಾಗಿತ್ತು. ಅಫ್ಗಾನಿಸ್ತಾನದಲ್ಲಿ ಅಮೆರಿಕ ಹಾಗೂ ಸೋವಿಯತ್ ಒಕ್ಕೂಟದ ಅಸ್ತಿತ್ವ ಕಣ್ಣಿಗೆ ಕಾಣಿಸುವಂತಿತ್ತು. ಉತ್ತರದ ಗಡಿಗಳನ್ನು ಸಂಪರ್ಕಿಸುವ ರಸ್ತೆಗಳನ್ನು ಸೋವಿಯತ್ ಕಡೆಯವರು, ಪೂರ್ವದ ಕಡೆಗೆ ಹಾಗೂ ಇರಾನ್ ಗಡಿಯ ಕಡೆಗೆ ಸಾಗುವ ರಸ್ತೆಗಳನ್ನು ಅಮೆರಿಕದ ಕಡೆಯವರು ನಿರ್ಮಿಸುತ್ತಿದ್ದರು. ಸೋವಿಯತ್ ದೇಶದವರು ಕಾಬೂಲ್ ವಿಮಾನ ನಿಲ್ದಾಣವನ್ನು, ಅಮೆರಿಕದವರು ಕಂದಹಾರ್ ವಿಮಾನ ನಿಲ್ದಾಣವನ್ನು ನಿರ್ಮಿಸಿದ್ದರು. ಸಾಮಾನ್ಯ ವ್ಯಕ್ತಿಗೆ ಕೂಡ ಅಮೆರಿಕ ಹಾಗೂ ಸೋವಿಯತ್ ನಡುವಿನ ಸ್ಪರ್ಧೆಯು ಗೊತ್ತಾಗುತ್ತಿತ್ತು. ವಿಶ್ವದ ಎರಡು ಸೂಪರ್ ಪವರ್ ರಾಷ್ಟ್ರಗಳಿಂದ ತಮಗೆ ಬೇಕಿದ್ದನ್ನು ಪಡೆದುಕೊಳ್ಳಬಹುದು, ನಂತರ ಒಂದು ದೇಶವನ್ನು ಇನ್ನೊಂದರ ವಿರುದ್ಧ ಎತ್ತಿಕಟ್ಟಬಹುದು ಎಂದು ಅಫ್ಗನ್ ಜನ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು! ಈ ನಡೆಯ ಪರಿಣಾಮಗಳು ನಂತರದ ವರ್ಷಗಳಲ್ಲಿ ಹೆಚ್ಚು ಸ್ಪಷ್ಟವಾದವು.

ಎಪ್ಪತ್ತರ ದಶಕದಲ್ಲಿ ಅಫ್ಗಾನಿಸ್ತಾನದಲ್ಲಿ ಭಾರತೀಯರ ಹೆಜ್ಜೆ ಗುರುತುಗಳು ಎದ್ದುಕಾಣುವಂತೆ ಇದ್ದವು. ಆ ದಿನಗಳಲ್ಲಿ ಸರಿಸುಮಾರು ಐನೂರು ಭಾರತೀಯ ಕುಟುಂಬಗಳು ಕಾಬೂಲ್‌ನಲ್ಲಿ ವಾಸವಿದ್ದವು. ಭಾರತದ ತಾಂತ್ರಿಕ ನೆರವು ಮತ್ತು ಸಹಕಾರ ಯೋಜನೆಯ ಭಾಗವಾಗಿ ಆ ಕುಟುಂಬಗಳು ಅಲ್ಲಿದ್ದವು. ಅಲ್ಲಿ ಭಾರತದ ರಾಯಭಾರ ಕಚೇರಿಯು ಕೇಂದ್ರೀಯ ವಿದ್ಯಾಲಯ-ವೊಂದನ್ನು ನಡೆಸುತ್ತಿತ್ತು. ನಾನು 8ನೆಯ ತರಗತಿಯಿಂದ 11ನೆಯ ತರಗತಿಯವರೆಗೆ ಅಲ್ಲಿಯೇ ವಿದ್ಯಾಭ್ಯಾಸ ಮಾಡಿದೆ.

ಭಾರತವು ಕಾಬೂಲ್‌ನಲ್ಲಿ ಮಕ್ಕಳ ಆಸ್ಪತ್ರೆಯೊಂದನ್ನು ನಿರ್ಮಿಸಿತ್ತು. ಆಸ್ಪತ್ರೆ ಉದ್ಘಾಟನೆಯಾದ ಮೊದಲ ಐದು ವರ್ಷಗಳವರೆಗೆ ಅಲ್ಲಿ ವೈದ್ಯರು, ದಾದಿಯರು ಹಾಗೂ ವೈದ್ಯಕೀಯ ಉಪಕರಣಗಳ ಲಭ್ಯತೆ ಇರುವಂತೆ ಭಾರತವೇ ನೋಡಿಕೊಂಡಿತ್ತು. ಐದು ವರ್ಷಗಳು ಪೂರ್ಣಗೊಂಡ ನಂತರದಲ್ಲಿ, ಸೋವಿಯತ್ ಒಕ್ಕೂಟವು ನೆರವು ನೀಡಲು ಮುಂದೆ ಬಂತು.

ವಿಶ್ವದ ಬೇರೆ ಬೇರೆ ಕಡೆಗಳಿಂದ ನೆರವು ಯಾಚಿಸುವುದು ಅಫ್ಗನ್ ಸರ್ಕಾರಕ್ಕೆ ಅಭ್ಯಾಸವಾಗಿಬಿಟ್ಟಿದೆ ಎಂಬುದನ್ನು ಹೇಳಲು ಈ ವಿಷಯ ಪ್ರಸ್ತಾಪಿಸಲಾಗಿದೆ. ಶೀತಲ ಸಮರದ ದಿನಗಳಲ್ಲಿ ಅಫ್ಗನ್ ಸರ್ಕಾರವು ಇತರ ರಾಷ್ಟ್ರಗಳ ಮೇಲೆ ಬಹುವಾಗಿ ಅವಲಂಬಿತವಾಗಿತ್ತು. ಇತಿಹಾಸ ಮರುಕಳಿಸುತ್ತ ಇರುತ್ತದೆ.

ನಾನು ಕಡೆಯ ಬಾರಿಗೆ ಕಾಬೂಲ್‌ಗೆ ಹೋಗಿದ್ದು 1979ರಲ್ಲಿ. ಆಗ ಸೋವಿಯತ್ ಒಕ್ಕೂಟವು ಅಫ್ಗಾನಿಸ್ತಾನಕ್ಕೆ ಪ್ರವೇಶ ಪಡೆದಿತ್ತು. ನನ್ನ ತಂದೆಯವರಿಗೆ ವಿಶ್ವಸಂಸ್ಥೆ ಅಲ್ಲಿ ವಹಿಸಿದ್ದ ಕೆಲಸ ಪೂರ್ಣಗೊಂಡಿತ್ತು. 1979ರ ಬೇಸಿಗೆಗೂ ಮೊದಲು, ಸೋವಿಯತ್ ಆಕ್ರಮಣಕ್ಕೂ ಮೊದಲು, ದೇಶದಲ್ಲಿ ಸೋವಿಯತ್ ಒಕ್ಕೂಟದ ಪ್ರವೇಶ ಆಗಿದೆ ಎಂಬುದು ಗೊತ್ತಾಗುತ್ತಿತ್ತು. 1973ರಲ್ಲಿ ಮಹಮದ್ ದಾವೂದ್ ಅಧಿಕಾರಕ್ಕೆ ಬಂದ ಕ್ರಾಂತಿಯು ರಕ್ತರಹಿತವಾಗಿತ್ತು. ಆದರೆ, 1978ರಲ್ಲಿ ಕಮ್ಯುನಿಸ್ಟ್ ಪ್ರೇರಿತ ಕ್ರಾಂತಿಯ ಸಂದರ್ಭದಲ್ಲಿ ಬಹಳಷ್ಟು ರಕ್ತಪಾತ ನಡೆಯಿತು. ದಾವೂದ್, ಅವರ ಇಡೀ ಕುಟುಂಬ, ಬೆಂಬಲಿಗರು ಹತ್ಯೆಗೀಡಾದರು. ಇದು ಸೋವಿಯತ್ ಆಕ್ರಮಣಕ್ಕೆ ಮುನ್ನುಡಿಯಾಯಿತು.

ಅಫ್ಗನ್ ಸರ್ಕಾರವು (ಆಗ ಕೈಗೊಂಬೆ ಕಮ್ಯುನಿಸ್ಟ್ ಸರ್ಕಾರ ಅಲ್ಲಿತ್ತು) ಮಧ್ಯಪ್ರವೇಶಿಸುವಂತೆ ತನ್ನನ್ನು ಕೋರಿದೆ ಎಂದು ಸೋವಿಯತ್ ಒಕ್ಕೂಟ ಹೇಳಿತ್ತು! ಇದು ಶೀತಲ ಸಮರದ ಉತ್ತುಂಗ ಸ್ಥಿತಿ. ಈ ಸಂದರ್ಭದಲ್ಲಿ ಅಮೆರಿಕನ್ನರು ಅಲ್ಲಿನ ಬಂಡುಕೋರರಿಗೆ ಶಸ್ತ್ರಾಸ್ತ್ರ ನೀಡಿದರು. ಇವರು ಮುಂದೆ ಮುಜಾಹಿದೀನ್‌ಗಳ ರೂಪ ಪಡೆದುಕೊಂಡರು. ಸೋವಿಯತ್ ಸೈನಿಕರು ಅಲ್ಲಿಂದ ಹಿಂದೆ ಸರಿದ ನಂತರದಲ್ಲಿ, ಕಮ್ಯುನಿಸ್ಟ್ ವಿರೋಧಿ ಹೋರಾಟಗಾರರಿಗೆ ಅಮೆರಿಕ ಹಿಂದೆ ನೀಡಿದ್ದ ಶಸ್ತ್ರಾಸ್ತ್ರವನ್ನು ಅಮೆರಿಕದ ವಿರುದ್ಧವೇ ಬಳಸಲಾಯಿತು. ಈಗ ಅದೇ ಬಗೆಯ ಪ್ರಸಂಗವು ಮತ್ತೆ ಅಲ್ಲಿ ನಡೆಯುತ್ತಿದೆ.

ಬೇರೆ ದೇಶಗಳ ಮೇಲೆ ಹೆಚ್ಚೆಚ್ಚು ಅವಲಂಬಿತ ಆಗುತ್ತಾ ಬಂದ ರಾಷ್ಟ್ರವೊಂದರ ಕಥೆಯೊಂದೇ ಅಲ್ಲ ಅಫ್ಗಾನಿಸ್ತಾನದ್ದು. ಈ ದೇಶದಲ್ಲಿ ಭ್ರಷ್ಟಾಚಾರ ಕೂಡ ತೀರಾ ಹೆಚ್ಚಾಗಿತ್ತು. ಶ್ರೀಮಂತರು ಹಾಗೂ ಬಡವರ ನಡುವಣ ಅಂತರವು ಕಣ್ಣಿಗೆ ರಾಚುವಂತೆ ಇತ್ತು ಅಲ್ಲಿ. ಆ ದೇಶದಲ್ಲಿ ಯಾರಿಗಾದರೂ ಒಂದು ಸ್ಥಾನ ಸಿಕ್ಕರೆ, ಅದಕ್ಕೆ ಕಾರಣಗಳನ್ನು ಹುಡುಕುವಾಗ ಸ್ವಜನಪಕ್ಷಪಾತದ ವಿವರಣೆ ಸಿಕ್ಕೇ ಸಿಗುತ್ತಿತ್ತು.

ಅಫ್ಗಾನಿಸ್ತಾನದ ಪ್ರಮುಖ ಕುಟುಂಬಗಳ ಪಟ್ಟಿಯೊಂದನ್ನು ಸಿದ್ಧಪಡಿಸಿದರೆ, ಅವರ ಅಸ್ತಿತ್ವವನ್ನು ಪಾಶ್ಚಿಮಾತ್ಯ ರಾಷ್ಟ್ರವೊಂದರಲ್ಲಿ ಕಾಣುವುದು ಕಷ್ಟವೇ ಅಲ್ಲ. ಆ ಪಾಶ್ಚಿಮಾತ್ಯ ರಾಷ್ಟ್ರದಲ್ಲಿ ಆ ಕುಟುಂಬದ ಸದಸ್ಯರು ಐಷಾರಾಮಿ ಜೀವನವನ್ನು ಅನುಭವಿಸುತ್ತಿ-ರುತ್ತಾರೆ. ತಾವು ಅಫ್ಗಾನಿಸ್ತಾನದಲ್ಲಿ ಅಧಿಕಾರದಲ್ಲಿ ಇದ್ದ ದಿನಗಳಲ್ಲಿ ಸಂಪಾದಿಸಿದ ಸಂಪನ್ಮೂಲಗಳನ್ನು ಅಲ್ಲಿ ಬಳಸಿಕೊಳ್ಳುತ್ತಿರುತ್ತಾರೆ.

ದೇಶದಲ್ಲಿ ಅಮೆರಿಕದ ಮಿಲಿಟರಿಯು ನೆಲೆ ಕಂಡುಕೊಂಡ ನಂತರದಲ್ಲಿ, ಅಲ್ಲಿನ ಅಧಿಕಾರವನ್ನು ಅನುಭವಿಸಿದ ಜನ ಮತ್ತೆ ಇದೇ ರೀತಿಯ ಕೆಲಸವನ್ನು ಮಾಡಿದ್ದಾರೆ ಎಂಬಂತೆ ಕಾಣಿಸುತ್ತಿದೆ. ತನ್ನ ರಾಜಕೀಯ ಹಾಗೂ ಆಳುವ ವರ್ಗದವರ ಸ್ವಹಿತಾಸಕ್ತಿ ಕಾಯ್ದುಕೊಳ್ಳುವ, ಸ್ವಾರ್ಥ ಸಾಧನೆಯ ಕೆಲಸಗಳಿಗೆ ಅಫ್ಗಾನಿಸ್ತಾನ ದೇಶ ಇಂದು ಬೆಲೆ ತೆರುತ್ತಿದೆ. ಅಧಿಕಾರವನ್ನು ಅನುಭವಿಸಿದ ಮೇಲ್ವರ್ಗದ ಜನ, ಜಾಗತಿಕ ಮಟ್ಟದ ದೊಡ್ಡ ಶಕ್ತಿಗಳ ಪಾಲಿಗೆ ಈ ದೇಶವನ್ನು ಒಂದು ಅಸ್ತ್ರವನ್ನಾಗಿ ಮಾಡಿದರು. ನಾಯಕತ್ವದಲ್ಲಿ ಇದ್ದವರು ತೋರಿದ ಕಾಳಜಿರಹಿತ ಧೋರಣೆಗೆ ಈಗ ಅಲ್ಲಿನ ಮುಗ್ಧ ಜನ ಬೆಲೆ ತೆರುತ್ತ ಇದ್ದಾರೆ.

ಚುರುಮುರಿ

ತಾಳಿಬಾನ್!

• ಬಿ.ಎನ್.ಮಲ್ಲೇಶ್

ಬೆಳ್ಳಂಬೆಳಿಗ್ಗೆ ದುಬ್ಬೀರ ಇನ್ನೂ ಹಾಸಿಗೆಯಲ್ಲಿರುವಾಗಲೇ ಮೊಬೈಲ್ ಕುಂಯ್‌ಗುಟ್ಟಿತು. ನೋಡಿದರೆ ಗುಡ್ಡೆ! 'ಯಾಕೋ ಗುಡ್ಡೆ, ಇಷ್ಟ್ ಬೆಳಿಗ್ಗೆ ಫೋನ್ ಮಾಡಿದೀಯ, ಏನ್ಸಮಾಚಾರ?' ದುಬ್ಬೀರ ಆಕಳಿಸುತ್ತ ವಿಚಾರಿಸಿದ.

'ವಿಷಯ ಗೊತ್ತಿಲ್ವ? ನಮ್ ಟೀವಿ ರಿಪೋಟ್ರು ತೆಪರೇಸಿನ ಆಸ್ಪತ್ರಿಗೆ ಸೇರ್‍ಸಿದಾರೆ ಕಣಲೆ...'

'ಹೌದಾ? ಯಾರ ಜೊತಿಗೋ ಜಗಳ ಆಡಿರ್ತಾನೆ, ಆಗ ಯಾರೋ ಹಿಗ್ಗಾಮುಗ್ಗ ಇಕ್ಕಿರ್ತಾರೆ...'

'ಥೋ ಅದೆಲ್ಲ ಅಲ್ಲ ಕಣಲೆ'.

'ಮತ್ತೇನು? ರಾತ್ರಿ ಫುಲ್ ಟೈಟಾಗಿ ಎಲ್ಲೋ ಚರಂಡಿ ಗಿರಂಡಿಗೆ ಬಿದ್ದಿರ್ತಾನೆ...'

'ನಿನ್ತೆಲಿ, ಅದೂ ಅಲ್ಲಲೆ, ಆಸ್ಪತ್ರಿಗೆ ನಾನೂ ಹೋಗಿದ್ದೆ'.

'ಮತ್ತೆ ಅದೇನಾತು, ಏನ್ ಕಥಿ ಬೊಗಳು'.

'ಇದೇ ಪ್ರಶ್ನೆನ ನಂಗೆ ಡಾಕ್ಟ್ರು ಕೇಳಿದ್ರು. ಹೇಳಾಕೆ ಒಂಥರಾ ಆತು'.

'ಹೌದಾ? ಅಂಥದೇನಾತಲೆ, ತೆಪರನ ಹೆಂಡ್ತಿ ಪಮ್ಮಕ್ಕ ಇರ್‍ಲಿಲ್ವ?'

'ಇದ್ಲು, ನಿನ್ನೆ ರಾತ್ರಿ ಮನೇಲಿ ಇಬ್ರೂ ಪರ್ಸಿ ಪೈಕಿ ಪೈಲ್ವಾನರ ತರ ಕುಸ್ತಿಗೆ ಬಿದ್ದಿದ್ರಂತೆ. ಪಮ್ಮಕ್ಕ ಟೀವಿ ರಿಮೋಟ್ ತೆಗೆದು ತೆಪರನ ಮೇಲೆ ಬೀಸಿ ಒಗೆದ್ಲಂತೆ. ಅದು ಅವನ ಕಣ್ಣಿಗೆ ಬಿದ್ದು ಕಣ್ಣು ಬಾತುಗಂಡೇತಿ...'

'ಓ ಹಂಗಾರೆ ಇದು ಬಾತಿಂಗ್ ನ್ಯೂಸ್! ಸರಿ, ಕುಸ್ತಿ ಯಾಕಂತೆ?'

'ತೆಪರೇಸಿ ತಾನು ತಾಲಿಬಾನ್ ನ್ಯೂಸ್ ನೋಡ್ಬೇಕು ಅಂತ, ಪಮ್ಮಕ್ಕ ತಾನು 'ತಾಳಿಭಾಗ್ಯ' ಸೀರಿಯಲ್ ನೋಡ್ಬೇಕು ಅಂತ ಟೀವಿ ರಿಮೋಟ್‌ಗೆ ಕಿತ್ತಾಡಿದ್ರಂತೆ. ಮಾತಿಗೆ ಮಾತು ಬೆಳೆದು ಕೊನಿಗೆ ಮನೇಲಿದ್ದ ಸಾಮಾನೆಲ್ಲ ಹಾರಾಡಿದ್ವಂತೆ...'

'ಹಂಗಾರೆ ದೊಡ್ಡ ಗದ್ಲಾನೇ ಆಗೇತಿ. ಇದನ್ನ ಏನಂತ ಕರೀಬಹುದು ಹೇಳು ನೋಡಾಣ...'

'ಏನಂತ ಕರೀಬಹುದು?'

'ತಾಳಿಬಾನ್!'

ಸಂಗತ

ಅಭಿವೃದ್ಧಿಗೆ ಆಧಾರ ಅಕ್ಷಯ ಶಕ್ತಿ

ಸೂರ್ಯ ಶಕ್ತಿಯ ಬಹುಭಾಗ ವ್ಯರ್ಥವಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಿದೆ

• ಶ್ರೀಗುರು

ಭೂಮಿಯನ್ನು ಕೊಳೆ ಮಾಡುವ ಪಳೆಯುಳಿಕೆ (ಫಾಸಿಲ್) ಇಂಧನಗಳ ಬಳಕೆ ನಿಲ್ಲಿಸಿ, ಎಂದೆಂದಿಗೂ ಕ್ಷಯಿಸದ ಸೂರ್ಯನ ಬಿಸಿಲು, ಗಾಳಿ, ನೀರು, ಜೀವಿಶ್ಲೇಷ, ಸಮುದ್ರದ ಅಲೆಗಳಿಂದಲೇ ನಮಗೆ ಬೇಕಾದ ಎಲ್ಲ ವಿದ್ಯುತ್ತನ್ನು ಪಡೆಯಬೇಕು ಎಂಬ ಒತ್ತಾಯ ಎಲ್ಲೆಡೆ ಜೋರಾಗಿದೆ. ಇಂಟರ್‌ನ್ಯಾಷನಲ್ ಎನರ್ಜಿ ಏಜೆನ್ಸಿಯ (ಐಇಎ) ಪ್ರಕಾರ, ಇಡೀ ವಿಶ್ವದಲ್ಲಿ ಈಗ ಶೇ 11ರಷ್ಟು ಶಕ್ತಿಯು ಅಕ್ಷಯ ಮೂಲಗಳಿಂದ ಸಿಗುತ್ತಿದೆ.

ನಮ್ಮಲ್ಲಿ ಫಾಸಿಲ್ ಇಂಧನ ಮೂಲಗಳಿಂದ ಶೇ 80ರಷ್ಟು ಶಕ್ತಿ ದೊರೆತರೆ, ಉಳಿದ 20 ಭಾಗ ಅಕ್ಷಯ ಮೂಲಗಳಿಂದ ದೊರಕುತ್ತಿದೆ. ಸ್ಥಾಪಿತ ಸಾಮರ್ಥ್ಯ 384 ಗಿಗಾವಾಟ್‌ನಷ್ಟಿದ್ದು, ಬೇಡಿಕೆಯ ಮುಕ್ಕಾಲು ಭಾಗವನ್ನು ಉಷ್ಣ ವಿದ್ಯುತ್ ಸ್ಥಾವರಗಳಿಂದಲೇ ಪಡೆಯುತ್ತಿದ್ದೇವೆ. ಶೇ 8ರಷ್ಟು ಕೊರತೆ ಇದೆ. ಉತ್ಪಾದನೆಯ ಶೇ 21ರಷ್ಟು ಭಾಗ ಸರಬರಾಜು ಮತ್ತು ವಿತರಣೆಯಲ್ಲೇ ಸೋರಿಹೋಗುತ್ತಿದೆ. ಪ್ರಸ್ತುತ 75 ಗಿಗಾವಾಟ್‌ನಷ್ಟು ಸೌರ ಹಾಗೂ ಗಾಳಿ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವಿದೆ. ಇನ್ನು ಮೂರು ವರ್ಷಗಳಲ್ಲಿ ಸೂರ್ಯನಿಂದ ನೂರು, ಗಾಳಿಯಿಂದ ಅರವತ್ತು, ಬಯೊಮಾಸ್‌ನಿಂದ ಹತ್ತು ಹಾಗೂ ನೀರಿನಿಂದ ಐದು ಹೀಗೆ ಒಟ್ಟು 175 ಗಿಗಾವಾಟ್‌ಗಳಷ್ಟು ಹೆಚ್ಚುವರಿ ಶಕ್ತಿ ಉತ್ಪಾದನೆಯ ಕೆಲಸ ಪ್ರಾರಂಭವಾಗಿದೆ. ಬೇಡಿಕೆ 2030ಕ್ಕೆ 817 ಗಿಗಾವಾಟ್ ಆಗಲಿದೆ.

ಮಳೆಗಾಲದಲ್ಲಿ ನೀರು ಹಾಗೂ ಗಾಳಿಯಿಂದ, ಬೇಸಿಗೆಯಲ್ಲಿ ಬಿಸಿಲು ಹಾಗೂ ಜೈವಿಕ ಅನಿಲದಿಂದ ಪರಿಸರಕ್ಕೆ ಹಾನಿಯಾಗದಂತೆ ಯಥೇಚ್ಛ ವಿದ್ಯುತ್ ಉತ್ಪಾದನೆ ಸಾಧ್ಯವಿದೆ. ಮನೆ, ಹಾಸ್ಟೆಲ್, ಹೋಟೆಲ್, ಛತ್ರಗಳಿಂದ ಹೊಮ್ಮುವ ತ್ಯಾಜ್ಯದಿಂದಲೂ ಇಂಧನ ಪಡೆಯುವ ತಂತ್ರಜ್ಞಾನ ಅಭಿವೃದ್ಧಿಗೊಂಡಿದೆ. ಪರಿಸರಕ್ಕೆ ಮಾರಕವೆಂದು ಗೊತ್ತಿದ್ದರೂ ಕಡಿಮೆ ಉತ್ಪಾದನೆ ವೆಚ್ಚ ಮತ್ತು ಹೆಚ್ಚಿನ ಸಬ್ಸಿಡಿಯಿಂದಾಗಿ ಕಲ್ಲಿದ್ದಲನ್ನೇ ಬಳಸಿ ಭೂಮಿಯ ಬಿಸಿ ಮತ್ತು ಮಾಲಿನ್ಯ ಎರಡನ್ನೂ ಏರಿಸುತ್ತಿದ್ದೇವೆ. ಜಲವಿದ್ಯುತ್ ಯೋಜನೆಗಳು ಅರಣ್ಯ-ಗಳನ್ನು ನುಂಗಿವೆ. ಪರಮಾಣು ಸ್ಥಾವರಗಳು ವಿಕಿರಣ ಹೊಮ್ಮಿಸಿ ಜನರ ಆರೋಗ್ಯವನ್ನು ಶಾಶ್ವತವಾಗಿ ಹಾಳುಮಾಡುತ್ತಿವೆ. ಆದ್ದರಿಂದ ನವೀಕರಿಸಬಹುದಾದ ಇಂಧನಕ್ಕೆ ಮೊರೆ ಹೋಗಲೇಬೇಕಾಗಿದೆ.

ಭಾರತದ ಬಹುಭಾಗ ಬಿಸಿಲಿನ ಭಂಡಾರವಾಗಿದ್ದು, ಪ್ರತಿದಿನ ಚದರ ಮೀಟರ್ ಜಾಗದಲ್ಲಿ ಸರಾಸರಿ 500 ವಾಟ್ ಶಕ್ತಿ ಬಿಸಿಲಿನ ರೂಪದಲ್ಲಿ ಬೀಳುತ್ತದೆ. ಉನ್ನತ ತಂತ್ರಜ್ಞಾನ ಬಳಸಿ ಅದರ ಶೇ 20ರಷ್ಟನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸಿದರೂ ಸಾಕು ಶೇ 40ರಷ್ಟು ವಿದ್ಯುತ್ ಬೇಡಿಕೆ ಪೂರೈಕೆಯಾಗುತ್ತದೆ. ತಜ್ಞರ ಪ್ರಕಾರ, ಇಡೀ ಮನುಕುಲ ವರ್ಷವಿಡೀ ಬಳಸುವ ಶಕ್ತಿಯನ್ನು ಸೂರ್ಯ ನಮಗೆ ಒಂದೇ ಒಂದು ಗಂಟೆಯಲ್ಲಿ ಕೊಡುತ್ತಾನೆ! ಇದರ ಬಹುಭಾಗ ವ್ಯರ್ಥವಾಗಿ ಪೋಲಾಗುತ್ತಿದೆ.

ಹಗಲಿನಲ್ಲಿ ಉತ್ಪಾದಿಸಿದ ಶಕ್ತಿಯನ್ನು ಫೋಟೊ ವೋಲ್ಟಾಯಿಕ್ ಕೋಶಗಳಲ್ಲಿ ಸಂಗ್ರಹಿಸಿ ರಾತ್ರಿ ವೇಳೆ ಬಳಸಬಹುದು. ಅಡುಗೆಗೆ, ಸ್ನಾನಕ್ಕೆ ಬೇಕಾದ ಬಿಸಿನೀರನ್ನು ಮಾಳಿಗೆಯ ಸೌರ ಫಲಕಗಳಿಂದ ಪಡೆಯಬಹುದು. ಇದನ್ನು ಸ್ಥಳೀಯ ಮಟ್ಟದಲ್ಲೇ ಉತ್ಪಾದಿಸಬಹುದಾದ್ದರಿಂದ ಉತ್ಪಾದನಾ ವೆಚ್ಚ, ಸೋರಿಕೆ ಹಾಗೂ ವಿದ್ಯುತ್ ಯುನಿಟ್‌ನ ದರ ಸಾಮಾನ್ಯಕ್ಕಿಂತ ಶೇ 40ರಷ್ಟು ಕಡಿಮೆ. ಬೆಂಗಳೂರಿನ ಬಹುತೇಕ ಮಾಳಿಗೆಗಳ ಮೇಲೆ ಸೌರ ಹೀಟರ್‌ಗಳಿವೆ. ಬಿಸಿಲು ಪುಕ್ಕಟೆಯಾಗಿ ಸಿಗುವುದರಿಂದ ಮತ್ತು ಎಲ್ಲೆಂದರಲ್ಲಿಗೆ ಮಡಚಿ ಒಯ್ಯಬಹುದಾದ ಜಮಖಾನೆಯಂತಹ ಸ್ಥಾವರಗಳೂ ಇರುವುದರಿಂದ ಬಿಸಿಲಿರುವಲ್ಲೆಲ್ಲಾ ವಿದ್ಯುತ್ ಉತ್ಪಾದನೆಗೆ ಅವಕಾಶವಿದೆ.

ಪಾವಗಡದಲ್ಲಿ 2,000 ಮೆ.ವಾ. ಸಾಮರ್ಥ್ಯದ ವಿಶ್ವದ ಅತಿದೊಡ್ಡ ಸೋಲಾರ್ ಪಾರ್ಕ್ ಮತ್ತು ತಮಿಳುನಾಡಿನ ರಾಮನಾಥಪುರಂನ ಕಮುತಿ ಸೌರ ವಿದ್ಯುತ್ ಸ್ಥಾವರಗಳು 1,500 ಮೆಗಾವಾಟ್‌ಗೂ ಹೆಚ್ಚು ವಿದ್ಯುತ್ ನೀಡುತ್ತಿವೆ. ಚಿತ್ರದುರ್ಗ ಬಳಿಯ ತುಪ್ಪದಹಳ್ಳಿ, ಗದಗಿನ ಕಪ್ಪತಗುಡ್ಡ, ಮುಂಡರಗಿ ಹಾಗೂ ಶಿರಹಟ್ಟಿ ತಾಲ್ಲೂಕುಗಳಲ್ಲಿ ಸ್ಥಾಪಿಸಲಾಗಿರುವ ಪವನ ವಿದ್ಯುತ್ ಸ್ಥಾವರಗಳು ನಾಡಿನ ಹಲವು ಮನೆಗಳಿಗೆ ಬೆಳಕು ನೀಡುತ್ತ ದಶಕಗಳೇ ಆಗಿವೆ. ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಹಲವು ಸೌರ ವಿದ್ಯುತ್ ಉತ್ಪಾದನಾ ಘಟಕಗಳಿವೆ.

ವರ್ಲ್ಡ್ ಎಕನಾಮಿಕ್ ಫೋರಮ್ ಪ್ರಕಾರ, ಭಾರತ ತನ್ನ ಶಕ್ತಿ ಆಮದಿನಲ್ಲಿ ಸಾವಿರಾರು ಕೋಟಿ ರೂಪಾಯಿ ಉಳಿಸಬಹುದು. ಚೀನಾ ಮತ್ತು ಮಲೇಷ್ಯಾದಿಂದ ಸೌರ ಪರಿಕರ ಮತ್ತು ಸೆಲ್‌ಗಳ ಆಮದು ನಿಲ್ಲಿಸಿ ಸ್ಥಳೀಯ ಉತ್ಪಾದನೆಗೆ ಪ್ರೋತ್ಸಾಹ ನೀಡಲು, ಬರುವ ಏಪ್ರಿಲ್‌ನಿಂದ ಮಾಡ್ಯೂಲ್‌ಗಳ ಮೇಲೆ ಶೇ 40 ಮತ್ತು ಸೆಲ್‌ಗಳ ಮೇಲೆ ಶೇ 25 ಕಸ್ಟಮ್ಸ್ ಸುಂಕ ಹಾಕಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಜೊತೆಗೆ ಸರ್ಕಾರ ಕಲ್ಲಿದ್ದಲಿಗೆ ನೀಡುತ್ತಿರುವ ಹೆಚ್ಚಿನ ಸಬ್ಸಿಡಿಯನ್ನು ನಿಲ್ಲಿಸಿ, ಹೊಸ ಜಲವಿದ್ಯುತ್ ಯೋಜನೆಗಳಿಗೆ ಅನುಮತಿ ನಿರಾಕರಿಸಿ, ಪಿವಿಸಿ ವಿದ್ಯುತ್ತಿನ ಮೇಲಿನ ಜಿಎಸ್‌ಟಿ (ಶೇ 5) ಮತ್ತು ಅಕ್ಷಯ ಶಕ್ತಿ ಸ್ಥಾವರಗಳ ಮೇಲಿನ ಸೇಫ್‌ಗಾರ್ಡ್ ಟ್ಯಾಕ್ಸ್ ಕಡಿಮೆ ಮಾಡಬೇಕು. ತಾರಸಿ ಸ್ಥಾವರಗಳಿಂದ ಉತ್ಪಾದಿಸಿದ ಕರೆಂಟನ್ನು ಸರ್ಕಾರ ಹೆಚ್ಚಿನ ಬೆಲೆ ನೀಡಿ ಖರೀದಿಸಬೇಕು. ಅಕ್ಷಯ ಶಕ್ತಿ ದಿನದ (ಆ. 20) ಈ ಸಂದರ್ಭದಲ್ಲಿ, ಈ ಶಕ್ತಿಯ ಮಹತ್ವದ ಅರಿವು ಎಲ್ಲರಿಗೂ ಆಗಬೇಕು.

ವಾಚಕರ ವಾಣಿ

ಹೊಸ ಶಿಕ್ಷಣ ನೀತಿ: ಬೇಕಿದೆ ಪೂರ್ವಸಿದ್ಧತೆ

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಈ ವರ್ಷವೇ ಅಳವಡಿಸಿಕೊಳ್ಳುವುದರಿಂದ ಐಚ್ಛಿಕ ವಿಷಯಗಳಿಗೆ ಸಂಬಂಧಿಸಿದಂತೆ ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತಗಳಲ್ಲಿ ಉಂಟಾಗಬಹುದಾದ ಗೊಂದಲಗಳು ಹಾಗೂ ಅಚಾತುರ್ಯಗಳ ಬಗ್ಗೆ ಶರತ್ ಅನಂತಮೂರ್ತಿ ಅವರು ತಮ್ಮ ಲೇಖನದಲ್ಲಿ (ಪ್ರ.ವಾ., ಆ. 17) ಬಹಳ ತಾರ್ಕಿಕವಾಗಿ ವಿವರಿಸಿದ್ದಾರೆ. ಬಹುತೇಕ ಸರ್ಕಾರಿ ಕಾಲೇಜುಗಳ ವಿಜ್ಞಾನ ಪ್ರಯೋಗಾಲಯಗಳಲ್ಲಿ ಸಮರ್ಪಕ ಪರಿಕರಗಳಿಲ್ಲದೆ ವಿದ್ಯಾರ್ಥಿಗಳ ಪ್ರಾಯೋಗಿಕ ಕಲಿಕೆಗೆ ಅಡ್ಡಿಯಾಗಿದೆ. ಹೊಸ ಶಿಕ್ಷಣ ನೀತಿಯು ಕೌಶಲ ತರಬೇತಿಗೆ ಹೆಚ್ಚಿನ ಒತ್ತು ನೀಡುವ ಉದ್ದೇಶ ಹೊಂದಿರುವುದರಿಂದ, ಪ್ರಯೋಗಾಲಯಗಳನ್ನು ಉನ್ನತೀಕರಿಸಿದಾಗ ಮಾತ್ರ ಈ ನೀತಿಯ ಆಶಯ ಈಡೇರಲಿದೆ. ಜೊತೆಗೆ ಶಿಕ್ಷಕರನ್ನೂ ವಿದ್ಯಾಸಂಸ್ಥೆಗಳನ್ನೂ ಈ ದಿಸೆಯಲ್ಲಿ ಸಜ್ಜುಗೊಳಿಸಬೇಕಿದೆ. ಹೀಗಾಗಿ, ಹೊಸ ನೀತಿಯನ್ನು ಅನುಷ್ಠಾನಗೊಳಿಸುವ ಮುನ್ನ ಒಂದು ಅಥವಾ ಎರಡು ವರ್ಷಗಳ ಪರಿಪೂರ್ಣ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದುದು ಅತ್ಯಗತ್ಯ.

ಡಾ. ನೇತ್ರಾವತಿ ವಿ., ಬೆಂಗಳೂರು

ಸೌದೆ ಉರಿಸಿ, ಎಣ್ಣೆ ಹಾಕದೆ ಅಡುಗೆ ಮಾಡಿ!

ಡೀಸೆಲ್ ಬೆಲೆ ಹೆಚ್ಚಳ ಕುರಿತು ಪತ್ರಿಕಾಮಿತ್ರರು ಕೇಳಿದ ಪ್ರಶ್ನೆಗೆ ಕೇಂದ್ರ ಸಚಿವರೊಬ್ಬರು 'ಎಲೆಕ್ಟ್ರಿಕ್ ವಾಹನ' ಬಳಸಿ ಎಂದು ಸಲಹೆ ನೀಡಿರುವುದು ವರದಿಯಾಗಿದೆ. ದಿನನಿತ್ಯ ಬಳಸುವ ಗ್ಯಾಸ್ ಸಿಲಿಂಡರ್, ಅಡುಗೆ ಎಣ್ಣೆ ಮುಂತಾದವುಗಳ ಬೆಲೆ ಏರುತ್ತಲೇ ಇದೆ. ಇದಕ್ಕೆ ಸಚಿವರ ಬಳಿ ಯಾವುದಾದರೂ ಪರ್ಯಾಯ ಇದೆಯೇ? ಸೌದೆ ಉರಿಸಿ ಅಥವಾ ಎಣ್ಣೆ ಹಾಕದೆ ಅಡುಗೆ ಮಾಡಿ ಎಂಬಂಥ ಉತ್ತರಗಳೇನಾದರೂ ಇರಬಹುದು!

ಕೋವಿಡ್ ಕಾಲಘಟ್ಟದಲ್ಲಿ ಆರ್ಥಿಕ ಸಂಕಷ್ಟದಲ್ಲಿರುವ ಜನರ ಗಾಯದ ಮೇಲೆ ಬರೆ ಎಳೆದಂತೆ ಎಲ್ಲ ಅಗತ್ಯ ವಸ್ತುಗಳ ಬೆಲೆಯೂ ಹೆಚ್ಚಾಗದಂತೆ ನೋಡಿಕೊಳ್ಳಬೇಕು. ಆಗ ಜನ ಪರ್ಯಾಯ ವ್ಯವಸ್ಥೆಗಳನ್ನು ತಾವಾಗೇ ಮಾಡಿಕೊಳ್ಳುತ್ತಾರೆ.

ಡಾ. ಎಚ್.ತುಕಾರಾಂ, ಬೆಂಗಳೂರು

ಅಭಿವೃದ್ಧಿಯೆಂಬ ಮರೀಚಿಕೆಯ ಹಿಂದೆ

ಸುಸ್ತಾದ ಸಹ್ಯಾದ್ರಿ ಕಣಿವೆಯ ಬಗ್ಗೆ ಅಖಿಲೇಶ್ ಚಿಪ್ಪಳಿ ಅವರು ಸೊಗಸಾಗಿ ವಿಶ್ಲೇಷಣೆ ಮಾಡಿದ್ದಾರೆ (ಪ್ರ.ವಾ., ಆ. 19). ಪರಿಸರದ ಸೂಕ್ಷ್ಮಗಳನ್ನು ಅರಿಯದೇ ಬಹುಮಹಡಿ ಕಟ್ಟಡದಲ್ಲಿ ಕುಳಿತು ವ್ಯಾವಹಾರಿಕ ಲೆಕ್ಕಾಚಾರಗಳಲ್ಲಿ ಮುಳುಗಿರುವ ಮಂದಿ ಮಾಡುವ ಬೃಹತ್ ಯೋಜನೆಗಳಿಗೆ ಬಲಿಯಾಗುವುದು ಜೀವವೈವಿಧ್ಯ. ಈ ಬಗೆಯ ಮನುಷ್ಯ ಕೇಂದ್ರಿತ ಅಭಿವೃದ್ಧಿ ನಿಜಕ್ಕೂ ಅವಶ್ಯವೇ? ಅಭಿವೃದ್ಧಿ ಎಂದರೇನು? ಮೋಜಿನ ತಾಣಗಳನ್ನು ಸೃಷ್ಟಿಸುವುದೇ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಯೋಚಿಸಬೇಕಾಗಿದೆ.

ಚತುಷ್ಪಥ, ದಶಪಥಗಳ ಧಾವಂತದ ಜೀವನ ಬೇಕೆ? ಇದಕ್ಕಾಗಿ ಖರ್ಚು ಮಾಡುತ್ತಿರುವ ಕೋಟಿಗಟ್ಟಲೆ ಹಣದಿಂದ ನಿರೀಕ್ಷಿತ ಅಭಿವೃದ್ಧಿ ಸಾಧ್ಯವೇ? ಪರಿಸರ ವಿರೋಧಿ ಯೋಜನೆಗಳನ್ನು ಹಮ್ಮಿಕೊಂಡು ಜೀವಿಗಳು, ಪರಿಸರವನ್ನು ಹಾಳುಗೆಡಹುವುದೇಕೆ? ಅದೇ ಹಣದಿಂದ ಜನರಿಗೆ ಅಗತ್ಯವಾದ ಮೂಲಸೌಕರ್ಯಗಳನ್ನು ಒದಗಿಸಬಹುದಲ್ಲವೇ? ಸರ್ಕಾರಿ ಶಾಲೆಗಳ ಉನ್ನತೀಕರಣ, ಆರೋಗ್ಯ ಸವಲತ್ತುಗಳ ಅಭಿವೃದ್ಧಿ ಮುಖ್ಯವೇ ಅಥವಾ ಜೋಗದಲ್ಲಿ ಕೇಬಲ್ ಕಾರ್ ಮುಖ್ಯವೇ? ಪ್ರಕೃತಿಯನ್ನು ನಿಕೃಷ್ಟವಾಗಿ ಕಾಣುತ್ತಿರುವುದರ ಪರಿಣಾಮವಾಗಿ ಕೊರೊನಾ ತಂದ ತಲ್ಲಣ ಗಮನಕ್ಕೆ ಬಾರದೇ ಹೋಗುತ್ತಿದೆಯಲ್ಲಾ. ಪ್ರತಿಸಲವೂ ಪರಿಸರಾಸಕ್ತರ ಮನವಿಯನ್ನು ಕಡೆಗಣಿಸಿ, ಅವರನ್ನು ವ್ಯಾಧಿಯೆಂದು ಪರಿಗಣಿಸಿರುವ ಜನರಿಗೆ ಬೆಳಕು ತೋರಿಸುವವರಾರು?

ಡಾ. ಎಸ್.ಶಿಶುಪಾಲ, ದಾವಣಗೆರೆ

ಕೃತಜ್ಞತೆ ಬದಲಿಗೆ ಟೀಕೆ ಸರಿಯೇ?

'ಅಫ್ಗಾನಿಸ್ತಾನದಲ್ಲಿ ಎರಡು ದಶಕಗಳಿಂದ ರಕ್ಷಣೆಯ ಗೋಡೆಯಂತಿದ್ದ ಅಮೆರಿಕವು ತನ್ನ ಸೇನೆಯನ್ನು ಅಲ್ಲಿಂದ ಹಿಂತೆಗೆದುಕೊಳ್ಳುವ ಐತಿಹಾಸಿಕ ನಿರ್ಣಯ ತೆಗೆದುಕೊಂಡಿದ್ದು ವೈಫಲ್ಯವೂ ಹೌದು' (ಪ್ರ.ವಾ. ಆ. 17) ಎನ್ನುವ ಅಂತರರಾಷ್ಟ್ರೀಯ ಸಮುದಾಯದ ಅಭಿಪ್ರಾಯ ಸೋಜಿಗವೆನಿಸುತ್ತದೆ. ಒಂದಲ್ಲ, ಎರಡಲ್ಲ 20 ವರ್ಷಗಳಿಂದ ಅಫ್ಗನ್ ಸೇನೆಗೆ ಎಲ್ಲ ಬಗೆಯ ರಕ್ಷಣೆ, ತರಬೇತಿ ಕೊಟ್ಟರೂ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ವಿಫಲವಾದ ಅಲ್ಲಿನ ಪ್ರಜಾಪ್ರಭುತ್ವಕ್ಕೆ ಇನ್ನೂ ಎಷ್ಟು ವರ್ಷ ರಕ್ಷಣೆ ಒದಗಿಸಬಹುದಿತ್ತು? ಇಂದು ಈ ಕಾರಣಕ್ಕಾಗಿ 'ನಡುನೀರಿನಲ್ಲಿ ಕೈಬಿಟ್ಟ ಅಮೆರಿಕ' ಎಂದು ದೂಷಿಸುವ ದೇಶಗಳು ಅಫ್ಗನ್ನರ ರಕ್ಷಣೆಗೆ ಅಮೆರಿಕದೊಂದಿಗೆ ಏಕೆ ಕೈಜೋಡಿಸಲಿಲ್ಲ? ವಾಸ್ತವವಾಗಿ ಅಫ್ಗನ್ನರನ್ನು ನಡುನೀರಿನಲ್ಲಿ ಕೈಬಿಟ್ಟಿದ್ದು ಅಲ್ಲಿನ ಅಧ್ಯಕ್ಷರಾಗಿದ್ದ ಅಶ್ರಫ್ ಘನಿ. ಪರಿಸ್ಥಿತಿಯನ್ನು ಎದುರಿಸಲು ಅವರಿಗೆ ಅಡ್ಡಿಯಾಗಿದ್ದು ಮಿತಿಮೀರಿದ ಭ್ರಷ್ಟಾಚಾರ. ಅದರಲ್ಲಿ ತಾವೂ ಮುಳುಗಿ, ತಮ್ಮ ಸೈನ್ಯದ ಆತ್ಮಸ್ಥೈರ್ಯವನ್ನೂ ಮುಳುಗಿಸಿದರು. ಹೆಲಿಕಾಪ್ಟರ್ ಮತ್ತು ಕಾರುಗಳಲ್ಲಿ ಹಣ ತುಂಬಿಕೊಂಡು ದರೋಡೆಕೋರನಂತೆ ದೇಶದಿಂದ ಓಡಿಹೋದ ಘನಿ (ಹಣ ತುಂಬಿಕೊಂಡು ಹೋದ ಆರೋಪವನ್ನು ಘನಿ ಈಗ ಅಲ್ಲಗಳೆದಿದ್ದಾರೆ) ಕಾಪಿಟ್ಟುಕೊಂಡಿದ್ದು ದೇಶವನ್ನಲ್ಲ, ಭ್ರಷ್ಟ ಮಾರ್ಗದಿಂದ ಬಂದ ಸಂಪತ್ತನ್ನು. ಹಾಗಾದರೆ, ಪಲಾಯನ ಮಾಡಿದ್ದು ಅಮೆರಿಕದ ಸೇನಾಪಡೆಯೇ ಅಥವಾ ಅಫ್ಗನ್ ಪ್ರಭುತ್ವವೇ?

ಘನಿಯವರ ಇಂಥ ದುರ್ನಡತೆಯ ಬಗ್ಗೆ ಅಂತರರಾಷ್ಟ್ರೀಯ ಸಮುದಾಯ ಚಕಾರವೆತ್ತುತ್ತಿಲ್ಲ. ಅಮೆರಿಕದ ಸೇನಾಪಡೆಯು ಮುಸ್ಲಿಂ ದೇಶದ ಆಹಾರ, ಪರಿಸರಕ್ಕೆ ಒಗ್ಗಿಕೊಂಡು, ತಮ್ಮ ಪ್ರೀತಿಪಾತ್ರರಿಂದ ದೂರವಿದ್ದು, ಅಷ್ಟೂ ವರ್ಷಗಳ ಕಾಲ ಅಲ್ಲಿನ ಪ್ರಜಾಪ್ರಭುತ್ವವನ್ನು ಜತನದಿಂದ ಕಾಪಾಡಿದ್ದಕ್ಕೆ ಕನಿಷ್ಠ ಕೃತಜ್ಞತೆಯನ್ನೂ ವಿಶ್ವ ಸಮುದಾಯ ಸಲ್ಲಿಸಲಿಲ್ಲ, ಬದಲಿಗೆ ಟೀಕಿಸುತ್ತಿದೆ!

ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತಾಲಿಬಾನ್ ನಾಯಕರು ನೇಪಥ್ಯದಿಂದ ರಂಗಕ್ಕೆ

ತಾಲಿಬಾನ್ ಸಂಘಟನೆಯ ನಾಯಕರು ಸದಾ ನೇಪಥ್ಯದಲ್ಲಿಯೇ ಇದ್ದವರು. 2001ರ ಹಿಂದೆ ಅಫ್ಗಾನಿಸ್ತಾನದಲ್ಲಿ ಈ ಗುಂಪು ಅಧಿಕಾರದಲ್ಲಿ ಇದ್ದಾಗ, ನ್ಯಾಟೊ ಪಡೆಯ ಜತೆಗೆ ನಡೆದ ಸಂಘರ್ಷದ ಸಂದರ್ಭದಲ್ಲಿ ಮತ್ತು ಅಧಿಕಾರ ಕಳೆದುಕೊಂಡ ನಂತರದಲ್ಲಿ ತಾಲಿಬಾನ್‌ನ ನಾಯಕರು ಯಾರು ಎಂಬುದು ಹೆಚ್ಚು ಬಹಿರಂಗ ಆಗಿರಲಿಲ್ಲ. ಅವರ ಕಾರ್ಯವಿಧಾನದ ಬಗ್ಗೆಯೂ ಹೆಚ್ಚಿನ ವಿವರಗಳು ಲಭ್ಯವಾಗಿರಲಿಲ್ಲ.

ಅಫ್ಗಾನಿಸ್ತಾನವನ್ನು ತಾಲಿಬಾನ್ ಮತ್ತೆ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ತಾಲಿಬಾನ್ 1.0 ಮತ್ತು ತಾಲಿಬಾನ್ 2.0 ನಡುವೆ ಕಣ್ಣಿಗೆ ರಾಚುವಂತಹ ಹಲವು ವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ. ಈ ಹಿಂದೆ ತಾಲಿಬಾನ್ ಅಧಿಕಾರದಲ್ಲಿ ಇದ್ದಾಗ ಆಳ್ವಿಕೆಯು ತೀವ್ರವಾಗಿತ್ತು ಮತ್ತು ಕ್ರೂರವಾಗಿ ಇತ್ತು. ಈ ಬಾರಿ ತಮ್ಮದು ಸೌಮ್ಯ ನಿಲುವು ಎಂಬುದನ್ನು ಮನವರಿಕೆ ಮಾಡಲು ತಾಲಿಬಾನ್ ಯತ್ನಿಸುತ್ತಿದೆ.

ಶತ್ರುಗಳಿಗೆಲ್ಲ ಕ್ಷಮಾದಾನ, ಮಹಿಳೆಯರೂ ಇರುವ ಎಲ್ಲರನ್ನೂ ಒಳಗೊಂಡ ಸರ್ಕಾರ, ದೇಶ ತೊರೆಯಲು ಬಯಸುವವರಿಗೆ ಯಾವುದೇ ತೊಂದರೆ ಇಲ್ಲದೆ ಅವಕಾಶ ಮುಂತಾದ ಅಂಶಗಳು ತಾಲಿಬಾನ್ ಬದಲಾಗಿದೆ ಎಂಬುದನ್ನು ತೋರ್ಪಡಿಸುವ ಯತ್ನಗಳಾಗಿವೆ. ಜತೆಗೆ, ಅಮೆರಿಕ ಮತ್ತು ಮಿತ್ರ ದೇಶಗಳು ತನ್ನ ನೇತೃತ್ವದ ಅಫ್ಗಾನಿಸ್ತಾನ ಸರ್ಕಾರಕ್ಕೆ ನ್ಯಾಯಬದ್ಧ ಎಂಬ ಮಾನ್ಯತೆ ನೀಡಬೇಕು ಎಂಬ ಬೇಡಿಕೆ ತಾಲಿಬಾನ್‌ನಲ್ಲಿ ಇದೆ.

ಅಫ್ಗಾನಿಸ್ತಾನದ ನೆಲದಲ್ಲಿ ಭಯೋತ್ಪಾದಕರಿಗೆ ಅವಕಾಶವನ್ನೇ ಕೊಡುವುದಿಲ್ಲ ಎಂಬ ಭರವಸೆಯನ್ನೂ ತಾಲಿಬಾನ್ ನೀಡಿದೆ. ಅದೇನೇ ಇದ್ದರೂ ಪ್ರಜಾಸತ್ತಾತ್ಮಕ ಸರ್ಕಾರ ಸ್ಥಾಪನೆ ಮಾಡುವುದಿಲ್ಲ ಎಂಬುದನ್ನೂ ಸ್ಪಷ್ಟಪಡಿಸಿದೆ. ಇದರೊಂದಿಗೆ ಪ್ರಜಾಪ್ರಭುತ್ವ ಗಟ್ಟಿಯಾಗಿ ಬೆಳೆಯುವುದಕ್ಕಾಗಿ ಎರಡು ದಶಕಗಳಲ್ಲಿ ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವಾದಂತೆ ಆಗಿದೆ.

ತಾಲಿಬಾನ್ ನಾಯಕರೆಲ್ಲರೂ ದೇಶದ ದಕ್ಷಿಣ ಭಾಗದಲ್ಲಿ ಪ್ರಬಲವಾಗಿರುವ ಸುನ್ನಿ ಪಂಗಡಕ್ಕೆ ಸೇರಿದವರು. ಪಸ್ತೂನ್ ಜನಾಂಗದವರು. ಪ್ರಮುಖ ನಾಯಕರೆಲ್ಲರೂ ಸೈನಿಕ ಶಿಕ್ಷಣ ಪಡೆದವರು. 1980ರ ದಶಕದಲ್ಲಿ ಸೋವಿಯತ್ ಒಕ್ಕೂಟದ ವಿರುದ್ಧ ಹೋರಾಡುವುದಕ್ಕಾಗಿ ಇವರೆಲ್ಲರಿಗೂ ಅಮೆರಿಕವೇ ತರಬೇತಿ ನೀಡಿತ್ತು. ಈಗ ಅಮೆರಿಕ ವಿರುದ್ಧವೇ ಇವರು ಹೋರಾಟ ನಡೆಸುತ್ತಿದ್ದಾರೆ.

ನೇಪಥ್ಯದಿಂದಲೇ ಕೆಲಸ ಮಾಡುತ್ತಿದ್ದ ಪ್ರಮುಖ ನಾಯಕರು ಈ ಬಾರಿ ರಂಗಕ್ಕೆ ಬಂದಿದ್ದಾರೆ. ಇದು ಉತ್ತರದಾಯಿತ್ವ ತೋರುವ ಮತ್ತು ತಾಲಿಬಾನ್ ಬದಲಾಗಿದೆ ಎಂಬುದನ್ನು ಬಿಂಬಿಸುವ ಪ್ರಯತ್ನ ಎಂದು ಹೇಳಲಾಗುತ್ತಿದೆ. ಅದೇನೇ ಇದ್ದರೂ, ಅಫ್ಗಾನಿಸ್ತಾನ ಮತ್ತು ಜಗತ್ತಿನ ಜನರ ಮನಸ್ಸಿನಲ್ಲಿ ಈ ಹಿಂದಿನ ತಾಲಿಬಾನ್ ತೋರಿದ ಅಟ್ಟಹಾಸದ ನೆನಪು ಹಸಿರಾಗಿಯೇ ಇದೆ.

ಕಾಬೂಲ್ ನಗರವನ್ನು ತಾಲಿಬಾನ್ ವಶಕ್ಕೆ ಪಡೆದ ಬಳಿಕ ಜನರು ದೇಶ ತೊರೆವ ಧಾವಂತದಲ್ಲಿ ವಿಮಾನ ನಿಲ್ದಾಣಕ್ಕೆ ನುಗ್ಗಿ, ವಿಮಾನದ ಮೇಲೆ ಹತ್ತಿದ್ದರು ಎಎಫ್‌ಪಿ ಚಿತ್ರ

ಹಯಬತ್‌ಉಲ್ಲಾ ಅಖುನ್‌ಜಾದಾ, ಸುಪ್ರೀಂ ಕಮಾಂಡರ್

ಹಯಬತ್‌ಉಲ್ಲಾ ಈಗ ತಾಲಿಬಾನ್‌ನ ಪರಮೋಚ್ಚ ನಾಯಕ. ಉಗ್ರ ಸಂಘಟನೆಯ ಅತ್ಯುನ್ನತ ನಾಯಕನ ಸ್ಥಾನಕ್ಕೆ ಏರಿದ ಮೂರನೇ ವ್ಯಕ್ತಿ ಎನಿಸಿದ್ದಾನೆ. 1961ರಲ್ಲಿ ಜನಿಸಿದ ಹಯಬತ್‌ಉಲ್ಲಾ ತಾಲಿಬಾನ್‌ನ ಆರಂಭದ ದಿನಗಳಿಂದಲೂ ಸಂಘಟನೆಯ ಜತೆ ಗುರುತಿಸಿಕೊಂಡಿದ್ದಾನೆ. ಮೊದಲ ಇಬ್ಬರು ನಾಯಕರು ಹತರಾದ ನಂತರ 2016ರಲ್ಲಿ ಈತ ಈ ಸ್ಥಾನಕ್ಕೆ ಏರಿದ್ದಾನೆ. ತಾಲಿಬಾನ್ ಉಗ್ರ ಸಂಘಟನೆಯ ಸೇನಾ ಕಾರ್ಯಗಳಿಂದ ಈತ ದೂರವೇ ಉಳಿದಿದ್ದು, ತಾಲಿಬಾನ್‌ನ ಧಾರ್ಮಿಕ ನಾಯಕ ಎನಿಸಿದ್ದಾನೆ. ಈತ ಈವರೆಗೆ ಬಹಿರಂಗವಾಗಿ ಕಾಣಿಸಿಕೊಂಡಿದ್ದು ಬೆರಳೆಣಿಕೆಯಷ್ಟು ಬಾರಿ ಮಾತ್ರ. ಇದೇ ಮೇನಲ್ಲಿ ಈದ್-ಉಲ್-ಫಿತರ್ ಶುಭಾಶಯವನ್ನು ಕೋರಲು ಈತ ಬಹಿರಂಗವಾಗಿ ಕಾಣಿಸಿಕೊಂಡಿದ್ದ. ತಾಲಿಬಾನ್ ಹೇರುವ ಧಾರ್ಮಿಕ ಕಟ್ಟಳೆ-ಕಟ್ಟುಪಾಡುಗಳನ್ನು ಈತನೇ ನಿರ್ದೇಶಿಸುತ್ತಾನೆ ಎಂದು ಮೂಲಗಳು ಹೇಳಿವೆ. ತಾಲಿಬಾನ್‌ನ ಸಂಸ್ಥಾಪಕ ಮತ್ತು ಮೊದಲ ಸುಪ್ರೀಂ ಕಮಾಂಡರ್ ಆಗಿದ್ದ ಮುಲ್ಲಾ ಮೊಹಮ್ಮದ್‌ನ ಆಪ್ತ ವಲಯದಲ್ಲಿ ಇದ್ದ ಕಾರಣದಿಂದ ಈತ ಈ ಸ್ಥಾನವನ್ನು ಪಡೆದಿದ್ದಾನೆ ಎಂದು ಮೂಲಗಳು ಹೇಳಿವೆ.

ಅಬ್ದುಲ್ ಘನಿ ಬರದರ್ (ಉಪ ನಾಯಕ)

ಅಬ್ದುಲ್ ಘನಿ ಬರದರ್, ಸುಪ್ರೀಂ ಕಮಾಂಡರ್‌ನ ನಂತರದ ಉಪ ನಾಯಕನ ಸ್ಥಾನದಲ್ಲಿದ್ದಾನೆ. ಜತೆಗೆ ಈತ ತಾಲಿಬಾನ್‌ನ ಸಾರ್ವಜನಿಕ ಮುಖವಾಗಿದ್ದು, ಇನ್ನೇನು ಅಸ್ತಿತ್ವಕ್ಕೆ ಬರಲಿರುವ ತಾಲಿಬಾನ್ ಸರ್ಕಾರದ ಮುಂದಾಳುವಾಗಲಿದ್ದಾನೆ. ತಾಲಿಬಾನ್ ಸಹ ಸಂಸ್ಥಾಪಕರಲ್ಲಿ ಈತನೂ ಒಬ್ಬ. 2010ರಲ್ಲಿ ಈತನನ್ನು ಪಾಕಿಸ್ತಾನದ ಕರಾಚಿಯಲ್ಲಿ ಅಮೆರಿಕದ ಗುಪ್ತಚರ ಸಂಸ್ಥೆ ಬಂಧಿಸಿತ್ತು. 2018ರಲ್ಲಿ ಈತನನ್ನು ಬಿಡುಗಡೆ ಮಾಡಲಾಗಿತ್ತು.

ತಾಲಿಬಾನ್‌ನ ರಾಜಕೀಯ ಕಚೇರಿ ಇರುವ ದೋಹಾ, ಕತಾರ್‌ನಲ್ಲಿ ಈತ ನೆಲೆಸಿದ್ದ. ಇದೇ ಮಂಗಳವಾರವಷ್ಟೇ ತಾಲಿಬಾನ್‌ನ ಮೂಲ ನಗರವಾದ ಕಂದಹಾರ್‌ಗೆ ಹಿಂತಿರುಗಿದ್ದಾನೆ. ತಾಲಿಬಾನ್‌ನ ರಾಜತಾಂತ್ರಿಕ ಮುಖ್ಯಸ್ಥನೂ ಆಗಿರುವ ಕಾರಣ ಈತ, ಡೊನಾಲ್ಡ್ ಟ್ರಂಪ್ ನೇತೃತ್ವದ ಅಮೆರಿಕ ಸರ್ಕಾರದ ಜತೆಗೆ 2020ರ ಫೆಬ್ರುವರಿಯಲ್ಲಿ ನಡೆದ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ್ದ. ಆ ಸಹಿ ಹಾಕಿದ ನಂತರವೇ ಅಮೆರಿಕ ಮತ್ತು ನ್ಯಾಟೊ ಪಡೆಗಳು ಅಫ್ಗಾನಿಸ್ತಾನದಿಂದ ವಾಪಸಾದದ್ದು. ಈಚೆಗೆ ಚೀನಾದಲ್ಲಿ, ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಜತೆ ನಡೆಸಿದ ಸಭೆಯಲ್ಲೂ ಈತ ಭಾಗಿಯಾಗಿದ್ದ.

ಸಿರಾಜುದ್ದೀನ್ ಹಖ್ಖಾನಿ, ತಾಲಿಬಾನ್‌ನ 2ನೇ ಉಪ ನಾಯಕ

ಹಖ್ಖಾನಿ ಉಗ್ರ ಸಂಘಟನೆಯ ಮುಖ್ಯಸ್ಥನಾದ ಸಿರಾಜುದ್ದೀನ್ ಹಖ್ಖಾನಿ, ತಾಲಿಬಾನ್ ಉಗ್ರ ಸಂಘಟನೆಯ ಜತೆ ವಿಲೀನವಾದ ನಂತರ ತಾಲಿಬಾನ್‌ನ ಎರಡನೇ ಉಪ ನಾಯಕನ ಸ್ಥಾನವನ್ನು ಪಡೆದುಕೊಂಡಿದ್ದಾನೆ. ತಾಲಿಬಾನ್ ಪ್ರಾಬಲ್ಯವಿರುವ ಅಫ್ಗಾನಿಸ್ತಾನ ಮತ್ತು ಪಾಕಿಸ್ತಾನದಲ್ಲಿ ಸಂಘಟನೆಯ ಸೇನಾ ಕಾರ್ಯಾಚರಣೆ ಮತ್ತು ಆರ್ಥಿಕ ಸ್ಥಿತಿಯ ಮೇಲ್ವಿಚಾರಣೆ ನೋಡಿಕೊಳ್ಳುವುದು ಈತನ ಜವಾಬ್ದಾರಿ. ಈಗ ತಾಲಿಬಾನ್ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರವೂ ಈತ ಇದೇ ಜವಾಬ್ದಾರಿ ಹೊರಲಿದ್ದಾನೆ. ಹಖ್ಖಾನಿ ಸಂಘಟನೆಯು ಉಗ್ರ ಸಂಘಟನೆ ಎಂದು ಅಮೆರಿಕವು ಪಟ್ಟಿ ಮಾಡಿದೆ. ತಾಲಿಬಾನ್ ಜತೆ ನಡೆಯುತ್ತಿರುವ ಮಾತುಕತೆಯಲ್ಲಿ ಅಮೆರಿಕವು ಈ ಸಂಘಟನೆ ಮತ್ತು ಸಿರಾಜುದ್ದೀನ್ ಹಖ್ಖಾನಿಗೆ ಮಾನ್ಯತೆ ನೀಡುತ್ತದೆಯೇ ಅಥವಾ ಇಲ್ಲವೇ ಎಂಬುದು ಈಗಿನ ಪ್ರಶ್ನೆಯಾಗಿದೆ.

ಶೇರ್ ಮೊಹಮ್ಮದ್ ಅಬ್ಬಾಸ್ ಸ್ಟಾನಿಕ್ಜೈ, ರಾಜತಾಂತ್ರಿಕ ಮುಖಂಡ



ತಾಲಿಬಾನ್‌ನ ಉಳಿದೆಲ್ಲಾ ಮುಖಂಡರಿಗಿಂತ ಶೇರ್ ಮೊಹಮ್ಮದ್ ಅಬ್ಬಾಸ್ ಹೆಚ್ಚು ವಿದ್ಯಾವಂತ. ಅಫ್ಗಾನಿಸ್ತಾನದಲ್ಲಿ ಈ ಹಿಂದೆ ತಾಲಿಬಾನ್ ಸರ್ಕಾರ ಅಸ್ತಿತ್ವದಲ್ಲಿ ಇದ್ದಾಗ ಈತ ವಿದೇಶಾಂಗ ಸಚಿವನಾಗಿದ್ದ. ಆಗ ವಿಶ್ವದ ಹಲವು ದೇಶಗಳಿಗೆ ಭೇಟಿ ನೀಡಿ, ರಾಜತಾಂತ್ರಿಕ ಸಂಬಂಧ ಬೆಳೆಸಿದ್ದ. ಸರಾಗವಾಗಿ ಇಂಗ್ಲಿಷ್ ಮಾತನಾಡುವ ತಾಲಿಬಾನ್‌ನ ಏಕೈಕ ನಾಯಕ ಎಂದೂ ಈತ ಗುರುತಿಸಿಕೊಂಡಿದ್ದಾನೆ. ತಾಲಿಬಾನ್ ಸರ್ಕಾರಕ್ಕೆ ರಾಜತಾಂತ್ರಿಕ ಮಾನ್ಯತೆ ನೀಡಬೇಕು ಎಂಬ ಪ್ರಸ್ತಾವ ಇರಿಸಿಕೊಂಡು ಈತ 1996ರಲ್ಲಿ ಅಮೆರಿಕಕ್ಕೆ ಭೇಟಿ ನೀಡಿದ್ದ. ಬಿಲ್ ಕ್ಲಿಂಟನ್ ಸರ್ಕಾರದ ಎದುರು ಈ ಪ್ರಸ್ತಾವವನ್ನು ಇರಿಸಿದ್ದ. ಆದರೆ ಆತನ ಪ್ರಸ್ತಾವವನ್ನು ಅಮೆರಿಕವು ತಿರಸ್ಕರಿಸಿತ್ತು. ಇದೇ ತಿಂಗಳ ಆರಂಭದಲ್ಲಿ ಚೀನಾದ ವಿದೇಶಾಂಗ ಸಚಿವರ ಜತೆ ತಾಲಿಬಾನ್ ನಡೆಸಿದ ಮಾತುಕತೆಯ ಹಿಂದಿನ ತಂತ್ರಗಾರಿಕೆ ಇವನದ್ದೇ ಎಂದು ರಾಯಿಟರ್ಸ್ ವರದಿ ಮಾಡಿತ್ತು. ಅಫ್ಗಾನಿಸ್ತಾನದಲ್ಲಿ ಬಂಡವಾಳ ಹೂಡಿಕೆ ಮಾಡಲು ಚೀನಾಗೆ ಆಹ್ವಾನ ನೀಡುವ ತಂತ್ರಗಾರಿಕೆಯೂ ಇವನದ್ದೇ ಎನ್ನಲಾಗಿದೆ.

ಜಬೀಹುಲ್ಲಾ ಮುಜಾಹಿದ್

ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ನಿಯಂತ್ರಣ ಸಾಧಿಸಿದ ಬಳಿಕ ಆಗಸ್ಟ್ 17ರಂದು ನಡೆಸಿದ ಮೊದಲ ಸುದ್ದಿಗೋಷ್ಠಿಯಲ್ಲಿ ಕಾಣಿಸಿಕೊಂಡವನು ಜಬೀಹುಲ್ಲಾ ಮುಜಾಹಿದ್. ಈತ ತಾಲಿಬಾನ್‌ನ ಮುಖ್ಯ ವಕ್ತಾರ. ವಿಶೇಷವೆಂದರೆ, ಈತ ಬಹಿರಂಗವಾಗಿ ಸುದ್ದಿಗಾರರಿಗೆ ಕಾಣಿಸಿಕೊಂಡಿದ್ದು ಇದೇ ಮೊದಲು. ಈತ ಹೇಗಿದ್ದಾನೆ ಎಂದು ನೋಡುವ ಕುತೂಹಲ ಇತ್ತು ಎಂದು ಹಲವು ಪತ್ರಕರ್ತರು ಹೇಳಿಕೊಂಡಿದ್ದಾರೆ.

ಅಫ್ಗಾನಿಸ್ತಾನದ ತಾಲಿಬಾನ್ ಆಡಳಿತದಲ್ಲಿ ಈತ ಮಹತ್ವದ ಪಾತ್ರ ನಿರ್ವಹಿಸಲಿದ್ದಾನೆ ಎನ್ನಲಾಗಿದೆ. ಅಂತರರಾಷ್ಟ್ರೀಯ ಸಮುದಾಯಕ್ಕೆ ತಾಲಿಬಾನ್ ಗುಂಪಿನ ಸಂದೇಶವನ್ನು ತಲುಪಿಸುವ ಜವಾಬ್ದಾರಿ ಹೊರಲಿದ್ದಾನೆ. 20 ವರ್ಷಗಳ ಯುದ್ಧದ ಸಮಯದಲ್ಲಿ ಪತ್ರಕರ್ತರೊಂದಿಗೆ ದೂರವಾಣಿ ಮೂಲಕ ಅಥವಾ ಬರಹದ ಸಂದೇಶ ಕಳುಹಿಸುವ ಮೂಲಕ ಮಾತ್ರ ಸಂವಹನ ನಡೆಸಿದ್ದ.

ಇಸ್ಲಾಂ ಚೌಕಟ್ಟಿನಲ್ಲಿ ಸರ್ಕಾರದಲ್ಲಿ ಪಾಲ್ಗೊಳ್ಳಲು ಮಹಿಳೆಯರಿಗೆ ಅವಕಾಶ ನೀಡಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದ್ದ. ಮಹಿಳಾ ಪತ್ರಕರ್ತರಿಂದ ಬಂದ ಪ್ರಶ್ನೆಗಳಿಗೆ ಉತ್ತರಿಸಿದ್ದ. ತಮ್ಮ ಸರ್ಕಾರ ಮೊದಲಿನಂತದ್ದಲ್ಲ, ಸಾಕಷ್ಟು ಬದಲಾಗಿದೆ ಎಂದೂ ತಿಳಿಸಿದ್ದ.

ಅಬ್ದುಲ್ ಹಕೀಂ ಹಖ್ಖಾನಿ



ತಾಲಿಬಾನ್‌ನ ಉನ್ನತ ಕಮಾಂಡರ್ ಆಗಿರುವ ಅಖುನ್‌ಜಾದಾ ಆಪ್ತ ಎಂದು ನಂಬಲಾಗಿರುವ ಅಬ್ದುಲ್ ಹಕೀಂ ಹಖ್ಖಾನಿ, ತಾಲಿಬಾನ್‌ನ ಸಂಧಾನ ತಂಡದ ಮುಖ್ಯಸ್ಥ. ಈ ಹಿಂದಿನ ಅಮೆರಿಕ ಸರ್ಕಾರದೊಂದಿಗೆ ಶಾಂತಿ ಮಾತುಕತೆ ನಡೆಸುವ ತಂಡದ ಉಸ್ತುವಾರಿ ವಹಿಸಿದ್ದ. ಧಾರ್ಮಿಕ ವಿದ್ವಾಂಸರ ಹಿರಿಯ ಮಂಡಳಿಯ ಮುಖ್ಯಸ್ಥನೂ ಹೌದು.

ಈತನನ್ನು ತಾಲಿಬಾನ್ ಸಂಧಾನ ತಂಡದ ಮುಖ್ಯಸ್ಥನಾಗಿ 2020ರ ಸೆಪ್ಟೆಂಬರ್‌ನಲ್ಲಿ ತಾಲಿಬಾನ್ ನೇಮಿಸಿತ್ತು. ಈತನಿಗೆ ಸುಮಾರು 60 ವರ್ಷ ವಯಸ್ಸಿರಬಹುದು ಎಂದು ನಂಬಲಾಗಿದೆ. ಪಾಕಿಸ್ತಾನದ ಕ್ವೆಟ್ಟಾದಲ್ಲಿ, ಇಸ್ಲಾಮಿಕ್ ಧಾರ್ಮಿಕ ಶಾಲೆಯನ್ನು ನಡೆಸುತ್ತಿದ್ದಾನೆ. ಅಲ್ಲಿಂದಲೇ ತಾಲಿಬಾನ್‌ನ ನ್ಯಾಯಾಂಗವನ್ನು ನೋಡಿಕೊಳ್ಳುತ್ತಿದ್ದಾನೆ. ಅನೇಕ ಹಿರಿಯ ತಾಲಿಬಾನ್ ನಾಯಕರು ಕ್ವೆಟ್ಟಾದಲ್ಲಿ ಆಶ್ರಯ ಪಡೆದಿದ್ದು, ಅಲ್ಲಿಂದಲೇ ಅವರೆಲ್ಲಾ ಸಂಘಟನೆಯನ್ನು ಮುನ್ನಡೆಸುತ್ತಿದ್ದಾರೆ ಎಂದು ನಂಬಲಾಗಿದೆ.

ಮೊಹಮ್ಮದ್ ಯಾಕೂಬ್

ತಾಲಿಬಾನ್ ಸಂಘಟನೆ ಸಂಸ್ಥಾಪಕ ಮುಲ್ಲಾ ಒಮರ್‌ನ ಮಗನೇ ಈ ಮೊಹಮ್ಮದ್ ಯಾಕೂಬ್. ಒಮರ್ ಮಗ ಎಂಬ ಕಾರಣಕ್ಕೆ ಒಂದು ಬಾರಿ ಸಂಘಟನೆಯ ಉನ್ನತ ಹುದ್ದೆಗೆ ಸ್ಪರ್ಧಿಯಾಗಿದ್ದ. ಪಾಕಿಸ್ತಾನದಲ್ಲಿರುವ ಸೆಮಿನರಿಯಲ್ಲಿ ಶಿಕ್ಷಣ ಪಡೆದಿದ್ದು, ಈಗ ಅಫ್ಗಾನಿಸ್ತಾನದಲ್ಲಿ ವಾಸಿಸುತ್ತಿದ್ದಾನೆ ಎಂದು ಮಾಧ್ಯಮಗಳು ವರದಿ ಮಾಡಿವೆ.

30 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಯಾಕೂಬ್, ಸಂಘಟನೆಯ ಸೇನಾ ಕಾರ್ಯಾಚರಣೆಗಳ ನಾಯಕ ಎಂದು ಗುರುತಿಸಲಾಗಿದೆ. 2016ರಲ್ಲಿ ತಾಲಿಬಾನ್ ಮಾಜಿ ನಾಯಕ ಅಖ್ತರ್ ಮನ್ಸೂರ್ ಸಾವಿನ ನಂತರ, ಕೆಲವು ಉಗ್ರಗಾಮಿಗಳು ಯಾಕೂಬ್‌ನನ್ನು ಗುಂಪಿನ ಹೊಸ ಅತ್ಯುನ್ನತ ಕಮಾಂಡರ್ ಆಗಿ ನೇಮಿಸಲು ಒತ್ತಾಯಿಸಿದ್ದರು. ಆದರೆ ಇತರರು, ಈತ ಚಿಕ್ಕವನು ಮತ್ತು ಅನುಭವದ ಕೊರತೆ ಇದೆ ಎಂದು ಅಭಿಪ್ರಾಯಪಟ್ಟಿದ್ದರು.

ಚುನಾವಣೋತ್ತರ ಹಿಂಸೆ: ಸಿಬಿಐ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆ ನಂತರ ನಡೆದ ಕೊಲೆಗಳು ಮತ್ತು ಅತ್ಯಾಚಾರ ಪ್ರಕರಣಗಳ ಕುರಿತು ಸಿಬಿಐ ತನಿಖೆಗೆ ಕಲ್ಕತ್ತಾ ಹೈಕೋರ್ಟ್ ಗುರುವಾರ ಆದೇಶಿಸಿದೆ.

ಚುನಾವಣೋತ್ತರ ಹಿಂಸಾಚಾರಕ್ಕೆ ಸಂಬಂಧಿಸಿದ ಇತರ ಪ್ರಕರಣಗಳ ತನಿಖೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲು ಹೈಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠ ಆದೇಶಿಸಿದೆ.ನ್ಯಾಯಾಲಯವು ತನಿಖೆಯ ಮೇಲ್ವಿಚಾರಣೆ ಮಾಡುತ್ತದೆ ಎಂದು ಪೀಠವು ತನ್ನ ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಚುನಾವಣೋತ್ತರ ಹಿಂಸಾಚಾರ ಪ್ರಕರಣಗಳನ್ನು ಸಿಬಿಐ ತನಿಖೆಗೆ ವಹಿಸುವಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ರಚಿಸಿದ್ದ ಸಮಿತಿ ಈ ಹಿಂದೆ ಶಿಫಾರಸು ಮಾಡಿತ್ತು.

‘ಕೊಲೆ ಮತ್ತು ಅತ್ಯಾಚಾರ ಅಥವಾ ಅತ್ಯಾಚಾರಕ್ಕೆ ಯತ್ನ ಮೊದಲಾದ ಮಹಿಳೆಯರ ವಿರುದ್ಧದ ಅಪರಾಧಗಳ ಕುರಿತ ಎಲ್ಲಾ ಪ್ರಕರಣಗಳನ್ನು ಸಿಬಿಐ ತನಿಖೆಗೆ ವಹಿಸುವಂತೆ ಶಿಫಾರಸು ಮಾಡಲಾಗಿದೆ’ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಸಮಿತಿಗಳು, ಎನ್‌ಎಚ್‌ಆರ್‌ಸಿ, ಯಾವುದೇ ಇತರ ಆಯೋಗಗಳು, ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರಗಳು ಈ ಎಲ್ಲ ಪ್ರಕರಣಗಳ ಸಂಪೂರ್ಣ ದಾಖಲೆಗಳನ್ನು ತಕ್ಷಣವೇ ಸಿಬಿಐಗೆ ಹಸ್ತಾಂತರಿಸಬೇಕು ಎಂದು ಕೋರ್ಟ್ ಸೂಚಿಸಿದೆ.

ಯಾರೇ ಆಗಲಿ ತನಿಖೆಯ ಸಮಯದಲ್ಲಿ ಯಾವುದೇ ಅಡಚಣೆ ಮಾಡಿದಲ್ಲಿ ಅದನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮೇಲ್ಮನವಿಗೆ ಟಿಎಂಸಿ ನಿರ್ಧಾರ

‘ನ್ಯಾಯಾಲಯದ ಆದೇಶವನ್ನು ಗೌರವಿಸುತ್ತೇವೆ. ಆದೇಶವನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಉನ್ನತ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುವ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದು ಟಿಎಂಸಿ ನಾಯಕ ಮತ್ತು ಸಂಸದ ಸೌಗತ ರಾಯ್ ಹೇಳಿದರು.

ಟಿಎಂಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕುನಾಲ್ ಘೋಷ್ ಅವರು ರಾಜ್ಯದಲ್ಲಿ ಹಿಂಸಾಚಾರವನ್ನು ಪ್ರಚೋದಿಸುತ್ತಿರುವುದಕ್ಕೆ ಬಿಜೆಪಿಯನ್ನು ದೂಷಿಸಿದರು. ‘ನಾವು ನಿಮ್ಮನ್ನು ಕೊಲ್ಲುತ್ತೇವೆ, ನಿಮ್ಮ ಶವ ಸಾಗಿಸಲೂ ಜನರು ಸಿಗುವುದಿಲ್ಲ ಎಂಬಂತಹ ಪ್ರಚೋದನಕಾರಿ ಹೇಳಿಕೆಗಳನ್ನು ಮತದಾನಕ್ಕೂ ಮೊದಲು ಬಿಜೆಪಿ ನಾಯಕರು ನೀಡಿದ್ದರು’ ಎಂದಿದ್ದಾರೆ.

ಅರಾಜಕತೆಗೆ ಸ್ಥಾನವಿಲ್ಲ: ಬಿಜೆಪಿ

ಪಶ್ಚಿಮ ಬಂಗಾಳದ ಚುನಾವಣೋತ್ತರ ಹಿಂಸಾಚಾರ ಪ್ರಕರಣಗಳನ್ನು ಸಿಬಿಐ ತನಿಖೆಗೆ ವಹಿಸಿರುವ ಕಲ್ಕತ್ತಾ ಹೈಕೋರ್ಟ್ ಆದೇಶವನ್ನು ಬಿಜೆಪಿ ಶ್ಲಾಘಿಸಿದೆ. ದೇಶದಲ್ಲಿ ಅರಾಜಕತೆಗೆ ಸ್ಥಾನವಿಲ್ಲ ಎಂಬ ಬಲವಾದ ಸಂದೇಶವನ್ನು ಈ ಆದೇಶ ನೀಡಿದೆ ಎಂದು ಹೇಳಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಆತ್ಮಾವಲೋಕನ ಮಾಡಿಕೊಳ್ಳುವಂತೆ ಸಲಹೆ ನೀಡಿದೆ.

ಹಿಂಸಾಚಾರದ ನಂತರ ಜನರ ದೂರುಗಳನ್ನು ರಾಜ್ಯ ಪೊಲೀಸರು ಆಲಿಸಲಿಲ್ಲ ಎಂದು ಬಿಜೆಪಿ ವಕ್ತಾರ ಗೌರವ್ ಭಾಟಿಯಾ ಆರೋಪಿಸಿದ್ದಾರೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ವರದಿಯನ್ನು ಅವರು ಉಲ್ಲೇಖಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

‘**ಭಾರತದ ಯಾವುದೋ** ಹಳ್ಳಿಯ ಮಕ್ಕಳು ಸೇರಿ ಒಂದು ಮ್ಯೂಸಿಕ್ ಬ್ಯಾಂಡ್ ರೂಪಿಸಿದ್ದಾರೆ. ಈ ಮಕ್ಕಳ ಬಳಿ ಯಾವುದೇ ಆಧುನಿಕ ವಸ್ತುಗಳು ಇಲ್ಲ. ಬದಲಿಗೆ ಡ್ರಮ್, ಕ್ಯಾನ್‌ಗಳನ್ನು ಬಳಸಿಕೊಂಡು ಸಂಗೀತ ಪರಿಕರಗಳನ್ನು ನಿರ್ಮಿಸಿಕೊಂಡಿದ್ದಾರೆ. ನಿಜವಾದ ಶಕ್ತಿ ಇರುವುದು ಮನಸ್ಸಿನಲ್ಲಿ’ ಎಂದು ಹಿಂದಿ ಚಿತ್ರನಟ ಅನುಪಮ್ ಖೇರ್ ವಿಡಿಯೊ ಒಂದನ್ನು ಟ್ವೀಟ್ ಮಾಡಿದ್ದಾರೆ. ಈ ಟ್ವೀಟ್ ಅನ್ನು ಹಲವರು ರಿಟ್ವೀಟ್ ಮಾಡಿದ್ದಾರೆ. 'RachanaPurohitasyaPutri/ ಎಂಬ ಹ್ಯಾಂಡಲ್‌ನಿಂದ ಈ ವಿಡಿಯೊವನ್ನು ಮೊದಲು ಟ್ವೀಟ್ ಮಾಡಲಾಗಿದೆ. ಅದನ್ನೇ ಅನುಪಮ್ ಖೇರ್ ಸಹ ಟ್ವೀಟ್ ಮಾಡಿದ್ದಾರೆ. ಪ್ರತಿಭೆಗೆ ಬಡತನವಿಲ್ಲ. ದೇಶಪ್ರೇಮವನ್ನು ತೋರಿಸಲು ದೊಡ್ಡ ಹುದ್ದೆಯೇ ಬೇಕಿಲ್ಲ. ದೇಶಪ್ರೇಮವಿದ್ದರೆ ಸಾಕು ಎಂದು ಹಲವರು ಟ್ವೀಟ್ ಮಾಡಿದ್ದಾರೆ.

ಇದು ಸುಳ್ಳು ಸುದ್ದಿ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ‘ಇದು ಭಾರತದ ಹಳ್ಳಿಯ ಮಕ್ಕಳ ಬ್ಯಾಂಡ್ ಅಲ್ಲ. ಬದಲಿಗೆ ಪಾಕಿಸ್ತಾನದ ಗಿಲ್ಗಿಟ್ ಬಲ್ತಿಸ್ತಾನ್ ಪ್ರಾಂತದ ಹುಂಝಾ ಗ್ರಾಮದ ಬ್ಯಾಂಡ್. ಈ ಬ್ಯಾಂಡ್‌ಗೆ ಚಿಲಿಮ್ಚಿ ಬ್ಯಾಂಡ್ ಎಂದು ಹೆಸರಿಡಲಾಗಿದೆ. ವೈರಲ್ ಆಗಿರುವ ವಿಡಿಯೊವನ್ನು 2014ರಲ್ಲಿ ಮೊದಲ ಬಾರಿ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಲಾಗಿದೆ. ಇದು ಭಾರತದ ಹಳ್ಳಿಯ ಮಕ್ಕಳ ಬ್ಯಾಂಡ್ ಎಂದು 2015ರಲ್ಲೂ ಸುಳ್ಳು ಸುದ್ದಿ ಹರಡಿತ್ತು. ಆಗ ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿತ್ತು. ಈಗ ಮತ್ತೆ ಸುಳ್ಳು ವಿವರಗಳೊಂದಿಗೆ ಈ ವಿಡಿಯೊವನ್ನು ಹಂಚಿಕೊಳ್ಳಲಾಗಿದೆ’ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಬದಲಾದ ಮನೋಧರ್ಮ

ಇದುವರೆಗೂ ಸಂಕಟಪಟ್ಟದ್ದ ಮಾದ್ರಿದೇವಿ ದುಃಖದಿಂದ, ಆಯಾಸದಿಂದ ಬಸವಳಿದು ಬೋಧಿಸತ್ವನ ಮುಂದೆಯೇ ಕುಸಿದು ಬಿದ್ದಳು. ಇದುವರೆಗೂ ಮೂರ್ತಿಯಂತೆ ಸುಮ್ಮನಿದ್ದ ಬೋಧಿಸತ್ವ, ಆಕೆ ಸತ್ತೇ ಹೋದಳೆಂದು ಭಾವಿಸಿದ. ಛೇ ಈ ಪತಿವ್ರತೆ ಕಾಡಿನಲ್ಲಿ, ವಿದೇಶದಲ್ಲಿ, ಅನುಚಿತವಾದ ಸ್ಥಳದಲ್ಲಿ, ಸತ್ತಳು. ಜೇತುತ್ತರ ನಗರದಲ್ಲಿ ಈಕೆಯ ಅಂತ್ಯಕ್ರಿಯೆ ನಡೆದಿದ್ದರೆ ಬಹಳ ಮರ್ಯಾದೆಯಾಗುತ್ತಿತ್ತು. ಎರಡು ರಾಷ್ಟ್ರಗಳು ಕಂಪಿಸಿಬಿಡುತ್ತಿದ್ದವು. ನಾನೀಗ ಕಾಡಿನಲ್ಲಿ ಒಂಟಿಯಾಗಿದ್ದೇನೆ. ಏನು ಮಾಡಲಿ? ಅವನಿಗೂ ದುಃಖ ಒತ್ತರಿಸಿ ಬಂತು. ನಿಧಾನಕ್ಕೆ ತನ್ನ ಭಾವನೆಗಳನ್ನು ಸ್ಥಿಮಿತಕ್ಕೆ ತಂದುಕೊಂಡು, ಆಕೆಯ ಸ್ಥಿತಿಯನ್ನು ವಿಚಾರಿಸಬೇಕೆಂದುಕೊಂಡು ತನ್ನ ಕೈಯನ್ನು ಆಕೆಯ ಹೃದಯದ ಮೇಲಿಟ್ಟು ನೋಡಿದಾಗ ಅದು ಇನ್ನೂ ಬಿಸಿಯಾಗಿರುವುದು ತಿಳಿಯಿತು. ಆತ ತನ್ನ ಕಮಂಡಲಿನಲ್ಲಿ ನೀರು ತಂದ. ಈಗ ಏಳು ತಿಂಗಳುಗಳಿಂದ ಅವಳ ದೇಹಸ್ಪರ್ಶ ಮಾಡಿರಲಿಲ್ಲ. ಈಗ ಪ್ರೀತಿಯ ಆಧಿಕ್ಯದಿಂದ ತಾನು ಪ್ರವ್ರಜಿತನೆಂಬ ಭಾವನೆಯನ್ನು ಇಟ್ಟುಕೊಳ್ಳಲಾಗಲಿಲ್ಲ. ಆತ ನೀರು ತುಂಬಿದ ಕಣ್ಣುಗಳಿಂದ ಆಕೆಯನ್ನು ನೋಡುತ್ತ, ನಿಧಾನವಾಗಿ ಆಕೆಯ ತಲೆಯನ್ನೆತ್ತಿ ತನ್ನ ತೊಡೆಯ ಮೇಲಿಟ್ಟುಕೊಂಡು ಮುಖಕ್ಕೆ ನೀರು ಚಿಮುಕಿಸಿದ. ಹಾಗೆ ಕುಳಿತುಕೊಂಡೇ ಅವಳ ಮುಖ, ಎದೆಗಳನ್ನು ನಿಧಾನವಾಗಿ ಉಜ್ಜತೊಡಗಿದ. ಕೊಂಚ ಹೊತ್ತಿನಲ್ಲಿ ಆಕೆಯ ದೇಹದಲ್ಲಿ ಚೇತರಿಕೆ ಕಂಡಿತು. ನಂತರ ಆಕೆಗೆ ಪ್ರಜ್ಞೆ ಮರಳಿತು.

ಎಚ್ಚರಗೊಂಡ ಆಕೆ ತಕ್ಷಣವೇ ಎದ್ದು, ಲಜ್ಜಾಭಯದಿಂದ ದೂರ ಸರಿದು, ಬೋಧಿಸತ್ವನಿಗೆ ನಮಸ್ಕರಿಸಿ ಮತ್ತೆ ಕೇಳಿದಳು, ‘ಪ್ರಭೂ, ಮಕ್ಕಳು ಎಲ್ಲಿಗೆ ಹೋಗಿದ್ದಾರೆ?’. ‘ದೇವಿ, ನಾನು ಅವರಿಬ್ಬರನ್ನು ಒಬ್ಬ ಬ್ರಾಹ್ಮಣನಿಗೆ ಸೇವೆ ಮಾಡಲು ದಾಸರಾಗಿ ಕೊಟ್ಟುಬಿಟ್ಟೆ’ ಎಂದ. ‘ಹಾಗಾದರೆ ಬ್ರಾಹ್ಮಣನಿಗೆ ಮಕ್ಕಳನ್ನು ದಾನವಾಗಿ ಕೊಟ್ಟಿದ್ದನ್ನು, ನಾನು ಇಡೀ ರಾತ್ರಿ ಅಳುತ್ತ, ಓಡಾಡುತ್ತಿದ್ದರೂ ಯಾಕೆ ಹೇಳಲಿಲ್ಲ?’ ಎಂದು ಪ್ರಶ್ನಿಸಿದಳು. ‘ಮಾದ್ರಿ, ನಿನಗೆ ಅತ್ಯಂತ ದುಃಖವಾಗುತ್ತದೆ ಮತ್ತು ಆ ದುಃಖದಲ್ಲಿ ಅವರನ್ನು ಹುಡುಕಿಕೊಂಡು ಬೆನ್ನತ್ತಿ ಹೋಗಿಬಿಡುತ್ತೀ ಎಂದು, ಬೆಳಗಾಗುವವರೆಗೂ ಹೇಳಬಾರದೆಂದು, ತೀರ್ಮಾನಿಸಿಕೊಂಡಿದ್ದೆ. ಯಾಕೆಂದರೆ ಈ ಸಮಯಕ್ಕಾಗಲೇ ಅವರು ಕಾಡಿನ ಪ್ರದೇಶವನ್ನು ದಾಟಿ ದೂರ ಹೋಗಿಬಿಟ್ಟಿರುತ್ತಾರೆ. ನಿನ್ನೆ ನೀನು ಕಾಡಿಗೆ ಹೋದ ಮೇಲೆ ಬ್ರಾಹ್ಮಣನೊಬ್ಬ ಆಶ್ರಮಕ್ಕೆ ಬಂದಿದ್ದ. ಮಾದ್ರಿ ಅವನ ಅಪೇಕ್ಷೆಯಂತೆ ನನ್ನ ಮಗ ಮತ್ತು ಮಗಳನ್ನು ಆತನಿಗೆ ಕೊಟ್ಟುಬಿಟ್ಟಿದ್ದೇನೆ. ಭಯಪಡಬೇಡ. ಸಮಾಧಾನಿಯಾಗು. ನಾವು ಬದುಕಿದ್ದರೆ ಮಕ್ಕಳು ಮುಂದೊಂದು ದಿನ ಸಿಕ್ಕೇ ಸಿಗುತ್ತಾರೆ. ನಾವು ಸುಖಿಯಾಗಿ ಬದುಕುತ್ತೇವೆ. ಯಾಚಕ ಯಾವನಾದರೂ ಮನೆಗೆ ಬಂದಾಗ ಸತ್ಪುರುಷನಾದವನು ತನ್ನಲ್ಲಿ ಏನಿರುತ್ತದೆಯೋ ಅದನ್ನು ದಾನ ಮಾಡಿಬಿಡಬೇಕು. ಮಾದ್ರಿ, ಪುತ್ರದಾನ ಸರ್ವಶ್ರೇಷ್ಠ. ನೀನು ದಯವಿಟ್ಟು ನಾನು ಮಾಡಿದ ದಾನಕ್ಕೆ ಅನುಮೋದನೆಯನ್ನು ನೀಡು’. ಮಾದ್ರಿದೇವಿ ತಲೆಯೆತ್ತಿ ವೆಸ್ಸಂತರ ಬೋಧಿಸತ್ವನ ಕಣ್ಣುಗಳನ್ನು ದಿಟ್ಟಿಸಿ ನೋಡಿ’, ಹೇ ದೇವ, ನೀನು ಕೊಟ್ಟಿರುವ ಮಕ್ಕಳ ಶ್ರೇಷ್ಠ ದಾನವನ್ನು ನಾನು ಹೃದಯಪೂರ್ವಕವಾಗಿ ಅನುಮೋದಿಸುತ್ತೇನೆ’ ಎಂದಳು! ಆಕೆಯ ಮನೋಸ್ಥೈರ್ಯಕ್ಕೆ ಬೋಧಿಸತ್ವ ಬೆರಗಾದ. ❖

ದಿನ ಭವಿಷ್ಯ

ಶುಕ್ರವಾರ ಆಗಸ್ಟ್ 20, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮಖಾ ತ್ರಯೋದಶಿ ಗಂ. 34-12 (ರಾ. 7-56) ಶುಕ್ರವಾರ ನಿತ್ಯ ನಕ್ಷತ್ರ ಉತ್ತರಾಷಾಢ ಗಂ. 38-24 (ರಾ. 9-37) ಆಯುಃ ನಾಮ ಯೋಗ ಗಂ. 25-32 ಕೌಲವ ಕರಣ ಗಂ. 6-35 ವಿಷ ಗಂ. 0-26 ಪೂರ್ವಿಷ ಗಂ. 48-0 ಅಮೃತ ಗಂ. 323-30 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-11 ಸೂರ್ಯಾಸ್ತ: 6-36 ಅದೃಷ್ಟ ಸಂಖ್ಯೆ 2, 6, 7

ಮೇಷ: ಕೌಟುಂಬಿಕ ಸೌಹಾರ್ದತೆಯಿಂದ ಸಂತೃಪ್ತಿ. ಸಮಸ್ಯೆಗಳಿಂದ ಮುಕ್ತರಾಗುವಿರಿ. ಮಹಿಳೆಯರಿಗೆ ಉದ್ಯೋಗದಲ್ಲಿ ಯಶಸ್ಸು. ದೀರ್ಘಕಾಲೀನ ಆರೋಗ್ಯ ಸಮಸ್ಯೆಯಿಂದ ಸುಧಾರಣೆ ಕಂಡುಕೊಳ್ಳುವಿರಿ.

ವೃಷಭ: ಹೊಸ ವ್ಯಕ್ತಿಗಳಿಂದ ಸಹಕಾರ. ವಿದ್ವಾಂಸರು, ಕಲಾವಿದರಿಗೆ ಸಾಮಾಜಿಕ ಗೌರವ ಪ್ರಾಪ್ತವಾಗಲಿದೆ. ಅನಿರೀಕ್ಷಿತ ಮೂಲಗಳಿಂದ ಧನಾಗಮನ. ವಿದ್ಯಾರ್ಥಿಗಳಿಗೆ ಪುಸ್ತಕದ ಕೊಡುಗೆ ನೀಡಿ ಕಣ್ಣಿನ ಸಮಸ್ಯೆಗೆ ಪರಿಹಾರ.

ಮಿಥುನ: ಸಾಮಾಜಿಕ ಸೇವೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಿರಿ. ಸಂತೃಪ್ತಿದಾಯಕ ದಾಂಪತ್ಯ ಜೀವನ ನಿಮ್ಮದಾಗುವುದು. ಮಹಿಳೆಯರ ಮನೋಭಿಲಾಷೆಗಳು ಈಡೇರುವವರು. ಆಸ್ತಿ ವಿವಾದಗಳಲ್ಲಿ ಅನುಕೂಲಕರ.

ಕರ್ಕಾಟಕ: ಮಿತ್ರರಿಂದ ಧನಲಾಭ. ಗೃಹ ನಿರ್ಮಾಣ ಕಾರ್ಯಗಳಲ್ಲಿ ಯಶಸ್ಸು. ಮಹಿಳೆಯರ ಅಪೇಕ್ಷೆ ಈಡೇರಿಕೆ. ಶುಭಕಾರ್ಯಗಳು ನಿಶ್ಚಯವಾಗಲಿವೆ. ಸಂತೃಪ್ತ ಜೀವನ. ಪ್ರಿಯ ವ್ಯಕ್ತಿಗಳ ಆಗಮನದಿಂದ ಮನೆಯಲ್ಲಿ ಸಂತಸ.

ಸಿಂಹ: ಬಂಧುಗಳಲ್ಲಿನ ಭಿನ್ನಾಭಿಪ್ರಾಯಗಳನ್ನು ದೂರ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುವಿರಿ. ಭೂ ಪ್ರಕರಣದಿಂದ ಧನಲಾಭ. ಆಧ್ಯಾತ್ಮಿಕ ಚಿಂತನೆಯಿಂದ ಸಮಸ್ಯೆಗಳು ಪರಿಹಾರವಾಗುವವು. ತೃಪ್ತಿಕರ ಜೀವನ.

ಕನ್ಯಾ: ವಿದ್ಯಾರ್ಥಿಗಳಿಗೆ ಸಮಸ್ಯೆಗಳಿಂದ ಮುಕ್ತಿ ದೊರೆತು ಉತ್ತಮ ಪ್ರಗತಿ. ಮಹಿಳಾ ಪ್ರತಿಭೆಗಳಿಗೆ ಪ್ರೋತ್ಸಾಹ ದೊರೆತು ಯಶಸ್ಸು. ಕುಟುಂಬವರ್ಗದಲ್ಲಿ ಶುಭಸಮಾರಂಭಗಳು ನಡೆಯಲಿವೆ. ಕೃಷಿ ಕ್ಷೇತ್ರದಿಂದ ಲಾಭ.

ತುಲಾ: ಯಶಸ್ಸು ಮತ್ತು ಕೀರ್ತಿ ನಿಮ್ಮನ್ನು ಹಿಂಬಾಲಿಸ ಬರಲಿವೆ. ವಿಚಾರಲಹರಿಯಿಂದಾಗಿ ಗೌರವಕ್ಕೆ ಪಾತ್ರರಾಗುವಿರಿ. ಆತುರದ ನಿರ್ಧಾರದಿಂದಾಗಿ ಕೆಲಸ ಕಾರ್ಯಗಳಲ್ಲಿ ವಿಘ್ನ ತಂದುಕೊಳ್ಳುವಿರಿ.

ವೃಶ್ಚಿಕ: ಸ್ನೇಹಿತರಿಂದ ಸಹಕಾರ. ನಿರುದ್ಯೋಗಿಗಳಿಗೆ ಉದ್ಯೋಗದ ಬಾಗಿಲು ತೆರೆಯಲಿದೆ. ಕೃಷಿಕರಿಗೆ ಸರ್ಕಾರದಿಂದ ಸಹಾಯ ಸಹಕಾರ. ಕಳೆದು ಹೋದ ವಸ್ತುಗಳು ಲಭ್ಯವಾಗುವ ಸಾಧ್ಯತೆ.

ಧನು: ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಮಿತ್ರರಿಂದ ಸಹಕಾರ. ಮಹಿಳೆಯರಿಗೆ ಎಲ್ಲ ಕಡೆಯಿಂದಲೂ ಸಹಕಾರ ದೊರೆತು ಯಶಸ್ಸು. ಸಾಮಾಜಿಕ ಕ್ಷೇತ್ರದಲ್ಲಿ ಭಾಗಿಯಾಗಿ ಗೌರವಾದರ ಪ್ರಾಪ್ತಿ.

ಮಕರ: ಆಧ್ಯಾತ್ಮಿಕ ಚಿಂತನೆಯಿಂದ ಸಂತೃಪ್ತಿ. ಬಂಧುಗಳೊಂದಿಗಿನ ಸಂಬಂಧ ವೃದ್ಧಿ. ಹೊಸ ವಸ್ತುಗಳ ಖರೀದಿ ಸಾಧ್ಯತೆ. ಪ್ರಯಾಣ ಯೋಗ. ಪುಣ್ಯ ಕ್ಷೇತ್ರ ದರ್ಶನ ಭಾಗ್ಯ. ದೇವತಾರಾಧನೆಯಿಂದ ಇಷ್ಟಾರ್ಥ ಸಿದ್ಧಿ.

ಕುಂಭ: ಬಂಧುಗಳ ಗೌರವಕ್ಕೆ ಪಾತ್ರರಾಗುವಿರಿ. ಮನರಂಜನೆಗಾಗಿ ಖರ್ಚು. ಸ್ವಂತ ಉದ್ಯೋಗಿಗಳಿಗೆ ಯಶಸ್ಸು. ಕೃಷಿ ಉತ್ಪನ್ನ ಕೆಲಸಗಳಲ್ಲಿ ತೊಡಗಿಕೊಂಡವರಿಗೆ ಭೂಮಿಯಿಂದ ಧನಲಾಭ. ಅಧಿಕಾರಿಗಳಿಂದ ಸಹಕಾರ ಲಭ್ಯ.

ಮೀನ: ಮಹಿಳೆಯರು ಕುಟುಂಬದಲ್ಲಿ ಗೌರವಕ್ಕೆ ಪಾತ್ರರಾಗುವ ಅವಕಾಶ. ವೃತ್ತಿಯಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಬಂಧುಗಳೊಂದಿಗಿನ ಆತ್ಮೀಯ ಸಂಬಂಧ ವೃದ್ಧಿಸುವುದು.

ನಿಮ್ಮ ಜನ್ಮದಿನ 20-ಆಗಸ್ಟ್: ಇಂದು ಅತ್ಯಂತ ಶುಭದಾಯಕ. ಸಮಾಜದ ಏಳಿಗೆಗಾಗಿ ಕೈಗೊಂಡ ಕಾರ್ಯಗಳಲ್ಲಿ ಏಳಿಗೆ ಸಹಿಸದವರಿಂದ ಸ್ವಲ್ಪಮಟ್ಟಿನ ವಿರೋಧ. ಒಳಿತು ಕೆಡುಕುಗಳ ಜ್ಞಾನ ಇರುವುದರಿಂದ ಉತ್ತಮ ಕೆಲಸಗಳನ್ನು ಕೈಗೆತ್ತಿಕೊಂಡು ನಿಧಾನವಾಗಿ ಯಶಸ್ಸು. ಮನೆಯವರಿಂದ ಹಿತ ವಚನಗಳು ಕೇಳಿಬರಲಿವೆ.

ಪದಬಂಧ 4694

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಕಡಲಿನ ಮೇಲೆ ಕೈಗೊಂಡಿರುವ ಪಯಣ (5)
4.ಹಣವನ್ನು ಸಂದಾಯ ಮಾಡುವುದು (3)
5.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
9.ಮೂವತ್ತು ದಿನಗಳ ಅವಧಿ (2)
10.ಸಾಗಾಣೆ ಮೇಲಿನ ತೆರಿಗೆ (3)
11.ನಾರೀಕೇಳ ಹಿಡಿದಿರುವ ಸ್ತ್ರೀ (2)
12.ಕರದೊಳಗಿರುವ ದೇವರು (3)
15.ಗಂಡಾನೆ ಇಲ್ಲಿಗೆ ಬಂದಿದೆ (3)
16.ಅತ್ಯಂತ ಚೆಲುವಾದುದು (5)

ಮೇಲಿಂದ ಕೆಳಕ್ಕೆ
1.ಅಚ್ಚು ಎಂದು ಹೀಗೆನ್ನಿ (3)
2.ಸವತಿ ಜೊತೆಗಿರುವ ಹೆಂಡತಿ (2)
3.ನಗರದಲ್ಲಿರುವ ಮನುಷ್ಯ (2)
4.ಇದು ಪಾರಮಾರ್ಥಕ್ಕೆ ಸಂಬಂಧಿಸಿದ್ದು (5)
6.ಕಸ್ತೂರಿಯನ್ನು ಕೊಡುವ ಕೊಂಬಿಲ್ಲದ ಜಿಂಕೆ (5)
7.ಹಳೆ ಸಾಮಾನು ಮಾರುವ ಸ್ಥಳ (3)
8.ಚಂದಾ ಹಣವಿದು (3)
13.ತಿರುಗಿದಾಗ ದೇವತೆ ಕಾಣುತ್ತಿದೆಯಲ್ಲಾ? (2)
14.ಹಾಸ್ಯ ಈ ವಿಧವಾಗಿ ಬಂದಿದೆ (3)
15.ಸರಕ್ಕನೆ ಹೋಗಿ ಧರಿಸಿದ ಮಾಲೆ (2)



4693ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಭವ 3.ಪ್ರಯಾಸ 5.ರಸಿಕ 7.ಪರಿವಾರ 9.ಕುಟೀರ 10.ಕಣಕ 11.ರವಿವಾರ 13.ಮಕರ 15.ನಿಷ್ಠುರ 16.ಕಣ್ಣು
ಮೇಲಿಂದ ಕೆಳಕ್ಕೆ: 2.ವಠಾರ 3.ಪ್ರತೀಕ 4.ಸಲ್ಲಾಪ 6.ಸಿತಾರ 8.ರಕ್ಷಕ 9.ಕುಬೇರ 10.ಕನಕ 12.ರಜನಿ 13.ಮಧುರ 14.ರಜಕ

ಸುಡೊಕು 5080

	4					6		1
9						2	7	
	7	2						8
		4		3		1		2
2	8		6	9				
		7			8		6	5
	5			1		4		7
		6	8		2		3	
4	2			5	7	8		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5079 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಕಾಬೂಲ್‌ನ ಬ್ಯೂಟಿ ಪಾರ್ಲರ್‌ಗಳ ಹೊರಗೆ ಇದ್ದ ಮಹಿಳೆಯರ ಚಿತ್ರಕ್ಕೆ ಮಸಿ

ಸ್ತ್ರೀ ಸ್ವಾತಂತ್ರ್ಯಕ್ಕೆ ತಾಲಿಬಾನ್ ಮುಸುಕು

ಕಾಬೂಲ್‌ನಲ್ಲಿ ತಾಲಿಬಾನ್ ಸೈನಿಕರ ಗಸ್ತು ತೀವ್ರಗೊಂಡಿದೆ. ನಗರದ ಬ್ಯೂಟಿ ಪಾರ್ಲರ್ ಹೊರಗಿದ್ದ ಮಹಿಳೆಯರ ಚಿತ್ರಗಳಿಗೆ ಮಸಿ ಬಳಿಯಲಾಗಿದೆ– ಎಎಫ್‌ಪಿ ಚಿತ್ರ

ಕಾಬೂಲ್ (ಎಎಫ್‌ಪಿ): ಅಫ್ಗಾನಿಸ್ತಾನವನ್ನು ಆಕ್ರಮಿಸಿಕೊಂಡಿರುವ ತಾಲಿಬಾನ್‌ನ 2.0 ಆಳ್ವಿಕೆಯು ಸೌಮ್ಯ ಸ್ವರೂಪದ್ದಾಗಿರಲಿದೆ ಎಂದು ಆ ಸಂಘಟನೆಯ ನಾಯಕರು ಮತ್ತೆ ಮತ್ತೆ ಭರವಸೆ ಕೊಡುತ್ತಿದ್ದಾರೆ. ಆದರೆ, ವಾಸ್ತವವು ಅದಕ್ಕೆ ವ್ಯತಿರಿಕ್ತವಾಗಿದೆ. ಕಾಬೂಲ್‌ನ ಬೀದಿಬದಿಗಳಲ್ಲಿ ಇರುವ ಮಹಿಳೆಯರ ಚಿತ್ರಗಳನ್ನು ಧ್ವಂಸ ಮಾಡಲಾಗಿದೆ, ಅವುಗಳಿಗೆ ಹೊದಿಕೆ ಮುಚ್ಚಲಾಗಿದೆ ಅಥವಾ ಮಸಿ ಬಳಿಯಲಾಗಿದೆ.

ರಾಜಧಾನಿ ಕಾಬೂಲ್ ಜತೆಗೆ ಇಡೀ ಅಫ್ಗಾನಿಸ್ತಾನದ ನಿಯಂತ್ರಣವು ತಾಲಿಬಾನ್ ಕೈಸೇರಿದೆ. ಸರ್ಕಾರ ಮತ್ತು ಪ್ರಾದೇಶಿಕ ಮುಖಂಡರ ಸೈನ್ಯವು ಹೆಚ್ಚಿನ ಪ್ರತಿರೋಧವನ್ನೇ ತೋರದೆ ತಲೆಬಾಗಿವೆ.

2001ರ ಹಿಂದೆ ತಾಲಿಬಾನ್ ಆಳ್ವಿಕೆ ಇದ್ದಾಗ ಮಹಿಳೆಯರು ಅತೀವ ಸಂಕಷ್ಟಕ್ಕೆ ಒಳಗಾಗಿದ್ದರು. ಈ ಬಾರಿಯೂ ಅದು ಮರುಕಳಿಸಬಹುದು ಎಂಬ ಭೀತಿಯಲ್ಲಿ ಜನರು ಇದ್ದಾರೆ.

2001ರ ನಂತರದ ಎರಡು ದಶಕಗಳಲ್ಲಿ ಕಾಬೂಲ್‌ನಲ್ಲಿ ಹತ್ತಾರು ಬ್ಯೂಟಿ ಪಾರ್ಲರ್‌ಗಳು ತಲೆ ಎತ್ತಿದ್ದವು. ದೇಹದ ಒಂದು ಕಣವನ್ನೂ ಹೊರಗೆ ತೋರಿಸಬಾರದು ಎಂಬ ನಿರ್ಬಂಧದಿಂದ ಹೊರಗೆ ಬಂದ ಮಹಿಳೆಯರು ಪ್ರಜಾಪ್ರಭುತ್ವದ ಸ್ವಾತಂತ್ರ್ಯವನ್ನು ಸವಿಯತೊಡಗಿದ್ದು. ಅದರ ಪರಿಣಾಮವಾಗಿ ಕಾಬೂಲ್‌ನಲ್ಲಿ ಬ್ಯೂಟಿ ಪಾರ್ಲರ್ ಉದ್ಯಮವು ಸಮೃದ್ಧವಾಗಿ ಬೆಳೆದಿತ್ತು. ಈಗ, ಒಂದು ಕಾಲದಲ್ಲಿ ನಿಷೇಧಿತವಾಗಿದ್ದ ಈ ಪಾರ್ಲರ್‌ಗಳ ಹೊರಗೆ ಇರುವ ಮಹಿಳೆಯರ ಚಿತ್ರಗಳಿಗೆ ಮಸಿ ಬಳಿಯುವ ಕೆಲಸ ಈಗ ನಡೆಯುತ್ತಿದೆ.

ಜಾಹೀರಾತಿನಲ್ಲಿ ಯುವತಿಯೊಬ್ಬಳು ರೂಪದರ್ಶಿಯಾಗಿದ್ದ ಚಿತ್ರವಿದ್ದ ಗೋಡೆಗೆ ಪಾರ್ಲರ್‌ನ ಮಾಲೀಕರೇ ಸುಣ್ಣ ಹೊಡೆಸುತ್ತಿದ್ದದ್ದು ಗುರುವಾರ ಕಂಡು ಬಂದಿದೆ. ಇನ್ನೊಂದು ಗೋಡೆಯಲ್ಲಿದ್ದ ಮಹಿಳೆಯ ಚಿತ್ರವನ್ನು ಮಸಿ ಬಳಿದು ಮುಚ್ಚಲಾಗಿದೆ.

1996–2001ರ ಆಳ್ವಿಕೆಯ ಅವಧಿಯಲ್ಲಿ ಮಹಿಳೆಯರನ್ನು ಕೆಟ್ಟದಾಗಿ ನಡೆಸಿಕೊಳ್ಳುವುದಕ್ಕೆ ತಾಲಿಬಾನ್ ಕುಖ್ಯಾತವಾಗಿತ್ತು. ಹೆಣ್ಣು ಮಕ್ಕಳಿಗೆ ಶಾಲಾ ಕಲಿಕೆ ನಿಷೇಧಿಸಲಾಗಿತ್ತು. ಗಂಡಸರ ಜತೆ ಸಂಪರ್ಕಕ್ಕೆ ಬರುವ ಯಾವ ಕೆಲಸಕ್ಕೂ ಅವಕಾಶ ಇರಲಿಲ್ಲ.

ಈ ಬಾರಿ, ಮಹಿಳೆಯರ ಹಕ್ಕುಗಳನ್ನು ಗೌರವಿಸಲಾಗುವುದು ಎಂದು ತಾಲಿಬಾನ್ ಹೇಳಿದೆ. ಮಹಿಳೆಯರು ಇಡೀ ದೇಹ ಮುಚ್ಚುವ ಬುರ್ಖಾ ಧರಿಸುವ ಅಗತ್ಯ ಇಲ್ಲ ಎಂದು ತಾಲಿಬಾನ್ ವಕ್ತಾರ ಬ್ರಿಟನ್‌ನ ಸ್ಕೈ ನ್ಯೂಸ್‌ಗೆ ಹೇಳಿದ್ದಾರೆ. ಆದರೆ, ಯಾವ ರೀತಿಯ ದಿರಿಸು ಸ್ವೀಕಾರಾರ್ಹ ಎಂಬುದನ್ನು ಅವರು ತಿಳಿಸಿಲ್ಲ.

ಇಸ್ಲಾಂ ತತ್ವಗಳು ಮತ್ತು ಷರೀಯತ್ ನಿಯಮಗಳ ಪ್ರಕಾರ, ಮಹಿಳೆಯರು ಕೆಲಸವನ್ನೂ ಮಾಡಬಹುದು ಎಂದು ತಾಲಿಬಾನ್ ಹೇಳುತ್ತಿದೆ.

ಆದರೆ, ಜನರು ಹಾಗೆ ಭಾವಿಸಿಲ್ಲ. 'ಅವರು ಮರಳಿ ಬಂದಿದ್ದಾರೆ. ನಮ್ಮ ಸ್ವಾತಂತ್ರ್ಯ ನಮಗೆಂದೂ ಮರಳಿ ಸಿಗದು. ಮಹಿಳೆಯರು ಕೆಲಸ ಮಾಡುವುದೇ ಅವರಿಗೆ ಬೇಕಿಲ್ಲ' ಎಂದು 27 ವರ್ಷದ ಫರೀದಾ ಹೇಳಿದ್ದಾರೆ.

ಕರ್ನಾಟಕ ಹೈಕೋರ್ಟ್: ಆರು ನ್ಯಾಯಮೂರ್ತಿಗಳ ಕಾಯಂ

ನವದೆಹಲಿ (ಪಿಟಿಐ): ಕರ್ನಾಟಕದ ಹೈಕೋರ್ಟ್‌ಗೆ ಆರು ಹೆಚ್ಚುವರಿ ನ್ಯಾಯಮೂರ್ತಿಗಳನ್ನು ಕಾಯಂಗೊಳಿಸುವ ನೇಮಕಾತಿ ಪ್ರಸ್ತಾವನೆಗೆ ಸುಪ್ರೀಂಕೋರ್ಟ್ ಕೊಲಿಜಿಯಂ ಅನುಮೋದನೆ ನೀಡಿದೆ.

ಆಗಸ್ಟ್ 17ರಂದು ನಡೆದ ಸಭೆಯಲ್ಲಿ ಮುಖ್ಯ ನ್ಯಾಯಮೂರ್ತಿ ಎನ್.ವಿ ರಮಣ ನೇತೃತ್ವದ ಕೊಲಿಜಿಯಂ ಪ್ರಸ್ತಾವನೆಗೆ ಅನುಮೋದನೆ ನೀಡಿದೆ.

ನ್ಯಾಯಮೂರ್ತಿಗಳಾದ ನೇರನಹಳ್ಳಿ ಶ್ರೀನಿವಾಸನ್ ಸಂಜಯ್ ಗೌಡ, ಜ್ಯೋತಿ ಮೂಲಿಮನಿ, ನಟರಾಜ ರಂಗಸ್ವಾಮಿ, ಹೇಮಂತ್ ಚಂದನಗೌಡರ್, ಪ್ರದೀಪ್ ಸಿಂಗ್ ಯೆರೂರ್ ಮತ್ತು ಮಹೇಶನ್ ನಾಗಪ್ರಸನ್ನ ಅವರನ್ನು ಕಾಯಂ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಲಾಗಿದೆ.

ಕಲ್ಕತ್ತ ಹೈಕೋರ್ಟ್‌ನ ನ್ಯಾಯಮೂರ್ತಿ ಕೌಶಿಕ್ ಚಂದಾ ಅವರನ್ನು ಕಾಯಂ ನ್ಯಾಯಮೂರ್ತಿಯನ್ನಾಗಿ ನೇಮಕ ಮಾಡುವ ಪ್ರಸ್ತಾವಕ್ಕೂ ಕೊಲಿಜಿಯಂ ಅನುಮೋದನೆ ನೀಡಿದೆ. ಈ ಕೊಲಿಜಿಯಂನಲ್ಲಿ ನ್ಯಾಯಮೂರ್ತಿಗಳಾದ ಯು.ಯು ಲಲಿತ್ ಮತ್ತು ಎ.ಎಂ ಖಾನ್‌ವಿಲ್ಕರ್ ಕೂಡ ಇದ್ದಾರೆ.

ಸಮಯಕ್ಕೆ ಸಿಗದ 3.86 ಕೋಟಿ ಲಸಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ 3.86 ಕೋಟಿಗೂ ಹೆಚ್ಚು ಜನರು ಕೋವಿಡ್ ಲಸಿಕೆಯ ಎರಡನೇ ಡೋಸ್ ಅನ್ನು ನಿಗದಿತ ಅವಧಿಯಲ್ಲಿ ಪಡೆದಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಪ್ರಜಾವಾಣಿ
ಫೋನ್–ಇನ್ ಕಾರ್ಯಕ್ರಮ
ಕಾಲ್ ಮಾಡಿ ಸಮಸ್ಯೆ ಹೇಳ್ಕೊಳ್ಳಿ
- ಜಮೀನಿನ ಪೋಡಿ ಮಾಡಿಸಲು ಸಮಸ್ಯೆಗಳಿವೆಯೇ?
- ಸರ್ವೇ ಕಾರ್ಯ ವಿಳಂಬವಾಗುತ್ತಿದೆಯೇ?
- ಪ್ರವಾಹ ಸಂತ್ರಸ್ತರು ಪರಿಹಾರ ಪಡೆಯಲು ಅಧಿಕಾರಿಗಳು ಸತಾಯಿಸುತ್ತಿದ್ದಾರೆಯೇ?
- ಕೋವಿಡ್ ನಿಯಂತ್ರಣ ನಿಯಮಗಳ ಕುರಿತು ನಿಮ್ಮಲ್ಲಿ ಗೊಂದಲಗಳಿವೆಯೇ?
- ಕಂದಾಯ ಇಲಾಖೆಯ ಸೇವೆಗಳಿಗೆ ಸಂಬಂಧಿಸಿದ ನಿಮ್ಮೆಲ್ಲ ಪ್ರಶ್ನೆಗಳಿಗೆ ನೇರ ಉತ್ತರಿಸಲಿದ್ದಾರೆ

ನಿಮ್ಮ ಸಂದೇಹ ಬಗೆಹರಿಸಿಕೊಳ್ಳಲು ಕರೆ ಮಾಡಿ.
ಸಚಿವ ಆರ್.ಅಶೋಕ
ಕಂದಾಯ ಸಚಿವ
20-08-2021, ಶುಕ್ರವಾರ
ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ
ಕರೆ ಮಾಡಿ 08045557230
facebook LIVE facebook.com/prajavani.net

ಅಮೆರಿಕದ ಅಧ್ಯಕ್ಷ ಜೋ ಬೈಡನ್ ಪ್ರತಿಪಾದನೆ

ತಾಲಿಬಾನ್‌ಗಿಂತ ಅಲ್‌ಕೈದಾ ಅಪಾಯಕಾರಿ

ವಾಷಿಂಗ್ಟನ್ (ಎಪಿ): 'ಅಫ್ಗಾನಿಸ್ತಾನದ ಅಧಿಕಾರವನ್ನು ವಶಕ್ಕೆ ಪಡೆದಿರುವ ತಾಲಿಬಾನ್‌ಗಿಂತ ಬೇರೆ ದೇಶಗಳಲ್ಲಿ ಸಕ್ರಿಯವಾಗಿರುವ ಅಲ್‌-ಕೈದಾ ಉಗ್ರ ಸಂಘಟನೆಯಿಂದ ಅಮೆರಿಕಕ್ಕೆ ಹೆಚ್ಚು ಅಪಾಯವಿದೆ. ಹೀಗಾಗಿ ಅಫ್ಗಾನಿಸ್ತಾನದಲ್ಲಿ ಸೇನೆ ನಿಯೋಜಿಸುವ ಕಡೆ ಹೆಚ್ಚು ಗಮನ ನೀಡಬೇಕಿಲ್ಲ' ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಎಬಿಸಿ ವಾಹಿನಿಯ 'ಗುಡ್ ಮಾರ್ನಿಂಗ್ ಅಮೆರಿಕ' ಸಂದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಫ್ಗಾನಿಸ್ತಾನದಿಂದ ಅಮೆರಿಕ ಸೇನೆಯನ್ನು ವಾಪಸ್ ಕರೆಸಿಕೊಂಡ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.

> ತಮ್ಮನ್ನು ಕಾನೂನುಬದ್ಧ ಸರ್ಕಾರ ಎಂದು ಜಾಗತಿಕ ಸಮುದಾಯ ಗುರುತಿಸಬೇಕು ಎಂದು ಬಯಸುತ್ತಿರುವ ತಾಲಿಬಾನಿಗಳು ಅಸ್ತಿತ್ವದ ಸಮಸ್ಯೆ ಎದುರಿಸಲಿದ್ದಾರೆ
> **ಜೋ ಬೈಡನ್,** ಅಮೆರಿಕದ ಅಧ್ಯಕ್ಷ



'ಅಫ್ಗಾನಿಸ್ತಾನದಲ್ಲಿ ಮಹಿಳೆಯರು ಮತ್ತು ಬಾಲಕಿಯರ ಹಕ್ಕುಗಳನ್ನು ಸೇನೆಯ ಮೂಲಕ ರಕ್ಷಿಸಲು ಸಾಧ್ಯವಾಗದು. ಅದು ಅಂತರರಾಷ್ಟ್ರೀಯ ಮಟ್ಟದ ಒತ್ತಡ ಮತ್ತು ರಾಜತಾಂತ್ರಿಕ ಮಾರ್ಗಗಳ ಮೂಲಕ ಸಾಧಿಸಬೇಕಿರುವ ಕಾರ್ಯ' ಎಂದು ಅವರು ಪ್ರತಿಪಾದಿಸಿದ್ದಾರೆ.

'ಅಫ್ಗಾನಿಸ್ತಾನದಲ್ಲಿರುವ ಕೊನೆಯ ಅಮೆರಿಕ ಪ್ರಜೆಯನ್ನು ತೆರವು ಮಾಡುವ ತನಕವೂ ನಮ್ಮ ಸೇನೆ ಅಲ್ಲಿ ಇರಲಿದೆ. ಅಫ್ಗಾನಿಸ್ತಾನದಲ್ಲಿ ಸೇನೆ ನಿಯೋಜಿಸುವುದಕ್ಕಿಂತ, ತಾಲಿಬಾನಿಗಳಿಗಿಂತ ಹೆಚ್ಚು ಅಪಾಯಕಾರಿಯಾಗಲಿರುವ ದೇಶಗಳಲ್ಲಿ ಸೇನೆ ನಿಯೋಜಿಸಬೇಕಾಗುತ್ತದೆ. ಸಿರಿಯಾದಲ್ಲಿ ಅಲ್‌-ಕೈದಾ ಹೆಚ್ಚು ಪ್ರಬಲವಾಗಿದೆ. ಅದು ತಾಲಿಬಾನಿಗಳಿಗಿಂತ ಹೆಚ್ಚು ಅಪಾಯಕಾರಿ' ಎಂದು ಅವರು ಪ್ರತಿಪಾದಿಸಿದ್ದಾರೆ.

ದಿನದ ಬೆಳವಣಿಗೆ

- ಅಫ್ಗಾನಿಸ್ತಾನದಲ್ಲಿ ಬಂಡವಾಳ ಹೂಡಲು ಚೀನಾಗೆ ಮತ್ತೆ ಆಹ್ವಾನ ನೀಡಿದ ತಾಲಿಬಾನ್
- ಅಫ್ಗಾನಿಸ್ತಾನದಲ್ಲಿ ಸರ್ಕಾರ ರಚನೆ ಸಂಬಂಧ, ನಿರ್ಗಮಿತ ಸರ್ಕಾರದ ನಿಯೋಗವು ಗುರುವಾರ ಪಾಕಿಸ್ತಾನಕ್ಕೆ ಭೇಟಿ ನೀಡಿದೆ. ಸರ್ಕಾರ ರಚನೆಯಲ್ಲಿ ನೆರವು ಕೋರಿದೆ
- ಕಾಬೂಲ್‌ನಿಂದ ಅಫ್ಗನ್ ಪ್ರಜೆಗಳನ್ನು ಬೇರೆ ದೇಶಗಳಿಗೆ ತೆರವು ಮಾಡಲು ವಿಮಾನಸೇವೆ ಒದಗಿಸುವುದಾಗಿ ರಷ್ಯಾ ಘೋಷಿಸಿದೆ
- ಅಫ್ಗಾನಿಸ್ತಾನದಿಂದ ತಪ್ಪಿಸಿಕೊಳ್ಳಲು ಮಾನವ ಕಳ್ಳಸಾಗಣೆದಾರರ ಮೊರೆ ಹೋಗುತ್ತಿರುವ ಅಫ್ಗನ್ ನಾಗರಿಕರು
- ತಾಲಿಬಾನ್ ನೇತೃತ್ವದ ಅಫ್ಗಾನಿಸ್ತಾನ ಸರ್ಕಾರಕ್ಕೆ ಯಾವುದೇ ಸಾಲ ಮತ್ತು ಹಣಕಾಸಿನ ನೆರವು ಮಂಜೂರು ಮಾಡುವುದಿಲ್ಲ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ ಹೇಳಿದೆ
- ಅಫ್ಗಾನಿಸ್ತಾನ ಸರ್ಕಾರಕ್ಕೆ ಎಲ್ಲಾ ರೀತಿಯ ಶಸ್ತ್ರಾಸ್ತ್ರ ಮಾರಾಟವನ್ನು ಸ್ಥಗಿತಗೊಳಿಸಿದ ಅಮೆರಿಕ ಸರ್ಕಾರ
- ತಾಲಿಬಾನ್ ಗೆಲುವನ್ನು ಶ್ಲಾಘಿಸಿದ ಸಿರಿಯಾದ ಅಲ್‌-ಕೈದಾ ಮತ್ತು ಸಹ ಸಂಘಟನೆಗಳು

ಜಾತಿ ಗಣತಿ: ಸರ್ಕಾರದ್ದು ತೆರೆದ ಮನಸ್ಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ವರದಿ ಸ್ವೀಕರಿಸುವ ವಿಚಾರದಲ್ಲಿ ರಾಜ್ಯ ಸರ್ಕಾರ ತೆರೆದ ಮನಸ್ಸು ಹೊಂದಿದೆ' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಶಾಸಕರ ಭವನದಲ್ಲಿ ಗುರುವಾರ ನಡೆದ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಸಭೆಯಲ್ಲಿ, ಸಮೀಕ್ಷೆಯ ವರದಿಯನ್ನು ಸರ್ಕಾರ ಸ್ವೀಕರಿಸಬೇಕೆಂಬ ಬೇಡಿಕೆ ಮುಂದಿಟ್ಟ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಈ ಸಮೀಕ್ಷೆಗೆ ಸಂಬಂಧಿಸಿದ ಕಡತಗಳು ಸದ್ಯ ಹಿಂದುಳಿದ ವರ್ಗಗಳ ಆಯೋಗದ ಹಾಲಿ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರ ಸುಪರ್ದಿಯಲ್ಲಿದೆ. ವರದಿಯನ್ನು ಆಯೋಗ ಸರ್ಕಾರಕ್ಕೆ ಹಸ್ತಾಂತರಿಸಿದರೆ, ಅದು ಬಿಡುಗಡೆ ಆದಂತೆಯೇ. ಆದರೆ, ಸರ್ಕಾರಕ್ಕೆ ಸಲ್ಲಿಸಲು ಕೆಲವು ಸಮಸ್ಯೆಗಳಿವೆ ಎಂದು ಅವರು ಹೇಳಿದ್ದಾರೆ' ಎಂದರು.

'ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ರಾಜ್ಯ ಸರ್ಕಾರ ಸುಮಾರು ₹ 170 ಕೋಟಿ ವೆಚ್ಚದಲ್ಲಿ ಈ ಸಮೀಕ್ಷೆ (ಜಾತಿ ಗಣತಿ) ನಡೆಸಿದೆ. ಅವರೇ ವರದಿಯನ್ನು ಬಿಡುಗಡೆ ಮಾಡುತ್ತಾರೆ ಅಂದುಕೊಂಡಿದ್ದೆವು. ಆದರೆ, ಅವರು ಆ ಕೆಲಸವನ್ನು ಮಾಡಲಿಲ್ಲ' ಎಂದರು.

ಸಭೆಯ ಬಳಿಕ ವೇದಿಕೆಯ ಪ್ರಮುಖರು ಗೃಹ ಕಚೇರಿ 'ಕೃಷ್ಣಾ'ದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಪ್ರಬಲ ಜಾತಿಗಳನ್ನು 2ಎ ಜಾತಿ ಪಟ್ಟಿಗೆ ಸೇರಿಸಬಾರದು ಎಂದು ಮುಖ್ಯಮಂತ್ರಿ ಬಳಿ ಬೇಡಿಕೆ ಮುಂದಿಟ್ಟ ಪ್ರಮುಖರು, ಕೇಂದ್ರ ಸರ್ಕಾರ ಇತ್ತೀಚೆಗೆ ಲೋಕಸಭೆಯಲ್ಲಿ ಮಂಡಿಸಿದ ಹಿಂದುಳಿದ ವರ್ಗಗಳ ಮಸೂದೆ ಮತ್ತು ರಾಜ್ಯದಲ್ಲಿರುವ ಅತಿ ಹಿಂದುಳಿದ ಸಮುದಾಯಗಳ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಮನವಿ ಪತ್ರ ಸಲ್ಲಿಸಿದರು.

ಕೋಟ ಶ್ರೀನಿವಾಸ ಪೂಜಾರಿ, ಜಾಗೃತ ವೇದಿಕೆಯ ಗೌರವ ಸಲಹೆಗಾರರಾದ ಸಿ.ಎಸ್. ದ್ವಾರಕಾನಾಥ್, ಗೌರವ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು, ಅಧ್ಯಕ್ಷ ಎಂ.ಸಿ. ವೇಣುಗೋಪಾಲ್, ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಪಿ.ಆರ್. ರಮೇಶ್, ಮಾಜಿ ಶಾಸಕ ನೆ.ಲ. ನರೇಂದ್ರ ಬಾಬು ಇದ್ದರು.

ಅದಕ್ಕೂ ಮೊದಲು ಶಾಸಕರ ಭವನದಲ್ಲಿ ವೇದಿಕೆಯ ಸಭೆ ನಡೆಯಿತು. ಹಿಂದುಳಿದವರಿಗೆ ಶೇ 32 ಮೀಸಲಾತಿ ಪ್ರಮಾಣ ನಿಗದಿಪಡಿಸಲಾಗಿದೆ. ಆದರೆ, ಬಲಿಷ್ಠ ಸಮುದಾಯಗಳು ಮೀಸಲಾತಿಯ ಲಾಭ ಪಡೆಯುತ್ತಿರುವುದರಿಂದ, ಜಾತಿ ಪಟ್ಟಿಯನ್ನು ಪುನರ್ ವಿಂಗಡಣೆ ಮಾಡಬೇಕಿದೆ.

ಈ ಕಾರಣಕ್ಕೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ವರದಿಯನ್ನು ಬಿಡುಗಡೆ ಮಾಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುವ ನಿರ್ಣಯವನ್ನು ಸಭೆ ಒಕ್ಕೊರಲಿನಿಂದ ಕೈಗೊಂಡಿತು.

ನಾಳೆಯಿಂದ ರಾಯರ ಆರಾಧನಾ ಮಹೋತ್ಸವ; ಭಕ್ತರಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ರಾಯಚೂರು: 'ಮಂತ್ರಾಲಯದಲ್ಲಿ ಇದೇ 21 ರಿಂದ 28ರ ವರೆಗೆ ಶ್ರೀರಾಘವೇಂದ್ರ ಸ್ವಾಮಿಯ 350ನೇ ಆರಾಧನಾ ಮಹೋತ್ಸವ ನಡೆಯಲಿದ್ದು, ಕೋವಿಡ್ ನಿಯಮ ಪಾಲಿಸುವ ಷರತ್ತಿಗೊಳಪಟ್ಟು ಭಕ್ತರು ರಾಯರ ದರ್ಶನಕ್ಕೆ ಬರಬಹುದಾಗಿದೆ' ಎಂದು ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ಹೇಳಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊರೊನಾ ಸೋಂಕು ತಡೆಯುವುದು ಅಗತ್ಯವಾಗಿದೆ. ಹೀಗಾಗಿ ಸಾಂಪ್ರದಾಯಿಕ ಪೂಜೆ ಪುನಸ್ಕಾರಗಳನ್ನು ಮಾತ್ರ ನೆರವೇರಿಸಲಾಗುವುದು ಎಂದರು.

'ಆಂಧ್ರಪ್ರದೇಶದ ಪೊಲೀಸ್ ಹಾಗೂ ಆರೋಗ್ಯ ಇಲಾಖೆಯ ಸಲಹೆ ಸೂಚನೆಗಳನ್ನು ಆಧರಿಸಿ ಕಾರ್ಯಕ್ರಮ ಮಾಡುತ್ತಿದ್ದೇವೆ. ಆಂಧ್ರಪ್ರದೇಶದಲ್ಲಿ ಕೋವಿಡ್ ಪ್ರಕರಣ ಹೆಚ್ಚಿನ ಪ್ರಮಾಣದಲ್ಲಿ ಇಲ್ಲ. ಆಗಸ್ಟ್ 21ರಿಂದ ಸಪ್ತರಾತ್ರೋತ್ಸವ ಕಾರ್ಯಕ್ರಮಗಳು ಆರಂಭವಾಗಲಿವೆ. ಪ್ರತಿಯೊಬ್ಬರಿಗೂ ಸ್ಯಾನಿಟೈಸ್ ಮಾಡಲು ಟನಲ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಕೋವಿಡ್ ನಿಯಮ ಉಲ್ಲಂಘನೆ ಸಂದರ್ಭದಲ್ಲಿ ಎಚ್ಚರಿಸುವ ಯಂತ್ರ ಅಳವಡಿಸಲಾಗುತ್ತದೆ. ಮಠ, ನದಿತೀರ, ಶೌಚಾಲಯ ಸೇರಿದಂತೆ ಎಲ್ಲ ಕಡೆಗೂ ಸ್ಯಾನಿಟೈಸ್ ಮಾಡಲಾಗುತ್ತಿದೆ' ಎಂದರು.

ಭಕ್ತರಿಗೆ ಅನ್ನ ಪ್ರಸಾದ, ವಸತಿ ವ್ಯವಸ್ಥೆ ಕಲ್ಪಿಸಲಾಗುವುದು. ಏಳು ದಿನವೂ ಪ್ರಾತಃಕಾಲದಲ್ಲಿ ವಿಶೇಷ ಪೂಜಾ ವಿಧಿವಿಧಾನಗಳು ನೆರವೇರಲಿವೆ. ವಿದ್ವಾಂಸರ ಉಪನ್ಯಾಸ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಸ್ವಾತಂತ್ರ್ಯ ಘೋಷಿಸಿದ ತಾಲಿಬಾನ್

ಒಂದನೇ ಪುಟದಿಂದ...

ಕಾಬೂಲ್‌ನ ಹಲವೆಡೆ ಪ್ರತಿಭಟನೆಯನ್ನು ತಡೆಯುವ ಉದ್ದೇಶದಿಂದ ತಾಲಿಬಾನ್ ಕರ್ಫ್ಯೂ ವಿಧಿಸಿದೆ ಎಂದೂ ಮಾಧ್ಯಮಗಳು ವರದಿ ಮಾಡಿವೆ. ಅಫ್ಗಾನಿಸ್ತಾನದ ಪ್ರಮುಖ ವಿರೋಧ ಪಕ್ಷಗಳು ಈಗ, ಉತ್ತರದ ಪ್ರಾಂತ್ಯಗಳ ರಾಜಕೀಯ ಒಕ್ಕೂಟವನ್ನು ಸೇರಿವೆ. ತಾಲಿಬಾನ್ ವಿರುದ್ಧ ಹೋರಾಡಲು ಅಮೆರಿಕ ಸೇನೆಗೆ ನೆರವು ನೀಡಿದ್ದ ಮುಜಾಹಿದೀನ್ ಸಂಘಟನೆಯ ನೇತೃತ್ವದಲ್ಲಿ ಈಗ ಹೋರಾಟಕ್ಕೆ ಸಿದ್ಧತೆ ನಡೆಸಲಾಗುತ್ತಿದೆ. ಹೋರಾಟಕ್ಕೆ ಶಸ್ತ್ರಾಸ್ತ್ರಗಳ ನೆರವು ನೀಡಿ ಎಂದು ನೆರೆ ದೇಶಗಳನ್ನು ಮುಜಾಹಿದೀನ್ ಕೇಳಿಕೊಂಡಿದೆ.

ನಗದು, ಆಹಾರ ಕೊರತೆ ತೀವ್ರ

ಒಂದನೇ ಪುಟದಿಂದ...

ಅಫ್ಗಾನಿಸ್ತಾನದ ವಾರ್ಷಿಕ ಬಜೆಟ್‌ನ ಶೇ 80ರಷ್ಟು ವಿದೇಶಿ ನೆರವನ್ನು ಅವಲಂಬಿಸಿತ್ತು. ಈಗ ತಾಲಿಬಾನ್‌ಗೆ ಅಷ್ಟು ಪ್ರಮಾಣದ ನೆರವು ದೊರೆಯುವ ಸಾಧ್ಯತೆ ಇಲ್ಲವೇ ಇಲ್ಲ ಎನ್ನಬಹುದು. ಹೀಗಾಗಿ ಆದಾಯಕ್ಕಾಗಿ ಬೇರೆ ಮೂಲಗಳನ್ನು ತಾಲಿಬಾನ್ ಹುಡುಕುತ್ತಿದೆ. ಪಾಕಿಸ್ತಾನದಿಂದ ಬರುವ ಸರಕು ಸಾಗಣೆ ಟ್ರಕ್‌ಗಳಿಗೆ ಆಮದು ಸುಂಕ ವಿಧಿಸಲಾಗುತ್ತಿದೆ. ಬುಧವಾರದಿಂದ ಪ್ರತಿ ಟ್ರಕ್‌ಗೆ 2,800 ಅಮೆರಿಕನ್ ಡಾಲರ್‌ನಷ್ಟು ಆಮದು ಸುಂಕ ವಿಧಿಸಲಾಗುತ್ತಿದೆ. ಈ ಮೂಲಕ ನಗದು ಸಂಗ್ರಹಕ್ಕೆ ತಾಲಿಬಾನ್ ಮುಂದಾಗಿದೆ.

ಜತೆಗೆ ದೇಶದಲ್ಲಿನ ಖನಿಜ ಸಂಪನ್ಮೂಲವನ್ನು ಬಳಸಿಕೊಳ್ಳಲು ಯೋಜನೆ ಸಿದ್ಧಪಡಿಸುತ್ತಿದೆ. ಆದರೆ ಸರ್ಕಾರದ ಕಾರ್ಯಾಂಗವು ಇದಕ್ಕೆ ಸಹಕಾರ ನೀಡುತ್ತಿಲ್ಲ. ಸರ್ಕಾರಿ ನೌಕರರು ಮತ್ತು ಅಧಿಕಾರಿಗಳು ಕೆಲಸಕ್ಕೆ ಗೈರುಹಾಜರಾಗಿರುವ ಕಾರಣ, ಕಾರ್ಯಾಂಗ ಸಂಪೂರ್ಣವಾಗಿ ಸ್ಥಗಿತವಾಗಿದೆ. ದೇಶದಲ್ಲಿ ಬಂಡವಾಳ ಹೂಡಲು ಚೀನಾ ಹಿಂದೇಟು ಹಾಕುತ್ತಿದೆ. ರಷ್ಯಾ ಮತ್ತು ಇರಾನ್ ಸಹ ತಾಲಿಬಾನ್‌ಗೆ, ಬಂಡವಾಳ ಹೂಡಿಕೆಯಲ್ಲಿ ಯಾವುದೇ ಭರವಸೆ ನೀಡಿಲ್ಲ.

ಈ ಎಲ್ಲಾ ಬಿಕ್ಕಟ್ಟುಗಳನ್ನು ಅಂದಾಜಿಸದೆ, ಸರ್ಕಾರವನ್ನು ಪತನಗೊಳಿಸಿದ ತಾಲಿಬಾನ್ ಜನಜೀವನವನ್ನು ಸರಿದಾರಿಗೆ ತರಲು ಅಗತ್ಯ ಕ್ರಮ ತೆಗೆದುಕೊಳ್ಳುತ್ತಿಲ್ಲ. ಅದರ ಪರಿಣಾಮವನ್ನು ನಾಗರಿಕರು ಎದುರಿಸಬೇಕಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ
ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ ಐಟಿಐ ಕಾಂಪೌಂಡ್, ಡೈರಿ ಸರ್ಕಲ್, ಬೆಂಗಳೂರು–560029.
ದೂರವಾಣಿ ಸಂಖ್ಯೆ: 080–29753354, 29653354, 29543646 ಇ–ಮೇಲ್: karbuildworkerswelfare@gmail.com

ಸಾರ್ವಜನಿಕ ಪ್ರಕಟಣೆ

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ಅಡಿಯಲ್ಲಿ ರಚಿಸಲಾಗಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸಂಪನ್ಮೂಲವನ್ನು ಕ್ರೋಢೀಕರಿಸುವ ಸಲುವಾಗಿ, ಕಟ್ಟಡ ಮತ್ತು ಇತರೆ ನಿರ್ಮಾಣಗಾರರು ಹಾಗೂ ನಿಯೋಜಕರಿಂದ ನಿರ್ಮಾಣ ವೆಚ್ಚದ ಮೇಲೆ ಶೇ.1ರಷ್ಟು ಸುಂಕ ಸಂಗ್ರಹ ಮಾಡಲು ಕೇಂದ್ರ ಸರ್ಕಾರವು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ, 1996ನ್ನು ಜಾರಿಗೆ ತಂದಿರುತ್ತದೆ. ಭೂಮಿಯ ಬೆಲೆ ಹಾಗೂ ನೌಕರರ ಪರಿಹಾರ ಕಾಯ್ದೆ, 1923ರಡಿ ನೌಕರರ ಅಥವಾ ಅವರ ಅವಲಂಬಿತರಿಗೆ ನೀಡಲಾಗುವ ಪರಿಹಾರ ಮೊತ್ತವನ್ನು ಹೊರತುಪಡಿಸಿ, ಕಟ್ಟಡ ನಿರ್ಮಾಣಕ್ಕೆ ತಗಲುವ ವೆಚ್ಚದ ಶೇ.1 ರಷ್ಟು ದರವನ್ನು ಸುಂಕವೆಂದು ಕೇಂದ್ರ ಸರ್ಕಾರವು ನಿಗದಿಪಡಿಸಿ ಅಧಿಸೂಚಿಸಿರುತ್ತದೆ.

ಕಾಯ್ದೆಯ ಅನ್ವಯಿಸುವಿಕೆ (ಮಂಡಳಿಗೆ ಸುಂಕ ಪಾವತಿಸಬೇಕಾದ ವ್ಯಕ್ತಿ /ಸಂಸ್ಥೆಗಳು) :

ಹಿಂದಿನ 12 ತಿಂಗಳ ಅವಧಿಯಲ್ಲಿ ಹತ್ತು ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಯದಲ್ಲಿ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡ ಸಂಸ್ಥೆಗಳು.

ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಳು :

ಕಟ್ಟಡ, ರಸ್ತೆಗಳು, ನೀರಾವರಿ, ಒಳಚರಂಡಿ, ವಿದ್ಯುತ್ ತಂತಿ, ಅಣೆಕಟ್ಟು, ಕಾಲುವೆಗಳು ಇತ್ಯಾದಿಗಳ ನಿರ್ಮಾಣ, ದುರಸ್ಥಿಕಾರ್ಯ ಕಾಮಗಾರಿಗಳು ಒಳಗೊಂಡಿರುತ್ತವೆ.

ಸಂಸ್ಥೆಯ ನೋಂದಣಿ ಹಾಗೂ ಸುಂಕ ಪಾವತಿ ವಿಧಾನ :

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996 ಮತ್ತು ಕರ್ನಾಟಕ ನಿಯಮಗಳು, 2006ರ ನಿಯಮ 15ರನ್ವಯ ಕಟ್ಟಡ ಕಾಮಗಾರಿ ಕೈಗೊಳ್ಳುವ ಸಂಸ್ಥೆ/ವ್ಯಕ್ತಿಯು ಕಾಮಗಾರಿ ಪ್ರಾರಂಭಗೊಂಡಿರುವ ಬಗ್ಗೆ ನಮೂನೆ–1ನ್ನು ನಿಯಮದಂತೆ ಕಾರ್ಮಿಕ ಅಧಿಕಾರಿಗಳ ಬಳಿ ಸಲ್ಲಿಸಿ, ನೋಂದಣಿ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ. ಅದರಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ, 1996 ಮತ್ತು ನಿಯಮಗಳು, 1998ರ ನಿಯಮ 6(1) ರನ್ವಯ ಸುಂಕ ಪಾವತಿ ಮಾಡಿರುವ ಬಗ್ಗೆ ಮಾಹಿತಿ ನೀಡುವುದು ಕಡ್ಡಾಯವಾಗಿರುತ್ತದೆ.

ಸುಂಕ ಪಾವತಿ ಮಾಡಬೇಕಾಗಿರುವ ಮಂಡಳಿಯ ಖಾತೆ ವಿವರ :

- ಖಾತೆದಾರರ ಹೆಸರು : Karnataka Building & Other Construction Worker's Welfare Board.
- ಖಾತೆದಾರರ ಬ್ಯಾಂಕಿನ ಹೆಸರು : Canara Bank, Hombegowda Nagara Branch, 11th Cross, Wilson Garden, Bengaluru-560027
- ಖಾತೆ ಸಂಖ್ಯೆ : 1371101079786
- ಬ್ಯಾಂಕ್ IFSC ಕೋಡ್ ಸಂಖ್ಯೆ : CNRB0001371
- ಪಾನ್ (PAN) ಸಂಖ್ಯೆ : AAALK0820C

ನಿರ್ಧರಣಾ ಆದೇಶದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದೊಳಗೆ ಸುಂಕವನ್ನು ಪಾವತಿ ಮಾಡಲು ವಿಫಲನಾದಲ್ಲಿ ಪ್ರತಿ ತಿಂಗಳಿಗೆ ಸುಂಕದ ಮೇಲೆ ಶೇಕಡಾ 2ರಷ್ಟು ಬಡ್ಡಿಯನ್ನು, ಒಂದು ವೇಳೆ ಸುಂಕ ಪಾವತಿ ಮಾಡದಿದ್ದಲ್ಲಿ ಸುಂಕ ಮೊತ್ತದ ಒಂದುಪಟ್ಟು ದಂಡ ಪಾವತಿಸಬೇಕಾಗುತ್ತದೆ.

ಸಹಿ/–
ಅಕ್ರಂ ಪಾಷ, ಭಾ.ಆ.ಸೇ
ಕಾರ್ಮಿಕ ಆಯುಕ್ತರು ಮತ್ತು ಸಿ.ಇ.ಒ
ಕ.ಕ ಮತ್ತು ಇ.ನಿ.ಕಾ.ಕ ಮಂಡಳಿ

DIPR/DDU/Zen/R.O:1246/2021-22

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಕಾರ್ಮಿಕ ಸಹಾಯವಾಣಿ 155214 (24/7), ಕಾರ್ಮಿಕ ಅಧಿಕಾರಿಗಳು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ. ವೆಬ್‌ಸೈಟ್: https://karbwwb.karnataka.gov.in

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು–570 010
ಸಂಖ್ಯೆ: ಎಂವೈಜೆಡ್/ಆಹಾರಸಾಮಗ್ರಿ/2021–22 ದಿನಾಂಕ: 18.8.2021

ಸಂಕ್ಷಿಪ್ತ ಟೆಂಡರು ಪ್ರಕಟಣೆ

ಶ್ರೀ. ಚಾಮರಾಜೇಂದ್ರ ಮೃಗಾಲಯಕ್ಕೆ 2021–22 ನೇ ಸಾಲಿನ ದಿ.1.10.2021 ರಿಂದ 30.9.2022ಗೆ ಈ ಕೆಳಕಂಡ ಘಟಕವಾರು ಆಹಾರ/ಸಂಕೀರ್ಣ ಪದಾರ್ಥಗಳನ್ನು ಸರಬರಾಜು ಮಾಡಲು ಕರ್ನಾಟಕ ಮೃಗಾಲಯ ಪ್ರಾಧಿಕಾರದ ನಿಯಮಾವಳಿಗಳ ಪ್ರಕಾರ ಈ ಮೃಗಾಲಯದಲ್ಲಿ ನೋಂದಾಯಿಸಿರುವ ಗುತ್ತಿಗೆದಾರರುಗಳಿಂದ ಕರ್ನಾಟಕ ಸರ್ಕಾರದ ಇ–ಪೋರ್ಟಲ್ (**https://eproc.Karnataka.gov.in(Dept.selection**: Zoo Authority) ಮೂಲಕ ಘಟಕವಾರು ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಘಟಕ ಸಂಖ್ಯೆ	ವಿವರ	ವಾರ್ಷಿಕ/ಮಾಸಿಕ ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ	ಇ.ಎಂ.ಡಿ. ಲಕ್ಷ ರೂ. 10%ಜಿ.ಸಿ.ನಿರ್ಣಯ
(1)	ಎಮ್ಮೆಯ ಶುದ್ಧವಾದ ಮಾಂಸ, ಲಿವರ್, ಹೃದಯ 3 ಐಟಂಗಳು/ (ವಾರ್ಷಿಕ ಟೆಂಡರ್)	178.50	18.00
(2)	ಜೀವ ಇಲ್ಲದ ತಾಜಾ ಮೀನು/ ಸೀಗಡಿ/ ಜೀವಂತ ಕೋಳಿ 5 ಐಟಂ (ವಾರ್ಷಿಕ ಟೆಂಡರ್)	47.94	5.00
(3)	ಒಡಕೆ, ಹಸಿರು ಹುಲ್ಲು ಇತ್ಯಾದಿ 7 ಐಟಂಗಳು (ವಾರ್ಷಿಕ ಟೆಂಡರ್)	198.92	20.00
(4)	ಆಹಾರ ಧಾನ್ಯಗಳು 33 ಐಟಂಗಳು (ವಾರ್ಷಿಕ ಟೆಂಡರ್)	104.83	10.00
(5)	ಸಂಕೀರ್ಣ ಸಾಮಗ್ರಿಗಳು 25 ಐಟಂ (ವಾರ್ಷಿಕ ಟೆಂಡರ್)	10.00	1.00

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 21.09.2021 ರಂದು ಸಂಜೆ 16.00 ಗಂಟೆಗೆ.**ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:** ತಾಂತ್ರಿಕ ಟೆಂಡರ್ 22.09.2021 ರಂದು ಸಂಜೆ 16.00 ಗಂಟೆಗೆ ಮತ್ತು ಅರ್ಥಿಕ ಟೆಂಡರ್ ದಿ.27.9.2021ರಂದು ಸಂಜೆ 17.00 ನಂತರ.

ಷರತ್ತುಗಳು: 1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿ: 21.8.2021 ರ ನಂತರ. **2)** ಕರ್ನಾಟಕ ಮೃಗಾಲಯ ಪ್ರಾಧಿಕಾರ ನಿಯಮಾವಳಿಗಳಂತೆ ಇ–ಟೆಂಡರ್‌ನಲ್ಲಿ ಭಾಗವಹಿಸಲು ಈ ಮೃಗಾಲಯದಲ್ಲಿ ಕಡ್ಡಾಯವಾಗಿ ನೋಂದಾಯಿತರಾಗಿರಬೇಕು. ನೋಂದಣಿ ಮಾಡಲು ಕೊನೆಯ ದಿನಾಂಕ.9.9.2021 ಸಂಜೆ 4.00ಗಂಟೆವರೆಗೆ. **3)** ಟೆಂಡರ್‌ದಾರರು ದಿ: 21.9.2021 ರಂದು ಯೂನಿಟ್–3, ಮತ್ತು 4ರ ಐಟಂಗಳ ಶಾಂಪಲ್‌ಗಳನ್ನು ಅಂದು ಮದ್ಯಾಹ್ನ 12.00 ಗಂಟೆಗೆ ಸರಿಯಾಗಿ ಕಾರ್ಯ ನಿರ್ವಾಹಕ ನಿರ್ದೇಶಕರ ಕಚೇರಿಗೆ ಸಲ್ಲಿಸುವುದು. **4)** ಆಡಳಿತಾತ್ಮಕ ಕಾರಣಗಳಿಂದ ಯಾವುದೇ ಟೆಂಡರುಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಹಕ್ಕು ಹಾಗು ಷರತ್ತುಗಳನ್ನು ಸೇರಿಸುವ, ಪರಿಷ್ಕರಿಸುವ, ಕೈಬಿಡುವ ಅಧಿಕಾರ ಈ ಕೆಳಗೆ ಸಹಿ ಮಾಡಿರುವವರಿಗೆ ಇರುತ್ತದೆ. **5)** ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಹಾಕಿರುವ ಸವಿವರ ಪ್ರಕಟಣೆಯಿಂದ ಪಡೆಯಬಹುದು.

ದಿ: 18.08.2021 ಸಹಿ/– ಉಪಅರಣ್ಯ ಸಂರಕ್ಷಣಾಧಿಕಾರಿ
ಸ್ಥಳ: ಮೈಸೂರು ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು
DIPR/DDMYS/MCA/413/2021-22

ಎನ್‌ಇಪಿ: ಅವಸರದ ಜಾರಿ ಸರಿಯಲ್ಲ

ಪ್ರಜಾವಾಣಿ ಸಂವಾದ

'ರಾಷ್ಟ್ರೀಯ ಶಿಕ್ಷಣ ನೀತಿ: ಕನ್ನಡಕ್ಕೆ ಕುತ್ತು ತರಲಿದೆಯೇ?' ಕುರಿತು 'ಪ್ರಜಾವಾಣಿ' ಗುರುವಾರ ಹಮ್ಮಿಕೊಂಡಿದ್ದ ಸಂವಾದದಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ನಾಯಕರ ನಡುವೆ ಬಿರುಸಿನ ವಾಗ್ಯುದ್ಧ ನಡೆಯಿತು. ಎನ್‌ಇಪಿ ಜಾರಿಯಿಂದ ಶಿಕ್ಷಣವು ಪೂರ್ಣ ಖಾಸಗೀಕರಣದತ್ತ ಜಾರುವ ಸಂಭವವಿದೆ. ಇದರಿಂದ ಕನ್ನಡಕ್ಕೆ ಕುತ್ತು ಬರಲೂಬಹುದು. ಸಂಪನ್ಮೂಲದ ಬೆಂಬಲವಿಲ್ಲದೆ ಸರ್ಕಾರ ಅವಸರದಲ್ಲಿ ಹೊಸ ನೀತಿ ಜಾರಿಗೆ ತರುವುದು ಸರಿಯಲ್ಲ ಎಂದು ಬಹುಮತದ ಅಭಿಪ್ರಾಯ ವ್ಯಕ್ತವಾಯಿತು.

ಕಾರ್ಪೊರೇಟೈಸೇಷನ್ ವಾಸನೆಯಿದೆ

ಎನ್‌ಇಪಿಯಲ್ಲಿ 'ಕಾರ್ಪೊರೇಟೈಸೇಷನ್' ವಾಸನೆ ಇದೆ. ಇದು ಗ್ರಾಮೀಣ, ವಲಸಿಗ ಮತ್ತು ಬಡ ಮಕ್ಕಳನ್ನು ಗಮನದಲ್ಲಿಟ್ಟುಕೊಂಡಿಲ್ಲ. ದೇಶದ ಶಾಸಕಾಂಗ ವ್ಯವಸ್ಥೆಯಲ್ಲಿ ಚರ್ಚೆಯೇ ಆಗದ ಎನ್‌ಇಪಿ ದೇಶದ ಒಕ್ಕೂಟ ವ್ಯವಸ್ಥೆಗೆ ಮಾರಕ. ಅದರ ಅವಸರದ ಜಾರಿ ಸರಿಯಲ್ಲ.

ಎನ್‌ಇಪಿ ಮೂಲಕ ಜಾರಿಯಾಗಲಿರುವ ಕಾರ್ಪೊರೇಟ್ ಶಿಕ್ಷಣ ವ್ಯವಸ್ಥೆಯು ತಾರತಮ್ಯವನ್ನು ಹೆಚ್ಚಿಸುವುದರ ಜತೆಗೆ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಕೇಂದ್ರೀಕೃತ ವ್ಯವಸ್ಥೆಯನ್ನು ತರುವ ಅಪಾಯವಿದೆ. ಇದು ದೇಶಕ್ಕೆ ಒಳಿತಲ್ಲ.

–**ಪ್ರೊ.ಕೆ.ಇ.ರಾಧಾಕೃಷ್ಣ**, ಮಾಜಿ ಉಪಾಧ್ಯಕ್ಷ, ಕೆಪಿಸಿಸಿ

ಸುಪ್ರಿಂಕೋರ್ಟ್ ತೀರ್ಪಿಗೂ ಎನ್‌ಇಪಿಗೂ ತಾಳಮೇಳವಿಲ್ಲ

ಐದು ಅಥವಾ ಎಂಟನೇ ತರಗತಿವರೆಗೆ ಶಿಕ್ಷಣದ ಮಾಧ್ಯಮ ಮನೆ/ಪ್ರಾದೇಶಿಕ/ಮಾತೃ/ಸ್ಥಳೀಯ ಭಾಷೆ ಆಗಿರಬೇಕು ಎಂದು ಎನ್‌ಇಪಿ ಹೇಳುತ್ತದೆ. ಆದರೆ ಕನ್ನಡವನ್ನು ಕಲಿಕಾ ಭಾಷೆಯನ್ನಾಗಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಈ ಹಿಂದೆ ಸುಪ್ರೀಂಕೋರ್ಟ್ ರದ್ದುಗೊಳಿಸಿ, ಭಾಷಾ ಮಾಧ್ಯಮದ ಆಯ್ಕೆಯ ವಿಷಯವು ಮಕ್ಕಳು, ಪೋಷಕರಿಗೆ ಸೇರಿದ್ದು ಎಂದು ಹೇಳಿದೆ. ಅಂದರೆ ಸುಪ್ರಿಂಕೋರ್ಟ್ ತೀರ್ಪಿಗೂ ಎನ್‌ಇಪಿಗೂ ತಾಳ ಮೇಳ ಇಲ್ಲದಂತಾಗಿದೆ. ಹೀಗಿರುವಾಗ ಅದರ ಅನುಷ್ಠಾನ ಹೇಗೆ ಸಾಧ್ಯ. ಎನ್‌ಇಪಿ ಅನುಷ್ಠಾನಕ್ಕೆ ಶಿಕ್ಷಣ ಕ್ಷೇತ್ರಕ್ಕೆ ಜಿಡಿಪಿಯ ಶೇ 6ರಷ್ಟು ಅನುದಾನ ಅಗತ್ಯವಿದೆ. ಪ್ರಸ್ತುತ ಶಿಕ್ಷಣಕ್ಕೆ ಜಿಡಿಪಿ ಶೇ 2.8ರಷ್ಟನ್ನು ವಿನಿಯೋಗಿಸಲಾಗುತ್ತಿದೆ. ಅದು ಶೇ 6ಕ್ಕೆ ಏರುವುದು ಯಾವಾಗ? ಕೊನೆಗೆ ಸರ್ಕಾರ ಖಾಸಗಿ ಸಹಭಾಗಿತ್ವದತ್ತ ಮುಖ ಮಾಡುತ್ತದೆ.

–**ಪುರುಷೋತ್ತಮ ಬಿಳಿಮಲೆ**, ನಿವೃತ್ತ ಪ್ರಾಧ್ಯಾಪಕ, ಜೆಎನ್‌ಯು, ದೆಹಲಿ

ಭಯ, ಆತಂಕ ಬೇಡ

ಕನ್ನಡವೂ ಸೇರಿದಂತೆ ಎಲ್ಲ ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಎನ್‌ಇಪಿ ಪೂರಕವಾಗಿದೆ. ಶಿಕ್ಷಕರ ನೇಮಕ, ಮೂಲ ಸೌಕರ್ಯ ಕಲ್ಪಿಸುವುದಕ್ಕೆ ಇದು ಆದ್ಯತೆ ನೀಡುತ್ತದೆ. ಇಡೀ ದೇಶಕ್ಕೆ ಮಾದರಿ ಶಿಕ್ಷಣ ವ್ಯವಸ್ಥೆ ಜಾರಿಯಾಗುತ್ತದೆ. ಇತರ ದುಂದು ವೆಚ್ಚಗಳನ್ನು ಕಡಿತ ಮಾಡಿ, ಶಿಕ್ಷಣ ಕ್ಷೇತ್ರಕ್ಕೆ ಸರ್ಕಾರ ಒತ್ತು ನೀಡುತ್ತದೆ. ಈ ನಿಟ್ಟಿನಲ್ಲಿ ಎಲ್ಲರೂ ಆಶಾವಾದಿಗಳಾಗಿರಬೇಕು. ಎನ್‌ಇಪಿ ಸಂಬಂಧ ಯಾವುದೇ ಆತಂಕ, ಭಯ, ಅಂಜಿಕೆ ಬೇಡ.

–**ಅನ್ವರ್ ಮಾಣಿಪ್ಪಾಡಿ**, ಸಹ ವಕ್ತಾರ, ಬಿಜೆಪಿ ರಾಜ್ಯ ಘಟಕ

ಖಾಸಗೀಕರಣ, ಕೇಸರೀಕರಣದ ಅಪಾಯ

ಎನ್‌ಇಪಿ ಕನ್ನಡಕ್ಕೆ ಕುತ್ತು ತರುತ್ತದೆ. ಸಂವಿಧಾನಕ್ಕೆ ತಿದ್ದುಪಡಿ ತಂದು ಮಾತೃಭಾಷೆಯನ್ನು ಶಿಕ್ಷಣದ ಮಾಧ್ಯಮವನ್ನಾಗಿಸಿದರೆ ಮಾತ್ರ ಎನ್‌ಇಪಿ ವಾಸ್ತವ ಪ್ರಪಂಚಕ್ಕೆ ಬರುತ್ತದೆ. ಅಲ್ಲದೆ ಕೇಂದ್ರ, ರಾಜ್ಯ ಪಠ್ಯಕ್ರಮಗಳು ಏಕರೂಪವಾದಾಗ ತಾರತಮ್ಯ ನಿವಾರಣೆಯಾಗುತ್ತದೆ. ಬಹುಶಿಸ್ತೀಯ ವ್ಯವಸ್ಥೆ ಜಾರಿಯ ಬಗ್ಗೆ ಈ ನೀತಿ ಹೇಳುತ್ತದೆ. ಆದರೆ, ಇದರ ಅಳವಡಿಕೆಗೆ ಪೂರಕ ವ್ಯವಸ್ಥೆ ರಾಜ್ಯದಲ್ಲಿದೆಯಾ? ಅಂತಿಮವಾಗಿ ಸರ್ಕಾರ ತನ್ನ ಬಳಿ ಹಣವಿಲ್ಲ ಎಂದು ಖಾಸಗಿಯವರ ಸಹಭಾಗಿತ್ವ ಬಯಸುತ್ತದೆ. ಕೇಂದ್ರ ಸರ್ಕಾರ ಇತಿಹಾಸ ಮರು ಸಂಶೋಧನಾ ಮಂಡಳಿಯನ್ನು ರಚಿಸಿದೆ. ಇದರಿಂದ ಇತಿಹಾಸ ಪಠ್ಯ ರಾಷ್ಟ್ರೀಕರಣವಾಗುವ ಆತಂಕವಿದೆ. ಹಾಗಾಗಿ ಖಾಸಗೀಕರಣದ ಜತೆಗೆ ಕೇಸರೀಕರಣದ ಅಪಾಯವೂ ಇದೆ.

– **ವೈ.ಎಸ್.ವಿ.ದತ್ತ**, ಹಿರಿಯ ಮುಖಂಡ, ಜೆಡಿಎಸ್

ಪೂರ್ಣ ಸಂವಾದ ವೀಕ್ಷಿಸಲು: https://bit.ly/2XGQnOP

ಸಚಿವ ಮುನಿರತ್ನ ಅವರನ್ನು ಸುತ್ತುವರಿದಿರುವ ಬೆಂಬಲಿಗರು. ಕೋವಿಡ್ ಮಾರ್ಗಸೂಚಿಯನ್ನು ನಿರ್ಲಕ್ಷಿಸಿ ಕೊಠಡಿಯೊಳಗೆ ಗುಂಪು ಸೇರಿದ್ದರು

ಸಚಿವ ಮುನಿರತ್ನ ಕಚೇರಿ ಮುಂದೆ ಜನವೋ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟಗಾರಿಕೆ ಸಚಿವ ಮುನಿರತ್ನ ಅವರ ವಿಧಾನಸೌಧದ ಕಚೇರಿ ಪೂಜೆ ಮತ್ತು ಸಚಿವರಾಗಿ ಅಧಿಕಾರ ಸ್ವೀಕಾರ ಸಂದರ್ಭದಲ್ಲಿ ಕೋವಿಡ್ ನಿಯಮ ಉಲ್ಲಂಘಿಸಿ ಭಾರಿ ಸಂಖ್ಯೆಯಲ್ಲಿ ಜನ ಸೇರಿದ್ದರು.

ಗುರುವಾರ ಬೆಳಿಗ್ಗೆ ಪೂಜೆ ಇತ್ತು. ಮಧ್ಯಾಹ್ನದವರೆಗೂ ಮುನಿರತ್ನ ಕಚೇರಿ ಮುಂದಿನ ಕಾರಿಡಾರ್‌ನಲ್ಲಿ ನೂರಾರು ಮಂದಿ ಜಮಾಯಿಸಿದ್ದರು. ಹಾರ–ತುರಾಯಿ ತಂದಿದ್ದ ಅಭಿಮಾನಿಗಳು ಮತ್ತು ಬೆಂಬಲಿಗರು ಕಿಂಚಿತ್ತೂ ಅಂತರವಿಲ್ಲದೇ ನಿಂತಿದ್ದರು.

ಮುನಿರತ್ನ ಕಚೇರಿ ಪೂಜೆ ಮುಗಿಸಿ ಸಂಪುಟ ಸಭೆಗೆ ಹೋದಾಗಲೂ ಹೆಚ್ಚಿನವರು ಅವರ ಹಿಂದೆಯೇ ಹೋದರು. ಆದರೆ, ಕಚೇರಿ ಮುಂದೆ 500ರಿಂದ ಸಾವಿರ ಜನ ಕಾರಿಡಾರ್‌ನಲ್ಲಿ ಬಹಳ ಹೊತ್ತು ಸೇರಿದ್ದರು. ಮುನಿರತ್ನ ಅವರ ಜತೆ ಸೆಲ್ಫಿಗಾಗಿ ಜನ ಮುಗಿಬಿದ್ದಿದ್ದು ಕಂಡು ಬಂದಿತು. ಬಹಳಷ್ಟು ಜನ ಮಾಸ್ಕ್ ಧರಿಸಿರಲಿಲ್ಲ. ಕೆಲವರ ಕತ್ತಿನಲ್ಲಿ ಮಾಸ್ಕ್ ತೂಗಾಡುತ್ತಿತ್ತು.

ಕೋವಿಡ್ ಎರಡನೇ ಅಲೆ ಇನ್ನು ಮುಗಿದಿಲ್ಲ, ಮೂರನೇ ಅಲೆ ಇಣುಕುತ್ತಿರುವಾಗಲೇ ವಿಧಾನಸೌಧದಲ್ಲಿ ಸಚಿವರ ಪೂಜೆ ಮತ್ತು ಅಧಿಕಾರ ಸ್ವೀಕಾರ ಸಮಾರಂಭಗಳಲ್ಲಿ ಭಾರಿ ಪ್ರಮಾಣದಲ್ಲಿ ಜನ ಸೇರುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಕೆಲವು ದಿನಗಳ ಹಿಂದೆ ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಕಚೇರಿಯಲ್ಲೂ ಇದೇ ರೀತಿ ಜನ ಸೇರಿದ್ದರು.

ವಿಧಾನಸೌಧದಲ್ಲಿ ಕೋವಿಡ್ ನಿಯಮ ಉಲ್ಲಂಘನೆಯಾಗುತ್ತಿರುವ ಬಗ್ಗೆ ಸಾರ್ವಜನಿಕವಾಗಿ ಟೀಕೆಗಳು ಕೇಳಿ ಬಂದಿವೆ. ಇಲ್ಲಿಯೇ ಕೋವಿಡ್ ಪಾಲನೆ ಆಗದಿದ್ದರೆ, ಸಾರ್ವಜನಿಕ ಸ್ಥಳಗಳಲ್ಲಿ ಪಾಲನೆ ಸಾಧ್ಯವೇ ಎಂದು ಹೆಸರು ಹೇಳಲು ಬಯಸದ ವಿಧಾನಸೌಧದ ಅಧಿಕಾರಿಯೊಬ್ಬರು ಪ್ರಶ್ನಿಸಿದರು.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

DBCDC



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಪ್ರಗತಿಪರ ಸಾಧನೆಗಳ ಸರದಾರ, ಸಾಮಾಜಿಕ ನ್ಯಾಯದ ಹರಿಕಾರ,
ದನಿ ಇಲ್ಲದವರಿಗೆ ದನಿಯಾಗಿ ನಿಂತ ಮಾಜಿ ಮುಖ್ಯಮಂತ್ರಿ
ಡಿ. ದೇವರಾಜ ಅರಸು ಅವರ
106ನೇ ಜನ್ಮದಿನಾಚರಣೆಯ ಸಂಭ್ರಮ

ಡಿ.ದೇವರಾಜ ಅರಸರ ಕಾರ್ಯಕ್ರಮಗಳ ಅನುಷ್ಠಾನವನ್ನು ನಿಗಮದಿಂದ ಜಾರಿಗೊಳಿಸಲು ಮಾನ್ಯ ಹಿಂದುಳಿದ ವರ್ಗಗಳ ಇಲಾಖೆಯ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಯವರ ಸಹಕಾರ ಕೋರುತ್ತಿರುವ ನಿಗಮದ ಅಧ್ಯಕ್ಷರು ಶ್ರೀ ಆರ್ ರಘು ಕೌಟಿಲ್ಯ ರವರು

"ಕರ್ನಾಟಕ ಏಕೀಕರಣ ಹಾಗೂ ನಾಮಕರಣ ಸಾಧನೆಯ ದೀರ್ಘ ಯತ್ನದಲ್ಲಿ ಕಂಡುಬಂದ ಐಕ್ಯ, ಹುರುಪು, ದುಡಿಮೆ ಹಾಗೂ ತ್ಯಾಗ ಮನೋಭಾವ ಮತ್ತೆ ಜನಪದದಲ್ಲಿ ಚಿಮ್ಮಲಿ. ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಗಳನ್ನು ತೊಡೆದುಹಾಕುವ ಮಹಾಕಾರ್ಯದಲ್ಲಿ ಜನರೆಲ್ಲಾ ಕೈಗೂಡಿಸಲಿ. ಜನ್ಮ ಭೂಮಿ ಭಾರತದ ಎಲ್ಲಾ ರಾಜ್ಯಗಳ ಶ್ರೇಣಿಯಲ್ಲಿ ಕರ್ನಾಟಕ ಎಲ್ಲರ ಕಣ್ಮಣಿಯಾಗಿ ರಾರಾಜಿಸಲಿ." - ಡಿ. ದೇವರಾಜ ಅರಸು

ದೇಶದ ಕಾಡು, ವನ್ಯ ಜೀವಿ ನದಿಗಳು ಸೇರಿ ಪರಿಸರ ಉಳಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಶ್ರೀ ವಿ. ರವಿ
ವ್ಯವಸ್ಥಾಪಕ ನಿರ್ದೇಶಕರು,
ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

ಶ್ರೀ ಆರ್. ರಘು ಕೌಟಿಲ್ಯ
ಅಧ್ಯಕ್ಷರು,
ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಹಿಂದುಳಿದ ವರ್ಗಗಳ ಸಮುದಾಯದವರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯನ್ನು ಸ್ಥಾಪಿಸಲಾಗಿದ್ದು, ಇಲಾಖೆಯಿಂದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದ್ದು 2021-22ನೇ ಸಾಲಿಗೆ ಈ ಕಾರ್ಯಕ್ರಮಗಳ ಅನುಷ್ಠಾನಕ್ಕೆ ರೂ.2056.79 ಕೋಟಿಗಳ ಅನುದಾನ ಒದಗಿಸಲಾಗಿದೆ.

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು

- **ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳು** : 1301 ನಿಲಯಗಳು, 69956 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ. ಉಚಿತ ವಸತಿ, ಊಟ ಹಾಗೂ ಇತರೆ ಅಗತ್ಯ ಮೂಲಭೂತ ಸೌಲಭ್ಯಗಳು ಹಾಗೂ ನಿಲಯಗಳಲ್ಲಿ ಕಠಿಣ ವಿಷಯಗಳ ಬೋಧನೆಗೆ ಹಾಗೂ ಕಿರು ಪರೀಕ್ಷೆಗಳನ್ನು ನಡೆಸಲು ಅರೆ ಕಾಲಿಕ ಬೋಧಕರ ನೇಮಕ.
- **ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು** : 1137 ನಿಲಯಗಳು, 122780 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ, ಉಚಿತ ವಸತಿ, ಊಟ ಹಾಗೂ ಇತರೆ ಶೈಕ್ಷಣಿಕ ಸೌಲಭ್ಯಗಳು.
- ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳಲ್ಲಿ ಸುಸಜ್ಜಿತ ಗ್ರಂಥಾಲಯ, ಡಿಜಿಟಲ್ ಗ್ರಂಥಾಲಯ ಮತ್ತು ಕಂಪ್ಯೂಟರ್ ಲ್ಯಾಬ್‌ಗಳು.
- ವಾರ್ಷಿಕ ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದಂತಹ ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಿಕೆ.
- **ಖಾಸಗಿ ಅನುದಾನಿತ ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳು:** 228 ನಿಲಯಗಳು, 12853 ವಿದ್ಯಾರ್ಥಿಗಳಿಗೆ ಅವಕಾಶ. ಪ್ರತಿ ವಿದ್ಯಾರ್ಥಿಗೆ ರೂ.1000/– ರಂತೆ 10 ತಿಂಗಳ ಅವಧಿಗೆ ಭೋಜನಾ ವೆಚ್ಚ ನೀಡಿಕೆ.
- **ಖಾಸಗಿ ಅನುದಾನಿತ ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು:** 24 ನಿಲಯಗಳು, 1179 ವಿದ್ಯಾರ್ಥಿಗಳಿಗೆ ಅವಕಾಶ. ಪ್ರತಿ ವಿದ್ಯಾರ್ಥಿಗೆ ರೂ.1100/– ರಂತೆ 10 ತಿಂಗಳ ಅವಧಿಗೆ ಭೋಜನಾ ವೆಚ್ಚ ನೀಡಿಕೆ.
- **ಇಲಾಖಾ ವಿದ್ಯಾರ್ಥಿನಿಲಯಗಳು/ ಖಾಸಗಿ ವಿದ್ಯಾರ್ಥಿನಿಲಯಗಳ ನಿರ್ವಹಣೆ** : ಪ್ರಸಕ್ತ ಸಾಲಿನ ಆಯವ್ಯಯ– ರೂ.833.11 ಕೋಟಿಗಳು.
- **ಖಾಸಗಿ ಅನುದಾನಿತ ಅನಾಥಾಲಯಗಳು:** 54 ಅನಾಥಾಲಯಗಳು, 7686 ವಿದ್ಯಾರ್ಥಿಗಳಿಗೆ ಅವಕಾಶ, ಪ್ರತಿ ವಿದ್ಯಾರ್ಥಿಗೆ ರೂ.800/–ರಂತೆ 12 ತಿಂಗಳ ಅವಧಿಗೆ ಭೋಜನಾ ವೆಚ್ಚ ನೀಡಿಕೆ. ಪ್ರಸಕ್ತ ಸಾಲಿನ ಆಯವ್ಯಯ: ರೂ.737.86 ಲಕ್ಷಗಳು
- **ಆಶ್ರಮಶಾಲೆಗಳು** : 18 ಆಶ್ರಮಶಾಲೆಗಳು, 1025 ಮಕ್ಕಳಿಗೆ ಶಿಕ್ಷಣದ ಜೊತೆಗೆ ಉಚಿತ ವಸತಿ, ಊಟ ಮತ್ತು ಇತರೆ ಅಗತ್ಯ ಸೌಲಭ್ಯ ನೀಡಿಕೆ. ಪ್ರಸಕ್ತ ಸಾಲಿನ ಆಯವ್ಯಯ ರೂ.462.90 ಲಕ್ಷಗಳು.
- **ಮೊರಾರ್ಜಿ ದೇಸಾಯಿ ವಸತಿಶಾಲೆ/ವಸತಿ ಕಾಲೇಜುಗಳು:** 155 ಮೊರಾರ್ಜಿ ದೇಸಾಯಿ ವಸತಿಶಾಲೆ ಹಾಗೂ 12 ಪದವಿ ಪೂರ್ವ ಕಾಲೇಜುಗಳ ನಿರ್ವಹಣೆ. 39710 ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಉಚಿತ ವಸತಿ, ಊಟ, ಸಮವಸ್ತ್ರ, ಹಾಸಿಗೆ ಹೊದಿಕೆ, ವೈದ್ಯಕೀಯ ಸೌಲಭ್ಯಗಳು.

ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ

- ಕಳೆದ ಮೂರು ವರ್ಷಗಳಲ್ಲಿ ರೂ.689.20 ಕೋಟಿಗಳ ವೆಚ್ಚದಲ್ಲಿ ಒಟ್ಟು 260 ವಿದ್ಯಾರ್ಥಿನಿಲಯಗಳ ಸ್ವಂತ ಕಟ್ಟಡಗಳ ನಿರ್ಮಾಣ
- ಪ್ರಸ್ತುತ 178 ವಿದ್ಯಾರ್ಥಿನಿಲಯಗಳ ಕಟ್ಟಡಗಳು ಪ್ರಗತಿಯಲ್ಲಿವೆ.
- ಕೇಂದ್ರ ಪುರಸ್ಕೃತ ಯೋಜನೆಯಡಿ ಧಾರವಾಡ ನಗರದಲ್ಲಿ ತಲಾ ರೂ.4.00 ಕೋಟಿ ವೆಚ್ಚದಲ್ಲಿ 5 ಮೆಟ್ರಿಕ್–ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ.
- ವಿಶೇಷ ಅಭಿವೃದ್ಧಿ ಯೋಜನೆಯಡಿ 24 ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಕ್ರಿಯಾ ಯೋಜನೆ. ಪ್ರಸಕ್ತ ಸಾಲಿನಲ್ಲಿ ಈ ಸಂಬಂಧ ರೂ.37.62 ಕೋಟಿಗಳ ಅನುದಾನ.
- ನಬಾರ್ಡ್ ಸಂಸ್ಥೆಯ ನೆರವಿನೊಂದಿಗೆ ಆರ್.ಐ.ಡಿ.ಎಫ್ ಯೋಜನೆಯಡಿ ರೂ.24.80 ಕೋಟಿಗಳ ವೆಚ್ಚದಲ್ಲಿ 8 ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ.

ವಿದ್ಯಾರ್ಥಿವೇತನ ಕಾರ್ಯಕ್ರಮಗಳು

- **ಮೆಟ್ರಿಕ್–ಪೂರ್ವ ವಿದ್ಯಾರ್ಥಿವೇತನ:** 1 ರಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರೂ.50.00 ಕೋಟಿ ಮೀಸಲು.
- **ಮೆಟ್ರಿಕ್–ನಂತರದ ವಿದ್ಯಾರ್ಥಿವೇತನ:** ಮೆಟ್ರಿಕ್–ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರೂ.50.00 ಕೋಟಿ ಮೀಸಲು.
- **ಶುಲ್ಕ ಮರುಪಾವತಿ:** ಶೈಕ್ಷಣಿಕ ಸಂಸ್ಥೆಗಳಿಗೆ ವಿದ್ಯಾರ್ಥಿಗಳು ಪಾವತಿಸುವ ಶುಲ್ಕದ ಮರು ಪಾವತಿ ನೇರವಾಗಿ ವಿದ್ಯಾರ್ಥಿಗಳ ಖಾತೆಗೆ ಪ್ರಸಕ್ತ ಸಾಲಿನಲ್ಲಿ ಈ ಸಂಬಂಧ ರೂ.400.00 ಕೋಟಿ ಅನುದಾನ ಮೀಸಲಿರಿಸಲಾಗಿದೆ.
- **ವಿದ್ಯಾಸಿರಿ (ಊಟ ಮತ್ತು ವಸತಿ ಯೋಜನೆ):** ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ವಂಚಿತ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.1500/– ರಂತೆ 10 ತಿಂಗಳ ವಿದ್ಯಾರ್ಥಿವೇತನ ಮಂಜೂರು. ಪ್ರಸಕ್ತ ಸಾಲಿನಲ್ಲಿ ರೂ.150.00 ಕೋಟಿ ಅನುದಾನ ಮೀಸಲು.

ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಇಲಾಖಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂದರ್ಭ.

ತರಬೇತಿ ಕಾರ್ಯಕ್ರಮಗಳು

- **ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ** : ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಪ್ರತಿಷ್ಠಿತ ತರಬೇತಿ ಸಂಸ್ಥೆಗಳ ಮೂಲಕ ಐ.ಎ.ಎಸ್, ಕೆ.ಎ.ಎಸ್ ಹಾಗೂ ಬ್ಯಾಂಕಿಂಗ್ ಪರೀಕ್ಷೆಗಳಿಗೆ ಪರೀಕ್ಷಾಪೂರ್ವ ತರಬೇತಿ.
- **ಸೇನಾ ತರಬೇತಿ** : ಭಾರತೀಯ ಸೇನೆಗೆ ಸೇರಬಯಸುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಆಯ್ಕೆ ಪೂರ್ವ ತರಬೇತಿ.
- **ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ:** ಕಳೆದ ಎರಡು ವರ್ಷಗಳಲ್ಲಿ 113 ವಿದ್ಯಾರ್ಥಿಗಳಿಗೆ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ರೂ.9.13 ಕೋಟಿಗಳ ವ್ಯಾಸಂಗ ವೇತನ ಮಂಜೂರು.
- **ಸವಿತಾ ಸಮಾಜದ ಪಾರಂಪರಿಕ ಕಲೆಗಳಾದ ನಾದಸ್ವರ/ ಡೋಲು ಸಂಗೀತ ಕಲೆಗಳನ್ನು ಪುನಃಶ್ಚೇತನ:** ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿಯಲ್ಲಿ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ನಾದಸ್ವರ ಡೋಲು ತರಬೇತಿ ಶಾಲೆ. 50 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ.

ಸಮುದಾಯ ಭವನ / ಡಿ.ದೇವರಾಜ ಅರಸು ಭವನ ನಿರ್ಮಾಣ

- **ಸಮುದಾಯ ಭವನ/ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಸಹಾಯಧನ:** ವಿವಿಧ ಹಿಂದುಳಿದ ವರ್ಗಗಳ ಸಂಘ–ಸಂಸ್ಥೆಗಳು ನಿರ್ಮಿಸುತ್ತಿರುವ 386 ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ 2020–21ನೇ ಸಾಲಿನಲ್ಲಿ ರೂ.46.50 ಕೋಟಿ ಸಹಾಯಧನ ಮಂಜೂರಾತಿ.
- **ಡಿ.ದೇವರಾಜ ಅರಸು ಭವನ ನಿರ್ಮಾಣ:** ತಾಲ್ಲೂಕು ಹಿಂದುಳಿದ ವರ್ಗಗಳ ಕಛೇರಿಗಳ ನಿರ್ವಹಣೆಗಾಗಿ ಪ್ರತಿ ತಾಲ್ಲೂಕು ಕೇಂದ್ರದಲ್ಲಿ ರೂ.1.00 ಕೋಟಿ ವೆಚ್ಚದಲ್ಲಿ ಡಿ.ದೇವರಾಜ ಅರಸು ಭವನ ನಿರ್ಮಾಣ. ಪ್ರಸ್ತುತ 32 ಭವನಗಳು ಪೂರ್ಣ; 37 ಭವನಗಳು ನಿರ್ಮಾಣದ ವಿವಿಧ ಹಂತದಲ್ಲಿರುತ್ತವೆ.

ಅಲೆಮಾರಿ/ಅರೆ ಅಲೆಮಾರಿ ಜನಾಂಗದವರಿಗೆ ಅಭಿವೃದ್ಧಿ ಕಾರ್ಯಕ್ರಮಗಳು

- ಅಲೆಮಾರಿ/ಅರೆ ಅಲೆಮಾರಿ ಸಮುದಾಯದ ಜನಾಂಗದವರ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಪ್ರಸಕ್ತ ಸಾಲಿನಲ್ಲಿ ರೂ.57.97 ಕೋಟಿ ಅನುದಾನ ಮೀಸಲು.
- ಈ ಸಮುದಾಯದವರು ಸಾಂಸ್ಕೃತಿಕ ಹಾಗೂ ಇತರೆ ಚಟುವಟಿಕೆಗಳನ್ನು ನಡೆಸಲು ರೂ.10.00 ಕೋಟಿ ವೆಚ್ಚದಲ್ಲಿ ಬೆಂಗಳೂರಿನ ಬನಶಂಕರಿಯಲ್ಲಿ ಅಲೆಮಾರಿ/ಅರೆ ಅಲೆಮಾರಿ ಸಮುದಾಯ ಭವನ ನಿರ್ಮಾಣ.

"ಭಾರತದ ಸಾರ್ವಭೌಮತ್ವ, ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು"–ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ವಿ. ರಶ್ಮಿ ಮಹೇಶ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಪಿ. ವಸಂತ ಕುಮಾರ್, ಭಾ.ಆ.ಸೇ.
ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಶ್ರೀಲಕ್ಷ್ಮೀ: ವರಗಳ ತಾಯಿ

• ಎಸ್. ಸೂರ್ಯಪ್ರಕಾಶ ಪಂಡಿತ್

ಮಹಾಭಾರತದ ಒಂದು ಮಾತು ಹಣದ ಮಹಿಮೆಯನ್ನು ಸೊಗಸಾಗಿ ಹೇಳುತ್ತದೆ:
ಯಸ್ಯಾರ್ಥಾಸ್ತಸ್ಯ ಮಿತ್ರಾಣಿ ಯಸ್ಯಾರ್ಥಾಸ್ತಸ್ಯ ಬಾಂಧವಾಃ|
ಯಸ್ಯಾರ್ಥಾಃ ಸ ಪುಮಾನ್ ಲೋಕೇ ಯಸ್ಯಾರ್ಥಾಃ ಸ ಚ ಪಂಡಿತಃ ||

'ಯಾರ ಬಳಿ ಹಣ ಇರುತ್ತದೆಯೋ ಅವನಿಗೆ ಸ್ನೇಹಿತರೂ ಇರುತ್ತಾರೆ; ಅವನಿಗೆ ಬಂಧುಗಳೂ ಇರುತ್ತಾರೆ. ಅಷ್ಟೇಕೆ, ಲೋಕದಲ್ಲಿ ಅವನು ಗಂಡಸು ಎನಿಸಿಕೊಳ್ಳುತ್ತಾನೆ; ಕೊನೆಗೆ ವಿದ್ವಾಂಸನೂ ಅವನೇ'. ಇದು ಈ ಶ್ಲೋಕದ ತಾತ್ಪರ್ಯ. ನಮ್ಮೆಲ್ಲರ ಮಾನಸಿಕತೆಯನ್ನೂ ಪರಿಸ್ಥಿತಿಯನ್ನೂ ಇದು ಚೆನ್ನಾಗಿ ನಿರೂಪಿಸಿದೆ.

ಹಣಕ್ಕೆ ನಾವು ನಮ್ಮ ಬದುಕಿನಲ್ಲಿ ತುಂಬ ಮಹತ್ವವನ್ನು ಕೊಡುತ್ತಿರುವುದರಲ್ಲಿ ಸಂದೇಹವೇ ಇಲ್ಲ. ದುಡ್ಡು, ಎಂದರೆ ಸಂಪತ್ತು, ಅದೊಂದಿದ್ದರೆ ಸಾಕು, ಜೀವನದಲ್ಲಿ ಇನ್ನೊಂದು ಬೇಕಿಲ್ಲ; ಏಕೆಂದರೆ ಹಣವನ್ನು ಜಗತ್ತಿನ ಉಳಿದೆಲ್ಲವೂ ಆಶ್ರಯಿಸುತ್ತವೆ ಎಂಬ ನಂಬಿಕೆ ನಮ್ಮದು. ಹಾಗಾದರೆ ಈ ಸಂಪತ್ತಿನ ಮೂಲ ಯಾವುದು? ಶ್ರೀ, ಎಂದರೆ ಲಕ್ಷ್ಮಿಯನ್ನು ಸಂಪತ್ತಿನ ಒಡತಿಯಾಗಿ ನಮ್ಮ ಸಂಸ್ಕೃತಿ ಕಾಣಿಸಿದೆ.

ಆದರೆ ಇಲ್ಲೊಂದು ಸಂಗತಿಯನ್ನು ಗಮನಿಸಬೇಕು. ನಮ್ಮ ಪಾಲಿಗೆ ಸಂಪತ್ತು ಎಂದರೆ ದುಡ್ಡು, ಐಶ್ವರ್ಯ. ಆದರೆ 'ಶ್ರೀ' ಎಂಬದಕ್ಕೂ 'ಲಕ್ಷ್ಮೀ' ಎಂಬುದಕ್ಕೂ ನಮ್ಮ ಸಂಸ್ಕೃತಿಯಲ್ಲಿ ವಿಶಾಲವಾದ ಅರ್ಥವಿದೆ. ಲಕ್ಷ್ಮಿಯನ್ನು ಶ್ರೀಲಕ್ಷ್ಮೀ ಎಂದೂ ಕರೆಯಲಾಗಿದೆ.

ಸತ್, ಚಿತ್ ಮತ್ತು ಆನಂದಗಳ ಸ್ವರೂಪವೇ 'ಶ್ರೀ' ಎಂದು ಶಾಸ್ತ್ರಗಳು ಘೋಷಿಸಿವೆ. 'ಲಕ್ಷ್ಮೀ' ಎಂದರೆ ಎಲ್ಲವನ್ನೂ ಸದಾ ನೋಡುತ್ತಿರುವವಳು ಎಂದು ಅರ್ಥಮಾಡಬಹುದು. ಈ ಎರಡು ನೆಲೆಗಳಲ್ಲಿ ಶ್ರೀಲಕ್ಷ್ಮಿಯ ತತ್ತ್ವವನ್ನು ಅನುಸಂಧಾನ ಮಾಡಬೇಕಿದೆ. ನಮ್ಮ ಇರವನ್ನೂ ಅರಿವನ್ನೂ ನಲಿವನ್ನೂ ಪ್ರತಿನಿಧಿಸುವ ತತ್ತ್ವವೇ ಶ್ರೀತತ್ತ್ವ. ನಾವು ಈ ಮೂರನ್ನೂ ಕೇವಲ ಹಣದಲ್ಲಿ ಮಾತ್ರವೇ ನೋಡುತ್ತಿದ್ದೇವೆ; ಆದರೆ ವಾಸ್ತವವಾಗಿ ನಮ್ಮ ಬದುಕಿನಲ್ಲಿ ಹಣದ ಪಾತ್ರ ತುಂಬ ಕಡಿಮೆ. ಕೇವಲ ಹಣ ಇದ್ದ ಮಾತ್ರಕ್ಕೆ ನಮ್ಮ ಅಸ್ತಿತ್ವಕ್ಕೆ ಬೆಲೆ ಒದಗದು, ನಮಗೆ ಬೇಕಾದ ಜ್ಞಾನ ದಕ್ಕದು, ನೆಮ್ಮದಿಯೂ ಸಿಗದು. ಹಣ ಇಲ್ಲದಿದ್ದರೂ ನಮಗೆ ಆನಂದ ದೊರೆಯಬಹುದು, ಬದುಕಿಗೆ ಬೇಕಾದ ತಿಳಿವಳಿಕೆಯೂ ದಕ್ಕಬಹುದು, ನಮ್ಮ ನೆಲೆಯನ್ನೂ ಸ್ಥಾಪಿಸಿಕೊಳ್ಳಬಹುದು.

ಹೀಗೆ ನಮ್ಮ ಜೀವನವನ್ನು ರೂಪಿಸಿಕೊಳ್ಳುವುದಕ್ಕೂ ಸಂತೋಷಿಸುವುದಕ್ಕೂ ಏನೆಲ್ಲ ವಿವರಗಳು ನಮಗೆ ಒದಗುತ್ತವೆಯೋ ಅವೆಲ್ಲವೂ 'ಶ್ರೀ'. ನಮ್ಮ ಬದುಕನ್ನು ಪೂರ್ಣವಾಗಿ ನೋಡಬಲ್ಲಂಥ, ಕಾಪಾಡಬಲ್ಲಂಥ ಶಕ್ತಿಗಳೆಲ್ಲವೂ 'ಲಕ್ಷ್ಮೀ'. ತ್ರಿಮೂರ್ತಿಗಳಲ್ಲಿ ಶ್ರೀಮಹಾವಿಷ್ಣುವು 'ಸ್ಥಿತಿ'ಯನ್ನು ಪ್ರತಿನಿಧಿಸುತ್ತಾನೆ; ಎಂದರೆ ಈ ಕ್ಷಣದಲ್ಲಿ ನಮ್ಮನ್ನು ಕಾಪಾಡುವವನು ಅವನು. ವಿಷ್ಣುವಿನ ಮಡದಿಯೇ ಶ್ರೀಮಹಾಲಕ್ಷ್ಮೀ. ಆದುದರಿಂದ ಶ್ರೀಲಕ್ಷ್ಮೀ ಎಂದರೆ ಕೇವಲ ದುಡ್ಡು ಮಾತ್ರವೇ ಅಲ್ಲ; ಬದುಕನ್ನು ಎತ್ತಿನಿಲ್ಲಿಸಬಲ್ಲ, ಕಾಪಾಡಬಲ್ಲ ವಿವರಗಳೆಲ್ಲವೂ ಶ್ರೀಲಕ್ಷ್ಮಿಯನ್ನೇ ಪ್ರತಿನಿಧಿಸುತ್ತವೆ. ಲಕ್ಷ್ಮಿಯ ಬೇರೆ ಬೇರೆ ಸ್ವರೂಪಗಳಾದ ವಿದ್ಯಾಲಕ್ಷ್ಮೀ, ಧನಲಕ್ಷ್ಮೀ, ಸಂತಾನಲಕ್ಷ್ಮೀ, ಕೀರ್ತಿಲಕ್ಷ್ಮೀ, ಶೌರ್ಯಲಕ್ಷ್ಮೀ, ಸೌಮ್ಯಲಕ್ಷ್ಮೀ, ಮೋಕ್ಷಲಕ್ಷ್ಮೀ ಮುಂತಾದ ತತ್ತ್ವಗಳು ಜೀವನದ ಸಮಗ್ರತೆಯನ್ನೇ ಸೂಚಿಸುತ್ತವೆ. ರಾಮಾಯಣದಲ್ಲಿ ಶ್ರೀರಾಮನನ್ನು 'ಲಕ್ಷ್ಮೀವಾನ್' ಎಂದು ಒಕ್ಕಣಿಸಲಾಗಿದೆ. ಸೀತೆಯು ಲಕ್ಷ್ಮಿಯ ಸ್ವರೂಪ ಎಂಬುದು ಇದರ ಒಂದು ಅರ್ಥ. ಶ್ರೀರಾಮನು ಧರ್ಮಸಂಪನ್ನ ಎಂಬುದು ವಿಶಾಲಾರ್ಥ. ಅವನ ಧರ್ಮಮಾರ್ಗವೇ ಅವನ ದಿಟವಾದ ಸಂಪತ್ತು, ಕೀರ್ತಿ, ವೈಭವ, ಆನಂದಗಳು ಎಂಬುದನ್ನೂ ಇದು ಧ್ವನಿಸುತ್ತದೆ.

ಲಕ್ಷ್ಮಿ ಹೇಗೆ ಹುಟ್ಟಿದಳು ಎಂಬುದಕ್ಕೂ ಸ್ವಾರಸ್ಯಕರ ಹಿನ್ನೆಲೆಯುಂಟು. ಕ್ಷೀರಸಾಗರದ ಮಥನದ ಸಂದರ್ಭದಲ್ಲಿ ಕಾಣಿಸಿಕೊಂಡವಳು ಅವಳು; ಬಳಿಕ ವಿಷ್ಣುವಿನ ವಕ್ಷಃಸ್ಥಳದಲ್ಲಿ ನೆಲೆಗೊಂಡಳು; ಸಂಪತ್ತಿಗೆ ಒಡತಿ ಎನಿಸಿಕೊಂಡಳು. ಶ್ರೀಲಕ್ಷ್ಮಿಗೂ ಮೊದಲು ಜ್ಯೇಷ್ಠಾಲಕ್ಷ್ಮಿಯೂ ಕಾಣಿಸಿಕೊಂಡಳು; ಅವಳು ಅಳು, ದುಃಖ, ಕಷ್ಟಗಳಿಗೆ ಒಡತಿ. ಅವಳಿಗೂ ಒಂದು ನೆಲೆ ಬೇಕಾಯಿತು. ಆದರೆ ಇರುವುದು ಎಲ್ಲಿ? ದೇವತೆಗಳು ಅವಳ ನೆಲೆಯನ್ನು ಸೂಚಿಸಿದರು: ಎಲ್ಲಿ ಸೋಮಾರಿತನ, ಜಗಳ, ಕೊಳಕುತನ, ರೋಗ, ಅನಾಚಾರಗಳು ಇರುತ್ತವೋ ಅಲ್ಲಿ ಜ್ಯೇಷ್ಠಾಲಕ್ಷ್ಮಿ ಇರಬಹುದೆಂದು ಅವಕಾಶವನ್ನು ಕಲ್ಪಿಸಿದರು. ಜ್ಯೇಷ್ಠಾಲಕ್ಷ್ಮೀ ಇರುವ ಕಡೆ ಲಕ್ಷ್ಮೀ ಇರುವುದಿಲ್ಲ; ಲಕ್ಷ್ಮೀ ಇರುವ ಕಡೆ ಜ್ಯೇಷ್ಠಾಲಕ್ಷ್ಮಿಗೆ ತಾಣ ಸಿಗುವುದಿಲ್ಲ. ಇದು ಒಪ್ಪಂದ. ಇದರ ತಾತ್ಪರ್ಯ: ನಮ್ಮ ಮನೆಯಲ್ಲೂ ಮನದಲ್ಲೂ ಯಾವ ಲಕ್ಷ್ಮಿಯು ನೆಲೆಸಬೇಕು ಎಂಬುದು ನಮ್ಮ ಆಯ್ಕೆಯನ್ನೇ ಅವಲಂಬಿಸಿದೆ. ನಮ್ಮಲ್ಲೂ ಕೊಳಕುತನ, ಸೋಮಾರಿತನ ಮುಂತಾದವು ತುಂಬಿದ್ದರೆ ಜ್ಯೇಷ್ಠಾಲಕ್ಷ್ಮಿಯೇ ನಮ್ಮನ್ನು ಆಶ್ರಯಿಸುತ್ತಾಳೆ. ನಮ್ಮ ಅಂತರಂಗದಲ್ಲಿ ಒಳಿತು, ಉಲ್ಲಾಸ, ಸಂತಸಗಳು ತುಂಬಿದ್ದರೆ ಆಗ ಶ್ರೀಮಹಾಲಕ್ಷ್ಮಿಯೇ ನಮ್ಮಲ್ಲಿ ನೆಲೆಗೊಳ್ಳುತ್ತಾಳೆ.

ಮತ್ತೊಮ್ಮೆ ಶ್ರೀವರಮಹಾಲಕ್ಷ್ಮೀವ್ರತ ಬಂದಿದೆ. ಈ ಹಬ್ಬದ ಸಾರ್ಥಕತೆ ನಮ್ಮ ಭಾವ-ಬುದ್ಧಿಗಳನ್ನೇ ಆಶ್ರಯಿಸಿದೆ. ❖

ಐತಿಹಾಸಿಕ ಹಿನ್ನೆಲೆಯ ಮೊಹರಂ

• ಆರ್.ಎಂ. ಸಿದ್ದೀಕ್

ಇಸ್ಲಾಮಿಕ್ ಕ್ಯಾಲೆಂಡರಿನ ಮೊದಲ ತಿಂಗಳೇ ಮೊಹರಂ. ಐತಿಹಾಸಿಕ ಹಿನ್ನೆಲೆ ಹೊಂದಿದ ತಿಂಗಳು ಇದು. ಪ್ರವಾದಿ ಮುಹಮ್ಮದ್ ಅವರು ಮಕ್ಕಾದಿಂದ ಮದೀನಕ್ಕೆ ವಲಸೆ ಹೋದದ್ದು, ಕರ್ಬಲಾ ಯುದ್ಧ, ಪ್ರವಾದಿ ಮೂಸಾ (ಮೋಸೆಸ್) ಅವರನ್ನು ಫರೋಹನ ದಬ್ಬಾಳಿಕೆಯಿಂದ ಮುಕ್ತಿಗೊಳಿಸಿದ್ದು ಸೇರಿದಂತೆ ಹಲವು ಘಟನೆಗಳು ಈ ಮಾಸದಲ್ಲಿ ಸಂಭವಿಸಿವೆ.

ಪ್ರವಾದಿ ಮುಹಮ್ಮದ್ ಅವರು ಮಕ್ಕಾದಿಂದ ವಲಸೆಹೋದ ದಿನ ಇಸ್ಲಾಮೀ ಇತಿಹಾಸದ ಪ್ರಮುಖ ಘಟನೆಯಾದ್ದರಿಂದ ಅದನ್ನು ಹಿಜರಿ ಶಕೆಯಾಗಿ ಆರಿಸಿಕೊಳ್ಳಲಾಯಿತು. ಮಾನಸಿಕ, ದೈಹಿಕ ಹಿಂಸೆಗಳ ನಂತರ ವಿರೋಧಿಗಳು ತನ್ನನ್ನು ಕೊಲ್ಲುವ ಸಂಚು ಹೆಣೆದಿರುವುದನ್ನು ಅರಿತ ಪೈಗಂಬರರು ಸತ್ಯ, ಮಾನವೀಯತೆ ಹಾಗೂ ಶಾಂತಿಯ ಜೀವನ ವ್ಯವಸ್ಥೆಯ ಸ್ಥಾಪನೆಗಾಗಿ ಮನೆ ಹಾಗೂ ನಾಡನ್ನು ತೊರೆದು ಮದೀನಕ್ಕೆ ವಲಸೆ ಹೋದರು.

ಕರ್ಬಲಾ ಯುದ್ಧ: ಮೊಹರಂ ಮಾಸದಲ್ಲಿ ನಡೆದ ಇನ್ನೊಂದು ಪ್ರಮುಖ ಘಟನೆ ಕರ್ಬಲಾ ಯುದ್ಧ. ಪ್ರವಾದಿ ಮುಹಮ್ಮದ್ ಅವರ ಮರಣದ ಬಳಿಕ ಅವರ ಸಂಗಾತಿಗಳಾದ ಅಬೂಬಕರ್, ಉಮರ್, ಉಸ್ಮಾನ್ ಮತ್ತು ಅಲಿ ಅವರು ಅರೇಬಿಯಾದಲ್ಲಿ ಆಳ್ವಿಕೆ ನಡೆಸುವರು. ಆ ಬಳಿಕ ಮುಆವಿಯಾ ಎಂಬವರು ಅಧಿಕಾರಕ್ಕೆ ಬರುವರು. ಇವರೆಲ್ಲರೂ ಪ್ರಜಾಸತ್ತಾತ್ಮಕ ರೀತಿಯಲ್ಲಿ ಆಡಳಿತ ನಡೆಸಿದ್ದರು.

ಆದರೆ ಮುಆವಿಯಾ ತನ್ನ ಅಧಿಕಾರಾವಧಿಯ ಬಳಿಕ ಮಗ ಯಝೀದ್‌ಗೆ ಪಟ್ಟ ಕಟ್ಟುತ್ತಾರೆ. ಅದುವರೆಗೂ ಇದ್ದ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬದಲಾಗಿ, ವಂಶಾಡಳಿತಕ್ಕೆ ಅವಕಾಶ ಮಾಡಿಕೊಡುವರು. ಪ್ರವಾದಿ ಮತ್ತು ಸಂಗಡಿಗರಿಂದ ಸ್ಥಾಪಿತವಾದ ಆಡಳಿತವು ವಂಶಾಡಳಿತದೆಡೆಗೆ ಹೋಗುವುದನ್ನು ಪ್ರವಾದಿಯವರ ಮೊಮ್ಮಗ ಹುಸೈನ್ ವಿರೋಧಿಸುವರು.

ರಾಷ್ಟ್ರದ ಸಂಪತ್ತು ಅಲ್ಲಿನ ಪ್ರಜೆಗಳ ಹಕ್ಕು, ಅದು ಯಾರದೇ ಪಿತ್ರಾರ್ಜಿತ ಸ್ವತ್ತಲ್ಲವೆಂದು ಬಂಡಾಯವೆದ್ದರು. ತೀವ್ರ ವಿರೋಧದ ಹೊರತಾಗಿಯೂ ಯಝೀದ್ ಅಧಿಕಾರ ತ್ಯಜಿಸದಿದ್ದಾಗ ಹುಸೈನ್ ಯುದ್ಧಸಾರಿದರು. ಕರ್ಬಲಾ ಎಂಬಲ್ಲಿ ನಡೆದ ಯುದ್ಧದಲ್ಲಿ ಹುಸೈನ್ ಹುತಾತ್ಮರಾಗುವರು. ಒಂದು ಆದರ್ಶಕ್ಕಾಗಿ ತನ್ನ ಹಾಗೂ ಇಡೀ ಕುಟುಂಬದ ಪ್ರಾಣವನ್ನೇ ನೀಡಿದರು. ಅನ್ಯಾಯದ ವಿರುದ್ಧ ಸದಾ ಹೋರಾಡಬೇಕು ಎಂಬ ಸಂದೇಶವನ್ನು ಜಗತ್ತಿಗೆ ನೀಡಿದರು. ❖

ಪ್ರವಾದಿ ಮೂಸಾ ಪಾರಾದ ಘಟನೆ: ಪ್ರವಾದಿ ಮೂಸಾ ಮತ್ತು ಅವರ ಅನುಯಾಯಿಗಳನ್ನು ದೇವನು ಪಾರುಗೊಳಿಸಿದ ಇನ್ನೊಂದು ಪ್ರಮುಖ ಘಟನೆಯೂ ಈ ತಿಂಗಳಲ್ಲಿ ನಡೆದಿದೆ. ಈಜಿಪ್ಟ್‌ನ ಸರ್ವಾಧಿಕಾರಿ ಫರೋಹ, ಮೂಸಾ ಅವರ ಬನೀ ಇಸ್ರಾಯೀಲ್ ಸಮುದಾಯವನ್ನು ತನ್ನ ಗುಲಾಮರಾಗಿಸಿಕೊಂಡಿದ್ದನು. ತನ್ನ ಸಮುದಾಯದ ಜನರಿಗೆ ನ್ಯಾಯ ಒದಗಿಸಲು ಮೂಸಾ ಅವರು ಸರ್ವಾಧಿಕಾರಿಯೊಂದಿಗೆ ದೀರ್ಘಕಾಲ ಹೋರಾಡಿಕೊಂಡು ಬಂದಿದ್ದರು. ದಬ್ಬಾಳಿಕೆ ಹೆಚ್ಚಿದಾಗ ಈಜಿಪ್ಟ್ ತೊರೆಯುವರು.

ಫರೋಹನ ಸೇನೆ ಅವರನ್ನು ಸಮುದ್ರ ತೀರದವರೆಗೆ ಬೆನ್ನಟ್ಟಿಕೊಂಡು ಬರುತ್ತದೆ. ಹಿಂದಿನಿಂದ ಫರೋಹನ ಸೇನೆ ಬರುತ್ತಿದ್ದರೆ, ಮುಂದೆ ಸಮುದ್ರ. ಮೂಸಾ ಮತ್ತು ಸಂಗಾತಿಗಳಿಗೆ ಅಡಕತ್ತರಿಯಲ್ಲಿ ಸಿಕ್ಕಿಕೊಂಡ ಪರಿಸ್ಥಿತಿ. ಆಗ ಮೂಸಾ ಅವರ ಕೈಯಲ್ಲಿರುವ ಲಾಠಿಯನ್ನು ಸಮುದ್ರಕ್ಕೆ ಸ್ಪರ್ಶಿಸುವಂತೆ ದೇವನಿಂದ ಆದೇಶವಾಗುತ್ತದೆ. ಅದ್ಭುತ ಪವಾಡವಾಗಿ ಸಮುದ್ರ ಎರಡು ಹೋಳಾಗಿ ರಸ್ತೆ ನಿರ್ಮಾಣವಾಗುತ್ತದೆ. ಮೂಸಾ ಹಾಗೂ ಸಂಗಾತಿಗಳು ಆ ರಸ್ತೆ ಮೂಲಕ ಸಮುದ್ರ ದಾಟುವರು. ಅವರನ್ನು ಹಿಂಬಾಲಿಸಿಕೊಂಡು ಬಂದ ಫರೋಹ ಮತ್ತು ಸೇನೆ ಸಮುದ್ರದ ಮಧ್ಯ ತಲುಪಿದಾಗ ಹೋಳಾಗಿದ್ದ ಸಮುದ್ರ ಒಂದಾಗುತ್ತದೆ. ಅವರೆಲ್ಲರೂ ಜಲಸಮಾಧಿಯಾಗುವರು.

ಈ ಘಟನೆಯನ್ನು ವಿವರಿಸುತ್ತಾ ಕುರ್‌ಆನ್‌ನಲ್ಲಿ 'ಮುಂದಿನ ತಲೆಮಾರಿನ ಜನರಿಗೆ ಎಚ್ಚರಿಕೆಯ ದ್ಯೋತಕವಾಗಿರುವಂತೆ ನಾವು ನಿನ್ನ ಶವವನ್ನು ಮಾತ್ರ ಸುರಕ್ಷಿತರಾಗಿಸುವೆವು' (10: 90–92) ಎಂದು ಹೇಳಲಾಗಿದೆ. ಈಜಿಪ್ಟ್‌ನ ವಸ್ತುಸಂಗ್ರಹಾಲಯದಲ್ಲಿ ಫರೋಹನ ಮೃತದೇಹ ಇಂದಿಗೂ ಸುರಕ್ಷಿತವಾಗಿದೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani Relief Trust' ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

'ಶುಲ್ಕ ಕಟ್ಟಲು ನೆರವಾಯಿತು'

'ಪ್ರಜಾವಾಣಿ' ನೀಡಿದ ಸ್ಕಾಲರ್‌ಶಿಪ್ ಹಣ, ಶುಲ್ಕ ಕಟ್ಟಲು ನೆರವಾಯಿತು. ಶ್ರಮಪಟ್ಟು ಹೆಚ್ಚು ಅಂಕ ಪಡೆದಿದ್ದಕ್ಕೆ ನಮ್ಮನ್ನು ಪತ್ರಿಕೆ ಗುರುತಿಸಿದೆ ಎಂದು ಹೆಮ್ಮೆಯಾಯಿತು.
ರೇಷ್ಮಾ ಪೂಜಾರಿ, ಮಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ದೇವರಾಜ ಅರಸು ಪ್ರಶಸ್ತಿ ಪ್ರದಾನ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಹೆಸರಿನಲ್ಲಿ ನೀಡುತ್ತಿರುವ ಪ್ರಶಸ್ತಿಗೆ ಆಯ್ಕೆಯಾದ ಸಾಧಕರ ಹೆಸರನ್ನು ಸರ್ಕಾರ ಗುರುವಾರ ಪ್ರಕಟಿಸಿದೆ.

ಪ್ರವಾಹ ಮತ್ತು ಕೋವಿಡ್ ಕಾರಣದಿಂದ ಕಳೆದ ಮೂರು ವರ್ಷಗಳಿಂದ ಪ್ರಶಸ್ತಿ ನೀಡಿರಲಿಲ್ಲ. ಮೂರು ವರ್ಷಗಳ ಪ್ರಶಸ್ತಿಯ ಆಯ್ಕೆಗಾಗಿ ರಚಿಸಲಾಗಿದ್ದ ಆಯ್ಕೆ ಸಮಿತಿ ಅರ್ಹರನ್ನು ಆಯ್ಕೆ ಮಾಡಿದೆ. ಶುಕ್ರವಾರ (ಆ.20) ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪ್ರಶಸ್ತಿ ಪ್ರದಾನ ಮಾಡುವರು ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಪ್ರಶಸ್ತಿಯು ₹ 5 ಲಕ್ಷ, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆ ಒಳಗೊಂಡಿದೆ ಎಂದು ಅವರು ತಿಳಿಸಿದರು.

ಪ್ರಶಸ್ತಿ ವಿಜೇತರ ಪರಿಚಯ

ಬಸವಪ್ರಭು ಲಖಮಗೌಡ ಪಾಟೀಲ(2019–20)
ಬೆಳಗಾವಿ ಜಿಲ್ಲೆಯ ಅಥಣಿಯ ಇವರು ದೇಶದಲ್ಲೇ ಮೊದಲ ಬಾರಿಗೆ ದೇವದಾಸಿ/ ವೇಶ್ಯೆಯರ ಮಕ್ಕಳಿಗಾಗಿ ವಸತಿ ಶಾಲೆಯನ್ನು ಆರಂಭಿಸಿದರು. ಬಡವರು ಮತ್ತು ದಲಿತರಿಗೆ ಕಾನೂನು ನೆರವು, ಜನತಾ ನ್ಯಾಯಾಲಯ ನಡೆಸಿಕೊಂಡು ಬಂದಿದ್ದಾರೆ.

ಎಸ್.ಜಿ.ಸುಶೀಲಮ್ಮ(2020–21)
ಬೆಂಗಳೂರು ಚಾಮರಾಜಪೇಟೆಯ ಇವರು ಸುಮಂಗಲಿ ಸೇವಾಶ್ರಮದ ಮೂಲಕ ದಿಕ್ಕುಗಾಣದ ಅನಾಥ ಮತ್ತು ನೊಂದ ಹೆಣ್ಣು ಮಕ್ಕಳ ಏಳಿಗೆಗಾಗಿ ಅನೇಕ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. 29 ಯೋಜನೆಗಳ ಮೂಲಕ 15 ಲಕ್ಷ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಿದೆ.

ಕೆ. ಭಾಸ್ಕರ ದಾಸ್ ಎಕ್ಕಾರು(2021–22)
ದಕ್ಷಿಣಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ತೆಂಕ ಎಕ್ಕಾರು ಗ್ರಾಮದ ಇವರು ಅಲೆಮಾರಿ ಸೂಕ್ಷ್ಮ, ಅತಿಸೂಕ್ಷ್ಮ, ಪರಿಶಿಷ್ಟ ಜಾತಿಯ 51, ಪರಿಶಿಷ್ಟ ಪಂಗಡಗಳ 23 ಮತ್ತು ಹಿಂದುಳಿದ ವರ್ಗಗಳ 46 ಸಮುದಾಯಗಳ ಅಲೆಮಾರಿಗಳನ್ನು ಮುಖ್ಯವಾಹಿನಿಗೆ ತರಲು ಶ್ರಮಿಸಿದ್ದಾರೆ.

ಇಂದು ಅರಸು ಜನ್ಮದಿನ • ಕೊಳೆಯುತ್ತಿದೆ ಅರಸು ಜನ್ಮಶತಮಾನೋತ್ಸವ ಅನುದಾನ

ಅರಸು ಕಲ್ಲಹಳ್ಳಿ ಅರೆಬರೆ ಅಭಿವೃದ್ಧಿ!

• ಕೆ.ನರಸಿಂಹಮೂರ್ತಿ

ಮೈಸೂರು: ನಾಡು ಕಂಡ ವಿಶಿಷ್ಟ ರಾಜಕಾರಣಿ ಡಿ.ದೇವರಾಜ ಅರಸು ಅವರ ಹುಟ್ಟೂರು, ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿಯ ಸರ್ವಾಂಗೀಣ ಅಭಿವೃದ್ಧಿ ಇನ್ನೂ ಮರೀಚಿಕೆಯಾಗಿದೆ.

ಅರಸು ಜನ್ಮಶಮಾನೋತ್ಸವ ನಿಮಿತ್ತ 2016–17ನೇ ಸಾಲಿನ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಘೋಷಿಸಿ ಬಿಡುಗಡೆ ಮಾಡಿದ್ದ ₹ 10 ಕೋಟಿ ಅನುದಾನ ಸಮರ್ಪಕವಾಗಿ ಬಳಕೆಯಾಗಿಲ್ಲ. ಅರಸು ಜಯಂತಿಯಂದೇ ಸರ್ಕಾರ ಈ ಗ್ರಾಮವನ್ನು ದತ್ತು ಸ್ವೀಕರಿಸಿತ್ತು.

ಎಷ್ಟು ಅನುದಾನ ಬಳಕೆಯಾಗಿದೆ ಎಂಬ ಲೆಕ್ಕವೂ ಸದ್ಯ ಜಿಲ್ಲಾಡಳಿತದ ಬಳಿ ಇಲ್ಲ. ಗ್ರಾಮದ ಅರೆಬರೆ ಅಭಿವೃದ್ಧಿಯ ನಡುವೆಯೇ ಜಿಲ್ಲಾಡಳಿತ ಮತ್ತೊಮ್ಮೆ ಅರಸು ಜಯಂತಿಗೆ ಸಜ್ಜಾಗಿದೆ.

ಕ್ರಿಯಾಯೋಜನೆಯನ್ನು ಜಂಟಿಯಾಗಿ ಜಾರಿಗೊಳಿಸಬೇಕಾದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ನಿರ್ಮಿತಿ ಕೇಂದ್ರ, ಪಂಚಾಯತ್‌ರಾಜ್ ಎಂಜಿನಿಯರಿಂಗ್ ವಿಭಾಗ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ನಡುವೆ ಸಮನ್ವಯವೂ ಇಲ್ಲದೆ ಎರಡು ವರ್ಷದಿಂದ ಅಭಿವೃದ್ಧಿ ಪ್ರಗತಿ ಪರಿಶೀಲನೆಯೂ ನಡೆದಿಲ್ಲ.

ಅಭಿವೃದ್ಧಿಗೆ ₹38 ಲಕ್ಷ ವೆಚ್ಚವಾಗಿರುವ ಕಲ್ಲಹಳ್ಳಿಯ ದೊಡ್ಡ ಕೆರೆಯ ನೋಟ.
ಪ್ರಜಾವಾಣಿ ಚಿತ್ರ– ಬಿ.ಆರ್. ಸವಿತಾ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/2WcDUBm

'ಗ್ರಾಮಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಕ್ರಿಯಾಯೋಜನೆ ರೂಪಿಸಲಾಗಿದೆ' ಎಂಬ ಅಸಮಾಧಾನವೂ ಮುಂದುವರಿದಿದೆ.

ಅರಸು ಅವರ ಮನೆ, ಆವರಣವನ್ನು ಪಾರಂಪರಿಕ ಹಾಗೂ ಸಾಂಸ್ಕೃತಿಕ ಉದ್ಯಾನ ಹಾಗೂ ವಸ್ತು ಸಂಗ್ರಹಾಲಯವನ್ನಾಗಿಸುವ ಕಾರ್ಯ 2 ವರ್ಷದ ಹಿಂದೆ ಆರಂಭವಾಗಿದ್ದು, ಇನ್ನೂ ಪೂರ್ಣಗೊಂಡಿಲ್ಲ. ಪಕ್ಕದಲ್ಲಿರುವ ಅವರ ಮನೆತನದ ಚಂದ್ರಪ್ರಭ ಜೈನರ ಗುಡಿ ಅಭಿವೃದ್ಧಿಯಾಗಿದೆ. ಅಲ್ಲಿ ಅತಿಥಿಗೃಹ ನಿರ್ಮಾಣವಾಗಿಲ್ಲ. ಓಕುಳಿ ಮೈದಾನವೂ ಅಭಿವೃದ್ಧಿ ಕಂಡಿಲ್ಲ.

ಹೆದ್ದಾರಿ ಬಳಿ ಸ್ವಾಗತ ಕಮಾನು ಹಾಗೂ ಬಸ್ ನಿಲ್ದಾಣಗಳ ನಿರ್ಮಾಣ ಮುಗಿದಿಲ್ಲ. ಚದುರಂಗರ ಭವನದ ಪುನಶ್ಚೇತನ ಕಾಮಗಾರಿ ಅರ್ಧಕ್ಕೇ ನಿಂತಿದೆ. ಅರಸು ಸಮಾಧಿ ಸ್ಥಳ ಅಭಿವೃದ್ಧಿಗೊಂಡರೂ ನಿರ್ವಹಣೆ ಇಲ್ಲದೆ ಸೊರಗಿದೆ.

ಸ್ವಂತ ಕಟ್ಟಡವಿಲ್ಲದ ಗ್ರಾಮ ಪಂಚಾಯಿತಿಯು ಸದ್ಯ ಅರಸು ಅವರ ಮನೆಯ ಒಂದು ಕಟ್ಟಡದಲ್ಲೇ ಕಾರ್ಯನಿರ್ವಹಿಸುತ್ತಿದೆ.

₹ 38 ಲಕ್ಷ ವೆಚ್ಚವಾಗಿರುವ ಗ್ರಾಮದ ದೊಡ್ಡಕೆರೆ ಬಳಿ 'ಅಭಿವೃದ್ಧಿ' ಕಾಣಿಸುವುದಿಲ್ಲ. 'ಪ್ರಜಾವಾಣಿ' ಭೇಟಿ ನೀಡಿದಾಗ ಕೆರೆಯ ಮೂಲೆಯಲ್ಲಿ ಅಪಾರ ಪ್ರಮಾಣದಲ್ಲಿ ಮಣ್ಣು ತೆಗೆದು ಸಾಗಿಸಿದ್ದು ಕಂಡು ಬಂತು.

> **ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ಆರಂಭಿಸಿ ಎರಡು ವರ್ಷವಾಯಿತು. ಇದುವರೆಗೂ ವಿಶೇಷ ಅನುದಾನ ಬಳಕೆ ಸಂಬಂಧ ಸಭೆ ನಡೆದಿಲ್ಲ .**
> **ಅರುಣ್,** ಎಂ. ಪಿಡಿಒ

> **ಗ್ರಾಮಾಭಿವೃದ್ಧಿಯ ಎಲ್ಲ ಕೆಲಸವೂ ಅರ್ಧಂಬರ್ಧವಾಗಿದೆ. ಜಿಲ್ಲಾಡಳಿತವೂ ಗಂಭೀರವಾಗಿ ಪರಿಗಣಿಸಿಲ್ಲ. ಮುಖ್ಯಮಂತ್ರಿ ಗಮನಕ್ಕೆ ತಂದಿರುವೆ.**
> **ಎಚ್.ವಿಶ್ವನಾಥ್,** ಶಾಸಕ, ಅರಸು ಜನ್ಮಶತಮಾನೋತ್ಸವ ಸಮಿತಿ ಅಧ್ಯಕ್ಷ

> **ಗ್ರಾಮದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆಯೇ ಕ್ರಿಯಾಯೋಜನೆ ರೂಪಿಸಲಾಗಿದೆ. ಅನುಷ್ಠಾನದಲ್ಲೂ ನಿರ್ಲಕ್ಷ್ಯ ಮಾಡಲಾಗಿದೆ.**
> **ಕೆ.ಎಸ್.ರಾಜಶೇಖರ್,** ಗ್ರಾಪಂ ಸದಸ್ಯ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business to Business

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್: 7837015557

ಭವಿಷ್ಯ

Astrology

★||ಒಂದೇಕರೆ ಕ್ಷಣದಲ್ಲಿ ಪರಿಹಾರ||★ ಓಂಶ್ರೀಕ್ಷೇತ್ರ ಧರ್ಮಸ್ಥಳ ಶ್ರೀಮಂಜುನಾಥಸ್ವಾಮಿ ಜ್ಯೋತಿಷ್ಯ_ಭವನ ಸ್ತ್ರೀಪುರುಷ ವಶೀಕರಣ_ಸ್ಪೆಷಲಿಸ್ಟ್ ಉಚಿತ_ಭವಿಷ್ಯ ಖಚಿತ_ಪರಿಹಾರ. ತುಳುನಾಡಿನ_ಹಿರಿಯ ಬ್ರಾಹ್ಮಣರಾದ_ಗುರುಗಳಾದ ಶ್ರೀವಿಶ್ವರೂಪ ಆಚಾರ್ಯರು 9620403080

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಉಚಿತವಾಗಿ ಕೊಡಲಾಗುತ್ತದೆ ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

★ಉಚಿತ ಭವಿಷ್ಯ★ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ_ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100%ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106

ಸಾಯಿಅಂಜನ್ ಜ್ಯೋತಿಷ್ಯರು ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳು ಏನೇಇರಲಿ 11 ಗಂಟೆಯಲ್ಲಿ ಪರಿಹಾರ ಶತಸಿದ್ಧ.ಪರಿಹಾರ ಆಗದಿದ್ದಲ್ಲಿ ನಿಮ್ಮ ಹಣ ವಾಪಸ್. 9535852216

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಉದ್ಯೋಗಾವಕಾಶ

Wanted

ನೇರನೇಮಕಾತಿ ಎಲ್ಲಾಜಿಲ್ಲೆಗಳಲ್ಲಿ ಪ್ರಾರಂಭವಾಗಿರುವ ಕಂಪನಿಗಳಿಗೆ, ಆಫೀಸ್‌ಗಳಿಗೆ 7th,ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಗ್ರಿ B.Com (ವಿದ್ಯಾರ್ಹತೆಯಿಲದಲ್ಲದವರಿಗೂ) ವಸತಿಯೂಟದೊಂದಿಗೆ 16,700/-56,000/- 8884412622, 9986083666

Part-Time Jobs

✔ **ಕನ್ನಡ ಮತ್ತು** ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

General

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿಗಳಿಗೆ, Office, Company Work ಗೆ ಯುವಕ-ಯುವತಿಯರು ಬೇಕಾಗಿದ್ದಾರೆ.5th,10th, PUC, ITI, Diploma, Any Degree, Pass/Fail, ನೇರನೇಮಕಾತಿ. 16,800-65,000/- ಊಟ ವಸತಿಯೊಂದಿಗೆ 7022366461, 7259673183

To place your ad in Deccan Herald & Prajavani Classifieds
DH Classifieds More value, more impact
For details contact:
Jerry: 9731810277
Vishal: 9845114560
Tanveer: 9886213331
Ravichandra: 9901641752
E-mail: dhclassifieds@deccanherald.co.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ವಾಹನ

Four Wheelers Selling

Others

ಸ್ವತಂತ್ರ ದಿನಾಚರಣೆಗೆ ಕೊಡುಗೆಗಳೊಂದಿಗೆ ವರಮಹಾಲಕ್ಷ್ಮಿಯನ್ನು ಬರಮಾಡಿಕೊಳ್ಳಿ

4.99%* ಬಡ್ಡಿದರ
₹55 000/-* ದವರೆಗೆ ಉಳಿತಾಯ
ಕೊಡುಗೆಗಳು ₹25 000/-* ದವರೆಗೆ
ಎಕ್ಸ್‌ಚೇಂಜ್ ₹15 000/-* ದವರೆಗೆ
ನಿಮ್ಮ Super ACE, Mega ಅಥವಾ ACE XL ಅನ್ನು ಎಕ್ಸ್‌ಚೇಂಜ್ ಮಾಡಿ ವಿಶೇಷ ಬೋನಸ್‌ನ ಲಾಭ ಪಡೆಯಿರಿ
Bangalore/Mysore 95389 35533
Bangalore 7259784441
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 98950 23373
Hubli/Haveri/Gadag/Bellary/Raichur - 96209 55858
Bagalkot/Bijapur/Gulbarga/Bidar - 80952 02223
Hubli/Belgaum- 91088 64572
* ಷರತ್ತುಗಳು ಅನ್ವಯಿಸುತ್ತವೆ.

EDUCATION SPECIAL

We are coming out with special offer for Admission Notice, Education Success Congratulation Ads
DH Classifieds
For details contact: Jerry: 9731810277 Vishal: 9845114560 Tanveer: 9886213331
E-mail: dhclassifieds@deccanherald.co.in

ಪ್ರಜಾವಾಣಿ

ಅಂದದ ಚಂದದ ವರಮಹಾಲಕ್ಷ್ಮಿ ಅಲಂಕಾರ

ಈ ವರಮಹಾಲಕ್ಷ್ಮಿ ಹಬ್ಬದಂದು ನಿಮ್ಮ ಸಂಭ್ರಮಾಚರಣೆ ಅಥವಾ ದೇವಿ ಅಲಂಕಾರದ ಫೋಟೋವನ್ನು ನಾಳೆ ಸಂಜೆ 6ರೊಳಗೆ www.bit.ly/pvlakshmi ಅಪ್‌ಲೋಡ್ ಮಾಡಿ. ಆಯ್ದ ಫೋಟೋಗಳನ್ನು ಪ್ರಜಾವಾಣಿ ಫೇಸ್‌ಬುಕ್‌ನಲ್ಲಿ ಪ್ರಕಟಿಸಲಾಗುವುದು
15 ಅದೃಷ್ಟಶಾಲಿಗಳಿಗೆ GIFT VOUCHER

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹435
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹435

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1525)
ಸೋಯಾ (ರಿಫೈನ್ಡ್)	₹1400 (1400)
ಸೂರ್ಯಕಾಂತಿ (ರಿಫೈನ್ಡ್)	₹1500(1490)
ಪಾಮೋಲಿನ್	₹1268 (1272)

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
facebook LIVE ಇಂದು ಸಂಜೆ 4ಕ್ಕೆ

ಗರ್ಭಿಣಿಯರಲ್ಲಿ ಅಪೌಷ್ಟಿಕತೆ
ಭಾಗವಹಿಸುವವರು: ಡಾ. ವೀಣಾ ಎಸ್. ಭಟ್,
ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞೆ
ಪಾಡ್‌ಕಾಸ್ಟ್: ಇಂದಿನ ವಿಶೇಷ: ಸಿನಿ ಮ್ಯಾಟಿನಿ
ಪ್ರತೀ ದಿನ: ವಚನವಾಣಿ, ದಿನದ ಸೂಕ್ತಿ, ಪ್ರಜಾವಾಣಿ ವಾರ್ತೆ, ಸಂಪಾದಕೀಯ, ಪ್ರಚಲಿತ
ಪ್ರಜಾವಾಣಿ ಕನ್ನಡ ಧ್ವನಿ

ಜೂನ್ ತ್ರೈಮಾಸಿಕ: ಮಾರ್ನಿಂಗ್‌ಸ್ಟಾರ್ ವರದಿ

ಎಫ್‌ಪಿಐ ಶೇ 7ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಗಳಲ್ಲಿ ಹೂಡಿಕೆ ಮಾಡಿರುವ ಹಣದ ಮೌಲ್ಯವು ಜೂನ್ ತ್ರೈಮಾಸಿಕದ ಅಂತ್ಯಕ್ಕೆ ₹ 43.80 ಲಕ್ಷ ಕೋಟಿ ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇಕಡ 7ರಷ್ಟು ಏರಿಕೆ ಕಂಡಿದೆ ಎಂದು ಮಾರ್ನಿಂಗ್‌ಸ್ಟಾರ್ ಕಂಪನಿ ವರದಿ ಹೇಳಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ದೇಶದಲ್ಲಿ ಎಫ್‌ಪಿಐ ಮೊತ್ತ ₹ 40.84 ಲಕ್ಷ ಕೋಟಿ ಆಗಿತ್ತು. ಭಾರತದ ಷೇರುಪೇಟೆಗಳ ಉತ್ತಮ ವಹಿವಾಟಿನಿಂದಾಗಿ ಈ ಪ್ರಮಾಣದಲ್ಲಿ ಹೂಡಿಕೆ ಆಗಿದೆ ಎಂದು ಅದು ಹೇಳಿದೆ.

ಕೋವಿಡ್‌ನ ಎರಡನೇ ಅಲೆಯಿಂದಾಗಿ ವಿದೇಶಿ ಹೂಡಿಕೆದಾರರು ಏಪ್ರಿಲ್ ಹಾಗೂ ಮೇನಲ್ಲಿ ಮಾರಾಟಕ್ಕೆ ಗಮನ ನೀಡಿದರು. ಆ ಬಳಿಕ ಕೋವಿಡ್ ಪರಿಸ್ಥಿತಿಯು ತುಸು ಸುಧಾರಿಸುತ್ತಿದ್ದಂತೆಯೇ ಜೂನ್‌ನಲ್ಲಿ ₹ 17,464 ಕೋಟಿ ಹೂಡಿಕೆ ಮಾಡಿದರು. ಆದರೆ, ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಏರಿಕೆಯ ಸಾಧ್ಯತೆಯನ್ನು ಮುಂದಿಟ್ಟಿದ್ದರಿಂದ ಹಾಗೂ ಕೋವಿಡ್‌ನ ಮೂರನೇ ಅಲೆ ಬರುವ ಸಾಧ್ಯತೆಯಿಂದಾಗಿ ಜುಲೈನಲ್ಲಿ ವಿದೇಶಿ ಹೂಡಿಕೆದಾರರು ಭಾರತದ ಷೇರುಪೇಟೆಯಲ್ಲಿ ಎಚ್ಚರಿಕೆಯ ವಹಿವಾಟು ನಡೆಸಿದರು. ₹ 11,174 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದರು ಎಂದು ವರದಿ ತಿಳಿಸಿದೆ.

ವಿದೇಶಿ ಹೂಡಿಕೆದಾರರು ಭಾರತದ ಷೇರುಪೇಟೆಯ ಬಗ್ಗೆ ನಕಾರಾತ್ಮಕ ಭಾವನೆ ಹೊಂದಿಲ್ಲ. ಬದಲಾಗಿ ಜಾಗರೂಕತೆಯಿಂದ ವಹಿವಾಟು ನಡೆಸುತ್ತಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಚುಟುಕು ಸುದ್ದಿ

ನೀರವ್ ಆಸ್ತಿ ಬ್ಯಾಂಕ್‌ಗೆ ಮರಳಿಸಲು ಅನುಮತಿ

ಮುಂಬೈ (ಪಿಟಿಐ): ಜಾರಿ ನಿರ್ದೇಶನಾಲಯ (ಇ.ಡಿ.) ಮುಟ್ಟುಗೋಲು ಹಾಕಿಕೊಂಡಿದ್ದ, ಉದ್ಯಮಿ ನೀರವ್ ಮೋದಿಗೆ ಸೇರಿದ ಒಟ್ಟು ₹ 440 ಕೋಟಿ ಮೌಲ್ಯದ ಆಸ್ತಿಯನ್ನು ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ಮರಳಿಸಲು ವಿಶೇಷ ನ್ಯಾಯಾಲಯವೊಂದು ಅನುಮತಿ ನೀಡಿದೆ.

ನೀರವ್ ಮೋದಿ ಮತ್ತು ಅವರ ಮಾವ ಮೆಹುಲ್ ಚೋಕ್ಸಿ ಅವರು ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ₹ 14 ಸಾವಿರ ಕೋಟಿ ವಂಚಿಸಿದ ಆರೋಪ ಹೊತ್ತಿದ್ದಾರೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ ಅಡಿ ರಚಿಸಲಾಗಿರುವ ವಿಶೇಷ ನ್ಯಾಯಾಲಯವು ಈ ಆದೇಶವನ್ನು ಹಿಂದಿನ ವಾರ ನೀಡಿತ್ತು. ಪೂರ್ಣ ಆದೇಶವು ಗುರುವಾರ ಲಭ್ಯವಾಗಿದೆ.

ಡೀಸೆಲ್ ಬೆಲೆ 20 ಪೈಸೆ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಡೀಸೆಲ್ ಬೆಲೆಯನ್ನು ಗುರುವಾರ ಲೀಟರ್‌ಗೆ 20 ಪೈಸೆಯಂತೆ ತಗ್ಗಿಸಿವೆ. ಆದರೆ ಪೆಟ್ರೋಲ್ ಬೆಲೆಯಲ್ಲಿ ಬದಲಾವಣೆ ಮಾಡಿಲ್ಲ.

ಈ ಬೆಲೆ ಇಳಿಕೆಯ ನಂತರ ಡೀಸೆಲ್ ಬೆಲೆಯು ದೆಹಲಿಯಲ್ಲಿ ₹ 89.47 ಆಗಿದೆ. ಬೆಂಗಳೂರಿನಲ್ಲಿ ಡೀಸೆಲ್ ಬೆಲೆಯು ₹ 94.86 ಆಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಮೇ ತಿಂಗಳ ನಂತರದ ಕನಿಷ್ಠ ಮಟ್ಟಕ್ಕೆ ತಲುಪಿದ ಬೆನ್ನಲ್ಲೇ ಈ ಬೆಲೆ ಇಳಿಕೆ ಆಗಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 66.10 ಡಾಲರ್‌ಗೆ ತಗ್ಗಿದೆ.

ವಸತಿ ಮಾರಾಟ ಶೇ 30ರಷ್ಟು ಹೆಚ್ಚಳ ನಿರೀಕ್ಷೆ

ನವದೆಹಲಿ (ಪಿಟಿಐ): ಈ ವರ್ಷದಲ್ಲಿ ವಸತಿ ಮಾರಾಟವು ಪ್ರಮುಖ ಎಂಟು ನಗರಗಳಲ್ಲಿ ಶೇಕಡ 30ರಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಆದರೆ ಬೇಡಿಕೆಯು ಕೋವಿಡ್‌ಗೂ ಮುಂಚಿನ ಮಟ್ಟಕ್ಕಿಂತ ಕಡಿಮೆಯೇ ಇರಲಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ಹೇಳಿದೆ.

ಬೆಂಗಳೂರು ಒಳಗೊಂಡಂತೆ ಪ್ರಮುಖ ಎಂಟು ನಗರಗಳಲ್ಲಿ 2020ರಲ್ಲಿ ಒಟ್ಟಾರೆ 1.38 ಲಕ್ಷ ವಸತಿ ಆಸ್ತಿಗಳು ಮಾರಾಟ ಆಗಿದ್ದವು. ಇದಕ್ಕೆ ಹೋಲಿಸಿದರೆ 2021ರಲ್ಲಿ ಒಟ್ಟಾರೆ 1.79 ಲಕ್ಷ ವಸತಿ ಆಸ್ತಿಗಳು ಮಾರಾಟ ಆಗಲಿವೆ ಎಂದು ಸಂಸ್ಥೆ ಹೇಳಿದೆ. 2019ರಲ್ಲಿ ಆಗಿದ್ದ ಮಾರಾಟವು 2.61 ಲಕ್ಷ ಇತ್ತು.

ಬುರ್ಕಿನೊ ಫಾಸೊದಲ್ಲಿ ಜಿಹಾದಿಗಳ ದಾಳಿ: 47 ಸಾವು

ಕ್ವಾಗಡೊಗೌ (ಎಎಫ್‌ಪಿ): ಪಶ್ಚಿಮ ಆಫ್ರಿಕಾದ ರಾಷ್ಟ್ರ ಬುರ್ಕಿನೊ ಫಾಸೊದಲ್ಲಿ ಶಂಕಿತ ಜಿಹಾದಿಗಳು ನಡೆಸಿದ ಗುಂಡಿನ ದಾಳಿಯಲ್ಲಿ 30 ನಾಗರಿಕರೂ ಸೇರಿ 47 ಮಂದಿ ಮೃತಪಟ್ಟಿದ್ದು, ಅಧ್ಯಕ್ಷರು ಮೂರು ದಿನಗಳ ರಾಷ್ಟ್ರೀಯ ಶೋಕ ಘೋಷಿಸಿದ್ದಾರೆ. ಮೃತರಲ್ಲಿ 14 ಮಂದಿ ಸೈನಿಕರು ಸೇರಿದ್ದಾರೆ ಎಂದು ಸರ್ಕಾರ ತಿಳಿಸಿದೆ.

ಭದ್ರತಾ ಪಡೆಗಳು ನಡೆಸಿದ ಗುಂಡಿನ ಚಕಮಕಿಯಲ್ಲಿ 58 ಉಗ್ರರು ಸತ್ತಿದ್ದಾರೆ. 19 ಜನರು ಗಾಯಗೊಂಡಿದ್ದಾರೆ. ಪರಿಹಾರ ಮತ್ತು ರಕ್ಷಣಾ ಚಟುವಟಿಕೆಗಳು ನಡೆದಿವೆ ಎಂದು ಸರ್ಕಾರದ ಹೇಳಿಕೆ ತಿಳಿಸಿದೆ.

ಕಳೆದ ಎರಡು ವಾರಗಳಲ್ಲಿ ನಡೆದ ಮೂರನೇ ದಾಳಿ ಪ್ರಕರಣ ಇದಾಗಿದೆ. ಈ ಹಿಂದೆ, ಆಗಸ್ಟ್ 4ರಂದು ನಡೆದಿದ್ದ ಪ್ರಮುಖ ದಾಳಿಯಲ್ಲಿ 11 ನಾಗರಿಕರು ಸೇರಿ ಒಟ್ಟು 30 ಜನರು ಸತ್ತಿದ್ದರು. ಜೂನ್ 4–5ರಂದು ಸೊಲ್ಹಾನ್ ಗ್ರಾಮದಲ್ಲಿ ನಡೆದಿದ್ದ ಗುಂಡಿನ ದಾಳಿಯಲ್ಲಿ ಮಕ್ಕಳು ಸೇರಿದಂತೆ 132 ಜನರು ಸತ್ತಿದ್ದರು.

ಸಂಕ್ಷಿಪ್ತ ಸುದ್ದಿ

ನೇಪಾಳ: ಸಿಪಿಎನ್–ಯುಎಂಎಲ್ ವಿಭಜನೆ

ಕಠ್ಮಂಡು (ಪಿಟಿಐ): ನೇಪಾಳದ ಪ್ರಮುಖ ವಿರೋಧ ಪಕ್ಷ ಹಾಗೂ ದೇಶದ ಅತಿ ದೊಡ್ಡ ಕಮ್ಯುನಿಸ್ಟ್ ಪಕ್ಷ ಸಿಪಿಎನ್–ಯುಎಂಎಲ್ ಬುಧವಾರ ಅಧಿಕೃತವಾಗಿ ವಿಭಜನೆಯಾಗಿದೆ.

‘ರಾಜಕೀಯ ಪಕ್ಷಗಳ ಕಾಯ್ದೆ –2071‘ಕ್ಕೆ ತಿದ್ದುಪಡಿ ತಂದು ಸುಗ್ರೀವಾಜ್ಞೆ ಹೊರಡಿಸಿದ ಬೆನ್ನಲ್ಲೇ ಈ ಪಕ್ಷವು ವಿಭಜನೆಗೊಂಡಿದೆ. ರಾಜಕೀಯ ಪಕ್ಷಗಳು ಸುಲಭವಾಗಿ ವಿಭಜನೆಗೊಳ್ಳಲು ನೆರವಾಗುವಂತಹ ಈ ಸುಗ್ರೀವಾಜ್ಞೆಯನ್ನು ಸರ್ಕಾರ ಬೆಂಬಲಿಸಿದ ನಂತರ, ಪಕ್ಷದ ಭಿನ್ನಮತೀಯ ನಾಯಕ ಮಾಧವ್ ಕುಮಾರ್ ನೇಪಾಳ್ ನೇತೃತ್ವದ ಬಣ ಹೊಸ ರಾಜಕೀಯ ಪಕ್ಷ ನೋಂದಣಿಗೆ ಮುಂದಾಯಿತು. ಈ ಸಂಬಂಧ ‘ಸಿಪಿಎನ್–ಯುಎಂಎಲ್ (ಸೋಷಿಯಲಿಸ್ಟ್)‘ ಹೆಸರಲ್ಲಿ ಹೊಸ ಪಕ್ಷದ ನೋಂದಣಿಗೆ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಿದೆ.

ಪಾಕಿಸ್ತಾನ: ಶಿಯಾ ಮೆರವಣಿಗೆ ಮೇಲೆ ದಾಳಿ– 3 ಸಾವು

ಮುಲ್ತಾನ್ (ಪಾಕಿಸ್ತಾನ) (ಎಪಿ): ಪಾಕಿಸ್ತಾನದ ಪೂರ್ವ ಪಂಜಾಬ್ ಪ್ರಾಂತ್ಯದ ಬಹವಾಲ್ ನಗರದಲ್ಲಿ ಗುರುವಾರ ಶಿಯಾ ಮುಸ್ಲಿಮರು ಮೆರವಣಿಗೆ ನಡೆಸುತ್ತಿದ್ದ ವೇಳೆ ರಸ್ತೆ ಬದಿಯಲ್ಲಿ ಇಟ್ಟಿದ್ದ ಬಾಂಬೊಂದು ಸ್ಫೋಟಗೊಂಡು 3 ಮಂದಿ ಮೃತಪಟ್ಟಿದ್ದು, 50ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ

ಸ್ಫೋಟಗೊಂಡ ಸ್ಥಳಕ್ಕೆ ಪೊಲೀಸರು ಮತ್ತು ಆಂಬುಲೆನ್ಸ್ ದೌಡಾಯಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಗಾಯಗೊಂಡ ಜನರು ರಸ್ತೆ ಬದಿಯಲ್ಲಿ ಸಹಾಯಕ್ಕಾಗಿ ಅಂಗಲಾಚುತ್ತಿರುವ ದೃಶ್ಯವೂ ವಿಡಿಯೊದಲ್ಲಿದೆ.

ಶಿಯಾ ಸಮುದಾಯದವರ ಅಶೌರಾ ಹಬ್ಬದ ನಿಮಿತ್ತ ಮೆರವಣಿಗೆ ನಡೆಯುತ್ತಿತ್ತು.

ಹೈಟಿ ಭೂಕಂಪ: ಸಾವಿನ ಸಂಖ್ಯೆ 2,189ಕ್ಕೆ ಏರಿಕೆ

ಲೆಸ್ ಕೆಯೆಸ್, ಹೈಟಿ (ರಾಯಿಟರ್ಸ್): ಭೀಕರ ಭೂಕಂಪನದಿಂದ ಹೈಟಿಯಲ್ಲಿ ಮೃತಪಟ್ಟವರ ಸಂಖ್ಯೆ 2,189ಕ್ಕೆ ಏರಿಕೆಯಾಗಿದೆ ಎಂದು ನಾಗರಿಕ ರಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಶನಿವಾರ ಸಂಭವಿಸಿದ 7.2 ತೀವ್ರತೆಯ ಭೂಕಂಪನದಿಂದ ಸಾವಿರಾರು ಮಂದಿ ನೆಲೆ ಕಳೆದುಕೊಂಡಿದ್ದಾರೆ. ಸರ್ಕಾರದ ನೆರವು ಇಲ್ಲದೆ, ಅನೇಕ ಸಂತ್ರಸ್ತರು ಪರಿತಪಿಸುತ್ತಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	400
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-46000
ಹಳತು	42500-51000
ಕುಮಟ	
ಚಿಪ್ಪು	27509-34849
ಕೋಕ	24111-32470
ಹಳೆಚಾಲಿ	43299-43599
ಹೊಸಚಾಲಿ	36669-41029
ಪುತ್ತೂರು	
ಕೋಕ	10500-26000
ಹೊಸತು	31500-46000
ಸಿದ್ದಾಪುರ	
ಬಿಳಿಗೋಟು	26699-35299
ಚಾಲಿ	38099-40912
ಕೋಕ	21799-31691
ಕೆಂಪುಗೋಟು	26699-26699
ರಾಶಿ	42009-42519
ತಟ್ಟಿಬೆಟ್ಟೆ	30199-30199
ಶಿರಸಿ	
ಬೆಟ್ಟೆ	34999-38889
ಬಿಳಿಗೋಟು	28399-36491
ಚಾಲಿ	38869-41521
ರಾಶಿ	37991-42891
ಯಲ್ಲಾಪುರ	
ಬಿಳಿಗೋಟು	28899-35472
ಚಾಲಿ	36618-41599
ಕೋಕ	22612-32626
ಕೆಂಪುಗೋಟು	28899-33469
ರಾಶಿ	40390-45809
ತಟ್ಟಿಬೆಟ್ಟೆ	34969-39870
ರಾಮನಗರ ರೇಷ್ಮೆ	
ಮಿಶ್ರತಳಿ	313-498
ದ್ವಿತಳಿ	329-555

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13650	12500	12450	179.70 ಸೆಂಟ್ಸ್
ಎಸಿ	6150	4800	4975	
ಆರ್‌ಪಿ	6100	5900	6075	ಲಂಡನ್
ಆರ್‌ಸಿ	3460	3300	3475	1861 ಡಾಲರ್ಸ್

ಎಲ್ಲ ಮಾದರಿಗಳಲ್ಲಿ ಆಡುವ ಅವಕಾಶಕ್ಕಾಗಿ ತಂಡ ಬದಲಾವಣೆ

ಕರ್ನಾಟಕ ತೊರೆದ ಪವನ್ ಪುದುಚೇರಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕ್ರಿಕೆಟ್ ತಂಡದ ಆಲ್‌ರೌಂಡರ್ ಪವನ್ ದೇಶಪಾಂಡೆ ಮುಂಬರುವ ದೇಶಿ ಋತುವಿನಿಂದ ಪುದುಚೇರಿ ತಂಡವನ್ನು ಪ್ರತಿನಿಧಿಸಲಿದ್ದಾರೆ.

31 ವರ್ಷದ ಪವನ್, ಹೋದ ವರ್ಷದ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಕರ್ನಾಟಕ ತಂಡದ ಉಪನಾಯಕರಾಗಿದ್ದರು. 2015ರಲ್ಲಿ ಅವರು ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡದಲ್ಲಿ ಪದಾರ್ಪಣೆ ಮಾಡಿದ್ದರು. 2016–17ರಲ್ಲಿ ಮೊಹಾಲಿಯಲ್ಲಿ ಮಹಾರಾಷ್ಟ್ರ ವಿರುದ್ಧದ ರಣಜಿ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದರು.

‘ಕರ್ನಾಟಕ ತಂಡದಲ್ಲಿ ಅಪಾರ ಪೈಪೋಟಿ ಇದೆ. ಮೂರು ಮಾದರಿಗಳಲ್ಲಿಯೂ ಸ್ಥಾನ ಸಿಗುವುದು ಕಷ್ಟ. ಸಿಕ್ಕರೂ ಅಂತಿಮ ಹನ್ನೊಂದರ ಬಳಗದಲ್ಲಿ ಸ್ಥಾನ ಗಳಿಸುವುದು ಅಷ್ಟು ಸುಲಭವಲ್ಲ. ನನ್ನ ಕ್ರಿಕೆಟ್ ಭವಿಷ್ಯದ ದೃಷ್ಟಿಯಿಂದ ಇನ್ನೂ ಕೆಲವು ವರ್ಷ ಆಡುವ ಸಾಮರ್ಥ್ಯವನ್ನು ವಿನಿಯೋಗಿಸಿಕೊಳ್ಳುವುದು ಅವಶ್ಯಕ.

ಪವನ್ ದೇಶಪಾಂಡೆ

ಕೆಲವು ಹಿರಿಯ ಕ್ರಿಕೆಟಿಗರೊಂದಿಗೆ ಚರ್ಚಿಸಿ ಈ ನಿರ್ಧಾರ ಕೈಗೊಂಡಿದ್ದೇನೆ. ತವರಿನ ತಂಡವನ್ನು ಬಿಟ್ಟು ಬೇರೆಡೆಗೆ ಹೋಗುವುದು ಬಹಳ ಕಷ್ಟದ ಕೆಲಸ. 15 ದಿನ ತುಂಬಾ ಯೋಚಿಸಿ ತೀರ್ಮಾನ ತೆಗೆದುಕೊಂಡಿದ್ದೇನೆ’ ಎಂದು ಪವನ್ ‘ಪ್ರಜಾವಾಣಿ’ಗೆ ಹೇಳಿದರು.

ಹೋದ ಶನಿವಾರ ಅವರಿಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ)ಯು ನಿರಾಕ್ಷೇಪಣ ಪತ್ರವನ್ನು ನೀಡಿದೆ.

‘ಕರ್ನಾಟಕದ ವಿವಿಧ ವಯೋಮಿತಿಯ ತಂಡಗಳನ್ನು ಪ್ರತಿನಿಧಿಸಿದ್ದೇನೆ. ಸಹಆಟಗಾರರೊಂದಿಗೆ ನಿಕಟ ಸ್ನೇಹವಿದೆ. ಕೆಎಸ್‌ಸಿಎಯಿಂದಲೂ ಅಪಾರ ಬೆಂಬಲ ಸಿಕ್ಕಿದೆ’ ಎನ್ನುತ್ತಾರೆ ಅವರು.

ಕಳೆದ ಏಳು ವರ್ಷಗಳಲ್ಲಿ ಪವನ್ ಅವರಿಗೆ ತಂಡದಲ್ಲಿ ನಿರಂತರವಾಗಿ ಸ್ಥಾನ ಸಿಕ್ಕಿರಲಿಲ್ಲ. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿಯೂ ಅವರು ಕಳೆದ ಮೂರು ವರ್ಷಗಳಿಂದ ಇದ್ದಾರೆ. ಇದುವರೆಗೆ ಪದಾರ್ಪಣೆ ಮಾಡುವ ಅವಕಾಶ ದೊರೆತಿಲ್ಲ. ಮುಂದಿನ ತಿಂಗಳು ಯುಎಇಯಲ್ಲಿ ಐಪಿಎಲ್ ಟೂರ್ನಿಯಲ್ಲಿ ಭಾಗವಹಿಸಿದ ನಂತರ ಅವರು ಪುದುಚೇರಿಗೆ ತೆರಳುವರು.

ರಣಜಿ ಟೂರ್ನಿ ಜನವರಿ 5ರಿಂದ

ನವದೆಹಲಿ (ಪಿಟಿಐ): ದೇಶಿ ಕ್ರಿಕೆಟ್‌ನ ‘ರಾಜ’ ರಣಜಿ ಟ್ರೋಫಿ ಟೂರ್ನಿಯು 2022ರ ಜನವರಿ 5ರಿಂದ ಮಾರ್ಚ್ 20ರವರೆಗೆ ಆಯೋಜನೆಗೊಳ್ಳಲಿದೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಗುರುವಾರ ಈ ವಿಷಯವನ್ನು ಬಹಿರಂಗಪಡಿಸಿದೆ. ಜೀವ ಸುರಕ್ಷಾ ವಾತಾವರಣದಲ್ಲಿ ಈ ಟೂರ್ನಿಯನ್ನು ಆಯೋಜಿಸಲಾಗುತ್ತಿದೆ. ಒಟ್ಟು 38 ತಂಡಗಳು ಕಣಕ್ಕಿಳಿಯಲಿವೆ.

2021–22ರ ದೇಶಿ ಋತುವನ್ನು ಮುಂಬರುವ ಅಕ್ಟೋಬರ್ 27ರಿಂದ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯೊಂದಿಗೆ ಆರಂಭಿಸಲಿದೆ. ಐಪಿಎಲ್ ಮುಗಿದ ನಂತರ ಈ ಟೂರ್ನಿ ನಡೆಯಲಿರುವುದರಿಂದ ಪ್ರಮುಖ ಆಟಗಾರರು ತಮ್ಮ ರಾಜ್ಯ ತಂಡಗಳಲ್ಲಿ ಆಡುವ ಸಾಧ್ಯತೆ ಹೆಚ್ಚು ಎನ್ನಲಾಗುತ್ತಿದೆ.

ಡಿಸೆಂಬರ್ 1ರಿಂದ 29ರವರೆಗೆ ವಿಜಯ್ ಹಜಾರೆ ಏಕದಿನ ಕ್ರಿಕೆಟ್ ಟೂರ್ನಿಯು ನಡೆಯಲಿದೆ. ಮಹಿಳೆಯರ ರಾಷ್ಟ್ರೀಯ ಏಕದಿನ ಟೂರ್ನಿಯೂ ಅಕ್ಟೋಬರ್ 20ರಿಂದ ನವೆಂಬರ್ 20ವರೆಗೆ ನಡೆಯುವುದು.

ಗೋವಾಕ್ಕೆ ಶುಭಂ, ಶ್ರೀಕಾಂತ್

ಪಣಜಿ (ಪಿಟಿಐ): ಮಹಾರಾಷ್ಟ್ರದ ಶುಭಂ ರಾಂಜನೆ, ವಿದರ್ಭ ತಂಡದ ಶ್ರೀಕಾಂತ್ ವಾಘ್ ಮತ್ತು ಮುಂಬೈ ತಂಡದ ಏಕನಾಥ್ ಕರ್ಕರ್ ಅವರು ಗೋವಾ ಕ್ರಿಕೆಟ್ ತಂಡವನ್ನು ಸೇರಿದ್ದಾರೆ. ಬಲಗೈ ಬ್ಯಾಟ್ಸ್‌ಮನ್ ಶುಭಂ 12 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ. ಮಧ್ಯಮವೇಗಿ ಶ್ರೀಕಾಂತ್ 64 ಪಂದ್ಯಗಳನ್ನಾಡಿರುವ ಅನುಭವಿ. ಕರ್ಕರ್, 2018ರಲ್ಲಿ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.

ಮರಿಯಾ ಮಾನವೀಯತೆಗೆ ಸಂದ ಪದಕ!

ವಾರ್ಸೊ: ಪೋಲೆಂಡ್ ಅಥ್ಲೀಟ್ ಮರಿಯಾ ಆಂದ್ರೆಜಿಕ್ ಎಂಟು ತಿಂಗಳ ಮಗುವಿನ ಹೃದಯಶಸ್ತ್ರಚಿಕಿತ್ಸೆಗಾಗಿ ತಾವು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಗೆದ್ದ ಬೆಳ್ಳಿ ಪದಕವನ್ನು ಹರಾಜು ಮಾಡಿದರು.

ಆದರೆ, ಅವರ ಪದಕವನ್ನು ಹರಾಜಿನಲ್ಲಿ ಸುಮಾರು 92 ಲಕ್ಷ ರೂಪಾಯಿಗಳಿಗೆ ಖರೀದಿಸಿದ್ದ ಝಾಬ್ಕಾ ಸಂಸ್ಥೆಯು ಮರಿಯಾ ಅವರಿಗೆ ಪದಕವನ್ನು ಮರಳಿಸಿದೆ. ಮಗುವಿನ ಶಸ್ತ್ರಚಿಕಿತ್ಸೆಯ ಹೊಣೆಯನ್ನೂ ಆ ಸಂಸ್ಥೆಯು ನಿಭಾಯಿಸಿದೆ.

ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ಜಾವೆಲಿನ್ ಥ್ರೋನಲ್ಲಿ ಮರಿಯಾ ಬೆಳ್ಳಿ ಜಯಿಸಿದ್ದರು. ಅವರು ರಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು. ಮರಿಯಾ ಈ ಹಿಂದೆ ಕ್ಯಾನ್ಸರ್ ಕಾಯಿಲೆಯಿಂದ ಗುಣಮುಖರಾಗಿ ಬಂದು ಒಲಿಂಪಿಕ್ ಸಾಧನೆ ಮಾಡಿದ್ದರು.

ಟಿ20 ವಿಶ್ವಕಪ್: ಫಿಂಚ್ ನಾಯಕ

ಮೆಲ್ಬರ್ನ್: ಈ ವರ್ಷದ ಅಕ್ಟೋಬರ್ ತಿಂಗಳಲ್ಲಿ ನಡೆಯಲಿರುವ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಆಸ್ಟ್ರೇಲಿಯಾ ತಂಡವನ್ನು ಸ್ಫೋಟಕ ಶೈಲಿಯ ಬ್ಯಾಟ್ಸ್‌ಮನ್ ಆ್ಯರನ್ ಫಿಂಚ್ ಮುನ್ನಡೆಸುವರು.

15 ಮಂದಿಯ ತಂಡವನ್ನು ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ಗುರುವಾರ ಪ್ರಕಟಿಸಿದ್ದು ಸ್ಟೀವ್ ಸ್ಮಿತ್, ಡೇವಿಡ್ ವಾರ್ನರ್ ಮತ್ತು ಪ್ಯಾಟ್ ಕಮಿನ್ಸ್ ಅವರನ್ನು ಕರೆಸಿಕೊಳ್ಳಲಾಗಿದೆ. ಈಚೆಗೆ ನಡೆದ ವೆಸ್ಟ್ ಇಂಡೀಸ್ ಮತ್ತು ಬಾಂಗ್ಲಾದೇಶ ಎದುರಿನ ಸರಣಿಗಳಲ್ಲಿ ಈ ಮೂವರಿಗೆ ಅವಕಾಶ ನೀಡಿರಲಿಲ್ಲ.

ಈ ವರೆಗೆ ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡದೇ ಇರುವ

ಆ್ಯರನ್ ಫಿಂಚ್ –ಎಎಫ್‌ಪಿ ಚಿತ್ರ

ಜೋಶ್ ಇಂಗ್ಲಿಸ್ ಅವರಿಗೆ ತಂಡದಲ್ಲಿ ಸ್ಥಾನ ನೀಡಲಾಗಿದೆ. ವಿಕೆಟ್ ಕೀಪರ್ ಮ್ಯಾಥ್ಯೂ ವೇಡ್ ಅಲಭ್ಯವಾದರೆ ಅವರ ಬದಲಿಗೆ ಇವರನ್ನು ಬಳಸಿಕೊಳ್ಳುವ ಉದ್ದೇಶದಿಂದ ತಂಡದ ಆಡಳಿತ ಈ ನಿರ್ಧಾರ ಕೈಗೊಂಡಿದೆ. ಅಲೆಕ್ಸ್ ಕ್ಯಾರಿ ಮತ್ತು ಜೋಶ್ ಫಿಲಿಪ್ ಅವರನ್ನು ಕೈಬಿಡಲಾಗಿದೆ. ಡ್ಯಾನ್ ಕ್ರಿಸ್ಟಿಯನ್, ನೇಥನ್ ಎಲಿಸ್ ಮತ್ತು ಡ್ಯಾನಿಯಲ್ ಸ್ಯಾಮ್ಸ್ ಅವರನ್ನೂ ಕಾಯ್ದಿರಿಸಿದ ಆಟಗಾರರಾಗಿ ಸೇರಿಸಿಕೊಳ್ಳಲಾಗಿದೆ.

ತಂಡ: ಆ್ಯರನ್ ಫಿಂಚ್ (ನಾಯಕ), ಪ್ಯಾಟ್ ಕಮಿನ್ಸ್ (ಉಪನಾಯಕ), ಆ್ಯಷ್ಟನ್ ಅಗರ್, ಜೋಶ್ ಹ್ಯಾಜಲ್‌ವುಡ್, ಜೋಶ್ ಇಂಗ್ಲಿಸ್, ಮಿಷೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ಕೇನ್ ರಿಚರ್ಡ್ಸನ್, ಸ್ಟೀವ್ ಸ್ಮಿತ್, ಮಿಷೆಲ್ ಸ್ಟಾರ್ಕ್, ಮಾರ್ಕಸ್ ಸ್ಟೋಯಿನಿಸ್, ಮಿಷೆಲ್ ಸ್ವೆಪ್ಸನ್, ಮ್ಯಾಥ್ಯೂ ವೇಡ್, ಡೇವಿಡ್ ವಾರ್ನರ್, ಆ್ಯಡಂ ಜಂಪಾ.

ರಾಜ್ಯ ಅಥ್ಲೆಟಿಕ್ಸ್ ಉಡುಪಿಯಲ್ಲಿ

ಬೆಂಗಳೂರು: ರಾಜ್ಯ ಅಥ್ಲೆಟಿಕ್ಸ್ ಸಂಸ್ಥೆಯ ಸೀನಿಯರ್ ಮತ್ತು 23 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಸೆಪ್ಟೆಂಬರ್ ನಾಲ್ಕು ಮತ್ತು ಐದರಂದು ಉಡುಪಿಯಲ್ಲಿ ನಡೆಯಲಿದೆ.

ಎರಡೂ ವಿಭಾಗಗಳ ಪುರುಷ ಮತ್ತು ಮಹಿಳೆಯರಿಗಾಗಿ ಸ್ಪರ್ಧೆಗಳು ನಡೆಯಲಿದ್ದು ಅಜ್ಜರಕಾಡು ಮಹಾತ್ಮ ಗಾಂಧಿ ಕ್ರೀಡಾಂಗಣವು ಕೂಟಕ್ಕೆ ಆತಿಥ್ಯ ವಹಿಸಲಿದೆ. ಈ ತಿಂಗಳ 28ರ ವರೆಗೆ ಪ್ರವೇಶ ಪತ್ರಗಳನ್ನು ಸ್ವೀಕರಿಸಲಾಗುವುದು ಎಂದು ಕೆಎಎ ಗೌರವ ಕಾರ್ಯದರ್ಶಿ ಎ.ರಾಜವೇಲು ತಿಳಿಸಿದ್ದಾರೆ.

ಇದೇ ತಿಂಗಳ 28 ಮತ್ತು 29ರಂದು ಕ್ರೀಡಾಕೂಟ ಆಯೋಜಿಸಲು ನಿರ್ಧರಿಸಲಾಗಿತ್ತು. ಆದರೆ ಕೋವಿಡ್ ನಿರ್ಬಂಧಗಳಿಂದಾಗಿ ಮುಂದೂಡಲಾಯಿತು ಎಂದು ಅವರು ವಿವರಿಸಿದ್ದಾರೆ.

‘ವಿಮಾನದಿಂದ ಬಿದ್ದು ಅಫ್ಗಾನ್ ಫುಟ್‌ಬಾಲ್ ಆಟಗಾರ ಸಾವು’

ಲಂಡನ್ (ಪಿಟಿಐ): ಅಮೆರಿಕ ವಾಯುಪಡೆಯ ವಿಮಾನದಲ್ಲಿ ನೇತಾಡಲು ಪ್ರಯತ್ನಿಸಿ ಕೆಳಗೆ ಬಿದ್ದು ಸಾವಿಗೀಡಾದವರ ಪೈಕಿ ಒಬ್ಬರು ಅಫ್ಗಾನಿಸ್ತಾನ ರಾಷ್ಟ್ರೀಯ ಫುಟ್‌ಬಾಲ್ ತಂಡದ ಆಟಗಾರ ಎಂದು ತಿಳಿದುಬಂದಿದೆ ಎಂದು ಅಫ್ಗಾನ್ ಇನ್‌ಸ್ಟಿಟ್ಯೂಟ್ ಆಫ್ ಸ್ಟ್ರಾಟೆಜಿಕ್ ಸ್ಟಡೀಸ್‌ನ ಮಹಾನಿರ್ದೇಶಕ ದಾವೂದ್ ಮೊರಾದಿಯಾನ್ ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಗುರುವಾರ ತಿಳಿಸಿದ್ದಾರೆ..

ಕ್ರಿಕೆಟ್: ಸ್ವಸ್ತಿಕ್ ಜಯಭೇರಿ

ಬೆಂಗಳೂರು: ಎಂ. ಅರ್ಸಲನ್ (107 ರನ್) ಶತಕದ ಬಲದಿಂದ ಸ್ವಸ್ತಿಕ್ ಯೂನಿಯನ್ ಸಿಸಿ (2) ತಂಡವು ಗುರುವಾರ ನಡೆದ ಕೆಎಸ್‌ಸಿಎ 19 ವರ್ಷದೊಳಗಿನವರ ಅಂತರ ಕ್ಲಬ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಈ ಪಂದ್ಯದಲ್ಲಿ ಸ್ವಸ್ತಿಕ್ ಯೂನಿಯನ್ ತಂಡವು 150 ರನ್‌ಗಳಿಂದ ಹಮಂಡ್ಸ್ ಕ್ರಿಕೆಟ್ ಕ್ಲಬ್ ವಿರುದ್ಧ ಜಯಿಸಿತು.

ಸಂಕ್ಷಿಪ್ತ ಸ್ಕೋರು:

ಸ್ವಸ್ತಿಕ್ ಯೂನಿಯನ್ ಸಿಸಿ (2): 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 345 (ಎಂ.ಬಿ. ಶಿವಂ 96, ಎಂ. ಅರ್ಸಲನ್ 107, ಎನ್.ಎ. ಚಿನ್ಮಯ್ 51, ಅನೀಶ್ವರ್ ಗೌತಮ್ ಔಟಾಗದೆ 49, ಎಸ್. ರಾಘವ್ 57ಕ್ಕೆ2), **ಹಮಂಡ್ಸ್ ಸಿಸಿ:** 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 195 (ಎನ್.ಜಿ. ಕುಶಾಲ್ 52) **ಫಲಿತಾಂಶ:** ಸ್ವಸ್ತಿಕ್‌ಗೆ 150 ರನ್ ಜಯ.

ಮಾಡರ್ನ್ ಸಿಸಿ: 38 ಓವರ್‌ಗಳಲ್ಲಿ 9ಕ್ಕೆ182 (ಧೀರಜ್ ಸೋಮಯ್ಯ 33, ರೋಶನ್ ಆರ್ ರೇವಣಕರ್ 33), **ಮೌಂಟ್ ಜಾಯ್ ಸಿಸಿ:** 38 ಓವರ್‌ಗಳಲ್ಲಿ 8ಕ್ಕೆ 175 (ಜಿತೇಶ್ 34ಕ್ಕೆ3) ಮಾಡರ್ನ್ ಸಿಸಿಗೆ 7 ರನ್ ಜಯ.

ಅಫ್ಗಾನಿಸ್ತಾನ: ಕ್ರಿಕೆಟ್‌ಗೆ ಅವಕಾಶ

ಕಾಬೂಲ್: ಅಫ್ಗಾನಿಸ್ತಾನದಲ್ಲಿ ಕ್ರಿಕೆಟ್ ಚಟುವಟಿಕೆಗೆ ಅಡ್ಡಿಪಡಿಸುವುದಿಲ್ಲ ಎಂದು ತಾಲಿಬಾನ್ ಮುಖಂಡರು ಭರವಸೆ ನೀಡಿದ್ದಾರೆ. ಆದರೆ ಮಹಿಳಾ ಕ್ರಿಕೆಟ್ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲ ಅಫ್ಗಾನ್‌ನ ಕ್ರಿಕೆಟ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೇಶದಲ್ಲಿ ನಡೆಯುವ ಟಿ20 ಲೀಗ್ ಕೂಡ ಯಥಾಪ್ರಕಾರ ನಡೆಯಲಿದೆ ಎಂದು ಅಧಿಕಾರಿ ವಿವರಿಸಿದ್ದಾರೆ.

ಹೊಸ ಹೋಂಡಾ ಸಿಬಿ200ಎಕ್ಸ್ ಬೈಕ್ ಬಿಡುಗಡೆ

ಬೆಂಗಳೂರು: ಹೋಂಡಾ ಮೋಟರ್ ಸೈಕಲ್ ಆ್ಯಂಡ್ ಸ್ಕೂಟರ್ ಇಂಡಿಯಾ ಕಂಪನಿಯು (ಎಚ್‌ಎಂಎಸ್‌ಐ) ದೇಶದ ಮಾರುಕಟ್ಟೆಗೆ ಗುರುವಾರ ಹೊಸ ಸಿಬಿ-200ಎಕ್ಸ್ ದ್ವಿಚಕ್ರ ವಾಹನ ಬಿಡುಗಡೆ ಮಾಡಿದೆ. ಗುರುಗ್ರಾಮದಲ್ಲಿ ಇದರ ಎಕ್ಸ್ ಷೋರೂಂ ಬೆಲೆ ₹ 1.44 ಲಕ್ಷ ಇದೆ.

ಭಾರತದ ಯುವಪೀಳಿಗೆಯ ಜೀವನ ಶೈಲಿಯನ್ನು ಗಮನದಲ್ಲಿ ಇಟ್ಟುಕೊಂಡು ಈ ದ್ವಿಚಕ್ರ ವಾಹನ ಬಿಡುಗಡೆ ಮಾಡಲಾಗಿದೆ. ನಗರ ಪ್ರದೇಶಗಳಲ್ಲಿ ನಿತ್ಯ ಚಲಾಯಿಸಲು ಹಾಗೂ ನಗರದಾಚೆಗೆ ವಾರಾಂತ್ಯದ ಪ್ರಯಾಣಕ್ಕೆ ಇದು ಸೂಕ್ತವಾಗಿದೆ ಎಂದು ಕಂಪನಿಯ ಅಧ್ಯಕ್ಷ ಅತುಷಿ ಒಗಾಟಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

19-8-2021

ಜಾವಾ 70/80(ಹೊಸ)	10100-10150
ಜಾವಾ 80/90(ಹೊಸ)	9200-9250
ದಪ್ಪ ಮಧ್ಯಪ್ರದೇಶ(ಹೊಸ)	9700-9750
ದಪ್ಪ ಗುಜರಾತ್(ಹೊಸ)	9450-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1535)
ಒಂದು ವಾರದ ಡೆಲಿವರಿ	1545 (1530)
ಸೋಯಾ ಕಚ್ಚಾ	1380 (1370)
ಪಾಮ್ ವಾರದ ಡೆಲಿವರಿ	1266 (1270)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1420)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,175 (47,050)
ಬೆಳ್ಳಿ ಕೆ.ಜಿ 62,575 (63,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಇಂದಿನಿಂದ
ರಾಜ್ಯಾದ್ಯಂತ ಬಿಡುಗಡೆ
ಸಮಸ್ತ ನಾಡಿನ ಜನತೆಗೆ ವರಮಹಾಲಕ್ಷ್ಮಿ ಹಬ್ಬದ ಶುಭಾಶಯಗಳು

lahari MUSIC
ಕಮಲಾನಗರ: ವೀರಭದ್ರೇಶ್ವರ
ಜೆ.ಪಿ ನಗರ: ಸಿದ್ಧೇಶ್ವರ
PVR: Orion, Orion Uptown, GT Mall, Vaishnavi Sapphire, MSR Elements Mall, Phoniex Mall, Spirit Mall, Arena Mall
INOX: Mantri Mall, Neighbourhood Mall, Swagath, Garuda Mall, Galleria Mall
Cinépolis: Meenakshi Mall, ETA, C Shanthinikethan, C SJR
GOPALAN CINEMAS: Arch, Lagecy Mall, Innovation, Grand Mall
CARNIVAL CINEMAS: Jalahalli
KINO CINEMAS
ಮೈಸೂರು: ಸತ್ಯಂ ಸಿನಿಮಾಸ್, PVR, DRC, MYSURU VISION CINEMAS
ಹುಬ್ಬಳ್ಳಿ: PVR, Cinépolis
ದಾವಣಗೆರೆ: ಪದ್ಮಾಂಜಲಿ, MOVIE TIME CINEMAS
ಹಿರಿಯೂರು: ಶ್ರೀಶೈಲ
ಧಾರವಾಡ: ವಿಜಯ
ರಾಯಚೂರು: MIRAJ CINEMAS
ಬಳ್ಳಾರಿ: R R Multiplex
ಬೆಳಗಾವಿ: Cinépolis, INOX
ಗುಲ್ಬರ್ಗಾ: MIRAJ CINEMAS, SHETTY'S MULTIPLEX
ಬಿಜಾಪುರ: ಅಮಿರ್
ಹಾವೇರಿ: ಸರಸ್ವತಿ
ಅಥಣಿ: ನವಯುಗ್
ನರಗುಂದ: ಸಿದ್ಧಲಿಂಗೇಶ್ವರ
ಮುದ್ದೇಬಿಹಾಳ: ಗಿರಿಜಾಶಂಕರ್
ಕೊರಟಗೆರೆ: ಶಿವಗಂಗ
ಚೋಳೂರು: ಬಸವೇಶ್ವರ
ಬಸವನ ಬಾಗೇವಾಡಿ: ಸತ್ಯನಾರಾಯಣ
ಶಿವಮೊಗ್ಗ: BIG Cinemas
ಭದ್ರಾವತಿ: ನೇತ್ರಾವತಿ
ಮಂಗಳೂರು: Cinépolis, BIG Cinemas
ಉಡುಪಿ: ಡಯಾನ
ಮಣಿಪಾಲ್: INOX
ಕಾರ್ಕಳ: ಪ್ಲಾನೆಟ್
ಕುಂದಾಪುರ: Bharath Cinemas
ಹಾಗೂ ರಾಜ್ಯಾದ್ಯಂತ
DISTRIBUTION: DEEPAK GANGADHAR MOVIES

ಪ್ರಜಾವಾಣಿ ಇದ್ದರೆ ಗಮನ... ಗೆಲ್ಲುತ್ತೀರಿ ಬಹುಮಾನ!
ಸ್ಪೆಷಲ್ ಅಂಕಣಗಳ ಸಿಂಪಲ್ ಪ್ರಶ್ನೆ!
ಹಿಂದಿನ ಪ್ರಶ್ನೆಗೆ ಉತ್ತರ: ಯೋಗ್ಯ ಮಾರ್ಗದರ್ಶನ ಯಶಸ್ಸಿಗೆ ರಹದಾರಿ
ಪ್ರತಿ ದಿನ ಒಂದು ಸ್ಪೆಷಲ್ ಅಂಕಣದಿಂದ ಆಯ್ದ ಪ್ರಶ್ನೆಗೆ ಉತ್ತರಿಸಿ ಬಹುಮಾನ ಗೆಲ್ಲಿ!
ಪ್ರಶ್ನೆ: ಸುದ್ದಿ 2 ನಿಮಿಷ: ಇಲ್ಲಿ ಕೊಡಲಾಗಿರುವ ಯಾವುದಾದರು ಒಂದು ಮಾಹಿತಿಯ ಶೀರ್ಷಿಕೆ ಕಳುಹಿಸಿ
www.bit.ly/pvgamana
ಲಿಂಕ್ ಬಳಸಿ ಇಂದು ರಾತ್ರಿ 8ರ ಒಳಗೆ ನಿಮ್ಮ ಉತ್ತರವನ್ನು ಕಳುಹಿಸಿ
ಪ್ರಜಾವಾಣಿ GIFT VOUCHER ₹500/-
ಪ್ರತಿ ದಿನ 8 ಅದೃಷ್ಟಶಾಲಿಗಳಿಗೆ
*ಷರತ್ತುಗಳು ಅನ್ವಯ

ಟೇಬಲ್ ಟೆನಿಸ್: ಸೆಮಿಗೆ ಮಣಿಕಾ ಬಾತ್ರಾ

ಬುಡಾಪೆಸ್ಟ್ (ಪಿಟಿಐ): ಭಾರತದ ಮಣಿಕಾ ಬಾತ್ರಾ ಇಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಮಣಿಕಾ ಅವರು ಜಿ. ಸತ್ಯನ್ ಅವರೊಂದಿಗೆ ಮಿಶ್ರ ಡಬಲ್ಸ್‌ನ ಫೈನಲ್‌ಗೂ ಲಗ್ಗೆ ಇಟ್ಟಿದ್ದಾರೆ.

ಮಹಿಳೆಯರ ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ ಮಣಿಕಾ 7-11, 11-1, 8-11, 13-11, 11-6ರಿಂದ ಭಾರತದವರೇ ಆದ ಶ್ರೀಜಾ ಅಕುಲ್ ವಿರುದ್ಧ ಜಯಿಸಿದರು.

ಮೊದಲ ಗೇಮ್‌ನಲ್ಲಿ ಶ್ರೀಜಾ ವೇಗದ ಆಟವಾಡಿದರು. ಟಾಪ್ ಸ್ಪಿನ್‌ಗಳ ಮೂಲಕ ಮಣಿಕಾಗೆ ಆಘಾತ ನೀಡಿದರು. ಎರಡನೇ ಗೇಮ್‌ನಲ್ಲಿ ಇದಕ್ಕೆ ಪ್ರತಿಕಾರ ತೀರಿಸಿಕೊಂಡ ಮಣಿಕಾ ದೊಡ್ಡ ಅಂತರದಿಂದ ಜಯಸಾಧಿಸಿದರು. ಆದರೆ, ಮೂರನೇ ಗೇಮ್‌ನಲ್ಲಿ ಶ್ರೀಜಾ ತಮ್ಮ ಚಾಣಾಕ್ಷ ಆಟದ ಮೂಲಕ ಮೇಲುಗೈ ಸಾಧಿಸಿದರು. ಇದರಿಂದಾಗಿ ಕುತೂಹಲ ಕೆರಳಿಸಿದ್ದ ನಂತರದ ಎರಡೂ ಗೇಮ್‌ಗಳನ್ನು ಮಣಿಕಾ ಗೆದ್ದರು. ಉತ್ತಮ ಸರ್ವ್‌ಗಳು ಮತ್ತು ಮಣಿಕಟ್ಟಿನ ಚಲನೆಯೊಂದಿಗೆ ಆಡಿದ ಮಣಿಕಾ ಜಯಗಳಿಸಿದರು.

ಮಿಶ್ರ ವಿಭಾಗದಲ್ಲಿ ಮಣಿಕಾ ಮತ್ತು ಸತ್ಯನ್ ಅವರು 11-6 11-5 11-4ರ ನೇರ ಗೇಮ್‌ಗಳಲ್ಲಿ ಬೆಲಾರೂಸ್‌ನ ಅಲೆಕ್ಸಾಂಡ್ರಾ ಖನಿನ್ ಮತ್ತು ದರಿಯಾ ಟ್ರೈಗೊಲೊಸ್ ಜೋಡಿಯನ್ನು ಮಣಿಸಿದರು.

ಮಣಿಕಾ ಬಾತ್ರಾ

ತಮ್ಮ ಉತ್ತಮ ಹೊಂದಾಣಿಕೆಯ ಆಟದಿಂದ ಎದುರಾಳಿಗೆ ಯಾವುದೇ ಹಂತದಲ್ಲಿಯೂ ಪಾರಮ್ಯ ಸಾಧಿಸಲು ಭಾರತದ ಜೋಡಿ ಬಿಡಲಿಲ್ಲ.

ಪ್ರಶಸ್ತಿ ಸುತ್ತಿನಲ್ಲಿ ಅವರು ಹಂಗರಿಯ ನಂದೊರ್ ಎಕ್ಸೆಕಿ ಮತ್ತು ದೊರಿಯಾ ಮದರಾಸ್ಜ್ ವಿರುದ್ಧ ಸೆಣಸುವರು.

ಮಣಿಕಾ ಬಾತ್ರಾ ಈಚೆಗೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ಸಿಂಗಲ್ಸ್‌ನ ಮೂರನೇ ಸುತ್ತಿನಲ್ಲಿ ಮತ್ತು ಪುರುಷರ ಸಿಂಗಲ್ಸ್‌ನಲ್ಲಿ ಜಿ. ಸತ್ಯನ್ ಎರಡನೇ ಸುತ್ತಿನಲ್ಲಿ ಪರಾಭವಗೊಂಡಿದ್ದರು.

ಶೈನಿ ವಿಲ್ಸನ್, ವಂದನಾ ರಾವ್ ಅವರನ್ನು ಬೆಳೆಸಿದ ಕೋಚ್ ನಂಬಿಯಾರ್

ಅಥ್ಲೆಟಿಕ್ಸ್‌ನ 'ದ್ರೋಣಾಚಾರ್ಯ' ಇನ್ನಿಲ್ಲ

ಕೋಯಿಕ್ಕೋಡ್ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಕೂದಲೆಳೆ ಅಂತರದಲ್ಲಿ ಪದಕ ವಂಚಿತರಾದ ಪಿ.ಟಿ.ಉಷಾ ಅವರಿಗೆ ತರಬೇತಿ ನೀಡಿದ್ದ ಖ್ಯಾತ ಅಥ್ಲೆಟಿಕ್ ಕೋಚ್ ಒ.ಎಂ.ನಂಬಿಯಾರ್ (89) ಅನಾರೋಗ್ಯದಿಂದ ಗುರುವಾರ ನಿಧನರಾದರು. ಅವರಿಗೆ ಪತ್ನಿ, ಮೂವರು ಪುತ್ರರು ಮತ್ತು ಪುತ್ರಿ ಇದ್ದಾರೆ.

ಮೊದಲ ದ್ರೋಣಾಚಾರ್ಯ ಪ್ರಶಸ್ತಿಗೆ ಭಾಜನರಾಗಿದ್ದ ಅವರಿಗೆ ಈ ಬಾರಿ ಪದ್ಮಶ್ರೀ ಪ್ರಶಸ್ತಿಯೂ ಸಂದಿತ್ತು. ಕೋಯಿಕ್ಕೋಡ್ ಜಿಲ್ಲೆಯ ವಡಗರದಲ್ಲಿ ವಾಸಿಸುತ್ತಿದ್ದ ಅವರಿಗೆ ಪಾರ್ಕಿನ್ಸನ್ ಕಾಯಿಲೆ ಆಗಿತ್ತು. 10 ದಿನಗಳ ಹಿಂದೆ ಹೃದಯಾಘಾತವಾಗಿತ್ತು. ಹೀಗಾಗಿ ಆಸ್ಪತ್ರೆಗೆ ಸೇರಿಸಲಾಗಿತ್ತು.

ಭಾರತೀಯ ವಾಯುಸೇನೆಯಲ್ಲಿದ್ದ ನಂಬಿಯಾರ್ ನಿವೃತ್ತಿ ನಂತರ ಕೋಚಿಂಗ್ ವೃತ್ತಿಗೆ ಇಳಿದು ಅನೇಕ ಮಂದಿ ಅಂತರರಾಷ್ಟ್ರೀಯ ಕ್ರೀಡಾಪಟುಗಳನ್ನು ಬೆಳೆಸಿದ್ದಾರೆ.

ಉಷಾ ಅವರಿಗೆ 1984ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಒಂದು ಸೆಕೆಂಡಿನ 100ನೇ ಒಂದು ಅಂಶದಲ್ಲಿ ಕಂಚಿನ ಪದಕ ಕೈತಪ್ಪಿತ್ತು. ಆ ಸಂದರ್ಭದಲ್ಲಿ ನಂಬಿಯಾರ್ ಕೋಚ್ ಆಗಿದ್ದರು. ನಾಲ್ಕು ಬಾರಿಯ ಒಲಿಂಪಿಯನ್ ಶೈನಿ ವಿಲ್ಸನ್ ಮತ್ತು ವಂದನಾ ರಾವ್ ಅವರಿಗೂ ನಂಬಿಯಾರ್ ತರಬೇತಿ ನೀಡಿದ್ದಾರೆ.

ಒ.ಎಂ.ನಂಬಿಯಾರ್ ಜೊತೆ ಪಿ.ಟಿ.ಉಷಾ –ಟ್ವಿಟರ್ ಚಿತ್ರ

ಮುಖ್ಯಾಂಶಗಳು

- ವಾಯುಸೇನೆಯಲ್ಲಿ ಸರ್ಜಂಟ್ ಆಗಿ ನಿವೃತ್ತಿ
- ಎನ್‌ಐಎಸ್‌ನಿಂದ ಕೋಚಿಂಗ್ ಡಿಪ್ಲೊಮಾ ಮಾಡಿದ ನಂತರ ತರಬೇತಿ

ಕಣ್ಣೂರು ಜಿಲ್ಲೆಯಲ್ಲಿ ಜನಿಸಿದ ನಂಬಿಯಾರ್ ಕೋಯಿಕ್ಕೋಡ್‌ನ ಗುರುವಾಯೂರಪ್ಪನ್ ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಅಥ್ಲೆಟಿಕ್ಸ್‌ನಲ್ಲಿ ಹೆಸರು ಮಾಡಿದ್ದರು.

ಪ್ರಾಂಶುಪಾಲರ ಸಲಹೆ ಮೇರೆಗೆ ವಾಯುಸೇನೆ ಸೇರಿಕೊಂಡು ಅಲ್ಲಿಯೂ ಕ್ರೀಡೆಯಲ್ಲಿ ಹೆಸರು ಮಾಡಿದ್ದರು. 15 ವರ್ಷ ವಾಯುಸೇನೆಯಲ್ಲಿದ್ದ ಅವರು 1970ರಲ್ಲಿ ಸರ್ಜಂಟ್ ಆಗಿ ನಿವೃತ್ತರಾಗಿದ್ದರು. 1968ರಲ್ಲಿ ಪಟಿಯಾಲದ ಎನ್‌ಐಎಸ್‌ನಲ್ಲಿ ಕೋಚಿಂಗ್ ಡಿಪ್ಲೊಮಾ ಮಾಡಿ ಸರ್ವಿಸಸ್‌ನಲ್ಲಿ ಕೋಚಿಂಗ್ ನೀಡುತ್ತಿದ್ದರು. 1971ರಲ್ಲಿ ಕೇರಳ ಸ್ಪೋರ್ಟ್ಸ್ ಕೌನ್ಸಿಲ್‌ನಲ್ಲಿ ಸೇರಿಕೊಂಡರು. 1977ರಲ್ಲಿ ಉಷಾ ಅವರನ್ನು ಗುರುತಿಸಿ ತರಬೇತಿ ನೀಡಲು ಆರಂಭಿಸಿದರು.

'ತಂದೆ ಸಮಾನರು, ಪ್ರೀತಿಯ ಗುರು'

ನಂಬಿಯಾರ್ ಅವರ ನಿಧನದಿಂದ ವೈಯಕ್ತಿಕವಾಗಿ ನನಗೆ ತುಂಬಲಾರದ ನಷ್ಟ ಆಗಿದೆ. ತಂದೆ ಸಮಾನರಾಗಿದ್ದ ಅವರು ಇಲ್ಲದೇ ಇದ್ದಿದ್ದರೆ ನಾನು ಟ್ರ್ಯಾಕ್‌ನಲ್ಲಿ ಸಾಧನೆ ಮಾಡಲು ಆಗುತ್ತಿರಲಿಲ್ಲ. ಒಲಿಂಪಿಕ್ಸ್‌ನಲ್ಲಿ ನೀರಜ್ ಚೋಪ್ರಾ ಚಿನ್ನ ಗೆದ್ದ ನಂತರ ನಾನು ನಂಬಿಯಾರ್ ಅವರನ್ನು ಭೇಟಿಯಾಗಿದ್ದೆ. ಅವರಿಗೆ ನಾನು ಮಾತನಾಡಿದ್ದು ತಿಳಿಯುತ್ತಿತ್ತು. ಆದರೆ ವಾಪಸ್ ಏನೂ ಹೇಳಲು ಆಗುತ್ತಿರಲಿಲ್ಲ.

ಪಿ.ಟಿ.ಉಷಾ ನಂಬಿಯಾರ್ ಶಿಷ್ಯೆ

ಭಾರತದ ಅಥ್ಲೀಟ್ಸ್ ಸಾಧನೆಗೆ ಸೆಬಾಸ್ಟಿಯನ್ ಕೋ ಶ್ಲಾಘನೆ

ನೈರೋಬಿ (ಪಿಟಿಐ): ಅಥ್ಲೆಟಿಕ್ಸ್‌ನಲ್ಲಿ ಭಾರತ ಉತ್ತಮ ಸಾಧನೆ ಮಾಡುತ್ತಿರುವುದು ಶ್ಲಾಘನೀಯ ಎಂದು ವಿಶ್ವ ಅಥ್ಲೆಟಿಕ್ಸ್ ಅಧ್ಯಕ್ಷ ಸೆಬಾಸ್ಟಿಯನ್ ಕೋ ಹೇಳಿದ್ದಾರೆ.

ಭಾರತದ ಜೂನಿಯರ್ ತಂಡದವರು 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 4x400 ಮೀಟರ್ಸ್ ರಿಲೆಯಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು.

ಭರತ್ ಎಸ್, ಪ್ರಿಯಾ ಮೋಹನ್, ಸಮ್ಮಿ ಮತ್ತು ಕಪಿಲ್ ಚಾಂಪಿಯನ್‌ಷಿಪ್ ಇತಿಹಾಸದಲ್ಲಿ ದೇಶಕ್ಕೆ 5ನೇ ಪದಕ ಗೆದ್ದುಕೊಟ್ಟಿದ್ದರು.

ಪದಕ ವಿಜೇತರೊಂದಿಗೆ ಮತ್ತು ಭಾರತದ ಇತರ ಅಥ್ಲೀಟ್‌ಗಳೊಂದಿಗೆ ಸಂವಾದ ನಡೆಸಿರುವ 64 ವರ್ಷದ ಸೆಬಾಸ್ಟಿಯನ್ ಅದರ ವಿಡಿಯೊವನ್ನು ಟ್ವೀಟ್ ಮಾಡಿದ್ದಾರೆ.

ಸೆಬಾಸ್ಟಿಯನ್ –ಎಎಫ್‌ಪಿ ಚಿತ್ರ

'ಚಾಂಪಿಯನ್‌ಷಿಪ್‌ನಲ್ಲಿ ಭಾರತ ಉತ್ತಮ ಆರಂಭ ಕಂಡಿದೆ. ಯುವ ಪೀಳಿಗೆಯ ಕ್ರೀಡಾಪಟುಗಳು ಇದನ್ನು ಮಾದರಿಯಾಗಿರಿಸಿಕೊಂಡು ಸಾಧನೆ ಮಾಡಲು ಮುಂದಾಗಬೇಕು' ಎಂದು 1500 ಮೀಟರ್ಸ್ ಓಟದಲ್ಲಿ ಎರಡು ಬಾರಿ ಒಲಿಂಪಿಕ್ಸ್ ಪದಕ ಗೆದ್ದಿರುವ ಸೆಬಾಸ್ಟಿಯನ್ ಸಲಹೆ ನೀಡಿದರು.

'ಟೋಕಿಯೊದಲ್ಲಿ ಭಾರತದ ಕ್ರೀಡಾಪಟುಗಳು ಮಿಂಚಿದ್ದಾರೆ. ಅಥ್ಲೆಟಿಕ್ಸ್‌ನಲ್ಲಿ ದೇಶಕ್ಕೆ ಉತ್ತಮ ಭವಿಷ್ಯವಿದೆ' ಎಂದು ಅವರು ಹೇಳಿದರು.

ವಿಶ್ವ ಅಥ್ಲೆಟಿಕ್ಸ್ ಕೂಟ: ರೋಹನ್ ಕಾಂಬ್ಳೆ ಸೆಮಿಫೈನಲ್ ಪ್ರವೇಶ

ನೈರೋಬಿ (ಪಿಟಿಐ): ಭಾರತದ ರೋಹನ್ ಕಾಂಬ್ಳೆ ಅವರು ಇಲ್ಲಿ ನಡೆಯುತ್ತಿರುವ 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಪುರುಷರ 400ಮೀ ಹರ್ಡಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ಅವರು 55 ಸೆಕೆಂಡುಗಳಲ್ಲಿ ಅವರು ಗುರಿ ತಲುಪಿ ಗಮನಾರ್ಹ ಸಾಧನೆ ಮಾಡಿದರು.

ಮೊರಾಕ್ಕೊದ ಸಾದ್ ಹಿಂತಿ ಅವರಿಗೆ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ಕತಾರ್‌ನ ಅಮರ್ ಎಡೆಡ್ ತಪ್ಪಾಗಿ ಆರಂಭ ಮಾಡಿದ್ದಕ್ಕೆ ಅವಕಾಶ ಕಳೆದುಕೊಂಡರು.